# ಕಂಪ್ಯೂಟರ್ ಊಟ, ಅಡವಿ ಮಾರಾಟ ಮತ್ತು ಇತರ ಲೇಖನಗಳು

**ಶಿವಾನಂದ ಕಳವೆ**

ಈ ಹೊತ್ತಗೆಯನ್ನು ಕನ್ನಡನುಡಿಯ ಸದಸ್ಯರಿಗೆ ಅಧ್ಯಯನ-ಪರಾಮರ್ಶೆಗೆ ಮಾತ್ರ ನೀಡಲಾಗಿದೆ.
ಹೊತ್ತಗೆಯನ್ನು ಕೊಂಡು ಓದಿ ಪ್ರೋತ್ಸಾಹಿಸಿ.

---

ಮಿಂಬಲೆಯಲ್ಲಿ ಕನ್ನಡ ಸಾಹಿತ್ಯಾಸಕ್ತರ ಕೂಟ
https://kannadanudi.wikidot.com

# ಕೃಷಿ: ಕೃಷಿ ಸಂರಕ್ಷಣೆ:ಊಳುವವರು ಈಗ ಒಡೆಯರಲ್ಲ!

೮೦ ಕಿಲೋ ಭಾರ ಹೊರುತ್ತಾರೆ, ಕಲ್ಲು ಕರಗಿಸುತ್ತಾರೆ, ನೇಗಿಲ ಜತೆ ಪಳಗಿ ಭೂಮಿ ಬಂಗಾರ ಮಾಡುತ್ತಾರೆಂದು ಹಾಡಿ ಹೊಗಳಿದ ಊರಲ್ಲಿ ಕೃಷಿ ದುಡಿಮೆಯ ಮಹತ್ವ ಅರಿಯದಷ್ಟು ನೌಕರಿ ನಂಬಿದ ವಿದ್ಯಾವಂತರಿಗೆ ಅಂಧತ್ವ ಬಂದಿದೆ. ಈಗ ಕೃಷಿ ಹೇಳಿಕೊಳ್ಳಲಾಗದ ವಿಚಿತ್ರ ಸಮಸ್ಯೆಯಲ್ಲಿ ತೊಳಲಾಡುತ್ತಿದೆ. 'ಪಿತ್ರಾರ್ಜಿತ ಆಸ್ತಿ ಪಾಲು' ಎಂದು ಭೂಮಿ ಸಮಸ್ಯೆಯನ್ನು ಕಾನೂನು ದೃಷ್ಟಿಯಲ್ಲಿ ಮಾತ್ರ ನೋಡಲು ನಮ್ಮ ಶಿಕ್ಷಣ ಹೇಳುತ್ತಿದೆ. ಬೆವರಿಳಿಸುವ ಒಕ್ಕಲು ಇರುವ ಭೂಮಿಯಲ್ಲಿ ಈಗೀಗ ದಿನಬೆಳಗಾದರೆ ವಕೀಲರು, ಕೋರ್ಟುಗಳು ಬಂದು ನಿಂತಿವೆ!

ಕರಾವಳಿ ಹಳ್ಳಿಯಲ್ಲಿ ಅಧ್ಯಯನ ನಡೆಸುತ್ತಿದ್ದೆ. ಕೃಷಿ ಬದುಕಿನ ಸಮೀಕ್ಷೆ ಮಾಡಬೇಕಿತ್ತು. ಯಾರಾದರೂ ಊರಿನ ಹುಡುಗರು ಸಿಕ್ಕರೆ ಅವರಿಂದಲೇ ಕೆಲಸ ಮಾಡಿಸಬಹ್ಮದೆಂದು ಯೋಚಿಸಿದೆ. ಊರುಕೇರಿ ಹುಡುಕಿದರೂ ೨೫-೩೫ರ ಹರೆಯದವರು ಸಿಗಲಿಲ್ಲ, ಯುವಕರಿಗೆ ದುರ್ಭಿನು ಹಿಡಿದು ಹುಡುಕುವ ಪ್ರಮೇಯ! ಅಂತೂ ಕೊನೆಗೆ ಒಬ್ಬ ಸಿಕ್ಕಿದ, ಮತ್ತೆ ತಿಂಗಳ ಬಳಿಕ ಬೇರೆಲ್ಲೋ ಜಮೀನು ಖರೀದಿಸಿದೆ ಎಂದು ಊರು ಬಿಟ್ಟು ದೂರ ಹೋದ! ಮುದುಕರು ಮಾತ್ರ ಕಾಲದ ನೆನಪು ಮಾಡಿಕೊಳ್ಳುತ್ತ ಎಲೆ ಅಡಿಕೆ ಜಗಿಯುತ್ತ ಅಲ್ಲಿ ಉಳಿದಿದ್ದರು. ಬೇರು ಕಿತ್ತು ಒಯ್ಯಲಾಗದ ಹೆಮ್ಮರದ ಹಾಗೇ ನಿಂತಿದ್ದರು. ಮಕ್ಕಳು, ಮೊಮ್ಮಕ್ಕಳ ಹೊಸ ತಲೆಮಾರು ಮುಂಬೈ, ಗುಜರಾತ್, ಬೆಂಗಳೂರು ಎಂದು ದೇಶದ ಮೂಲೆ ಮೂಲೆಗೆ ರವಾನೆಯಾಗಿತ್ತು.

'ನಿಮ್ಮ ತಂದೆ, ತಾಯಿ ವೃದ್ಧರು, ಅವರ ಯೋಗಕ್ಷೇಮ ನೋಡಲು ನೀವೊಬ್ಬರಾದರೂ ಹಳ್ಳಿ ತೋಟ ನೋಡಿಕೊಂಡು ಊರಲ್ಲಿ ಇರಬಹುದಿತ್ತಲ್ಲ' ಎಂಬ ಪ್ರಶ್ನೆ ಕೇಳುವುದಕ್ಕಾಗಿ ಒಬ್ಬ ಹುಡುಗನನ್ನು ಹುಡುಕಿ ಹೋಗಿದ್ದೆ. 'ನಾವು ಐದು ಜನ ಸಹೋದರರು, ಇನ್ನುಳಿದ ನಾಲ್ಕು ಜನ ಶಿಕ್ಷಕರು, ಬ್ಯಾಂಕ್ ಸಿಬ್ಬಂದಿ ಎಂದು ಬೇರೆ ಬೇರೆ ಕ್ಷೇತ್ರದಲ್ಲಿದ್ದಾರೆ. ನಾನು ೧೦ ವರ್ಷಗಳಿಂದ ಇಡೀ ಕುಟುಂಬದ ಕೃಷಿ ಜವಾಬ್ದಾರಿ ನೋಡುತ್ತಿದ್ದೆ, ನಾನೂ ಹೀಗೆ ಹಳ್ಳಿಯಲ್ಲಿದ್ದರೆ ನಾಳೆ ನನ್ನ ಹೆಂಡತಿ ಮಕ್ಕಳು ಕಷ್ಟ ಅನುಭವಿಸಬೇಕಾಗುತ್ತದೆ' ಎಂದರು.ಭೂಮಿ ನಂಬಿ ತಂದೆ ತಾಯಿ ಜತೆ ಬದುಕಿದರೆ ಭವಿಷ್ಯ ಹೇಗೆ ತೊಂದರೆಗೆ ಸಿಲುಕುತ್ತದೆ? ಅರ್ಥವಾಗಲಿಲ್ಲ. ಸಮಸ್ಯೆ ಬಿಡಿಸಿದಾಗ ವಿಷಯ ಬಹಿರಂಗವಾಯ್ತು. ಇನ್ನು ಹತ್ತಾರು ವರ್ಷಕ್ಕೆ ತಂದೆ ಸಾವಿನ ಬಳಿಕ ಭೂಮಿ ಹಿಸ್ಸೆಯಾಗಬಹುದು, ಆಗ ಪಿತ್ರಾರ್ಜಿತ ಆಸ್ತಿಯಲ್ಲಿ ತಮಗೂ ಭಾಗವಿದೆ ಎಂದು ಸಹೋದರರೆಲ್ಲ ತಕರಾರು ಎತ್ತುತ್ತಾರೆ. ಕೃಷಿ ಕೆಲಸ, ವೃದ್ಧ ತಂದೆ ತಾಯಿಗಳ ಆರೈಕೆ ವೆಚ್ಚಗಳನ್ನು ಕೃಷಿ ಆದಾಯದಿಂದ ನಿಭಾಯಿಸಬೇಕು. ನೌಕರಿ ಪಡೆದ ಸಹೋದರರು ನಯಾಪೈಸೆ ಹಣ ಮನೆಗೆ ನೀಡುವದಿಲ್ಲ. ಇತ್ತ ಕೃಷಿ ಕೆಲಸ ನೋಡಿಕೊಂಡು ಏನಾದರೂ ಸ್ವಯಂ ಉದ್ಯೋಗ ಮಾಡಲೂ ಆಗುವದಿಲ್ಲ, ಭೂಮಿ ಹಿಸ್ಸೆಯಾಗುವ ಕಾಲಕ್ಕೆ ನನಗೆ ಎಲ್ಲರಂತೆ ಕೆಲವು ಗುಂಟೆ ಕ್ಷೇತ್ರ ಸಿಗುತ್ತದೆ, ಮೂಲದಿಂದ ಕೃಷಿ ನಂಬಿದ್ದಾನೆಂದು ಯಾರೂ ಹೆಚ್ಚಿನ ಆಸ್ತಿ ನೀಡುವದಿಲ್ಲ, ಕಟ್ಟ ಕಡೆಗೆ ಎಲ್ಲರಿಗೂ ಸಿಗುವಷ್ಟೇ ಭೂಮಿ ತನಗೂ ಸಿಗುವದಾದರೆ ನಾನು ಇಲ್ಲಿದ್ದು ಏಕೆ ಜೀತ ಮಾಡಬೇಕು ? ಸಹೋದರರಿಗೆ ನಾಳೆ ಹಂಚಬೇಕಾದ ನಾಲ್ಕಾರು ಎಕರೆ ಕೃಷಿ ನಿರ್ವಹಿಸುವ ವೃಥಾ ಪರಿಶ್ರಮ ಏಕೆ? ಬೇರು ಮೂಲದ ಸಮಸ್ಯೆಗೆ ಇಂದಿಗೂ ಉತ್ತರವಿಲ್ಲ. ಹೀಗಾಗಿ ಹಳ್ಳಿಯಲ್ಲಿ ಉಳಿಯುವ ಮನಸ್ಸು ಹಲವರಿಗೆ ಇಲ್ಲ.

ಕೊಳ್ಳೆಗಾಲದ ಕೃಷಿಕರೊಬ್ಬರದು ಇಂತಹುದೇ ಕತೆ. ಮೂರು ಮಕ್ಕಳ ಕುಟುಂಬ. ಒಬ್ಬ ಹಳ್ಳಿಯಲ್ಲಿ ಕೃಷಿ ಮಾಡುತ್ತಿದ್ದ, ಇನ್ನುಳಿದವರು ಬೆಂಗಳೂರು ಸೇರಿದರು. ಕೃಷಿ ಉತ್ಪನ್ನದಲ್ಲಿ ಬದುಕುವುದೇ ಕಷ್ಟ ಎಂಬ ಸ್ಥಿತಿಯಿತ್ತು. ಬರಗಾಲ, ಬೆಲೆ ಕುಸಿತದಿಂದ ಕುಟುಂಬ ಕಂಗಾಲಾಗಿತ್ತು. ಕೃಷಿ ನಂಬಿ ಊರಲ್ಲಿ ಬದುಕಿದ್ದವನ ಮಗಳ ಮದುವೆಗೆ ಎರಡು ವರ್ಷದ ಹಿಂದೆ ಎರಡು ಲಕ್ಷ ರೂಪಾಯಿ ಹಣ ಬೇಕಾಯಿತು. ನಗರ ಸೇರಿ ವ್ಯವಹಾರ ಜಾಣತನ ಕಲಿತವರು ಮದುವೆಗೆ ಹಣ ಹೊಂದಿಸುವ ಸರಳ ಸೂತ್ರ ಹೇಳಿದರು. 'ನಮ್ಮ ಅವಿಭಕ್ತ ಕುಟುಂಬದ ಭೂಮಿಯಲ್ಲಿ ನಿನ್ನ ಹಿಸ್ಸೆಗೆ ಎರಡು ಎಕರೆ ಹೊಲ ಬರುತ್ತದೆ, ಆ ಹೊಲ ಅಡವಿಟ್ಟು ಮಗಳ ಮದುವೆಗೆ ಸಾಲ ಪಡೆದುಕೊಳ್ಳಬಹುದು, ನಮ್ಮ ಭೂಮಿಗೂ ಮದುವೆ ಸಾಲ ಅಂಟಿಸಬೇಡ' ಎಂದು ಎಲ್ಲರೂ ಹೇಳಿದರು. ಇಷ್ಟು ಕಾಲ ನಾವೆಲ್ಲ ಒಂದು ಎಂದು ಭೂಮಿಯಲ್ಲಿ ಬೆವರಿಳಿಸಿ ರಾಗಿ, ಜೋಳ ಬೆಳೆಯುತ್ತಿದ್ದಾತನಿಗೆ ಸಹೋದರರ ಸಲಹೆ

ಅಚ್ಚರಿ ಮೂಡಿಸಿತು. ಹೊಲದ ಸಾಲ ಮಾಡಿ ಮಗಳ ಮದುವೆ ಮುಗಿಸಿದರು.

೨೦ ವರ್ಷಗಳಿಂದ ಕೃಷಿ ನಂಬಿದ ಕೊಳ್ಳೆಗಾಲದ ದಂಪತಿಗಳು ಈಗ ಬದುಕಿಗಾಗಿ ಬೆಂಗಳೂರು ಸೇರಿದ್ದಾರೆ. ಗಂಡನಿಗೆ ಉದ್ಯಾನವೊಂದರ ವಾಚ್‌ಮನ್ ಕೆಲಸ, ಹೆಂಡತಿಗೆ ಗಾರ್ಮೆಂಟ್ ಫ್ಯಾಕ್ಟರಿಯ ದುಡಿಮೆ ಸಿಕ್ಕಿದೆ. ಇಬ್ಬರಿಂದ ತಿಂಗಳಿಗೆ ೭,೦೦೦ ರೂಪಾಯಿ ಆದಾಯವಿದೆ. ವಸತಿ, ಊಟಕ್ಕೆ ೩,೦೦೦ ರೂಪಾಯಿ ಖರ್ಚಾಗುತ್ತಿದೆ. ಪ್ರಥಮ ವರ್ಷದ ೪೦,೦೦೦ ರೂಪಾಯಿ ಉಳಿತಾಯ ಈ ಕೃಷಿಕರಿಗೆ ಅಚ್ಚರಿ ಮೂಡಿಸಿದೆ, ಮಗಳ ಮದುವೆಯ ಸಾಲ ತೀರಿಸುವ ಭರವಸೆ ಮೂಡಿಸಿದೆ. ಇಷ್ಟೆಲ್ಲ ವರ್ಷಗಳಿಂದ ಕೃಷಿಯಲ್ಲಿದ್ದರೂ ವರ್ಷಕ್ಕೆ ಒಂದು ಜತೆ ಚೆಂದದ ಬಟ್ಟೆ ಖರೀದಿಸಲು ಯೋಚಿಸಬೇಕಿತ್ತು, ಸದಾ ಹಣದ ಮುಗ್ಗಟ್ಟು ಕಾಡುತ್ತಿತ್ತು. ಈಗ ಹಣ ಕೈಗೆ ಸಿಗುತ್ತಿದೆ. ಮುಂದೆ ಬೆಂಗಳೂರಲ್ಲಿ ಒಂದು ಸ್ವಂತ ಮನೆ ಮಾಡಬೇಕು ಎಂದು ಡಿಗ್ರಿ ಓದದ ಇವರು ನಗರ ಓದಿ ಠರಾವು ಮಂಡಿಸಿದ್ದಾರೆ. ಒಳ್ಳೆ ವಾತಾವರಣ ಇಲ್ಲ, ನೆಂಟರು, ಬಂಧು ಬಳಗದ ಸಂಪರ್ಕವಿಲ್ಲ ಎಂಬ ಬೇಸರವಿದೆ. ನಗರದ ಬದುಕಿನಲ್ಲಿ ಹಳ್ಳಿ ಹೋಲಿಸಲಾಗದು ಆದರೂ ಇಲ್ಲಿ ಇರುವದು ಅನಿವಾರ್ಯ ಎನ್ನುತ್ತಾರೆ.

ಕಟ್ಟಕಡೆಗೆ ಬದುಕಿನ ಒಂದು ಸತ್ಯ ಎಲ್ಲೆಡೆ ಢಾಳಾಗಿದೆ. ನಾಳೆ ಚೆನ್ನಾಗಿರಲು ಇಂದು ಹಣ ಗಳಿಕೆ ಬೇಕು, ತಮ್ಮದೇ ಎಂದು ನಂಬಿ ಬೇರೂರುವ ಭೂಮಿ ಬೇಕು. ಶಿಕ್ಷಣ ಪ್ರಗತಿಯತ್ತ ಸಾಗಿದ ಬಳಿಕ ಹಳ್ಳಿ ಬದಲಾಗಿದೆ, ದುಡಿಯುವ ಅವಕಾಶ ಎಲ್ಲರಿಗೆ ತೆರೆದಿದೆ. ನಗರ ನೌಕರಿ ಸೆಳೆತ ಸಹಜವಾಗಿದೆ. ಹಣ ನಮ್ಮ ಬದುಕಿನ ಅನೇಕ ಸಂಗತಿಗಳನ್ನು ನಿರ್ಧರಿಸುವ ಅಂಶವಾಗಿದೆ. ೮೦ ಕಿಲೋ ಭಾರ ಹೊರುತ್ತಾರೆ, ಕಲ್ಲು ಕರಗಿಸುತ್ತಾರೆ, ನೇಗಿಲ ಜತೆ ಪಳಗಿ ಭೂಮಿ ಬಂಗಾರ ಮಾಡುತ್ತಾರೆಂದು ಹಾಡಿ ಹೊಗಳಿದ ಊರಲ್ಲಿ ದುಡಿಮೆಯ ಕಿಮ್ಮತ್ತು ಅರಿಯದಷ್ಟು ವಿದ್ಯಾವಂತರಲ್ಲಿ ಅಂಧತ್ವ ಬಂದಿದೆ. ಕೃಷಿ ವಿಚಿತ್ರ ಸಮಸ್ಯೆಯಲ್ಲಿ ತೊಳಲಾಡುತ್ತಿದೆ. 'ಪಿತ್ರಾರ್ಜಿತ ಆಸ್ತಿ ಪಾಲು' ಎಂದು ಈ ಸಮಸ್ಯೆಯನ್ನು ಕಾನೂನು ದೃಷ್ಟಿಯಲ್ಲಿ ಮಾತ್ರ ನೋಡಲು ನಮ್ಮ ಶಿಕ್ಷಣ ಹೇಳುತ್ತಿದೆ. ಬೆವರಿಳಿಸುವ ಒಕ್ಕಲು ಇರುವ ಭೂಮಿಯಲ್ಲಿ ಈಗೀಗ ವಕೀಲರು, ಕೋರ್ಟುಗಳು ಬಂದು ನಿಂತಿವೆ!. ವ್ಯಕ್ತಿಗೆ ನ್ಯಾಯ ನೀಡುವ ಭರಾಟೆಯಲ್ಲಿ ಕೃಷಿಯ ನ್ಯಾಯ ಮರೆತಿದೆ. ಒಂದು ಕಾಲಕ್ಕೆ ಹಳ್ಳಿ ಯುವಕರ ವಿಳಾಸಗಳು ಕಾಲೇಜು ಓದಿನ ಬಳಿಕ ಬದಲಾಗುತ್ತಿತ್ತು. ಈಗ ಯುವಕರಷ್ಟೇ ಅಲ್ಲ ಅವರ ಪಾಲಕರಿಗೂ ನಗರ ಪ್ರೀತಿ ಹೆಚ್ಚಿದೆ. ಹಳ್ಳಿಯಲ್ಲಿದ್ದೂ ಊಳುವವ ಒಡೆಯನಾಗದ ಕಾರಣಕ್ಕೆ ಸಂಬಂಧಗಳು ಹಳಸುತ್ತಿವೆ. ಹಣದ ಹುಡುಕಾಟದಲ್ಲಿ ಪ್ರೀತಿಸುವವರಿಲ್ಲದೇ ಹಸಿರಾಡುವ ಭೂಮಿ ಹೆಣವಾಗುತ್ತಿದೆ.

# ಅರಣ್ಯ:ಕಾಡು ನಾಶ: ಬ್ರಿಟಿಶ್ ಕಾಲದಲ್ಲಿ ಕಾಡು ಕಡಿತ:ಕಾಡುಮರ ಒಯ್ಯಲು ನದಿಯೇ ಮೋಟಾರು!

ನಮಗೆ ಕಾಡೇ ನದಿಗಳ ತಾಯಿ, ಬ್ರಿಟೀಷರಿಗೆ ನದಿಯೇ ಮರ ಒಯ್ಯುವ ಮಾಯೆ! ನದಿಯಂಚಿನ ಕಾಡನ್ನು ದೇವರ ಕಾಡು ಎಂದು ನಾವು ಪೂಜಿಸಿದೆವು, ಮರ ಬೆಳೆದು ಕಟಾವಾದ ಬಳಿಕ ಸಾಗಣೆಗೆ ನದಿ ಅನುಕೂಲ ಎಂದು ಅವರು ಸಾಗವಾನಿ ನೆಡುತೋಪಿಗೆ ನೆಲ ಆಯ್ಕೆಗೆ ನದಿ ಕಣಿವೆಗೆ ಪ್ರಾಶಸ್ತ್ಯ ನೀಡಿದರು! ಹೀಗಾಗಿ ನಮ್ಮ ನದಿಯಂಚಿನಲ್ಲಿ  ಸಾಮಿಲ್, ನೆಡುತೋಪು ವ್ಯಾಪಿಸಿದವು. ಅರಣ್ಯ ಕಾರ್ಯ ಯೋಜನೆ ರೂಪಿಸುವಾಗ ಮುಂದಿನ ೪೦-೫೦ ವರ್ಷಕ್ಕೆ ಮರ ಎಷ್ಟು ಬೆಳೆಯುತ್ತದೆಂಬುದನ್ನು  ಲೆಕ್ಕ ಹಾಕಲು ಬ್ರಿಟೀಷರು ಜಾಣರಿದ್ದರು, ಆದರೆ ಮರ ಎಳೆಯಲು ಕೋಣ, ಆನೆ, ನದಿ ಪ್ರವಾಹಗಳ ಬದಲು ದೈತ್ಯಶಕ್ತಿಯ ಲಾರಿ ಬರಬಹುದೆಂದು ಊಹಿಸಿರಲಿಲ್ಲ! ಹೀಗಾಗಿ ಅವರ ಯೋಜನೆಗಳಲ್ಲಿ ನಾಟಾ ಸಾಗಣೆಗೆ ನದಿಯನ್ನೇ ಶಿಪಾರಸ್ಸು ಮಾಡಿದ್ದರು.

ನದಿಯಲ್ಲಿ ಮೀನು ಬೇಟೆ ಗೊತ್ತು. ಪಶ್ಚಿಮ ಘಟ್ಟದ ನದಿಗಳಲ್ಲಿ ಮರ ಬೇಟೆ ಯೋಜನೆ ಆರಂಭಿಸಿದವರು ಬ್ರಿಟೀಷ್‌ರು! ಘಟ್ಟದ ಸೀಮೆಯಲ್ಲಿ ಹುಟ್ಟಿ ಅರಬ್ಬಿ ಸಮುದ್ರದತ್ತ ಅಬ್ಬರದಲ್ಲಿ ಹರಿಯುವ ನದಿ ಪ್ರವಾಹವನ್ನು ನಾಟಾ ಸಾಗಣೆಯ ಅಸ್ತ್ರವಾಗಿ  ಬಳಸಿದ್ದು ಶತಮಾನದ ಸಾರಿಗೆ ಕತೆ. ಹಡಗು ನಿರ್ಮಾಣ, ರೇಲ್ವೆ ಸ್ಲೀಪರ್, ಮನೆ ನಿರ್ಮಾಣಗಳಿಗೆ ತೇಗ, ಬೀಟೆ ಮರಗಳಿಗೆ ಬೇಡಿಕೆಯಿತ್ತು. ಕಾಡು ಕೊಳ್ಳಗಳಲ್ಲಿ  ನೈಸರ್ಗಿಕವಾಗಿ ಹೆಮ್ಮರಗಳು ಬೆಳೆದಿದ್ದವು. ರಸ್ತೆ, ವಾಹನ ಸೌಕರ್ಯವಿಲ್ಲದ ಕಾಲಕ್ಕೆ ಘಟ್ಟದಲ್ಲಿ ಮರ ಸಾಗಿಸುವದು  ಕಷ್ಟ, ಅಪಾರ ಮಾನವಶ್ರಮ ವಿನಿಯೋಗ. ಓಡಿ(ವಡ್ಡಿ ?)ಕೋಣ, ಆನೆಗಳ ಸಹಾಯದಿಂದ ಮರದ ದಿಮ್ಮಿಗಳನ್ನು ಎಳೆದು ನದಿ ಮಡುವಿಗೆ ಎಸೆಯುತ್ತಿದ್ದರು, ಮಳೆ ಪ್ರವಾಹದಲ್ಲಿ ಅವು ಕರಾವಳಿಯತ್ತ  ಸುಲಭದಲ್ಲಿ ತೇಲಿ ಸಾಗುತ್ತಿದ್ದವು. ಆಯಕಟ್ಟಿನ ಜಾಗಗಳಲ್ಲಿ ಅವನ್ನು ಹಿಡಿದು  ಸಂಗ್ರಹಿಸಿ ಹಡಗಿನ ಮುಖೇನ ವಿದೇಶಕ್ಕೆ ರವಾನೆ. ಡಿಸೈಲ್, ಪೆಟ್ರೋಲ್ ಖರ್ಚಿಲ್ಲ, ಮಳೆ ನೀರು  ಮರ ಸಾಗಣೆ  ಶಕ್ತಿಯಾಗಿ ಬಳಕೆಯಾಗುತ್ತಿತ್ತು.

ಕ್ರಿ,ಶ ೧೮೫೦ರ ಪೂರ್ವದಲ್ಲಿ ಮರ ಕಟಾವಿನ ಪರವಾನಗಿ ಪಡೆದು ಖಾಸಗಿ ವರ್ತಕರು ನೈಸರ್ಗಿಕ ತೇಗ, ಸೀಸಂ ಮರ ಒಯ್ಯುತ್ತಿದ್ದರು. ಕ್ರಮೇಣ ಅತ್ಯುತ್ತಮ ಮರಗಳು ಖಾಲಿಯಾಗತೊಡಗಿದವು. ಮರ ಕಟಾವು, ಸಂರಕ್ಷಣೆಯನ್ನು ವೈಜ್ಞಾನಿಕವಾಗಿಸಲು ಅರಣ್ಯ ಕಾರ್ಯ ಯೋಜನೆ (Working Plan) ಆರಂಭವಾಯಿತು. ಕೆನರಾ ಜಿಲ್ಲೆಯಲ್ಲಿ   ಟಿ. ಆರ್.ಡಿ ಬೆಲ್  ಅರಣ್ಯ ಅಧಿಕಾರಿ,  ಕ್ರಿ.ಶ. ೧೮೯೫ರಲ್ಲಿ  ಅವರು ಕಾಳಿ ಕಣಿವೆಯ ಗುಂದದಲ್ಲಿ ಕಾರ್ಯ  ಯೋಜನೆ ರೂಪಿಸಿದ್ದರು. ಅದರಲ್ಲಿ ಯಾವ ಗಾತ್ರದ ಮರ ಕಟಾವು ಮಾಡಬೇಕು ? ಕಾಡಿನಲ್ಲಿ  ಈ ಗಾತ್ರದ ಎಷ್ಟು ಮರಗಳಿವೆ ? ವರ್ಷಕ್ಕೆ ಎಷ್ಟು ಕಡಿಯಬಹುದು ? ಮುಂತಾಗಿ ವಿವರ ನೀಡುತ್ತಾರೆ. ಮರ ಸಾಗಿಸುವ ವಿಧಾನದ  ಬಗೆಗೆ ವಿವರಿಸುವಾಗ ಕಾಳಿ ನದಿ ಮುಖೇನ ಕಡವಾಡದ ಸನಿಹದ ಕಟ್ಟಿಗೆ ಡಿಪೋಗೆ ಸಾಗಿಸುವ ಮಾರ್ಗ ತಿಳಿಸುತ್ತಾರೆ. ಮರ ಕಟಾವು ನಡೆಸುವ ಪ್ರತಿ ಕಂಪಾರ್ಟಮೆಂಟ್ ಸನಿಹದಲ್ಲಿ ಯಾವ ಹಳ್ಳವಿದೆ ಎಂದು ವಿವರ ಒದಗಿಸುತ್ತಾರೆ. ಆಗ ರಸ್ತೆ ಸಂಪರ್ಕವಿಲ್ಲದ ಕಾರಣ ಮರ ಸಾಗಣೆಗೆ ನದಿ ಅನಿವಾರ್ಯ! ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ, ನೇತ್ರಾವತಿ ಹೀಗೆ ಮುಂತಾದ ನದಿಗಳನ್ನು ಮರ ಸಾಗಿಸಲು ಶೂನ್ಯ ಬಂಡವಾಳದ ಮೋಟಾರ್‌ನಂತೆ ಬಳಸಿದ್ದರು. ಕರಾವಳಿ ಸೀಮೆಯಲ್ಲಿ  ಕಿಲೋ ಮೀಟರ್‌ಗೆ ಒಂದು ನದಿ, ಹಳ್ಳಗಳು ಹರಿಯುತ್ತಿದ್ದುದರಿಂದ ಮರ ಒಯ್ಯಲು ನೆರವಾಗಿದ್ದವು. ಅರಣ್ಯ ಕಾರ್ಯ ಯೋಜನೆಗಳಲ್ಲಿ ಯಾವ ಸ್ಥಳದಲ್ಲಿ  ನದಿಗೆ ಮರ ಹಾಕಿ ಎಲ್ಲಿ ಅವನ್ನು ಸಂಗ್ರಹಿಸಬಹುದೆಂಬ ಮಾರ್ಗದರ್ಶಿ ಮಾಹಿತಿಗಳಿವೆ.

ಕ್ರಿ,ಶ ೧೮೫೭ರ ಬಳಿಕ ಕರಾವಳಿ ಹಾಗೂ ಘಟ್ಟದ ನಡುವೆ ಚಕ್ಕಡಿ ಓಡಾಡುವ ರಸ್ತೆಗಳಾದವು. ಶತಮಾನದ ಹಿಂದೆ ಕಲ್ಲಿದ್ದಲು ಬಳಸಿ ಚಲಿಸುವ (ಒಡ್ಡರ ಬಂಡಿ!) ಲಾರಿಯೇನೋ ರಸ್ತೆಗಿಳಿಯಿತು, ಲಾರಿಯ ಚಕ್ರಕ್ಕೆ ಟಯರ್ ಜತೆಗೆ ( ರಿಮ್‌ನಂತೆ) ಮರ ಬಳಕೆಯಾಗಿತ್ತು! ಘಟ್ಟ  ಇಳಿಯುವಾಗ ಚಕ್ರಕ್ಕೆ ಬಳಸಿದ ಮರ ಘರ್ಷಣೆಯಿಂದ ಕಿಡಿಗಳು ಹುಟ್ಟುತ್ತಿದ್ದವು. ಮರದ ರಿಮ್‌ಗಳು ಬಿಸಿಯಾಗುವದನ್ನು  ತಪ್ಪಿಸಲು ಲಾರಿಯ ಕ್ಲೀನರ್ ಘಟ್ಟದ ರಸ್ತೆಯಲ್ಲಿ  ಕೆಳಗಿಳಿದು  ಲಾರಿ ಜತೆಗೆ ನಡೆಯುತ್ತ  ಟಯರ್‌ಗೆ ನೀರು ಸಿಂಪಡಿಸಬೇಕಿತ್ತು. ಹೀಗಾಗಿ ಮರದ ಭಾರವನ್ನು  ಇಂತಹ ಲಾರಿಯಲ್ಲಿ

ಹಾಕಲು ಸಾಧ್ಯವಿರಲಿಲ್ಲ. ಸರಿಸುಮಾರು ಕ್ರಿ,ಶ ೧೯೨೫-೩೦ರ ಕಾಲಕ್ಕೂ ಮರ ಸಾಗಣೆಗೆ ನದಿ ನಂಬಿದ್ದರು.

ಇಷ್ಟೆಲ್ಲ ಕತೆ ಹೇಳಿದ ಬಳಿಕ ಮರವಿಲ್ಲದ ಕರಾವಳಿಯಲ್ಲಿ ನದಿ ದಂಡೆಯಲ್ಲಿ ಸಾಮಿಲ್ ಉದ್ದಿಮೆಗಳು ಬೆಳೆದು ಬಂದಿದ್ದೇಕೆ ಎಂಬ ಫಕ್ಕಾ ಹಕೀಕತ್ತು ತಿಳಿದಿರಬಹುದು. ನಾಟಾವನ್ನು ನದಿ ನೀರಿನಲ್ಲಿ ನೆನಸಿಟ್ಟರೆ ಬಿರುಕು ಬರುವದಿಲ್ಲ, ಹುಳ ತಿನ್ನುವದಿಲ್ಲ ಎಂಬ ತಿಳುವಳಿಕೆಯಿದೆ. ನದಿಯಂಚಿನಲ್ಲಿ ಸಾಮಿಲ್ ಆರಂಭಿಸಿದರೆ ಪ್ರವಾಹದಲ್ಲಿ ನಾಟಾ ಪಡೆಯುವದಕ್ಕೆ, ಮರ ನೆನೆಹಾಕುವದಕ್ಕೆ ತುಂಬ ಅನುಕೂಲ. ಹೀಗಾಗಿ ಕಾಡು ಮರ ತೇಲಿ ಬರುವದನ್ನೇ ಕಾಯುತ್ತ ಕರಾವಳಿ ಪೇಟೆ ಸನಿಹದ ನದಿಯಂಚಿನಲ್ಲಿ ಸಾಮಿಲ್ ಸಾಲುಗಟ್ಟಿದವು. ನೀರಿನಲ್ಲಿ ತೇಲಿ ಬಂದ ನಾಟಾ ನಂತರ ಹಡಗಿನಲ್ಲಿ ತೇಲಿ (ತೇಲುವ ಹಡಗಾಗಿಯೂ) ಸಾಗಿದವು.

ನಮಗೆ ಕಾಡೇ ನದಿಗಳ ತಾಯಿ, ಬ್ರಿಟೀಷರಿಗೆ ನದಿಯೇ ಮರ ಒಯ್ಯುವ ಮಾಯೆ! ನದಿಯಂಚಿನ ಕಾಡನ್ನು ದೇವರ ಕಾಡು ಎಂದು ನಾವು ಪೂಜಿಸಿದೆವು, ಮರ ಬೆಳೆದು ಕಟಾವಾದ ಬಳಿಕ ಸಾಗಣೆಗೆ ನದಿ ಅನುಕೂಲ ಎಂದು ಅವರು ಸಾಗವಾನಿ ನೆಡುತೋಪಿಗೆ ನೆಲ ಆಯ್ಕೆಗೆ ನದಿ ಕಣಿವೆಗೆ ಪಾಶಸ್ತ್ಯ ನೀಡಿದರು! ಹೀಗಾಗಿ ನಮ್ಮ ನದಿಯಂಚಿನಲ್ಲಿ ಸಾಮಿಲ್, ನೆಡುತೋಪು ವ್ಯಾಪಿಸಿದವು. ಅರಣ್ಯ ಕಾರ್ಯ ಯೋಜನೆ ರೂಪಿಸುವಾಗ ಮುಂದಿನ ೪೦-೫೦ ವರ್ಷಕ್ಕೆ ಮರ ಎಷ್ಟು ಬೆಳೆಯುತ್ತದೆಂಬುದನ್ನು ಲೆಕ್ಕ ಹಾಕಲು ಬ್ರಿಟೀಷರು ಜಾಣರಿದ್ದರು, ಆದರೆ ಮರ ಎಳೆಯಲು ಕೋಣ, ಆನೆ, ನದಿ ಪ್ರವಾಹಗಳ ಬದಲು ದೈತ್ಯಶಕ್ತಿಯ ಲಾರಿ ಬರಬಹುದೆಂದು ಊಹಿಸಿರಲಿಲ್ಲ!. ಬಹುಶಃ ಅಂತಹುದೊಂದು ಕಲ್ಪನೆ ಸಾಧ್ಯವಾಗಿದ್ದರೆ ಕಡಿದಾದ ಕಣಿವೆ ಕೊಳ್ಳ ಬಿಟ್ಟು ರಸ್ತೆಯಂಚಿನಲ್ಲಿ ಇನ್ನಷ್ಟು ಸಾಗವಾನಿ ಬೆಳೆಸುತ್ತಿದ್ದರು. ನದಿಯಂಚಿನ ನೈಸರ್ಗಿಕ ಕಾಡು ಅಷ್ಟರ ಮಟ್ಟಿಗೆ ಸಂರಕ್ಷಿತವಾಗುತ್ತಿತ್ತು. ನಮಗೆ ಸ್ವಾತಂತ್ರ್ಯ ಬಂದ ಹೊಸತರಲ್ಲಿ ನೈಸರ್ಗಿಕ ಸಂಪನ್ಮೂಲ ಬಳಸಿ, ಕಾರ್ಖಾನೆ ಬೆಳೆಸಿ ಎಂದು ನೆಹರು ಘೋಸಿದರು. ಕ್ರಿ.ಶ. ೧೯೫೦-೭೦ರ ಕಾಲಕ್ಕೆ ಪಶ್ಚಿಮ ಘಟ್ಟದಲ್ಲಿ ಅರಣ್ಯಾದರಿತ ಕೈಗಾರಿಕೆಗಳು ಒಂದರ ನಂತರ ಒಂದರಂತೆ ಆರಂಭವಾದವು. ಆಗ ಲಾರಿಗಳು ರಸ್ತೆಗಿಳಿದವು. ಅಷ್ಟು ಕಾಲ ನದಿ ಪ್ರವಾಹದಲ್ಲಿ ಮಳೆಗಾಲದಲ್ಲಿ ಮಾತ್ರ ತೇಲುತ್ತಿದ್ದ ನಾಟಾ ಈಗ ಲಾರಿ ಏರಿ ವರ್ಷವಿಡೀ ಸಂಚರಿಸುವ ಸಾಧ್ಯತೆಯಾಯಿತು. ಘಟ್ಟದ ದಾರಿಯಲ್ಲಿ ಲಾರಿಯ ಭರ್ಜರಿ ಸಪ್ಪಳ ಕೇಳಿದಾಗ ಇನ್ನೂ ಮೋಟಾರು ನೋಡದ ಹಳ್ಳಿಗರು ಹೌಹಾರಿದರು. ಚಕ್ಕಡಿ ಓಡಾಡುವ ರಸ್ತೆಯಲ್ಲಿ ಲಾರಿ ಬಂದವು. ಈ ಲಾರಿಯವರು ಮಕ್ಕಳನ್ನು ಹಿಡಿದು ಒಯ್ಯುತ್ತಾರೆ, ಆಣೆಕಟ್ಟೆಗಳಿಗೆ ಮಕ್ಕಳನ್ನು ಬಲಿ ಹಾಕುತ್ತಾರೆ ಎಂದು ಜನ ಮಾತಾಡುತ್ತಿದ್ದರು! ಲಾರಿ ಸಪ್ಪಳ ಕೇಳಿದರೆ ಜನ ಭಯಗೊಳ್ಳುತ್ತಿದ್ದರು.

ನಮ್ಮಲ್ಲಿ ಲಾರಿ ಎಷ್ಟು ಭಯ ಹುಟ್ಟಿಸಿತ್ತೆಂದರೆ ನನ್ನದೇ ಒಂದು ಸ್ವಾರಸ್ಯಕರ ಘಟನೆಯಿದೆ. ೧೯೭೫ರಲ್ಲಿ ಹುಲೇಕಲ್ ಎಂಬ ಹಳ್ಳಿಯಿಂದ ಶಿರಸಿಗೆ ಹೊರಟಿದ್ದೆವು, ಬಸ್ ಇರಲಿಲ್ಲ. ಸಂಜೆಯಾಗಿತ್ತು, ನಮ್ಮನ್ನು ನೋಡಿ ಲಾರಿಯವರು ಕೈಬೀಸಿ ಕರೆದರು, ಶಿರಸಿಗೆ ಕರೆದೊಯ್ಯುತ್ತೇವೆಂದು ಕೂಗಿದರು, ನಾವು ದಿಕ್ಕಾಪಾಲಾಗಿ ಓಡಿದೆವು! ಲಾರಿ ಹೋದ ಬಳಿಕ ತೆಪ್ಪಗೆ ಅದರ ಹಿಂದೆ ೧೫ ಕಿಲೋ ಮೀಟರ್ ನಡೆದು ಪೇಟೆ ಸೇರಿದೆವು! ಅವತ್ತು ಮಕ್ಕಳನ್ನು ಹಿಡಿಯುವ ಲಾರಿ ಬಂದದ್ದು ಎಷ್ಟು ನಿಜವೋ ಗೊತ್ತಿಲ್ಲ, ಎಷ್ಟು ಮಕ್ಕಳನ್ನು ಹಿಡಿದರೆಂಬುದೂ ತಿಳಿದಿಲ್ಲ. ಆದರೆ ಘಟ್ಟ ಏರಿ ಕಾಡು ಕೊಳ್ಳ ಸುತ್ತಿದ ಲಾರಿಗಳು ಅರಣ್ಯಾಧರಿತ ಕೈಗಾರಿಕೆಗೆಂದು ನಮ್ಮ ಕಾಡಿನ ಹಿರಿಯಜ್ಜನಂತಹ ಹೆಮ್ಮರಗಳನ್ನೇ ಹೊತ್ತೊಯ್ದವು! ನದಿ ಮಳೆಗಾಲದಲ್ಲಿ ಮಾಡುತ್ತಿದ್ದ ಕೆಲಸವನ್ನು ಇವು ವರ್ಷವಿಡೀ ನಡೆಸಿದವು.

# ಕೃಷಿ: ತಳಿ ಸಂರಕ್ಷಣೆ: ವಿವಿಧ ತಳಿ ಸಂಗ್ರಹ:ಸಸ್ಯ ಸಂಪಾದನೆ, ಕೃಷಿ ಆರಾಧನೆ!

ಕೃಷಿ ವಿಶ್ವವಿದ್ಯಾಲಯ, ಸಂಶೋಧನಾ ಕೇಂದ್ರಗಳಲ್ಲಿ ಸಸ್ಯ ತಳಿ ಸಂಗ್ರಹ ಮಾಡುತ್ತಾರೆ. ಸರಕಾರಿ ಹಣದಲ್ಲಿ ಬೆಳೆಸಿದ ಆ ತೋಟದಲ್ಲಿ ಯೋಜನೆ ಬಂದಾಗಷ್ಟೇ ಕೃಷಿ ಆಸಕ್ತಿ ಕಾಣುತ್ತದೆ. ಭೇಟಿ ನೀಡಿದ ಕೃಷಿಕರಿಗೆ ಸರಿಯಾದ ಮಾಹಿತಿ ನೀಡುವ ವ್ಯವಸ್ಥೆ ಕೂಡಾ ಹಲವೆಡೆ ಇರುವದಿಲ್ಲ. ಆದರೆ ಕೃಷಿ ಸಾಧಕರ ಮನೆಗೆ ಹೋದರೆ ಅಪರೂಪದ ಪಾಠದ ಜತೆಗೆ ಆತಿಥ್ಯವೂ ಇರುತ್ತದೆ. ಒಂದು ಒಳ್ಳೆಯ ಹವ್ಯಾಸಕ್ಕೆ ನಾಡಿನ ತುಂಬ ಗೆಳೆಯರನ್ನು ಸಂಪಾದಿಸುವ ಶಕ್ತಿಯಿರುತ್ತದೆ. ಯಾವುದೋ ಹಳ್ಳಿ ಮೂಲೆಯಲ್ಲಿ ಬದುಕಿದ್ದು ನಾಡು ಹೆಮ್ಮೆ ಪಡುವ ವರ್ಚಸ್ಸು ದೊರೆಯುತ್ತದೆ. ಇದಕ್ಕಿಂತ ಮುಖ್ಯವಾಗಿ ಕಣ್ಮರೆಯಾಗುತ್ತಿರುವ ಎಷ್ಟೋ ತಳಿಗಳಿಗೆ ಇವರು ಮರುಜನ್ಮ ನೀಡುತ್ತಾರೆ.

ಕೃಷಿ ಕೆಲಸದ ಬಳಿಕ ಕಟ್ಟೆಯಲ್ಲಿ ಕೂತು ಹರಟೆಕಟ್ಟೆಯಲ್ಲೇ ಕಾಲ ಹಾಕುವ ಕೃಷಿಕ ಸಂಖ್ಯೆ ದೊಡ್ಡದಿದೆ. ಸ್ವತಃ ಕೃಷಿಕರಾದರೂ ಇವರಿಗೆ ಅದರಲ್ಲಿ ಆಸಕ್ತಿಯಿಲ್ಲ! ಪಿತ್ರಾರ್ಜಿತ ಭೂಮಿ ಹಾಳುಮಾಡಬಾರದೆಂಬ ಸಂಪ್ರದಾಯಕ್ಕೆ ಕೃಷಿ ಕೆಲಸ ಮಾಡುವ ನೆಪ ಮಾಡುತ್ತಾರೆ. ೧೦ ವರ್ಷದ ಹಿಂದಿನ ಕೃಷಿ ವಿಧಾನಕ್ಕೂ ಈಗಿನದಕ್ಕೂ ವ್ಯತ್ಯಾಸವಿಲ್ಲ, ಸುಧಾರಣೆ, ಬದಲಾವಣೆ ಯಾವುದೂ ಇಲ್ಲ. ದಿನದ ಹೆಚ್ಚಿನ ಸಮಯ ಕ್ರಿಕೆಟ್, ರಾಜಕೀಯ ಚರ್ಚೆಗಳಲ್ಲಿ ಸಕ್ರಿಯ ಕಾಲಹರಣ. ಕೃಷಿಯಲ್ಲಿ ಅಧ್ಯಯನ ಮಾಡುವದು, ಮಾಹಿತಿ ಸಂಗ್ರಹಿಸುವುದು, ಸಾಧನೆ ಮಾಡುವದಕ್ಕೆ ಅವಕಾಶವಿದೆ ಎಂಬ ಅರಿವು ಹಲವರಿಗಿಲ್ಲ. ಮಾಡುವ ಕೆಲಸದ ಬಗೆಗೆ ಕೊಂಚ ಲಕ್ಷ್ಯ ಹರಿಸಿದರೆ ಅದ್ಭುತ ಕೆಲಸ ಮಾಡುವ ಅವಕಾಶವಿದೆ. ಕೃಷಿಯಲ್ಲಿಯೂ ಎಂತಹ ಕೌತುಕದ ಹವ್ಯಾಸಗಳಿವೆ? ರಾಜ್ಯದ ವಿವಿಧ ಪ್ರದೇಶಗಳ ಆಯ್ದ ಕೃಷಿಕರ ಪಟ್ಟಿಯನ್ನು ಗಮನಿಸಿದರೆ ಅವಕಾಶ ಸುಲಭಕ್ಕೆ ಅರ್ಥವಾಗಬಹುದು.

ಕರಿಂಗಾಣದ ಕೆ.ಎಸ್. ಕಾಮತ್ ಎಂಬವರು ಈಗ ಹತ್ತು ವರ್ಷದ ಹಿಂದೆ ನನಗೊಂದು ಪತ್ರ ಬರೆದಿದ್ದರು. ಯಾವುದೋ ನನ್ನ ಹಳೆಯ ಲೇಖನದಲ್ಲಿ ಕೆಸವಿನ ಗಡ್ಡೆಯ ಜಾತಿಯೊಂದನ್ನು ಉಲ್ಲೇಖಿಸಿದ್ದೆ. ಲೇಖನವನ್ನು ಎರಡು ವರ್ಷದ ಬಳಿಕ ಓದಿದ ಕಾಮತರು ಕೆಸವಿನ ಗಡ್ಡೆ ಮಾಹಿತಿ ಕೇಳಿ ಪ್ರಶ್ನಿಸಿದ್ದರು. ಕೆಸವಿನ ಗಡ್ಡೆ ಜಾತಿ ಸಂಗ್ರಹಿಸುವ ತಮ್ಮ ಹವ್ಯಾಸ ವಿವರಿಸಿದ್ದರು. ರಾಜ್ಯದ ಯಾವುದೇ ಮೂಲೆಯ ರೈತರು ಕೆಸುವಿನ ಗಡ್ಡೆ ಹೆಸರು ಹೇಳಿದರೆ ಅದನ್ನು ಹುಡುಕಿ ಸಂಗ್ರಹಿಸುವವರೆಗೂ ಇವರಿಗೆ ಸಮಾಧಾನವಿಲ್ಲ. ಶಿರಸಿಯ ಸುಬ್ರಾಯ ಹೆಗಡೆ ದಿವರಗದ್ದೆ ನಾಟಿ ತಳಿಯ ಅಪ್ಪೆ ಮಾವು, ಹಲಸಿನ ಗಿಡಕ್ಕಾಗಿ ವಿವಿಧ ಭಾಗಗಳಲ್ಲಿ ಅಲೆದಿದ್ದಾರೆ. ಸ್ವತಃ ಕಸಿ ಕಟ್ಟುವ ಇವರು ಸಸಿ ಬೆಳೆಸಿ ರೈತರಿಗೆ ಒದಗಿಸುತ್ತಾರೆ. ಸೊರಬದ ಬಿಳೆಕಲ್ ಗೌಡರು ೩೦ ವರ್ಷದ ಹಿಂದೆ ಮಿಡಿ ಮಾವಿನ ತೋಟ ಬೆಳೆಸಿದ್ದಾರೆ. ರಿಪ್ಪನ್ ಪೇಟೆಯ ಅನಂತಮೂರ್ತಿ ಜವಳಿ, ಸೊರಬ ಹೊಸಗದ್ದೆಯ ಸೂರ್ಯನಾರಾಯಣ ಅಪ್ಪೆಮಾವಿನ ತಳಿ ಸಂಗ್ರಹಿಸಿ ತೋಟ ಅಭಿವೃದ್ಧಿ ಪಡಿಸಿದ್ದಾರೆ. ಕರ್ನಾಟಕದ ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದವರು, ಮೂಲತಃ ಕೃಷಿಕರೂ ಆದ ಬೆಂಗಳೂರಿನ ಎ.ಸಿ.ಲಕ್ಷ್ಮಣ ಬಿದಿರು, ಬೆತ್ತದ ಜಾತಿ ಸಂಗ್ರಹಿಸಿದ್ದಾರೆ. ದೇಶ ವಿದೇಶಗಳ ತಳಿ ಸಂಗ್ರಹ ನಮ್ಮನ್ನು ಬೆರಗಾಗಿಸುತ್ತದೆ. ಈಗ ಆರು ದಶಕಗಳ ಹಿಂದೆಯೇ ಕೋ. ಲ. ಕಾರಂತರು ಕುಂದಾಪುರದ ಕಾಳಾವರದಲ್ಲಿ ವಿವಿಧ ಜಾತಿಯ ಮಾವು, ಚಿಕ್ಕು ಬೆಳೆಸಿದ್ದಾರೆ. ಸಾರಿಗೆ ಸಂಪರ್ಕ ವ್ಯವಸ್ಥೆ ಸರಿಯಿಲ್ಲದ ಆ ಕಾಲದಲ್ಲಿ ನಾಡಿನಾದ್ಯಂತ ಅಲೆದು ಗಿಡ ಸಂಗ್ರಹಿಸಿದ ಸಾಹಸ ಅವರದು. ಸೇಡಿಯಾಪು ಜನಾರ್ಧನ ಭಟ್ಟರು ಬಾಳೆ ಜಾತಿಯ ವೈವಿಧ್ಯವನ್ನು ಒಮ್ಮೆ ಸಂಗ್ರಹಿಸಿದ್ದರು. ಕಾಸರಗೋಡಿನ ವೆಂಕಟ್ರಾಮ ದೈತೋಟರು ಔಷಧ ಸಸ್ಯ ವೈವಿಧ್ಯ ಸಂಗ್ರಹಿಸಿದ್ದಾರೆ. ಅವರ ಅಡಿಕೆ ತೋಟದಲ್ಲಿಯೇ ಸಾವಿರಾರು ಜಾತಿಯ ಸಸ್ಯಗಳು ತುಂಬಿವೆ. ಕರ್ನಾಟಕದಲ್ಲಿ ೧೭ ವರ್ಷದ ಹಿಂದೆ ನೆಲ್ಲಿ ಕೃಷಿ ಆರಂಭಿಸಿ ದಾಖಲೆ ಬರೆದ ಅಖಿಲ್ ಅಮೃತ್ ಸರದೇಶಪಾಂಡೆ ಬಯಲು ಭೂಮಿಗೆ ಸೂಕ್ತವಾದ ನೆಲ್ಲಿ ತಳಿ ಬೆಳೆಸಿದ್ದಾರೆ, ಕೃಷಿ ವಿಶೇಷ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಕರಾವಳಿಯ ಅಂಕೋಲ ಕಾರೆಬೇಣದ ಪೂರ್ಣಾನಂದ ಭಟ್ ಜಾಯಿಕಾಯಿ ತಳಿ ಶೋಧಕ್ಕೆ ರಾಜ್ಯದ ಹಲವು ಭಾಗ ಓಡಾಡಿದ್ದಾರೆ. ಶ್ರೀಲಂಕಾದ ವಿಶೇಷ ತಳಿ ಸಂಗ್ರಹಿಸಿ ಅಡಿಕೆಯ ನಡುವೆ ತೋಟ ಬೆಳೆಸಿದ್ದಾರೆ. ಹಲಸಿನ ತಳಿ, ಕಾಳು ಮೆಣಸಿನ ಬಳ್ಳಿ, ಭತ್ತ, ಮುಚ್ಚಿಗೆ ಬೆಳೆಗಳನ್ನು ಸಂಗ್ರಹಿಸಿದ ಕೃಷಿಕರ ದಾಖಲೆಗಳನ್ನು ಗಮನಿಸಿದರೆ ಕೃಷಿಯಲ್ಲಿ ಕ್ರಿಯಾಶೀಲ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದು ಅರ್ಥವಾಗುತ್ತದೆ.

ಸರಕಾರಿ ಯೋಜನೆ, ವಿದೇಶಿ ನೆರವು, ಮತ್ಯಾವುದೋ ಪ್ರಶಸ್ತಿ ಪುರಸ್ಕಾರ ಆಸೆಯಿಂದ ಹವ್ಯಾಸಕ್ಕೆ ನಿಂತವರು ಇವರಲ್ಲ. ಕೃಷಿ ಕೆಲಸದ ನಡುವೆ

ಏನೋ ಒಂದು ಸಾಧನೆ- ಸಮಾದಾನಕ್ಕೆ ತಳಿ ಸಂಗ್ರಹ. ಕೋಟ್ಯಾಂತರ ರೂಪಾಯಿ ಲಾಟರಿ ಹೊಡೆದರೂ ಸಿಗದ ಖುಷಿ ಅದು. ಸಂಗ್ರಹಿಸಿದ ತಳಿ, ಬೆಳೆಸಿದ ಜಾತಿಗಳನ್ನು ಈ ಸಾಧಕರು ತೋರಿಸುವಾಗ ಅವರ ಅನುಭವದ ಅಗಾಧತೆ ಅರಿವಿಗೆ ಬರುತ್ತದೆ. ಒಂದೊಂದು ಗಿಡದ ಹಿಂದೆಯೂ ದೊಡ್ಡ ಕತೆಯಿರುತ್ತದೆ. ಕಷ್ಟಪಟ್ಟು ಬೆಳೆಸಿದ ಸಸಿ ಫಲ ನೀಡಿದಾಗ ಆಗುವ ಸಂತಸಕ್ಕೆ ಪಾರವೇ ಇರದು. ಇಂತಹ ಅನುಭವವೇ ಇವರ ಹವ್ಯಾಸಕ್ಕೆ ನಿಜ ಚೇತನ.

ಕೃಷಿ ತಳಿ ವೈವಿಧ್ಯ ಸಂಗ್ರಹಿಸುವ ಹವ್ಯಾಸವಿರುವ ಯಾವುದೇ ಒಬ್ಬ ಕೃಷಿಕರನ್ನು ಹತ್ತಿರದಿಂದ ಗಮನಿಸಬೇಕು. ಅವರಲ್ಲಿನ ಜೀವಂತಿಕೆ, ಮಾಹಿತಿ ಸಂಗ್ರಹಿಸುವ ಉತ್ಸಾಹ, ಆಸಕ್ತರಿಗೆ ಪಾಠ ಮಾಡುವ ವೈಖರಿ ವಿಶೇಷವಾಗಿರುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಅವರ ಸುತ್ತ ಕೃಷಿ ಪ್ರಭಾವಲಯವಿರುತ್ತದೆ. ಇಂತಹ ಸಂಗ್ರಹ ಹವ್ಯಾಸವಿರುವ ವ್ಯಕ್ತಿಗಳು ರಾಜ್ಯದಾದ್ಯಂತ ಸಂಪರ್ಕ ಜಾಲ ಬೆಳೆಸಿಕೊಳ್ಳುತ್ತಾರೆ. ಒಮ್ಮೆ ಭೇಟಿಯಾದವರು ಮತ್ತೆ ಮತ್ತೆ ಇವರ ಸಂಪರ್ಕದಲ್ಲಿರುತ್ತಾರೆ. ಕಾಳು ಮೆಣಸಿನ ತಳಿ ಸಂಗ್ರಹಿಸುವ ವ್ಯಕ್ತಿಯ ಜತೆ ನಾವು ಒಡನಾಟ ಬೆಳೆಸಿದಾಗ ಯಾವುದಾದರೂ ಹೊಸ ಜಾತಿ ಮಾಹಿತಿ ದೊರಕಿದಾಗ ಸ್ವತಃ ನಾವು ಸಂಗ್ರಹಿಸುವ ವ್ಯಕ್ತಿಗೆ ಮಾಹಿತಿ ನೀಡುತ್ತೇವೆ. ಹೀಗೆ ಸಂಪರ್ಕ ಬೆಳೆಯುತ್ತ ನಾಡಿನ ಪ್ರೀತಿ ಹೆಚ್ಚುತ್ತದೆ. ಸಸ್ಯ ಸಂಗ್ರಹದ ಹವ್ಯಾಸ ಆರಂಭಿಸಿದರೆ ಆರೆಂಟು ವರ್ಷಗಳಲ್ಲಿ ಕೃಷಿಲೋಕ ಗಮನಿಸಬಹುದಾದ ಕೆಲಸ ಮಾಡಬಹುದು. ಸಸಿ ಸಂಗ್ರಹದ ಹವ್ಯಾಸಕ್ಕೆ ಹಣಕ್ಕಿಂತ ಮುಖ್ಯವಾಗಿ ಬೇಕಾದುದು ಆಸಕ್ತಿ, ನಿರಂತರವಾಗಿ ಮಾಹಿತಿ ಸಂಗ್ರಹದ ಹಸಿವು. ಕೃಷಿಕರ ಜತೆ ಸುಮಧುರ ಗೆಳೆತನ ಬೆಳೆಸುವ ಗುಣವಿದ್ದರೆ ಸಾಧನೆ ಸುಲಭವಾಗುತ್ತದೆ.

ಕೃಷಿ ವಿಶ್ವವಿದ್ಯಾಲಯಗಳಲ್ಲಿ, ಸಂಶೋಧನಾ ಕೇಂದ್ರಗಳಲ್ಲಿ ಸಸ್ಯ ತಳಿ ಸಂಗ್ರಹ ಮಾಡಿರುತ್ತಾರೆ. ಸರಕಾರಿ ಹಣದಲ್ಲಿ ಬೆಳೆಸಿದ ಆ ತೋಟದಲ್ಲಿ ಯೋಜನೆ ಬಂದಾಗಷ್ಟೇ ಕೃಷಿ ಆಸಕ್ತಿ ಕಾಣುತ್ತದೆ! ಭೇಟಿ ನೀಡಿದ ಕೃಷಿಕರಿಗೆ ಸರಿಯಾದ ಮಾಹಿತಿ ನೀಡುವ ವ್ಯವಸ್ಥೆ ಕೂಡಾ ಹಲವೆಡೆ ಇರುವದಿಲ್ಲ. ಆದರೆ ಕೃಷಿ ಸಾಧಕರ ಮನೆಗೆ ಹೋದರೆ ಅಪರೂಪದ ಪಾಠದ ಜತೆಗೆ ಆತಿಥ್ಯವೂ ಇರುತ್ತದೆ. ಒಂದು ಒಳ್ಳೆಯ ಹವ್ಯಾಸಕ್ಕೆ ನಾಡಿನ ತುಂಬ ಗೆಳೆಯರನ್ನು ಸಂಪಾದಿಸುವ ಶಕ್ತಿಯಿದೆ. ಯಾವುದೋ ಹಳ್ಳಿ ಮೂಲೆಯಲ್ಲಿ ಬದುಕಿದ್ದು ನಾಡು ಹೆಮ್ಮೆ ಪಡುವ ವರ್ಚಸ್ಸು ದೊರೆಯುತ್ತದೆ. ಇದಕ್ಕಿಂತ ಮುಖ್ಯವಾಗಿ ಕಣ್ಮರೆಯಾಗುತ್ತಿರುವ ಎಷ್ಟೋ ತಳಿಗಳಿಗೆ ಇವರು ಮರುಜನ್ಮ ನೀಡುತ್ತಾರೆ. ಒಂದು ಪುಟ್ಟ ಹವ್ಯಾಸ ನಮ್ಮ ನಾಡಿಗೆ ಬೇಕಾದ ಅಮೂಲ್ಯ ಸಸ್ಯವನ್ನು ಉಳಿಸುವ ಕಾರ್ಯಮಾಡಿರುತ್ತದೆ.

ಕ್ರಿ.ಶ.೧೯೬೦ರಲ್ಲಿ ಉತ್ತರ ಕನ್ನಡದ ಶೇಡಿದಂಟ್ಕಲ್‌ನ ಗಣೇಶ್ ಹೆಗಡೆ ಅಘನಾಶಿನಿ ನದಿ ದಡದ ಅನಂತ ಭಟ್ಟನಅಪ್ಪೆ ಎಂಬ ಉಪ್ಪಿನ ಕಾಯಿಗೆ ಶ್ರೇಷ್ಠ ಅಪ್ಪೆಮರದ ಕಸಿ ಗಿಡ ತಯಾರಿಸಿ ಅದರ ತೋಟ ಮಾಡಿದರು. ಈ ಜನಪ್ರಿಯ ತಳಿಯನ್ನು ೧೯೮೮ರಲ್ಲಿ ಕರ್ನಾಟಕ ಅರಣ್ಯ ಇಲಾಖೆ ಕಸಿ ಮಾಡಲು ಆರಂಭಿಸಿತು. ಮುಂದಿನ ಹತ್ತು ವರ್ಷಗಳಲ್ಲಿ ಲಕ್ಷಾಂತರ ಸಸಿಗಳನ್ನು ಬೆಳೆಸಲಾಯಿತು. ಈ ಅಪರೂಪದ ತಳಿಯನ್ನು ಉಳಿಸಿದವರು ಗಣೇಶ ಹೆಗಡೆ ಎಂಬ ಸಾಮಾನ್ಯ ಕೃಷಿಕರು ಎಂಬುದನ್ನು ಗಮನಿಸಬೇಕು. ಒಬ್ಬ ಕೃಷಿಕ ಇಂತಹ ಒಂದೊಂದು ತಳಿ ಸಂರಕ್ಷಣೆ ಮಾಡಿದರೂ ಹವ್ಯಾಸ ಸಾರ್ಥಕ! ಕೃಷಿಯಲ್ಲಿ ಹಣ ಸಂಪಾದನೆ ಮಹತ್ವವಾದರೂ ಸಸ್ಯ ವೈವಿಧ್ಯ ಸಂಪಾದನೆಗೆ ಮಹತ್ವವಿದೆ, ಅದು ಕೃಷಿ ಆರಾಧನೆಯ ಮೂಲಸೆಲೆಯಾಗುತ್ತದೆ.

# ಕೃಷಿ: ಬದುಕು:ಮಕ್ಕಳಿಗೆ ಕೃಷಿ ಜ್ಞಾನ:ಗ್ರಾಮೀಣ ಬದುಕು:ಅಡವಿ ಊರಿನ ಸಸ್ಯ ಪಾಠ

ಕರ್ನಾಟಕದಲ್ಲಿ ಅರಣ್ಯ ಇಲಾಖೆ ದೊಡ್ಡ ಜಮೀನ್ದಾರ! ಸರಕಾರಿ ಹಣ ಖರ್ಚು ಮಾಡಿ ಗಿಡ ಬೆಳೆಸಿ ಕೋಟಿ ಆದಾಯ ತೋರಿಸಿದ್ದೇ ಅರಣ್ಯ ಇಲಾಖೆಯ ಸಾಧನೆಯಾಗುವದಿಲ್ಲ. ಮರ ಕಡಿದು ಲಾರಿ ಏರುವ ಮುಂಚೆ ಸಸಿ ಬೆಳೆಸಿದ ಅನುಭವ ಪಾಠ ಹೇಳಬೇಕು. ನಾಟಿಯಿಂದ ಕಟಾವುವರೆಗಿನ ಕತೆ ಈಚೆ ಬರಬೇಕು. ಕೃಷಿ ಸಾಧಕರ ಮನೆಗೆ ಹೋದರೆ ಸಿಗುವ ಮಾಹಿತಿಯ ಹಾಗೇ ಇಲಾಖೆಯ ವಲಯ ಕಚೇರಿಗಳಲ್ಲಿ, ನೆಡುತೋಪು ಫಲಕಗಳಲ್ಲಿ ಮಾಹಿತಿ ಪ್ರದರ್ಶನವಾಗಬೇಕು. ಇದರಲ್ಲಿ ನಿಜವಾದ ಹಸಿರು ಲಾಭವಿದೆ.

ಕರ್ನಾಟಕ ಅರಣ್ಯ ಇಲಾಖೆ ರಾಜ್ಯದ ವಿವಿಧ ಭಾಗಗಳಲ್ಲಿ ನೆಡುತೋಪು ಬೆಳೆಸುತ್ತದೆ. ೧೯೭೦ರ ನಂತರ ತೇಗ, ನೀಲಗಿರಿ, ಸಿಲ್ವರ್ ಓಕ್, ಗಾಳಿ, ಅಕೇಸಿಯಾ, ಬಿದಿರು, ಔಷಧ ಸಸ್ಯಗಳನ್ನು ವಿವಿಧ ಮಣ್ಣು, ಹವಾಮಾನ ಕ್ಷೇತ್ರಗಳಲ್ಲಿ ಬೆಳೆಸಿದೆ. ರಸ್ತೆಯಂಚಿನಲ್ಲಿ ನೂರಾರು ಜಾತಿಯ ಸಾಲುಮರ ಬೆಳೆಸಿದೆ. ನೆಡುತೋಪು ಬೆಳೆದು ಕಟಾವಾದದ್ದು, ಮರ ಬೆಳೆದು ನೆರಳಾದದ್ದು ಕಾಣುತ್ತದೆ. ಇಲಾಖೆ ದಾಖಲೆ ದಪ್ತರ್‌ಗಳಲ್ಲಿ ಅರಣ್ಯ ಕೃಷಿಯ ವಿವರ ದಾಖಲಾಗುತ್ತದೆ. ಮರ ಬೆಳೆಸುವ ಕ್ಷೇತ್ರಾನುಭವವನ್ನು ರೈತರು, ಸಾರ್ವಜನಿಕರ ಜತೆ ಹಂಚಿಕೊಳ್ಳುವ ಒಂದು ವ್ಯವಸ್ಥೆ ಇಂದು ರಾಜ್ಯದಲ್ಲಿ ಸಮರ್ಪಕವಾಗಿಲ್ಲ. ಜನಸಾಮಾನ್ಯರ ಜತೆ ಬೆರೆಯುವ ಯಾವುದೋ ಅಧಿಕಾರಿಗಳ ಬಾಯ್ಮಾತು ಬಿಟ್ಟರೆ ಬರಹ, ಚಿತ್ರ, ವಿಡಿಯೋ ದಾಖಲೆಗಳಲ್ಲಿ ಏನಿದೆ? ಅರಣ್ಯ ಭವನದ ೧೮ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಪಟ್ಟನೆ ಕೇಳಿದರೆ ರಾಶಿ ರಾಶಿ ಟೆಕ್ನಿಕಲ್ ವರದಿಗಳು ಸಿಕ್ಕಾವೆಯೇ ಹೊರತೂ ಜನಸಾಮಾನ್ಯರಿಗೆ ಪಾಠ ಹೇಳಲು ಮಾಹಿತಿಗಳಿಲ್ಲ!

ಶ್ರೀಗಂಧ ಬೆಳೆದರೆ ಕೋಟಿಗಳಿಸಬಹುದು, ತೇಗ ಬೆಳೆದು ಲಕ್ಷಾಧೀಶರಾಗಬಹುದು, ಮ್ಯಾಂಜಿಯಮ್ ಪವಾಡದ ಬಗೆಗೆ ಖಾಸಗಿ ಕಂಪನಿಗಳು ಅಬ್ಬರದ ಪ್ರಚಾರ ನಡೆಸಿದ್ದಾಗ ಅರಣ್ಯ ಇಲಾಖೆ ನೆಲದ ಸತ್ಯ ಗೊತ್ತಿದ್ದೂ ಮೌನ ತಾಳಿತ್ತು. ಇವತ್ತು ಅರಣ್ಯ ಬೆಳೆಸುವಲ್ಲಿ ಜನ ಸಹಭಾಗಿತ್ವಕ್ಕೆ ಮಹತ್ವವಿದೆ. ಪಾಲಿಸಿದರೆ ಪಾಲು ನೀಡಲು ಒಪ್ಪಂದ ಪತ್ರಕ್ಕೆ ಸಹಿ ಹಾಕಿಸುವ ಅಧಿಕಾರಿಗಳಿಗೆ ಗಿಡ ಬೆಳೆಸುವ ಜ್ಞಾನ ಹಂಚಿಕೆ ಕೂಡಾ ಒಂದು ಅಗತ್ಯ ಎನಿಸಿಲ್ಲ! ೧೯೯೭ರಲ್ಲಿ ಬಯಲು ಸೀಮೆಗೆ ಬಂದ ಜಪಾನ್ ನೆರವಿನ ಯೋಜನೆಯಲ್ಲಿ ಮೂರು ಕೋಟಿ ಸಸಿಗಳನ್ನು ರೈತರ ಭೂಮಿಯಲ್ಲಿ ಬೆಳೆಸಲಾಯಿತು. ಅದಕ್ಕೂ ಪೂರ್ವದಲ್ಲಿ ಸಸ್ಯ ನಿರ್ವಹಣೆ ಬಗೆಗೆ ನೀಡಿದ ಶಿಕ್ಷಣ ಏನು ? ಗಾರ್ಡ್, ವಾಚ್‌ಮನ್‌ಗಳ ಮಾತು ಬಿಟ್ಟರೆ ಬೇರೆ ಮಾಹಿತಿ ಇಲ್ಲ. ೧೯೯೧ರಿಂದ ಲಕ್ಷಾಂತರ ಹೆಕ್ಟೇರ್ ಅಕೇಸಿಯಾ, ಕ್ಯಾಸುರೀನಾ ನೆಡುತೋಪು ಬೆಳೆಸಿ ಪಾಲು ನೀಡಲು ಗ್ರಾಮ ಅರಣ್ಯ ಸಮಿತಿ ರಚಿಸಲಾಗಿದೆ. ಈ ಗಿಡಗಳ ಕೃಷಿ ಬಗೆಗೆ ಕಳೆದ ಎರಡು ದಶಕಗಳಿಂದಲೂ ಯಕಶ್ಚಿತ ಒಂದು ಪುಟ ಮಾಹಿತಿ ಕೂಡಾ ಸಿದ್ದವಾಗಿಲ್ಲ. ಮರ ಕಡಿದಾಗ ಪಾಲು ನೀಡುವದಷ್ಟೇ ಇಲಾಖೆ ಕೆಲಸ ಎಂದು ಅಧಿಕಾರಿಗಳು ಭಾವಿಸಿಕೊಂಡಿದ್ದಕ್ಕೆ ಪುರಾವೆ ಇದು.

ಒಂದು ಎಕರೆ ಅಕೇಸಿಯಾ, ನೀಲಗಿರಿ, ಸಾಗವಾನಿ, ಕ್ಯಾಸುರೀನಾ, ಸಿಲ್ವರ್ ಓಕ್ ಬೆಳೆದರೆ ಎಷ್ಟು ವರ್ಷಕ್ಕೆ ಎಷ್ಟು ಉತ್ಪಾದನೆ ಸಾಧ್ಯವೆಂಬ ಒಂದು ಮಾಹಿತಿ ಅಗತ್ಯವಿದೆ. ಅರಣ್ಯ ಭೂಮಿಯಲ್ಲಿ ಅಷ್ಟೊಂದು ಅದ್ಭುತವಾಗಿ ಬೆಳೆವ ಗಿಡವನ್ನು ಕೃಷಿ ನೆಲದಲ್ಲಿ ನಾಟಿ ಮಾಡಲು ಇದು ಜನರನ್ನು ಉತ್ತೇಜಿಸುತ್ತದೆ. ಯಾವ ಜಾತಿ, ಯಾವ ಕ್ಲೋನು ನಾಟಿ ಮಾಡಬೇಕು ? ಗೊಬ್ಬರ, ಕೃಷಿ ನಿರ್ವಹಣಾ ಪಾಠ ರೈತರಿಗೆ ಸಮರ್ಪಕವಾಗಿ ದೊರೆತರೆ ಶೇಕಡಾ ೧೦ರಷ್ಟು ರೈತರು ಪಾಳು ಭೂಮಿ, ತೋಟ, ಹೊಲಗಳ ಅಂಚಿನಲ್ಲಿ ಗಿಡ ಬೆಳೆಸಲು ಮುಂದಾಗುತ್ತಾರೆ. ಅರಣ್ಯ ಇಲಾಖೆ ಹೇರಳ ಹಣ ಖರ್ಚು ಮಾಡುವುದರಿಂದ ಅವರ ನೆಡುತೋಪು ಚೆನ್ನಾಗಿ ಆಗುತ್ತದೆಂಬ ಅಭಿಪ್ರಾಯ ಸಾರ್ವಜನಿಕವಾಗಿದೆ. ನೆಡುತೋಪು ನಿರ್ವಹಣೆಯ ಸರಿಯಾದ ಲೆಕ್ಕ ಲಭ್ಯವಾದರೆ ಮರ ಬೆಳೆಸುವದು ಹೇಗೆ ಲಾಭದಾಯಕ ಎಂದು ಹೇಳಲು ಸಾಧ್ಯವಾಗುತ್ತದೆ. ಕೃಷಿ ಬೆಳೆಗಳ ವಿಚಾರದಲ್ಲಾದರೆ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರಗಳು ಮಾಹಿತಿ ಹಂಚಿಕೆಯ ಮಾಧ್ಯಮವಾಗುತ್ತದೆ. ಆದರೆ ಕರ್ನಾಟಕದ ಸಂದರ್ಭದಲ್ಲಿ ಅರಣ್ಯ ಇಲಾಖೆ ಈ ಕೆಲಸ ಮಾಡಬೇಕು. ಸಾಮಾಜಿಕ ಅರಣ್ಯ ಯೋಜನೆ ಜೋರಾಗಿದ್ದಾಗ ೧೯೮೦ರಲ್ಲಿ ಕೆಲ ಮಾಹಿತಿ ಪತ್ರ ಮುದ್ರಿಸಲಾಗಿತ್ತು. ನಂತರ ಅದು ನಡೆಯಲಿಲ್ಲ. ಇಂದು ಗಿಡ ಬೆಳೆಸಲು ಇಲಾಖೆ ಹೇಳಬೇಕಾಗಿಲ್ಲ, ಸ್ವಯಂ ಆಸಕ್ತಿಯಿಂದ ಹಳ್ಳಿಗರೇ ಬೆಳೆಸಿದ ಉದಾಹರಣೆಗಳು ಸಿಗುತ್ತವೆ. ಆದರೆ ಖಚಿತ ಮಾಹಿತಿ

ಇನ್ನಷ್ಟು ಜನರನ್ನು ಸೆಳೆಯಲು ನೆರವಾಗುತ್ತದೆ. ನೆಲಕ್ಕೆ ಮರ ಬೆಳೆಸುವ ತಾಕತ್ತು ಅದ್ಭುತವಾಗಿದೆ ಎಂದು ಅರಣ್ಯ ಜಿಲ್ಲೆಯ ಪರಿಸರವೇ ಹೇಳುತ್ತದೆ. ಆದರೆ ಮರ ಬೆಳೆದ ನಾಡಿನಲ್ಲಿ ಇನ್ನೂ ಹುಲ್ಲಿನಂತಹ ಭತ್ತ ಬೆಳೆಯಲು ವಿಶೇಷ ಮಾಹಿತಿ ಹಂಚುತ್ತಿದ್ದೇವೆ! ನೆಲದ ಹಸಿರು ಶಕ್ತಿ ಬಲಪಡಿಸಲು ಮಾಹಿತಿ ಹಂಚಿಕೆ ಪ್ರಯತ್ನ ಕೂಡಾ ಅತ್ಯಗತ್ಯ.

ಅಕೇಸಿಯಾ ಸ್ಪ್ರಿಂಗ್‌ವೆಲ್ ಸಸ್ಯ ಒಂದೇ ವರ್ಷದಲ್ಲಿ ೮ ಅಡಿ ಬೆಳೆದಿದ್ದನ್ನು ಉತ್ತರ ಕನ್ನಡದ ಸಿದ್ದಾಪುರ ಬಾಳೆಕೊಪ್ಪದಲ್ಲಿ ಗಮನಿಸಬಹುದು. ಹಾವೇರಿ ಸನಿಹದ ಕಲ್ಲುಗುಡ್ಡದಲ್ಲಿ ಬದ್ರಾಚಲಂ ನೀಲಗಿರಿ ಕ್ಲೋನ್ ಕಾಂಡ ಎರಡೇ ವರ್ಷಕ್ಕೆ ೧೦-೧೨ ಸೆಂಟಿಮೀಟರ್ ಸುತ್ತಳತೆಯಾಗಿತ್ತು. ಹಾಸನದ ಮಾರಶೆಟ್ಟಿಹಳ್ಳಿ ಗೇಟ್ ಸನಿಹದಲ್ಲಿ ಹೆಬ್ಬೇವು ನಾಲ್ಕು ವರ್ಷಕ್ಕೆ ತೆಂಗಿನ ಮರದ ಕಾಂಡ ಹೋಲುತ್ತಿತ್ತು. ಹೊಸನಗರದಲ್ಲಿ ಮೈಸೂರು ಪೇಪರ್ ಮಿಲ್‌ಸ್‌ನವರು ಬೆಳೆಸಿದ ಅಕೇಸಿಯಾ, ನೀಲಗಿರಿ ಬೆಳೆ ಹಿಂದಿನ ಮಣ್ಣಿನ ಮಾತು ಆಲಿಸಬೇಕು. ಚಿತ್ರದುರ್ಗದ ರಾಂಪುರದ ಸಂತೆಬಂಡೆ ಸನಿಹದಲ್ಲಿ ಸಾಲುಮರ ಜಲ ಸಂರಕ್ಷಣೆ ವಿಧಾನ ಮಾತ್ರದಿಂದ ಹನಿ ನೀರು ನೀಡದೇ ಸುಲಭದಲ್ಲಿ ಬೆಳೆಯಿತು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸನಿಹದ ಗುಡ್ಡದಲ್ಲಿ ಬೆಳೆದ ಅಕೇಸಿಯಾ ನೆಡುತೋಪಿನ ಸಾವಿರ ಸಸಿಗಳು ೨೦೦೪ರಲ್ಲಿ ಬರಗಾಲದ ಕಾರಣ ಒಣಗಿ ನಿಂತಿದ್ದವು. ಇಂತಹ ಅನುಭವಗಳು ದಾಖಲಾಗಿ ರೈತರಿಗೆ ಹಂಚಿಕೆಯಾಗ ಬೇಕು. ಇದು ಭವಿಷ್ಯದ ಅರಣ್ಯೀಕರಣಕ್ಕೆ ನೆರವಾಗುತ್ತದೆ. ಅರಣ್ಯ ಸಂಶೋಧನಾ ವಿಭಾಗ ಈ ಕೆಲಸಗಳನ್ನು ನಿಧಾನಕ್ಕೆ ಮಾಡುತ್ತಿದೆಯಾದರೂ ಅಲ್ಲಿ ಅನುಸರಣೆ, ಅಗತ್ಯ ಪ್ರೋತ್ಸಾಹದ ಕೊರತೆ ಕಾಣುತ್ತದೆ. ಗಿಡ ನೆಡುವ ಕಾಮಗಾರಿಗೆ ಇದ್ದಷ್ಟು ಮಹತ್ವ ಸಂಶೋಧನಾ ವಿಭಾಗಕ್ಕೆ ಇಲ್ಲ!

ಇಡೀ ಕರ್ನಾಟಕದಲ್ಲಿ ಅರಣ್ಯ ಇಲಾಖೆ ದೊಡ್ಡ ಜಮೀನ್ದಾರ! ಸರಕಾರೀ ಹಣ ಖರ್ಚು ಮಾಡಿ ಗಿಡ ಬೆಳೆಸಿ ಕೋಟಿ ಆದಾಯ ತೋರಿಸಿದ್ದೇ ಅರಣ್ಯ ಇಲಾಖೆಯ ಸಾಧನೆಯಾಗುವದಿಲ್ಲ. ಮರ ಕಡಿದು ಲಾರಿ ಏರುವ ಮುಂಚೆ ಬೆಳೆಸಿದ ಅನುಭವ ಪಾಠ ಹೊರಬರಬೇಕು. ನಾಟಿಯಿಂದ ಕಟಾವುವರೆಗಿನ ಕತೆ ಈಚೆ ಬರಬೇಕು. ಕೃಷಿ ಸಾಧಕರ ಮನೆಗೆ ಹೋದರೆ ಸಿಗುವ ಮಾಹಿತಿಯ ಹಾಗೇ ಇಲಾಖೆಯ ವಲಯ ಕಚೇರಿಗಳಲ್ಲಿ, ಗ್ರಾಮ ಅರಣ್ಯ ಸಮಿತಿ, ನೆಡುತೋಪುಗಳ ಫಲಕಗಳಲ್ಲಿ ಮಾಹಿತಿ ಪ್ರದರ್ಶನವಾಗಬೇಕು. ಇದರಲ್ಲಿ ನೆಲದ ಹಸಿರು ಲಾಭವಿದೆ.

# ಗಿಡಮೂಲಿಕೆಗಳು:ಮೂಲಿಕಾ ವೈದ್ಯರ ಮಾ(ಗಾ)ಯದ ಕತೆಗಳು

'ಔಷಧದ ಗಿಡ ಎಲ್ಲರಿಗೂ ತೋರಿಸಿದ್ರೆ ಔಷಧದ ಗುಣ ಮಾಯವಾಗ್ತದೆ!' ಅಜ್ಜ, ಅಪ್ಪ ಹೇಳುತ್ತಿದ್ದ ಮಾತುಗಳು ನೆನಪಾದವು. ಯೋಚಿಸುತ್ತ ದಿಬ್ಬದಲ್ಲಿ ನಿಂತರು, ಮುಂದಿನ ಕ್ಷಣಾರ್ಧದಲ್ಲಿ ದನಕರುಗಳ ಔಷಧಕ್ಕೆ ಬೇಕಿದ್ದ ಶಿವಣೆ ಗಿಡ ಬುಲ್ಡೋಜರ್ ಅಲುಗಿಗೆ ಸಿಲುಕಿ ಬೇರು ಸಹಿತ ಕಿತ್ತು ಬಿತ್ತು! 'ಹೊಟ್ಟೆಯೊಳಗೆ ಭಾರೀ ಸಂಕಟವಾಯ್ತು, ನನ್ನ ಎದೆ ಮೇಲೆ ಬುಲ್ಡೋಜರ್ ಬಂದಂಗೆ ಆಯ್ತು!' ಒಂದು ಕಾಡು ಗಿಡದ ಸಾವು ನೆನಪಿಸಿಕೊಂಡು ಗೌಡರ ಕಣ್ಣಂಚಿನಲ್ಲಿ ನೀರು ಜಿನುಗುತ್ತಿತ್ತು.

ಮಾಧ್ಯಮ ಆಸಕ್ತಿಯಿಂದ ಹಳ್ಳಿ ವೈದ್ಯರ ಸಮೀಕ್ಷೆ ಆರಂಭಿಸಿದ ದಿನಗಳವು. ನಾಟಿ ವೈದ್ಯರ ವಿಳಾಸ ಸಂಗ್ರಹಿಸಿ  ನೇರ ಅವರ ಮನೆಗೆ ಹೋಗಿ ಔಷಧ ಜ್ಞಾನ ದಾಖಲಿಸುವದು ಮುಖ್ಯ ಕೆಲಸ. ಎಷ್ಟು ವರ್ಷದಿಂದ ಹಳ್ಳಿ ಔಷಧ ಕೊಡುತ್ತಿದ್ದಾರೆ? ಕಲಿತದ್ದು ಹೇಗೆ? ವರ್ಷಕ್ಕೆ  ಎಷ್ಟು ಜನ ಔಷಧಕ್ಕೆ ಬರುತ್ತಾರೆ? ಬಳಸುವ ಗಿಡ ಮೂಲಿಕೆ ಎಲ್ಲಿಂದ ಪಡೆಯಲಾಗುತ್ತದೆ? ಈಗ ಮೂಲಿಕೆ ಸಾಕಷ್ಟು ದೊರೆಯುತ್ತಿದೆಯೇ? ಗಿಡ ಬೆಳೆಸಿದ್ದಾರೆಯೇ? ಕುಟುಂಬದಲ್ಲಿ ನಿಮ್ಮ ನಂತರ ಈ ಸೇವೆ ನಡೆಸುವವರು ಯಾರು? ಹೀಗೆ ಪ್ರತಿ ವೈದ್ಯರಿಂದ ೨೫-೩೦ ಪ್ರಶ್ನೆಗಳಿಗೆ ಉತ್ತರ ಪಡೆಯಬೇಕಿತ್ತು. ೧೫ ವರ್ಷಗಳ ಹಿಂದೆ  ಈ ಕೆಲಸ ಮಾಡುವಾಗ ಓಡಾಟಕ್ಕೆ ವಾಹನ ಅನುಕೂಲತೆಯಿರಲಿಲ್ಲ, ಘಟ್ಟದ ಹಳ್ಳಿಗಳಲ್ಲಿ ಸೈಕಲ್ ತುಳಿಯುವದು ಕಷ್ಟವಾದ್ದರಿಂದ ಕಾಲ್ನಡಿಗೆ ಅನಿವಾರ್ಯ. ಕಾಡು ಹಳ್ಳಿ ಸುತ್ತುವ ಸಂದರ್ಭದಲ್ಲಿ  ದಾರಿ ಖರ್ಚಿಗೆಂದು  ಹಳ್ಳಿಗರು ಚೆಂದದ ಕತೆ ಹೇಳುತ್ತಿದ್ದರು. ಮೂಲಿಕಾ ವೈದ್ಯರ ಸಮೀಕ್ಷೆ ನಡೆಸುತ್ತಿದ್ದರಿಂದ ಕತೆಗಳು  ಅವರ ಸುತ್ತಲೇ ತಿರುಗುತ್ತಿದ್ದವು .

ಪ್ರಸಿದ್ಧ ವೈದ್ಯರ ಬಗೆಗೆ ಹೇಳುವಾಗಲೋ, ಮೂಲಿಕೆಯ ಮಹತ್ವ ವಿವರಿಸುವಾಗಲೋ ಮಾಮೂಲಿಯಾಗಿ ಕೇರಳದ ಕೃಷಿ ಕೆಲಸಗಾರರೊಬ್ಬರ ಘಟನೆ ಹೇಳುತ್ತಿದ್ದರು. ಕೃಷಿ ಕೆಲಸಕ್ಕೆಂದು ಉತ್ತರ ಕನ್ನಡದ ಹಳ್ಳಿ ಮನೆಗೆ ಬಂದ ಆ ವ್ಯಕ್ತಿಗೆ ಒಮ್ಮೆ ಕಾಡಿನಿಂದ ಸೊಪ್ಪುತರಲು ಯಜಮಾನರು ಸೂಚಿಸಿದರು. ಕತ್ತಿ, ಹಗ್ಗ ಹಿಡಿದು ಮುಂಜಾನೆ ಕಾಡಿಗೆ ಹೋದ  ಆತ ಸಾಯಂಕಾಲವಾದರೂ ಮರಳಲಿಲ್ಲ. ಅರ್ಧ ಗಂಟೆಯ ಕೆಲಸಕ್ಕೆ ದಿನವಿಡೀ ಸಮಯ ವ್ಯಯಮಾಡಿದವನ ಬಗೆಗೆ  ಯಜಮಾನರ ಸಿಟ್ಟು ನೆತ್ತಿಗೇರಿತು. ರಾತ್ರಿ  ಕೆಲಸಗಾರ ಕತ್ತಿ, ಹಗ್ಗ ಹಿಡಿದು  ಮರಳಿದ್ದನ್ನು ಗಮನಿಸಿದವರು ಕೃಷಿ ಕೆಲಸಕ್ಕೆ ನಾಲಾಯಕ್ ಎಂದು ಗದರಿಸಿದರು. 'ನಿಮ್ಮ ಕಾಡಲ್ಲಿ ಗೊಬ್ಬರಕ್ಕೆ ಬಳಸುವ ಸೊಪ್ಪುಗಳಿಲ್ಲ, ಯಾವ ಗಿಡ ನೋಡಿದರೂ ಅದು ಅಮೂಲ್ಯ ಗಿಡಮೂಲಿಕೆ! ಹೀಗಾಗಿ ಅವನ್ನು ದೊಡ್ಡಿಗೆ ಹಾಕುವ ಸೊಪ್ಪಿನಂತೆ ಕಡಿದು ಹಾಳುಮಾಡಲು ಮನಸ್ಸಾಗಲಿಲ್ಲ' ಆತ ತನ್ನ ಸಂಧಿಗ್ಧತೆ ವಿವರಿಸಿದರು. ಆ ವ್ಯಕ್ತಿಯ ಮಾತು ವಿಚಿತ್ರವೆನಿಸಿತು. ಕಲಿಕೆಯ ಕುತೂಹಲದಿಂದ ಕೆಲಸಗಾರನಲ್ಲಿಯ ಅಪಾರ ಸಸ್ಯಜ್ಞಾನದ  ಮಾಹಿತಿ ಪಡೆದರು, ಜತೆ ಕಾಡು ಸುತ್ತಿದರು. ತಮ್ಮ ಕಾಡು ಸಸ್ಯದ ಬಳಕೆವಿವರ ಸಂಗ್ರಹಿಸಿ ಕೇರಳದ ಕೂಲಿಕಾರನೊಬ್ಬರ ಪ್ರೇರಣೆಯಿಂದ ಉತ್ತರ ಕನ್ನಡದ ಕೃಷಿಕರೊಬ್ಬರು ಮುಂದೆ ಮೂಲಿಕಾ ವೈದ್ಯರಾಗಿ  ಪ್ರಸಿದ್ಧರಾದರು !

ಕರೆವೊಕ್ಕಲಿಗರು, ಮರಾಠಿ, ಸಿದ್ದಿ, ಹವ್ಯಕ ಹೀಗೆ ವಿವಿಧ ಜನಾಂಗದ ೧೫೦ಕ್ಕೂ  ಹೆಚ್ಚು ವೈದ್ಯರ ಸಂದರ್ಶನ ಮಾಡಿದ್ದೇನೆ, ಹತ್ತಾರು ಹಳ್ಳಿಗಳಲ್ಲಿ ಇಂತಹುದೇ ಕತೆ ಕೇಳಿದ್ದೇನೆ. ಕಾಡಿಗೆ ಸೊಪ್ಪು ಕಡಿಯಲು ಹೋದವರ ಕತ್ತಿ ಇದ್ದಕ್ಕಿದ್ದಂತೆ ಬಂಗಾರವಾಯಿತು ಎಂಬುದು ಇನ್ನೊಂದು ರೋಚಕ ಪ್ರಸಂಗ! ಕಾಡಿನ ಯಾವುದೋ ಗಿಡ ಕಡಿದಾಗ ಕಬ್ಬಿಣ  ಬಂಗಾರವಾಗುತ್ತದೆಂದು ಇಂದಿಗೂ ಹೇಳುವವರಿದ್ದಾರೆ! ಶಿರಸಿಯ ಹೂಡ್ಲಮನೆಯ ಹೆಗಡೆಯವರೊಬ್ಬರು (ಕಾಲ ಗೊತ್ತಿಲ್ಲ) ಹುಲಿಯಪ್ಪನ ಕಾಡಿನಲ್ಲಿ ಕಾಡು ಗಿಡದ ಎಲೆಗಳಿಗೆ ಗುಂಡು ಸೂಜಿ ಚುಚ್ಚಿಸಿ ಈ ಮಾಯದ ಗಿಡದ ಪತ್ತೆಗೆ ಶ್ರಮಿಸಿದ್ದರು ಎಂದು  ಹೇಳಿದವರಿದ್ದಾರೆ! ಇಂತಹ ಕತೆಗಳು ಎಷ್ಟು ನಿಜವೋ? ಘಟನೆಗೆ ಪೂರಕ ದಾಖಲೆಗಳೇನು ಎಂದು ಮೂಲ ಕೆದಕಿದರೆ ಇನ್ನಷ್ಟು ಸಸ್ಯ ಜನಪದ ಕತೆಗಳು ಸಿಕ್ಕಾವೆಯೇ ಹೊರತೂ  ಎಲ್ಲಿಯೂ ಅಧಿಕೃತ ಮಾಹಿತಿ ದೊರೆಯುವದಿಲ್ಲ. ಆದರೆ ನಮ್ಮ ಕಾಡು ಗಿಡದ ಮಹತ್ವ ತಿಳಿಸಲು ಮೂಲಿಕಾ ಕತೆಗಳ ಶಕ್ತಿ ಯಾವತ್ತೂ ಮರೆಯುವಂತಿಲ್ಲ.

ಮೂಲಿಕೆಯ ವಿವರ ಯಾವ ವೈದ್ಯರೂ  ಹೇಳುವದಿಲ್ಲ ಎಂಬ ಮಾಮೂಲಿ ಮಾತು ಕೇಳುತ್ತೇವೆ. ವೈದ್ಯರ ಜತೆ ಕಾಡಿಗೆ ಹೋಗಿ ಕಲಿಯುವ ನಿಜ

ಆಸಕ್ತಿ ಎಷ್ಟು ಜನಕ್ಕೆ ಇದೆ ಎಂಬುದು ಮುಖ್ಯ ಪ್ರಶ್ನೆ .ನಾವು ಹೇಗೆ ಮಾಹಿತಿ ಕೇಳುತ್ತೇವೆ ಎಂಬುದರ ಮೇಲೆ ಉತ್ತರ ದೊರೆಯುತ್ತದೆ. ವನವಾಸಿ ಸಿದ್ದಿಯೊಬ್ಬ ವಿಷ ಜಂತು ಕಡಿದರೆ ಔಷಧಿ ನೀಡುತ್ತಿದ್ದ, ದೇಹ ಸೇರಿದ ವಿಷದ ಪ್ರಮಾಣ ಅರಿಯಲು ಕಾಡು ಮರದ ಚಕ್ಕೆ ತೇಯ್ದು ವಿಷಜಂತು ಕಡಿಸಿಕೊಂಡವನ ಎದೆಗೆ ಲೇಪಿಸುತ್ತಿದ್ದನು. ಮುಂಜಾನೆಯ ಬಿಸಿಲಿಗೆ ಬದಲಾಗುವ ಲೇಪದ ಬಣ್ಣ ಗಮನಿಸಿ ಅವರ ದೇಹದಲ್ಲಿ ಎಷ್ಟು ವಿಷವಿದೆಯೆಂದು ಊಹಿಸಿ ಅಗತ್ಯ ಮದ್ದು ಕೊಡುತ್ತಿದ್ದನು. ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆ ಇದ್ದಂತೆ ಕಾಡು ಮರದ ಚಕ್ಕೆ ಬಳಸಿ ಇಂತಹ ವಿಷ ಪರೀಕ್ಷೆ ನಡೆಸುವ ಹಲವು ವಿಧಾನಗಳು ಇಂದಿಗೂ ಬಳಕೆಯಲ್ಲಿವೆ. ಪರೀಕ್ಷೆ, ಚಿಕಿತ್ಸೆಗೆ ಬಳಸುವ ಮೂಲಿಕೆಗಳ ಮಾಹಿತಿ ಕೇಳಿದರೆ 'ಅದನ್ನು ಹೇಳಲು ಸಾಧ್ಯವೇ ಇಲ್ಲ' ಎಂದಿದ್ದ ಈ ವೈದ್ಯ ಸಿದ್ದಿ. 'ನಿಮಗೆ ಅಗತ್ಯವಾದ ಮೂಲಿಕೆಯನ್ನು ಕಾಡಿನಿಂದ ಪಡೆಯುತ್ತೀರಿ, ಇಂದು ಕಾಡು ನಾಶವಾಗಿದೆ, ನಿಮಗೆ ಈ ಗಿಡ ಬೆಳೆಸಲು ಸಾಧ್ಯವಾಗುವದಿಲ್ಲ, ಪರಿಸ್ಥಿತಿ ಹೀಗೆ ಮುಂದುವರಿದರೆ ನಿಮ್ಮ ಮನೆತನಕ್ಕೆ ನಾಟಿ ವೈದ್ಯರೆಂಬ ಹೆಸರಿರುತ್ತದೆ, ಆದರೆ ಔಷಧ ನೀಡಲು ಗಿಡ ಇರುವದಿಲ್ಲ!' ಎಂದು ಪರಿಸ್ಥಿತಿ ವಿವರಿಸಿದೆ. ಆಗಷ್ಟೇ ಅಕೇಸಿಯಾ ನೆಡುತೋಪು ಹಳ್ಳಿ ಗುಡ್ಡಗಳಲ್ಲಿ ಬೆಳೆಯುತ್ತಿತ್ತು, ವೈದ್ಯ ಮನಮುಟ್ಟುವಂತೆ ವಿವರಿಸುವ ಅವಕಾಶವಾಯಿತು. ಸಸ್ಯ ನಾಶದ ಕತೆ ಕೇಳಿದ ಸಿದ್ದಿ ಸ್ವಲ್ಪ ಹೊತ್ತು ಕಣ್ಮುಚ್ಚಿ ಸುಮ್ಮನೆ ಕುಳಿತು ಬಿಟ್ಟ! 'ಹೌದ್ರೋ ! ಗಿಡವೇ ಇಲ್ಲದೇ ಹೋದ್ರೆ ಮದ್ದು ಕೊಡಾದು ಹ್ಯಾಂಗೆ? ನಾನು ಯಾರಿಗೂ ಹೇಳಲ್ಲ, ನಿಮಗೆ ಬೇಕಾದ್ರೆ ಗಿಡ ತೋರಿಸ್ತೇನೆ' ಮಾತುಕತೆಯ ಒಂದು ವಿಶ್ವಾಸ ಹೊಸ ಗಿಡ ಅರಿಯುವ ಅವಕಾಶವಾಯಿತು.

ದನಕರುಗಳಿಗೆ ಔಷಧ ನೀಡುವ ದ್ಯಾವಳಗದ್ದೆಯ ಸುಬ್ಬಾಗೌಡರು ಊರಿನ ಗುಡ್ಡದ ಕುರುಚಲು ಗಿಡವನ್ನು ಲಾಗಾಯ್ತಿನಿಂದಲೂ ಬಳಸುತ್ತಿದ್ದರು. ಅಜ್ಜನ ಕಾಲದಿಂದ ಅದು ಅವರ ಮನೆತನದ ಮದ್ದಾಗಿ ಬಳಕೆಯಲ್ಲಿತ್ತು. ಸಾಮಾಜಿಕ ಅರಣ್ಯ ಯೋಜನೆ ಬಂದ ಸಂದರ್ಭ, ಗೋಮಾಳ, ಬೋಳು ಬಯಲುಗಳನ್ನು ಹಸಿರಾಗಿಸುವ ಉಮೇದಿಗೆ ಕರ್ನಾಟಕ ಅರಣ್ಯಾ ಇಲಾಖೆ ಬುಲ್ಡೋಜರ್ ಹಿಡಿದು ಬೆಟ್ಟಕ್ಕೆ ಬಂದಿತ್ತು. ನೈಸರ್ಗಿಕ ಗಿಡಗಳನ್ನು ಬೇರು ಸಮೇತ ಕಿತ್ತು ಬಯಲಾಗಿಸುವದು, ಸಾಲಿನಲ್ಲಿ ಅಕೇಸಿಯಾ ನೆಡುವದು ಉದ್ದೇಶ. ಒಂದು ಬೆಳಿಗ್ಗೆ ಊರಿನ ದಿಬ್ಬದಲ್ಲಿ ನಿಂತು ನೋಡುತ್ತಿದ್ದರು, ಬುಲ್ಡೋಜರ್ ಗುಡ್ಡ ಊಳುತ್ತಿತ್ತು. ಕೆಲವು ಮೀಟರ್ ಅಂತರದಲ್ಲಿ ಔಷಧಕ್ಕೆ ಬಳಸುವ ಕುರುಚಲು ಗಿಡ! ಓಡಿ ಹೋಗಿ ಬುಲ್ಡೋಜರ್ ಬಿಡುವಾತನಿಗೆ ಗಿಡ ಉಳಿಸುವಂತೆ ಕೇಳಿಕೊಳ್ಳಬೇಕು ಆಸೆ ಹುಟ್ಟಿತು, ಈ ಗಿಡ ನಾಶವಾದರೆ ಸುತ್ತಲಿನ ನಾಲ್ಕಾರು ಕಿಲೋಮೀಟರ್ ಸನಿಹದಲ್ಲಿ ಬೇರೆ ಮತ್ತೊಂದು ಗಿಡವಿಲ್ಲ! ನಾಳೆ ಗಿಡವಿಲ್ಲದೇ ಔಷಧ ಕೊಡುವದು ಹೇಗೆ? ಚಿಂತಿಸಿದರು. 'ಇದು ಔಷಧದ ಗಿಡ, ಇದನ್ನು ಕಿತ್ತು ನಾಶ ಮಾಡಬಾರದು' ಬುಲ್ಡೋಜರ್ ಬಿಡುವಾತನಿಗೆ ಹೇಳಬೇಕಿತ್ತು, ಆದರೆ ಗಿಡ ಪರಿಚಯಿಸಲು ಮನಸ್ಸು ಹಿಂದೇಟು ಹಾಕಿತು. 'ಔಷಧದ ಗಿಡ ಎಲ್ಲರಿಗೂ ತೋರಿಸಿದ್ರೆ ಔಷಧದ ಗುಣ ಮಾಯವಾಗ್ತದೆ !' ಅಜ್ಜ,ಅಪ್ಪ ಹೇಳುತ್ತಿದ್ದ ಮಾತುಗಳು ನೆನಪಾದವು. ಯೋಚಿಸುತ್ತ ದಿಬ್ಬದಲ್ಲಿ ನಿಂತರು, ಮುಂದಿನ ಕ್ಷಣಾರ್ಧದಲ್ಲಿ ದನಕರುಗಳ ಔಷಧಕ್ಕೆ ಬೇಕಿದ್ದ ಶಿವಣೆ ಗಿಡ ಬುಲ್ಡೋಜರ್ ಅಲುಗಿಗೆ ಸಿಲುಕಿ ಬೇರು ಸಮೇತ ಕಿತ್ತು ಬಿತ್ತು! 'ಹೊಟ್ಟೆಯೊಳಗೆ ಭಾರೀ ಸಂಕಟವಾಯ್ತು, ನನ್ನ ಎದೆ ಮೇಲೆ ಬುಲ್ಡೋಜರ್ ಬಂದಂಗೆ ಆಯ್ತು!' ಒಂದು ಕಾಡು ಗಿಡದ ಸಾವು ನೆನಪಿಸಿಕೊಂಡು ಗೌಡರ ಕಣ್ಣಂಚಿನಲ್ಲಿ ನೀರು ಜಿನುಗುತ್ತಿತ್ತು.

ನಮ್ಮ ನಡುವಿನ ಕಾಡು ಗಿಡಗಳ ಬಳಕೆ ಜ್ಞಾನ ಓದಿ ಔಷಧ ಜ್ಞಾನ ಹಂಚಿದ ನಮ್ಮ ನಾಟಿ ವೈದ್ಯರನ್ನೆಲ್ಲ ನಾವು ಅಣಲೆಕಾಯಿ ಪಂಡಿತರು ಎಂದು ಕರೆದಿದ್ದೇವೆ. ಸ್ಥಳೀಯ ವಸ್ತು ಬಳಸಿ ಔಷಧ ಕೊಟ್ಟ ಮೇಧಾವಿಗಳು ಎಂಬುದು ಒಂದರ್ಥವಾದರೆ, ಯಾವುದಕ್ಕೂ ಬಾರದ ಅಣಲೆಕಾಯಿಯನ್ನು ಔಷಧವೆಂದು ಕೊಟ್ಟವರು ಎಂಬ ಅಪಹಾಸ್ಯ ಕೂಡಾ ಇಲ್ಲಿರಬಹುದು. ಬೆಟ್ಟದ ಪುಟ್ಟ ಅಣಲೆಕಾಯಿಯಲ್ಲಿ ಅಮೃತ ದರ್ಶನ ಮಾಡಿಸಿದವರು ನಾಟಿ ವೈದ್ಯರು ಎಂಬುದನ್ನು ಯಾವತ್ತೂ ಮರೆಯಬಾರದು. ರೋಗಕ್ಕೆ ಮದ್ದು ಅರೆಯುವ ಸಂದರ್ಭ ಬಂದಾಗೆಲ್ಲ ವೈದ್ಯರನ್ನು ಗೌರವಿಸುವ ನಾವು ಅವರಲ್ಲಿನ ಅಪಾರ ಗಿಡ ಬಳಕೆ ಜ್ಞಾನ ಗುರುತಿಸಬೇಕು. ಊರಿನ ಕಾಡು, ಕೊಳ್ಳ ಓದಿ ಬೆಳೆದವರನ್ನು ಗೌರವಿಸುವ ಗುಣ ಬೇಕು. ನಮ್ಮ ಪಶ್ಚಿಮ ಘಟ್ಟಕ್ಕೆಲ್ಲ ಮಾಯದ ಗಾಯ ಬೆಳೆಯುತ್ತಿದೆ, ಸಸ್ಯ ಸಂಕುಲ ನಾಶ ಮದ್ದು ಅರೆಯುವ ವೈದ್ಯರ ಆಯವನ್ನೇ ಅಲ್ಲಾಡಿಸಿದೆ.

# ನಾಟಿ ಬೆಳೆಗಳಲ್ಲಿ ಪರ್ಯಾಯ ಹುಡುಕಾಟ

ಎಲ್ಲೆಡೆಯೂ ಸಿಗುವ ಬಟಾಟೆ ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ಹರಪನಹಳ್ಳಿಯಲ್ಲೂ ಬೆಳೆಯುವದರಲ್ಲಿ ವಿಶೇಷವಿಲ್ಲ, ಬಯಲು ಸೀಮೆಯಲ್ಲಿ ದೊರೆಯುವ ಖಾರದ ಈರುಳ್ಳಿ, ಸಿಹಿಸಿಹಿ ರುಚಿಯ ಉತ್ತರ ಕನ್ನಡದ ಹಂದಿಗೋಣದ ಈರುಳ್ಳಿ ಪ್ರತ್ಯೇಕವಾಗಿ ಮಾರುಕಟ್ಟೆಯಲ್ಲಿ ನಿಲ್ಲುವಲ್ಲಿ ಧನಾತ್ಮಕ ಅಂಶವಿದೆ. ಕೃಷಿ ವಿಧಾನ, ಮಾರುಕಟ್ಟೆ ಆಧಾರಿತವಾಗಿ ಬೆಳೆ ಆಯ್ದುಕೊಳ್ಳುವಾಗ ಸಹಜವಾಗಿ ಎಲ್ಲರೂ ಒಪ್ಪಿಕೊಂಡ ಮೊನೋಕಲ್ಚರ್ ಕೃಷಿಗೆ ಅಂಕ ದೊರೆಯುತ್ತದೆ. ಈ ನೆಲದ ಸತ್ವ ಹೀರಿ ಬೆಳೆಯುವ ಬೆಳೆ ಇನ್ನುಳಿದ ತಳಿ ರುಚಿಗಳಿಗಿಂತ ಎದ್ದು ನಿಲ್ಲುವಾಗ ಪರ್ಯಾಯದ ದಾರಿಗಳನ್ನು ಇಂತಹ ಫಲಗಳಲ್ಲಿ ಹುಡುಕುವ ಯತ್ನ ಹೆಚ್ಚಬೇಕು.

ಹಾಲೆಂಡಿನ ಇಕೆಬಾನಾಕ್ಕೆ ಬೆಂಗಳೂರಿನ ಹೂವು ವಿಮಾನದಲ್ಲಿ ಹಾರುತ್ತದೆ, ಬೆಂಗಳೂರಿನ ಪುಷ್ಪ ಕೃಷಿಕನಿಗೆ ಮಲೆನಾಡಿನ ಕಾಡು ಸೊಪ್ಪು ತಿಂದ ಎರೆಹುಳು ಗೊಬ್ಬರ ಒಪ್ಪಿಸುತ್ತದೆ. ಆಫ್ರಿಕನ್ ಮೂಲದ ಎರೆಹುಳು ಮಲೆನಾಡಿನ ಎರೆಕೃಷಿಗೆ ನೆರವಾಗುತ್ತದೆ. ತಿಪಟೂರಿನ ತೆಂಗಿನ ಸಿಪ್ಪೆ ತಂದು ಮಲೆನಾಡಿನ ಶಿರಸಿಯಲ್ಲಿ ಎರೆಗೊಬ್ಬರ ತಯಾರಿಸಿ ಗೊಬ್ಬರ ಬೆಂಗಳೂರಿಗೆ ಹೋಗಿ ಹೂವಿನ ಕೃಷಿಗೆ ಬಳಕೆಯಾಗಿ ಬೆಳೆದ ಹೂವು ಹಾಲೆಂಡಿನಲ್ಲಿ ಅಂತಿಮ ಫಲ ಕಾಣುತ್ತದೆ.

ಶಿವಮೊಗ್ಗದ ನೆಲದಲ್ಲಿ ತಾಳೆ ಹೂವಿಗೆ ಪರಾಗ ಸ್ಪರ್ಶದ ಸೇವೆ ನೀಡಲು ಅಲ್ಲಿನ ಕೀಟಗಳು ಸೋತವು. ದಕ್ಷಿಣ ಆಫ್ರಿಕಾದ ವಿವಿಲ್ ಬಳಸಿದರೆ ಬೆಳೆ ಹೆಚ್ಚುತ್ತದೆ ಎಂದು ತಿಳಿದಾಗ ಅಲ್ಲಿಂದ ವಿವಿಲ್ ದುಂಬಿ ಆಮದಾಯಿತು! ಈಗ ತಾಳೆ ಕೃಷಿ ಸೋತಿದೆ. ವಿವಿಲ್ ಅನಾಥವಾಗಿದೆ. ತುಂಗಭದ್ರಾ ಆಣೆಕಟ್ಟೆಯ ನಂತರದಲ್ಲಿ ಗಂಗಾವತಿಯ ಹತ್ತಿ, ಜೋಳದ ಹೊಲದಲ್ಲಿ ಭತ್ತ ಬೆಳೆಯುವ ಸಾಧ್ಯತೆ ಸಾಕಾರವಾಯಿತು. ತೀರ್ಥಹಳ್ಳಿಯಲ್ಲಿ ಮಳೆ ಸುರಿದರೆ ಗಂಗಾವತಿಯಲ್ಲಿ ಭತ್ತ ಬೆಳೆಯುತ್ತದೆ, ಅದು ವಿವಿಧ ಪ್ರದೇಶದ ಜನರಿಗೆ ಅನ್ನದ ಆಧಾರವಾಗುತ್ತದೆ, ಮಲೆನಾಡಿನ ಹಸು ಹಾಲು ನೀಡಲು ಅರೆ ಮಲೆನಾಡಿನ ಸೀಮೆಯ ಭತ್ತದ ಹುಲ್ಲು ನಡೆದು ಬರಬೇಕು. ಅಲ್ಲಿನ ಹುಲ್ಲು ನಂಬಿ ಹೈನುಗಾರಿಕೆ ನಡೆಯುತ್ತದೆ.

ಚಳಿಚಳಿಯೆಂದು ಕಂಬಳಿ ಹೊದ್ದು ಮಲಗುವಾಗ ನಮಗೆ ಕಪ್ಪತಗುಡ್ಡದ ಕುರಿ, ಜಮಖಂಡಿಯ ಹುಣಸೆಬೀಜದ ಗಂಜಿ ಹಾಗೂ ಚಳ್ಳಕೆರೆಯ ಕಂಬಳಿನೇಯ್ದ ಕೈಗಳು ನೆನಪಾಗುತ್ತವೆ. ಮಡಕೇರಿಯಲ್ಲಿ ಕೂತು ಬ್ರೆಡ್ಡು ಮೆಲ್ಲುವಾಗ, ಚಿಕ್ಕಮಂಗಳೂರಿನಲ್ಲಿ ದೋಸೆ ತಿನ್ನುವಾಗ, ದೆಹಲಿಯಲ್ಲಿ ಕಡಲೆಕಾಯಿ ಕಡಿಯುವಾಗ ಸಹ ನಮ್ಮ ಆಹಾರ ಚಕ್ರದ ಬಗೆಗೆ ಅಚ್ಚರಿ ಕಾಡುತ್ತದೆ. ಒಂದು ಟ್ರೇನು, ವಿಮಾನ, ಹೆದ್ದಾರಿಗೆ ಅಂಟಿಕೊಂಡ ಲಾರಿಗಳು ನಮ್ಮ ಆಹಾರ, ದಿನಬಳಕೆ ವಸ್ತುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುತ್ತ ಸುಸ್ಥಿರ ಚಕ್ರವನ್ನು ವಿಶಾಲಗೊಳಿಸಿದ ಕ್ರಾಂತಿಯಲ್ಲಿ ವಿಶ್ವವೇ ಒಂದಾಗಿದೆ.

ಈರುಳ್ಳಿ, ಬಟಾಟೆಗಳು ಈಗ ಇಡೀ ತರಕಾರಿ ಸಾಮ್ರಾಜ್ಯವಾಳಲು ನಿಂತಾಗ ನಮ್ಮ ಬಾಣಸಿಗನಿಗೆ ಅಡುಗೆ ಸುಲಭ ಕಂಡಿದ್ದು ನಿಜ. ಏಕತಾನತೆಗೆ ನಾಲಗೆ ಎಷ್ಟು ಒಗ್ಗಿತೆಂದರೆ ರಾಜಸ್ಥಾನಿಯ ಪಾನಿಪೂರಿ ತಳ್ಳುಗಾಡಿಯ ಚಕ್ರ ಕಂಡಿದ್ದೇ ನಮ್ಮ ಪ್ರದೇಶಿ ಪ್ರಜ್ಞೆಯ ಉಡುಪಿ ಹೊಟೇಲ್‌ಗಳಿಗೂ ಪಾನಿಪೂರಿ, ಮಸಾಲೆಪೂರಿ ಎಂದು ಬೋರ್ಡು ತಗಲಿಸಿದವು. ಕೃಷಿ ಬೆಳೆಯಲ್ಲಿ, ಅನ್ನದ ಬಟ್ಟಲಲ್ಲಿ ಜಗದ ಮೂಲ ಕಟ್ಟುವ ಜಿದ್ದು ಹುಟ್ಟಿತು. ಇದಕ್ಕೆ ಕೃಷಿ ವಿಜ್ಞಾನ, ತಂತ್ರಜ್ಞಾನ ತಲೆಗೂಡಿಸಿದೆ. ಎಲ್ಲೋ ಒಂದು ಭೂಕಂಪ, ಅವಘಡ, ಬರಗಳು ಎದ್ದು ಬಂದು ಮೂಲ ಖಾಲಿ ಖಾಲಿ ಎನಿಸಿದ ಘಳಿಗೆ ಪರ್ಯಾಯ ಹುಡುಕಾಟದ ಚಿಂತೆ ಹುಟ್ಟುತ್ತದೆ. ಒಂದೆಡೆ ಇಡೀ ವಿಶ್ವವೇ ಬೆಸೆದುಕೊಂಡ ಅದ್ಭುತ, ಇನ್ನೊಂದೆಡೆ ನೆಲದ ವೈವಿಧ್ಯತೆ, ಸ್ವಾವಲಂಬನೆ ಮುಗಿದು ಬೆಳಗಿನ ದೋಸೆಗೆ ೩೦೦ ಕಿಲೋ ಮೀಟರ್ ಆಚೆಯ ಗಂಗಾವತಿ ಅಕ್ಕಿ ನೋಡುವ ಯೋಗ! ಕೃಷಿ ಪ್ರಗತಿಯಲ್ಲಿ ಇದೆಲ್ಲ ಅನಿವಾರ್ಯ ಲಾಭ, ಸಂಬಂಧಗಳು.

ಕೃಷಿ ಅಭಿವೃದ್ಧಿಯಲ್ಲಿ ತಂತ್ರಜ್ಞಾನ, ತಳಿ ಸುಧಾರಣೆ, ಹೊಸಕೃಷಿ ಅನುಸರಣೆಯ ಅನಿವಾರ್ಯ ಲಾಭಗಳನ್ನು ಒಪ್ಪಿಕೊಳ್ಳುವದು, ಅನುಸರಿಸುವದು

ಸಹಜ. ಆದರೆ ನಮ್ಮ ಬದುಕಿಗೆ ಇವತ್ತಿನ ಸಂದರ್ಭದಲ್ಲಿ ಬೆಳೆಗಳ ಹುಡುಕಾಟ ಬಂದಾಗ ಎಲ್ಲರೂ ಒಂದೇ ದಾರಿ ಹಿಡಿಯಬಾರದು. ಅಲ್ಲಿ ನೆಲದ ವೈವಿಧ್ಯದ ಅವಕಾಶ ಬೇಕು. ನೆಲದ ಕಾಡು, ಕೃಷಿ ಕಲಿಸಿದ ತಳಿ ವೈವಿಧ್ಯ ಪೋಷಣೆಯ ಪಾಠಗಳಲ್ಲಿ ಬದುಕಿನ ದಾರಿ ಕಟ್ಟುವ ಸಾಧ್ಯತೆಯಿದೆ. ಕರಾವಳಿಯ ಹಳದೀಪುರದ ಓರ್ವ ಹಾಲಕ್ಕಿ ಮಹಿಳೆ ತನ್ನ ೮೦ ಅಡಿ ಚಚ್ಚೌಕದ ಗದ್ದೆಯಲ್ಲಿ ಏನೆಲ್ಲ ಬೆಳೆದಿದ್ದಳು ಎಂಬುದನ್ನು ಎರಡು ವರ್ಷದ ಹಿಂದೆ ಲೆಕ್ಕ ಹಾಕಿದೆವು. ಮೆಣಸು, ಬದನೆ, ಬೆಂಡೆ, ಹಾಗಲ, ಹರಿವೆ ಹೀಗೆ ೧೮ ಜಾತಿಯ ತರಕಾರಿಗಳನ್ನು ಆಕೆ ಬೇಸಿಗೆಯ ಬೆಳೆಯಾಗಿ ಪೋಷಿಸಿದ್ದಳು. ಕೃಷಿ ವೈವಿಧ್ಯ ಸಂರಕ್ಷಣೆಯ ಯಾವ ವಿಚಾರ ಸಂಕಿರಣ, ಠರಾವು, ಯೋಜನೆಗಳ ಜ್ಞಾನವಿಲ್ಲದ ಅನಕ್ಷರಸ್ಥ ಮಹಿಳೆ ತನ್ನ ಬೆವರು ಹರಿಸಿ ಸಾಧ್ಯತೆಗಳಿಗೆ ಕನ್ನಡಿ ಹಿಡಿದಿದ್ದಳು. ಕೇರಳದಿಂದ ಮುಂಡಗೋಡಿನ ಅರಿಶಿನಗೇರಿ, ಇಂದೂರುಗಳಿಗೆ ಬಂದು ನೆಲೆಯೂರಿದ ಕೃಷಿಕರು ಕಳೆದ ೨೫ ವರ್ಷಗಳಿಂದ ತಮ್ಮ ಹೊಲದ ಬೇಲಿ, ಮನೆಯ ಹಿತ್ತಲಲ್ಲಿ ಮೂಡಹಾಗಲು(ಕಾಡುಹಾಗಲು) ತಂದು ಕೃಷಿ ಮಾಡುತ್ತಿದ್ದಾರೆ. ಇವರು ಈ ಸಸ್ಯ ಮೂಲ ಪಡೆದದ್ದು ಪಕ್ಕದ ಕಾಡಿನಿಂದ! ಪ್ರತಿ ವರ್ಷ ಗಣೇಶಚೌತಿಯ ಹೊತ್ತಿಗೆ ಕಿಲೋಗೆ ೮೦-೧೦೦ ರೂಪಾಯಿಗೆ ಮಾರಾಟವಾಗುವ ಇವರ ಉತ್ಪನ್ನ ಶಿರಸಿ, ಹುಬ್ಬಳ್ಳಿ ಮಾರುಕಟ್ಟೆಯಲ್ಲಿ ಸುಲಭದಲ್ಲಿ ಖಾಲಿಯಾಗುತ್ತದೆ. ಕಾಡಲ್ಲಿ ಕಾಣದ ಫಲ ಇಂದು ಇವರ ನೆಲದಲ್ಲಿದೆ.

ಅರಣ್ಯ ಜಿಲ್ಲೆ ಸಸ್ಯ ವೈವಿಧ್ಯಕ್ಕೆ ಹೆಸರುವಾಸಿ. ಕೃಷಿ ವೈವಿಧ್ಯದಲ್ಲೂ ದಾಖಲೆ. ಇಲ್ಲಿನ ಅಡಿಕೆ ತೋಟಗಳಲ್ಲಿ ಏನೆಲ್ಲ ವೈವಿಧ್ಯ ಬೆಳೆ ಪಡೆಯಲಾಗುತ್ತದೆಂಬುದನ್ನು ಕರಾವಳಿ, ಘಟ್ಟ ಹಾಗೂ ಅರೆಮಲೆನಾಡು ಪ್ರಾಂತ್ಯಗಳಲ್ಲಿ ಪಟ್ಟಿ ಮಾಡಿದರೆ ೪೦ಕ್ಕೂ ಹೆಚ್ಚು ಸಸ್ಯಗಳು ದೊರೆಯುತ್ತವೆ. ಇಲ್ಲಿ ಒಂದು ಪರಂಪರೆ ಕಟ್ಟಿಕೊಟ್ಟ ಈ ಪೂರಕ ಬೆಳೆಗಳಿಗೆ ವಾಣಿಜ್ಯ, ಆಹಾರ, ಔಷಧೀಯ ಮಹತ್ವವಿದೆ. ಸ್ವಾದಿಷ್ಟ ರುಚಿ ಸೇರಿದಂತೆ ಅಕಾಲದಲ್ಲೂ ಫಲ ಬಿಡುವ ಹಲಸು, ಅಗಸ್ಟ್‌ದಲ್ಲಿ ಫಲ ನೀಡುವ ಮಾವು, ಮಾವಿನ ವಾಸನೆ ನೀಡುವ ಅಂಬೆಕೊಂಬು(ಮಾವಿನಶುಂಠಿ) ಕಾಣುತ್ತದೆ. ಉತ್ತರ ಕನ್ನಡದ ಭಟ್ಕಳದಿಂದ ಆರಂಭಿಸಿ ಬನವಾಸಿಯ ತನಕ ಓಡಾಡಿದರೆ ೧೮ಕ್ಕೂ ಹೆಚ್ಚು ಜಾತಿಯ ಬಾಳೆ ದೊರೆಯುತ್ತದೆ, ಕರಾವಳಿ ತೋಟದಲ್ಲಿ ಅಡುಗೆ ಆಧಾರವಾದ ಬೇರುಹಲಸು, ನೀರುಹಲಸು, ಬಿಂಬಳೆ, ಕರಮದ್ಲು, ತರಹೇವಾರಿ ಕೆಸವಿನ ಗಡ್ಡೆಗಳಿವೆ. ಗೋವಾದಲ್ಲಿ ೩೫೦-೪೫೦ ರೂಪಾಯಿ ಕಿಲೋಗೆ ಮಾರಾಟವಾಗುವ ಸೂಜಿ ಮೆಣಸು ಕಳೆ ಗಿಡದ ಸ್ಥಾನದಲ್ಲಿದೆ. ಕರಾಚಿಗೆ ನೆಗೆಯುವ ಹೊನ್ನಾವರದ ರಾಣಿ ಎಲೆ, ಕರಿ ಮಲ್ಲೀಸರ, ಬಿಳಿ ಮಲ್ಲೀಸರ, ದಡಗ, ಪಣಿಯೂರು ಮುಂತಾದ ತಳಿಯ ಕಾಳು ಮೆಣಸು ಮಲೆನಾಡಿನ ತೋಟದಲ್ಲಿ ಬೆಳೆಯುತ್ತಿದೆ. ಕರಿ ಮಲ್ಲೀಸರ ಜಾತಿಯ ಕಾಳು ಮೆಣಸನ್ನು ಕೊಯ್ದು ಒಣಗಿಸಿದ ತರುವಾಯ ೧೦ ವರ್ಷ ಇಟ್ಟರೂ ಹಾಳಾಗದೇ ಉಳಿಯುತ್ತದೆ. ಗುಜರಾತ್, ರಾಜಸ್ಥಾನ್‌ಗಳಲ್ಲಿ ವಿಶೇಷ ಬೇಡಿಕೆಯಿದೆ. ಆದರೆ ಇಲ್ಲಿನ ಮಾರುಕಟ್ಟೆಯಲ್ಲಿ ಇಂದು ಶೇಕಡಾ ೯೦ರಷ್ಟು ಪಣಿಯೂರು ತಳಿಯ ಮೆಣಸು ಮಾತ್ರ ದೊರೆಯುತ್ತಿದೆ. ಪಶ್ಚಿಮ ದಟ್ಟ ಕಾಡುಗಳಲ್ಲಿ 'ಚೌತಿಮೆಣಸು'ಎಂಬ ತಳಿಯಿದೆ. ದೇಶದ ಪ್ರಖ್ಯಾತ ಗಾಯಕರ ಗಂಟಲಿನ ಆರೋಗ್ಯ ಈ ಪುಟ್ಟ ಕಾಳಿನಲ್ಲಿ ಕೂತಿದೆ. ಔಷದೀಯ ಮಹತ್ವ ಪಡೆದಿದೆ.

ಈಗ ಹೇಳಿ ಎಲ್ಲೆಡೆಯೂ ಸಿಗುವ ಬಟಾಟೆ ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ಹರಪನಹಳ್ಳಿಯಲ್ಲಿ ಬೆಳೆಯುತ್ತದೆಂಬುದರಲ್ಲಿ ಯಾವ ವಿಶೇಷವಿಲ್ಲ, ಬಯಲು ಸೀಮೆಯಲ್ಲಿ ದೊರೆಯುವ ಖಾರದ ಈರುಳ್ಳಿ, ಸಿಹಿಸಿಹಿ ರುಚಿಯ ಉತ್ತರ ಕನ್ನಡದ ಹಂದಿಗೋಣದ ಈರುಳ್ಳಿ ಪ್ರತ್ಯೇಕವಾಗಿ ಮಾರುಕಟ್ಟೆಯಲ್ಲಿ ನಿಲ್ಲುವಲ್ಲಿ ಧನಾತ್ಮಕ ಅಂಶವಿದೆ. ಕೃಷಿ ವಿಧಾನ, ಮಾರುಕಟ್ಟೆ ಆಧಾರಿತವಾಗಿ ಬೆಳೆ ಆಯ್ದುಕೊಳ್ಳುವಾಗ ಸಹಜವಾಗಿ ಎಲ್ಲರೂ ಒಪ್ಪಿಕೊಂಡ ಮೊನೋಕಲ್ಚರ್ ಕೃಷಿಗೆ ಅಂಕ ದೊರೆಯುತ್ತದೆ. ಈ ನೆಲದ ಸತ್ವ ಹೀರಿ ಬೆಳೆಯುವ ಬೆಳೆ ಇನ್ನುಳಿದ ತಳಿ ರುಚಿಗಳಿಗಿಂತ ಎದ್ದು ನಿಲ್ಲುವಾಗ ಪರ್ಯಾಯದ ದಾರಿಗಳನ್ನು ಇಂತಹ ಫಲಗಳಲ್ಲಿ ಹುಡುಕುವ ಯತ್ನ ಹೆಚ್ಚಬೇಕಿದೆ. ಯಾವತ್ತೂ ಅಂತಿಮ ಬಳಕೆದಾರರು ರುಚಿಗೆ ನೇತು ಬೀಳುತ್ತಾರೆ. ಅಡಿಕೆ ಹೆಚ್ಚು ಬೆಳೆ ಬಂದು ಮಾರುಕಟ್ಟೆ ವಿಸ್ತರಿಸಿದೆ ಎಂಬುದನ್ನೇ ಗಣನೆಗೆ ತೆಗೆದುಕೊಂಡರೆ ಎಲ್ಲ ಅಡಿಕೆಯೂ ಹಾಗೇ ಎಲ್ಲ ಮಾರಾಟವಾಗುವದಿಲ್ಲ. ವಿವಿಧ ರುಚಿ ಹುಡುಕಿ ಜನ ಖರೀದಿಸುತ್ತಾರೆ. ಇದೇ ಕಾರಣಕ್ಕೆ ಯಲ್ಲಾಪುರದ ಆಫಿ ಅಡಿಕೆ ಜೇನಿ ಆಫಿ, ಡಾಲರ್ ಆಫೀ ಎನ್ನುತ್ತ ೨೮ಕ್ಕೂ ಹೆಚ್ಚು ರೀತಿಯಲ್ಲಿ ವಿಂಗಡನೆಗೊಳ್ಳುತ್ತದೆ. ಇದರಲ್ಲಿ ದಪ್ ಆಫೀಯಲ್ಲಿನ 'ಹಾಲಡಿಕೆ' ಹುಬ್ಬಳ್ಳಿ-ಧಾರವಾಡದ ಜನರ ತಾಂಬೂಲಕ್ಕೆ ವಿಲೆಯಾಗುತ್ತದೆ. ಬೆಳೆ ವೈವಿಧ್ಯ, ರುಚಿ ವೈವಿಧ್ಯಗಳ ಸಂರಕ್ಷಣೆ ಈಗ ನಮ್ಮ ಕೃಷಿಯ ಆದ್ಯತೆಯಾಗಬೇಕು. ಬೆಳೆಗೆ ಪೂರಕ ಪ್ರೋತ್ಸಾಹ ದೊರೆಯಬೇಕು. ಸಸ್ಯ ವೈವಿಧ್ಯ, ಕೃಷಿ ವೈವಿಧ್ಯದ ಹೆಚ್ಚುಗಾರಿಕೆ ಗುರುತಿಸಿ ಕೃಷಿ ವಿಜ್ಞಾನ ಅಧ್ಯಯನ, ಅಭಿವೃದ್ಧಿ ಮಾರ್ಗವನ್ನು ಪರಾಮರ್ಶೆಗೆ ಒಡ್ಡಬೇಕು.

# ಕಂಪ್ಯೂಟರ್ ಊಟಃಊಟದ ತಟ್ಟೆಯಲ್ಲಿ ಸಾಲು ಸವಾಲು!

ಶೈಕ್ಷಣಿಕ ಪ್ರಗತಿ ಏರುತ್ತಿರುವಂತೆ ಕೃಷಿಯೇತರ ಕ್ಷೇತ್ರಗಳೆಡೆಗೆ ನಗರ ವಲಸೆ ಹೆಚ್ಚಿದೆ. ಮಾಹಿತಿ ತಂತ್ರಜ್ಞಾನ ಕ್ರಾಂತಿ ಬಳಿಕವಂತೂ ಗ್ರಾಮೀಣ ಯುವಪಡೆ ಸಾಫ್ಟವೇರ್ ಹಿಂದೆ ಓಡತೊಡಗಿತು. ಒಂದು ಎಕರೆ ಕೃಷಿಯಲ್ಲಿ ವರ್ಷಕ್ಕೆ ನಿವ್ವಳ ೫೦ ಸಾವಿರ ಉಳಿಯದಿದ್ದಾಗ ಮಾಸಿಕ ೪೫-೫೦ಸಾವಿರ ಏಣಿಸುವ ಕಂಪ್ಯೂಟರ್ ಮಕ್ಕಳು ಪರಂಪರೆ ಕೃಷಿಯನ್ನು ತೂಕಕ್ಕೆ ಒಡ್ಡಿದರು! ಒಟ್ಟೂ ಆದಾಯ, ಖರ್ಚಿನ ತುಲನೆಯಲ್ಲಿ ಬೇಸಾಯ ಬಡವಾಯಿತು. ಮುಗ್ದತೆ, ಪರಿಶ್ರಮ, ಸಹಬಾಳ್ವೆ ನೋಟ ಕ್ಷೀಣಿಸಿದವು, ಗೆಲ್ಲುವ ಜಿದ್ದಿನಲ್ಲಿ ಜಗಳ ಹುಟ್ಟಿದವು. ಗಿಡ ಗೆಳೆತನದಲ್ಲಿ ನೆಮ್ಮದಿ ಕಂಡವರು ಒತ್ತಡಗಳಲ್ಲಿ ನರಳಿದರು, ನೆಲ ಮರೆತು ಗಡಿಬಿಡಿಯ ವೇಗಕ್ಕೆ ಹೆದ್ದಾರಿಗೆ ಏರಿದರು. ಬದುಕು ಕಟ್ಟುವ ಅವಕಾಶಗಳಿದ್ದರೂ ನೆಲ ನಂಬಿ ನಡೆಯುವ ವಿಶ್ವಾಸ, ಉತ್ಸಾಹ ಕುಸಿಯಿತು. ಉಣ್ಣುವ ಅನ್ನದ ಮೂಲ ಅರ್ಥವಾಗದಂತೆ ಮಕ್ಕಳನ್ನು ಬೆಳೆಸುವ ಪರಿಪಾಟ ಬೆಳೆಯಿತು. ಶಾಲೆಯ ಪಾಠಗಳಲ್ಲಿ ಮಣ್ಣಿನಲ್ಲಿ ಬೇರಿಳಿಸಿ ಬದುಕಿನ ದಾರಿ ತೋರಿಸಿದ ಕೃಷಿಕರಿಗಿಂತ ರಾಜಕೀಯ ಮುತ್ಸದ್ಧಿಗಳ ಜೀವನ ಓದುವದು ಪರೀಕ್ಷೆಯಾಯಿತು. ಸಮವಸ್ತ್ರ ಧರಿಸಿ, ಟೈ ಕಟ್ಟಿಸಿ ಮಕ್ಕಳನ್ನು ಶಾಲೆಗೆ ಹೊರಡಿಸಿ ಹಳ್ಳಿ ಬದುಕು ಧಿಕ್ಕರಿಸಲು ಹೇಳಿದೆವು. ಇದ್ದೊಬ್ಬ ಮಗನನ್ನು ನಗರ ನೌಕರಿಗೆ ಕಳಿಸಿದವರು 'ಕೃಷಿ ನಿರ್ವಹಿಸಲೂ ಜನಗಳಿಲ್ಲ' ಎಂದು ಸಬೂಬು ಹೇಳುತ್ತ ಕಾಲಹರಣ ಮಾಡಿದರು.

ಕಂಪ್ಯೂಟರ್ ಊಟಕ್ಕೆ ನೆರವಾಗಬಹುದೇ ಹೊರತು ಅದು ಯಾವತ್ತೂ ಉಣ್ಣುವ ಅನ್ನವಾಗುವದಿಲ್ಲ! ಆದರೆ ನಮ್ಮ ನೆಲದ ಸಾಧ್ಯತೆಗಳನ್ನು ಹುಡುಕುವಕ್ಕಿಂತ ಮುಂಚೆ ಮಕ್ಕಳಿಗೆ ಪಲಾಯನಕ್ಕೆ ವೀಸಾ ಕೊಡಿಸಿದ್ದೇವೆ. ಬೀಜ ಊರಿ, ಮೊಳಕೆ ಮೂಡಿ, ಚಿಗುರಾಗಿ ಮರವಾಗಿ ಫಲ ನೀಡುವಷ್ಟು ಕಾಲ ಕಾಯುವ ಸಂಯಮ ಯಾರಿಗೂ ಇಲ್ಲ! ಧಿಡೀರ್ ದುಡ್ಡು ಎಲ್ಲರ ಕನಸು. ಹಳ್ಳಿಗಳು ಖಾಲಿಯಾಗಲು ಇಷ್ಟು ಸಾಕು. ಮನೆ ಮನೆಗಳ ಮಧ್ಯೆ ಗೋಡೆ ಎದ್ದಿದೆ, ಹದ ಮಳೆಗೆ ಹೊಲದ ತುಂಬ ನೆರೆಯುತ್ತಿದ್ದ ರೈತರು ವ್ಯಾಜ್ಯ ಹಿಡಿದು ನ್ಯಾಯಾಲಯಗಳಲ್ಲಿ ಜಮಾಯಿಸಿದ್ದಾರೆ. ಕೆಲವರು ವೈವಿಧ್ಯಮಯ ಕೃಷಿ, ಸಸ್ಯ ಬೆಳೆಸುತ್ತ, ಕೃಷಿ ಶಿಸ್ತು ಆರಾಧಿಸುತ್ತ ನೆಲ ನಂಬಿದ್ದಾರೆ. ಫಂಡು ನಂಬಿ ಕೃಷಿ ಸಂಶೋಧನೆ ನಡೆಸುವ ತಜ್ಞರ ದಂಡು ಅಧ್ಯಯನ ಕಳಕಳಿಯನ್ನು ಹರಾಜಿಗೆ ಹಾಕುತ್ತಿದೆ. ಪರಂಪರೆ ಕಲಿಸಿದ ಕೃಷಿ ಜ್ಞಾನಗಳಲ್ಲಿ ಸುಸ್ಥಿರ ದಾರಿ ಹುಡುಕಿದ ರೈತರು ಸೈನ್ಸ್‌ನ ಮುಖ ನೋಡಿ ನಕ್ಕಿದ್ದಾರೆ, ಸೋತಿದ್ದಾರೆ, ಖುಷಿಯ ಕ್ಷಣ ಹುಡುಕಿದ್ದಾರೆ.

ಕೃಷಿ ನೆಲವೆಂಬ ಹಳ್ಳಿ ಮೂಲೆ ನಿತ್ಯ ಹರಾಜು ಕಟ್ಟೆಯಂತೆ ಕಾಣುತ್ತಿದೆ. ಮಕ್ಕಳ ವಿಳಾಸಗಳಷ್ಟೇ ಬದಲಾಗುತ್ತಿದ್ದ ನೆಲೆಯಲ್ಲಿ ಈಗ ಹಿರಿಯರು ಕೃಷಿ ಹಸುರು ಮರೆತು ನಗರಮುಖೀ ದಾರಿ ಅರಸಿದ್ದಾರೆ. 'ಕಂಪ್ಯೂಟರ್ ಊಟ, ಹಳ್ಳಿ ಮಾರಾಟ!' ಪ್ರಸ್ತುತ ಕೃಷಿ ತಲ್ಲಣಗಳಲ್ಲಿ ಕೇಳಿದ ಒಂದು ಸಾಲು ಸವಾಲು ಅಷ್ಟೇ! ಅಡಿಕೆ ಪತ್ರಿಕೆಯ ಮೂಡೆಬಳ್ಳಿ ಹಾಗೂ ಉದಯವಾಣಿ ಪತ್ರಿಕೆಯ ಬಹುಧಾನ್ಯ ಅಂಕಣಗಳಿಂದ ಆಯ್ದ ಬರೆಹಗಳು ಇಲ್ಲಿವೆ. ಈ ನನ್ನ ಬರೆಹಗಳನ್ನು ಪ್ರಕಟಿಸಿದ ಪತ್ರಿಕೆಗಳ ಸಂಪಾದಕರಿಗೆ ಹಾಗೂ ಇದನ್ನು ಈಗ ಚೆಂದದ ಪುಸ್ತಕವಾಗಿ ಪ್ರಕಟಿಸುತ್ತಿರುವ ಮಿತ್ರ ಡಾ. ಎಂ,ಬೈರೇಗೌಡರಿಗೆ ಕೃತಜ್ಞತೆಗಳು.

ಪುಸ್ತಕಗಳಿಂದ : ಶಿವಾನಂದ ಕಳವೆ: ಅರಣ್ಯ:ಅರಣ್ಯ: ಮರಗಳ ವಿವಿಧ ಉಪಯೋಗಗಳು: ಬಹೂಪಯೋಗಿ ಮರಗಳುಕಡಿದವರಿಗೆ ಒಲಿದ ಅಡ'ವಿ'ಜ್ಞಾನ!

ಮನೆಯ ಪ್ರಧಾನ ಬಾಗಿಲಿಗೆ ಹಲಸು, ಅಡಿಪಟ್ಟಿಗೆ ಹುನುಗಲು, ಕಿಟಕಿ ಬಾಗಿಲಿಗೆ ಬೆಟ್ಟಹೊನ್ನೆ, ಕಂಬಕ್ಕೆ ಹಲಸು, ಬೀಟೆ, ತೊಲೆಗೆ ಮತ್ತಿ, ನಂದಿ ಮರದಿಂದ ಪಕಾಸು ಹಾಗೂ ರೀಪು ತಯಾರಿ. ಮನೆಯ ಕೋಳುಕಂಬ ಹಾಗೂ ಎಳೆಗೆ ಹುನಾಲು ಮರ. ಮಲಗುವ ಮಂಚಕ್ಕೆ ಕಾಸರಕ ಹೀಗೆ ಮಲೆನಾಡಿನಲ್ಲಿ ೩೦ ವರ್ಷಗಳ ಹಿಂದೆ ಒಂದು ಮನೆಗೆ ಬಳಸುತ್ತಿದ್ದ ಕಟ್ಟಿಗೆಗಳ ವಿವರ ಸಂಗ್ರಹಿಸಿದರೆ ಅವು ಕಾಡಿನ ರಹಸ್ಯ ಹೇಳುವಷ್ಟು ಪ್ರಭಾವಿಯಾಗಿವೆ.

ನೇಗಿಲಿಗೆ ಬಳಸುವದು ಕಾಸರಕ ಮರ, ಕತ್ತಿಯ ಹಿಡಿಗೆ ಊರ ಹೊನ್ನೆ ಬೇರು, ನುರುಕಲು ಗಿಡ ಬೇಕು. ಹಿರಿಯಜ್ಜನ ಊರುಗೋಲು ಮಂದಾರ ಕಟ್ಟಿಗೆಯದಾದರೆ ಒಳ್ಳೆಯದು, ಕಡಗೋಲಿಗೆ ಹಾಲು ಬರುವ ಗಿಡವಾಗಬೇಕು ಹಾಗಾಗಿ ಹಾಲು ಖೈರ ಶ್ರೇಷ್ಟ, ರೊಟ್ಟಿಮಣೆಗೆ ಹಲಸು, ಸಾಗವಾನಿ ಉಪಯುಕ್ತ, ಸಲಿಕೆ(ಗುದ್ದಲಿ) ಕಾವು ಮಾಡಲು ಬಿಲ್‌ಹಾಯಿಗ ಒಳ್ಳೆಯದು, ದೇವರ ಪೀಠಕ್ಕೆ ನೀರು ಸಹಿಷ್ಣುಗುಣದ ಬೀಟೆ, ಹಲಸು, ವಾಟೆ ಮರ ಬಳಕೆ. ದೇವಾಲಯದ ರಥ, ಧ್ವಜ ಕಂಬಕ್ಕೆ ವಾಟೆ, ರಂಜಲು, ಮನೆ ಬಳಕೆಗೆ ಉಪ್ಪು ಸಂಗ್ರಹಿಸುವ ಪೆಟ್ಟಿಗೆಗೆ ಉಪ್ಪುಚಂದ್ರಿಕೆ, ಜೇನು ಸಾಕುವ ಪೆಟ್ಟಿಗೆಗೆ ನಂದಿ, ಹೇನು ತೆಗೆಯುವ ಹಣಿಗೆಗೆ ಶಿವಣೆ, ಕೂಗಲ ಬಳ್ಳಿಯ ಕವಳದ ಮರಿಗೆ, ಬೆತ್ತದ ಬುಟ್ಟಿ, ಕೃಷಿ ಬೇಲಿಗೆ ನಾರ್ಲೆ ಬಳ್ಳಿ, ಮೀನು ಹಿಡಿಯುವದಕ್ಕೆ ಶ್ರೀತಾಳೆಕಾಯಿ, ಜೊಟ್ಟೆಯಿಂದ ನೀರೆತ್ತಲು ಬಗಿನೆ ಮರದ ಬಕೆಟ್! ಕಬ್ಬಿನಗಾಣ ಕಬ್ಬಿಣದ್ದಾಗುವ ಪೂರ್ವದಲ್ಲಿ ಮಸೆಮರದ ಕಟ್ಟಿಗೆಯಲ್ಲಿ ಗಾಣ ತಯಾರಿ. ಅಷ್ಟೇಕೆ ಆಲೆಮನೆಯಲ್ಲಿ ಕೋಣನನ್ನು ಹೊಡೆಯಲು ಬಳಸುವ ಕೋಲು ಕಾಸರಕದ್ದಾದರೆ ಉತ್ತಮ ಎಂದು ಕುಂದಾಪುರದ ಆಲೆಮಾಮ ಹೇಳಿದ್ದು ನೆನಪಿರಬಹುದು!

ಕಾಡು ಹಳ್ಳಿಗೆ ಬಂದು ಕಟ್ಟಿಗೆ ಗುಣ ನೋಡಿ ಯಾವ ಮರ ಯಾವ ಕೆಲಸಕ್ಕೆ ಬಳಸಬೇಕು ಎಂದು ಯಾರೂ ನಮಗೆ ಪಾಠ ಮಾಡಿಲ್ಲ. ಕಡಿದು ಬಳಸಿದ ತಿಳುವಳಿಕೆಯಲ್ಲಿ ಇಂತಹ ಜ್ಞಾನ ಬೆಳೆದಿದೆ. ಒಂದು ಮೊಳೆ ಬಳಸದೆ ಮನೆ ನಿರ್ಮಿಸುವ ಪರಿಣಿತಿ ನಮ್ಮಲ್ಲಿತ್ತು. ಮೊಳೆಗೆ ಬದಲು ಆಗ ಕಟ್ಟಿಗೆ ಬೆಣೆ ಬಳಕೆ. ಚಳಿಗೆ ಕುಗ್ಗಿ, ಮಳೆಗೆ ಹಿಗ್ಗುವ ಕಾಷ್ಠ ಗುಣ ಬಾಗಿಲು, ಕಿಟಕಿಗಳ ಪಟ್ಟಿ, ಸಂದು ಕೂಡಿಸುವ ನಾಜೂಕಿನ ಕೆಲಸಕ್ಕೆ ದೊಡ್ಡ ಸಮಸ್ಯೆ. ಬಿದಿರು ಬೆಣೆ, ಲಕ್ಕಿ ಬೆಣೆ ಬಳಸಿದರೆ ಬಾಗಿಲ ಹಲಗೆಗಳನ್ನು ಪಟ್ಟಿಗೆ ಹೊಂದಿ ಕೂಡ್ರಿಸಬಹುದು, ಅದು ಯಾವ ಕಾಲಕ್ಕೂ ಗಾತ್ರ ವ್ಯತ್ಯಯವಾಗದು ಎಂದು ಆಚಾರಿಗಳಿಗೆ ಅನುಭವ ಕಲಿಸಿತು. ಮಾವಿನ ಮರ ಕಡಿದು ಗರಗಸದಲ್ಲಿ ಹಲಗೆ ತಯಾರಿಸಿ ನೇರ ಹಸಿಕಟ್ಟಿಗೆ ಮನೆಗೆ ಬಳಸಿದ ವರ್ಷ ಕೀಟಬಾದೆಯಿಂದ ಹಲಗೆ ಹಾಳು. ಮಾವಿನ ನಾಟಾ ಕೊರೆದ ಬಳಿಕ ತಿಂಗಳ ಕಾಲ ನೀರಲ್ಲಿ ನೆನೆಹಾಕುವ ಸಂಸ್ಕರಣೆ, ಅಲ್ಲಿ ಕೀಟತಡೆಗೆ ಸುಲಭ ಅಸ್ತ್ರ ಗೋಚರಿಸಿತು!. ಮನೆ ಮಹಡಿಗೆ ಹಲಗೆ ಹಾಕಿ ಮಣ್ಣು ಹಾಕುವದು ವಾಡಿಕೆ, ಕೆಲವು ಕಟ್ಟಿಗೆಗಳು ಮಣ್ಣಿಗೆ ಬೇಗ ಹಾಳಾಗುತ್ತವೆ. ಭರಣಿಗೆ ಮರದ ಹಲಗೆ ಬಳಸಿದರೆ ಅದರ ಕಹಿಗುಣಕ್ಕೆ ಗೆದ್ದಲು ಕಾಟ ಕಡಿಮೆಯೆಂಬ ಅರಿವು ಬೆಳೆಯಿತು. ಹೆಬ್ಬಲಸು, ಹೊನ್ನೆ ಮುಂತಾದ ಹಲಗೆ ಬಳಸಿದಾಗ ಗೆದ್ದಲು ನಿಯಂತ್ರಣಕ್ಕೆ ಮಹಡಿಯ ಹಲಗೆಯ ಮೇಲೆ ದಾಲ್ಚಿನ್ನಿ ಎಲೆ ಹಾಕಬಹುದು ಎಂದು ಯಾವುದೋ ಮನೆಯ ಅನುಭವ ಇನ್ನೊಂದು ಮನೆಗೆ ಹರಿದು ಬಂತು. ಈಗ ನೂರಾರು ವರ್ಷಗಳ ಮಹಡಿ ಕೆಡವಿದರೆ ಅದರ ಮಣ್ಣೊಳಗೆ ಶತಮಾನದ ಎಲೆಗಳು ನಿನ್ನೆ ಕೊಯ್ದ ಎಲೆಗಳಂತೆ ಸುರಕ್ಷಿತವಾಗಿರುವದನ್ನು ಗಮನಿಸಬಹುದು. ಶಿರಸಿಯಲ್ಲಿ ರಸ್ತೆ ಅಗಲೀಕರಣ ನಡೆದಾಗ ಹಳೆ ಹಳೆಯ ಕಟ್ಟಡ ಕೆಡವಿದರು, ಶತಮಾನದ ದಾಲ್ಚಿನ್ನಿ ಎಲೆಗಳು ಇಲ್ಲಿನ ಬೀದಿಗೆ ಬಿದ್ದು ಪರಂಪರೆಯ ಸಾಕ್ಷ್ಯ ಹೇಳಿದವು.

ಮನೆಯ ಪ್ರಧಾನ ಬಾಗಿಲಿಗೆ ಹಲಸು, ಅಡಿಪಟ್ಟಿಗೆ ಹುನುಗಲು, ಕಿಟಕಿ ಬಾಗಿಲಿಗೆ ಬೆಟ್ಟಹೊನ್ನೆ, ಕಂಬಕ್ಕೆ ಹಲಸು, ಬೀಟೆ, ತೊಲೆಗೆ ಮತ್ತಿ, ನಂದಿ ಮರದಿಂದ ಪಕಾಸು ಹಾಗೂ ರೀಪು ತಯಾರಿ. ಮನೆಯ ಕೋಳುಕಂಬ ಹಾಗೂ ಎಳೆಗೆ ಹುನಾಲು ಮರ. ಮಲಗುವ ಮಂಚಕ್ಕೆ ಕಾಸರಕ, ಹೀಗೆ ಮಲೆನಾಡಿನಲ್ಲಿ ೩೦ ವರ್ಷಗಳ ಹಿಂದೆ ಒಂದು ಮನೆಗೆ ಬಳಸುತ್ತಿದ್ದ ಕಟ್ಟಿಗೆಗಳ ವಿವರ ಸಂಗ್ರಹಿಸಿದರೆ ಅವು ಕಾಡಿನ ರಹಸ್ಯ ಹೇಳುವಷ್ಟು ಪ್ರಭಾವಿಯಾಗಿವೆ. ನಿರ್ಮಾಣಕ್ಕೆ ಬಳಸುವ ಬಹುತೇಕ ಕಟ್ಟಿಗೆಗಳು ಪಕ್ಕದ ಕಾಡಿನಿಂದ ಬಂದವು. ೪೦-೪೫ ಜಾತಿಯ ಕಟ್ಟಿಗೆ, ನಾರು, ಎಲೆ ಬಳಸಿ ಪ್ರತಿ ಊರಿನಲ್ಲಿ ಮನೆ ನಿರ್ಮಾಣ. ಯಾವ ಮರವನ್ನು ಹೇಗೆ ಬಳಸಬೇಕು, ಯಾವ ಮರವನ್ನು ಬಳಸಬಾರದು ಎಂಬ ವಿಧಿ-ನಿಷೇಧಗಳಿಗೆ ಸ್ಥಳೀಯ ಅರಣ್ಯ ಸಂಪತ್ತಿನ ಆಧಾರ, ಇಲ್ಲಿ ಹಲವು ಲಕ್ಷ ಮರ ಕಡಿದು ಗಳಿಸಿದ ಅಪಾರ ಅನುಭವಗಳಿವೆ. ಓದು ಬಾರದವರು ನಮ್ಮ ಅಡವಿ ಓದಿ ಸಸ್ಯ ಗುಣದ ಹಲವು ಸಂಗತಿ ಕಲಿತಿದ್ದಾರೆ !

ಇತ್ತೀಚೆಗೆ ಶೃಂಗೇರಿ ಕಾಡಿನ ಬಗಿನೆ ಮರಗಳು ನೂರಾರು ಕಿಲೋ ಮೀಟರ್ ದೂರದ ಬಯಲುಸೀಮೆಗೆ ಲಾರಿ ಏರಿ ಹೊರಟಿದ್ದವು. ಶಿಕಾರಿಪುರದಲ್ಲಿ ಮಾರ್ಗ ಮಧ್ಯೆ ಲಾರಿ ನಿಲ್ಲಿಸಿ ಖಾಸಗಿ ವಿಚಾರಣೆ ಆರಂಭಿಸಿದೆ. ನಮ್ಮ ಕಾಡುಗಳಲ್ಲಿ ಮರ ಅಪುರೂಪವಾಗುತ್ತಿವೆ, ಕಾಡಿನ ಮರಗಳೆಲ್ಲ ಹೀಗೆ ಲಾರಿ ಏರಿದರೆ ಹೇಗೆಂಬ ಚಿಂತೆ. ಗದ್ದೆ ಉಳುಮೆ ಬಳಿಕ ಹೆಂಡೆ ಒಡೆಯುವದು, ನೆಲ ಸಮತಟ್ಟುಗೊಳಿಸುವದು, ನಾಟಿಗೆ ಮುಂಚೆ ಕೆಸರು ಮಣ್ಣು ಜಾರಿಸುವದಕ್ಕೆ ಕೊರಡು ಹೊಡೆಯಬೇಕು. ಅದಕ್ಕೆ ಬಗಿನೆ ಲಾಯಕ್ಕು, ಅದಕ್ಕೆ ಮರ ಒಡೆದು ಕೊರಡು ತಯಾರಿಸುತ್ತಾರೆ . ಕಾಡು ಕಣಿವೆಯ ಮರವನ್ನು ನೆರೆಯ ಕೃಷಿಕರು ಬಳಸುವದಷ್ಟೇ ವಿಶೇಷವಲ್ಲ. ಈ ಮರ ಬಳಕೆಯ ಜ್ಞಾನ ಕಾಡಿನಿಂದ ೨೦೦-೩೦೦ಕಿಲೋ ಮೀಟರ್ ದೂರದ ಬಯಲುಸೀಮೆಗಳಲ್ಲೂ ತಲತಲಾಂತರಗಳಿಂದ ಬೆಳೆದು ಬಂದಿದೆ. ಹಿಂದೆ ತಲೆಹೊರೆ, ಚಕ್ಕಡಿಯಲ್ಲಿ ಆ ಊರು ತಲುಪುತ್ತಿದ್ದ ಮರಗಳು ಈಗ ಲಾರಿ ಏರಿ ಕೃಷಿ ಏಳ್ಗೆಗೆ ಹೋಗುತ್ತಿವೆ. ನಮ್ಮ ಕಾಡಿನ ಬಿದಿರು ಬಳಸಿ ನಿರ್ಮಿಸಿದ ಬಯಲು ಸೀಮೆಯ ಮಣ್ಣಿನ ಮನೆಗಳು ಅಲ್ಲಿ ಶತಮಾನಗಳಿಂದ ನಿಂತು

ಬಳಕೆಯ ಬೆರಗು ಹೇಳುತ್ತಿವೆ.

ಉತ್ತರ ಕನ್ನಡದ ಉಳವಿ ಜಾತ್ರೆಗೆ ಸಾವಿರಾರು ಎತ್ತಿನ ಗಾಡಿಗಳಲ್ಲಿ ಬಯಲು ನಾಡಿನ ಜನ ಬರುತ್ತಿದ್ದರು. ಸುಗ್ಗಿ ಮುಗಿದ ಬಳಿಕ ಕಾಡು ಕಣಿವೆಯ ಚನ್ನಬಸವಣ್ಣನ ದರ್ಶನ ಎಲ್ಲರಿಗೂ ಪುಣ್ಯದ ಕೆಲಸ. ಜಾತ್ರೆಗೆ ೧೫ ದಿನ ಮುಂಚಿತವಾಗಿ ಸಂಸಾರ ಸಮೇತ ಬರುತ್ತಿದ್ದ ರೈತರು ಕಾಳಿ ಕಣಿವೆಯ ಕಾಡಿನ ಬಗಿನೆ, ಬೆತ್ತ ಕಡಿಯುತ್ತಿದ್ದರು. ಎತ್ತಿನಗಾಡಿಗೆ ಹೊಸ ರಂಗು ನೀಡುತ್ತಿದ್ದರು. ಅಗತ್ಯ ಕೃಷಿ ಉಪಕರಣ ರೂಪಿಸಿಕೊಂಡು ಊರಿಗೆ ಮರಳುತಿದ್ದರು. ಇಲ್ಲಿನ ಯಾವ ಕಣಿವೆಯಲ್ಲಿ ಯಾವ ಜಾತಿ ಮರವಿದೆ ಎಂಬ ತಿಳುವಳಿಕೆ ಉಳವಿ ಊರಿನವರಿಗಿಂತ ಜಾತ್ರೆಗೆ ಬರುವ ಕೃಷಿಕರಿಗೆ ಚೆನ್ನಾಗಿ ತಿಳಿದಿತ್ತು!.

ಹಸುರು ಲೋಕದ ಹಳೆ ಕತೆ ಹುಡುಕಿದರೆ ಮರ ಬಳಕೆಯ ಇನ್ನಷ್ಟು ಸ್ವಾರಸ್ಯ ಸಾಕಷ್ಟಿದೆ. ಆದರೆ ಇಂದಿನ ಬಳಕೆಗೆ ಮರ ಎಲ್ಲಿ ಎಂಬುದು ಮುಖ್ಯ ಪ್ರಶ್ನೆ. ನಮ್ಮ ಒತ್ತಡಕ್ಕೆ ಸಸ್ಯಲೋಕ ಕಣ್ಣೆದುರು ಖಾಲಿಯಾಗಿದೆ, ಪರಿಸರ ತಲ್ಲಣ ಇಷ್ಟು ಕಾಲ ಕಡಿದವರಿಗೆ ಇನ್ನು 'ಮರ ಇಲ್ಲಣ್ಣ' ಎಂದು ಸಾರಿ ಹೇಳುತ್ತಿದೆ. ಕಾಡಿನ ಪ್ರತಿ ಸಸ್ಯದ ಬಳಕೆ ಜ್ಞಾನ ಕಡಿದವರಿಗೆ ಒಲಿದಿದೆ. ಈಗ ನಾವು ಗಿಡದ ನೋವು ಕೊಂಚ ಆಲಿಸಬೇಕು. ಹೊಲ ಮನೆಗೆ ಬಳಸುತ್ತಿದ್ದ ಸಸ್ಯ ಲೋಕವನ್ನು ಈ ನೆಲದಲ್ಲಿ ಉಳಿಸಿ ಬೆಳೆಸಬೇಕು.

# ಶಿಕ್ಷಣದ ಕನ್ನಡಿ, ಕೃಷಿ ಭವಿಷ್ಯದ ಮುನ್ನುಡಿ!

ಸೋಲಿಗರ ಪೋಡಿನ ಅಜ್ಜ ಶಾಲೆಗೆ ಬಂದು ಗಿಡಮೂಲಿಕಾ ಜ್ಞಾನದ ಪಾಠ ಮಾಡುವಾಗ ಕಲಿಯುವ ಸಂಗತಿ ಪ್ಯಾಂಟು ಹಾಕಿದ ಮೇಷ್ಟ್ರಲ್ಲಿ ಮಾತ್ರವಲ್ಲ ಊರಿನ ಜನರಲ್ಲಿಯೂ ಇದೆ ಎಂಬ ಕಲ್ಪನೆ ಮೂಡಲು ಸಾಧ್ಯವಾಯಿತು. ಶಾಲಾ ಶಿಕ್ಷಣದಲ್ಲಿಯೂ ಈಗ ಆಗಬೇಕಾದುದು ಇದೇ ಕೆಲಸ, ಊರಿನ ಭೂಮಿಯಲ್ಲಿ ಅರಿಯುವ ಅವಕಾಶ ತೋರಿಸುವದು ಮುಖ್ಯ ಗುರಿ. ಆಗ ಅನ್ನದ ವೃತ್ತಿಯನ್ನು ಅಭಿಮಾನದಿಂದ ನೋಡಲು ಮನಸ್ಸಿಗೆ ಸಾಧ್ಯವಾಗುತ್ತದೆ. 'ಭಾರತದ ಕೃಷಿಕರು ಬಡವರು......ಅವರು ಬೆವರಿಳಿಸಿ ದುಡಿಯುತ್ತಾರೆ' ಎಂದು ಕಾಲದ ಪಾಠ ಓದುತ್ತಿದ್ದರೆ ನೆಲದ ಪ್ರೀತಿ ರವಷ್ಟೂ ಹುಟ್ಟುವದಿಲ್ಲ, ಬದುಕುವ ಸಾಧ್ಯತೆ ತೆರೆದುಕೊಳ್ಳುವದಿಲ್ಲ. ಬದುಕಿ ಗೆದ್ದವರ, ನೆಮ್ಮದಿ ಕಂಡವರ ಮಾರ್ಗಪಥ ಅರಿತಾಗ ಮಾತ್ರ ಮಕ್ಕಳಿಗೆ ಕೃಷಿ ನೀತಿ ಆಪ್ತವಾಗುತ್ತದೆ.

ಮನೆ ಮಕ್ಕಳನ್ನು ಕೃಷಿ ಕಾರ್ಯಗಳಲ್ಲಿ ತೊಡಗಿಸುವ ಹಿರಿಯರ ಜಾಣ್ಮೆ ಈಗ ದಾರಿ ತಪ್ಪಿದೆ. ಹಿಂದಿನಂತೆ ಈಗ ಮನೆ ತುಂಬ ಮಕ್ಕಳಿಲ್ಲ, ಇರುವ ಒಂದೇ ಮಗುವಿಗೆ ಒಳ್ಳೆಯ ಶಿಕ್ಷಣ ಒದಗಿಸುವ ಕಾಳಜಿ ಹೆಚ್ಚಿದೆ. ಪಾಠ, ಟ್ಯೂಷನ್, ಪ್ರವೇಶ ಪರೀಕ್ಷೆ, ವಾರ್ಷಿಕ ಪರೀಕ್ಷೆ ಎಂದು ಮಗುವಿನ ಮನಸ್ಸನ್ನು ನಗರ ಸುಖದ ನೌಕರಿ ನೇರಕ್ಕೆ ಕಟ್ಟುವ ಕೆಲಸ ಸಾಗಿದೆ. ತಿಂಗಳುಗಟ್ಟಲೆ ರಜೆಯಿದ್ದರೂ ಗದ್ದೆ ಕೆಲಸಕ್ಕೊ, ತೋಟದ ಕೆಲಸಕ್ಕೊ ಮಕ್ಕಳು ದುಡಿಯುವದು ನಮ್ಮ ಪ್ರತಿಷ್ಠೆಗೆ ಕುಂದು ಎಂಬ ಮನೋಭಾವ ಬೆಳೆದಿದೆ. ಮನೆಯ ಜಮೀನು ಎಲ್ಲಿದೆ? ಗಡಿ ಗುರುತುಗಳೆಲ್ಲಿವೆ? ದೊಡ್ಡಿಯಲ್ಲಿ ಎಷ್ಟು ಜಾನುವಾರು ಇದೆ? ತೋಟದಲ್ಲಿ ಯಾವ ಕಾಲಕ್ಕೆ ಯಾವ ಕೆಲಸ ಮಾಡುತ್ತಾರೆ? ಕನಿಷ್ಠ ಪ್ರಶ್ನೆಗಳಿಗೂ ಉತ್ತರಿಸುವ ತಾಕತ್ತು ಕೃಷಿಕರ ಮನೆಯ ಪ್ರೌಢಶಾಲಾ ಮಕ್ಕಳಿಗೂ ಇಲ್ಲ! ಕೃಷಿ ನೆಲದ ಆಧಾರದಲ್ಲಿ ಜೀವನ ನಡೆಸುವ ಕುಟುಂಬಕ್ಕೆ ಭವಿಷ್ಯದ ನೆಲೆಯಲ್ಲಿ ಕೃಷಿ ಜ್ಞಾನ ಬೇಕು. ನೌಕರಿ ಓಟದಲ್ಲಿ ಸಾಗಿರುವ ಸಮೂಹ ಮಕ್ಕಳ ಮನಸ್ಸು ತೋಟಕ್ಕೆ ನುಗ್ಗದಂತೆ ಒತ್ತಾಯದ ಬೇಲಿ ಹಾಕುತ್ತಿದೆ.

ಗ್ರಾಮೀಣ ಶಾಲೆಗಳ ಶಿಕ್ಷಣ ಮಾರ್ಗವನ್ನು ಪುನರ್ ವಿಮರ್ಶಿಸುವ ಸಂದರ್ಭ ಎದುರಾಗಿದೆ. ಶಾಲೆಯ ಅವಧಿಯಲ್ಲಿ ಸ್ಥಳೀಯ ಕೃಷಿ, ಪರಿಸರದ ಮಾಹಿತಿ ಹಂಚುವ ಕಾರ್ಯ ಹೆಚ್ಚಬೇಕಾಗಿರುವುದು ಇಂದಿನ ತುರ್ತು ಅಗತ್ಯ. ಕರಾವಳಿಯ ಮಕ್ಕಳಿಗೆ ಬೀಸು ಬಲೆ, ಗೋರು ಬಲೆ, ಚಿಟ್ಟಕಂಟ್ಲಿ, ಕುರ್ಕಿಯಂತಹ ಮೀನುಗಾರಿಕೆ ಪರಿಕರಗಳ ಬಳಕೆ ಸೂಕ್ಷ್ಮಗಳನ್ನು ಹೇಳಬಹುದು, ಬಯಲು ಸೀಮೆಯ ಮಕ್ಕಳಿಗೆ ಅಲ್ಲಿನ ಮಣ್ಣಿನ ವಿವಿಧ ಮಾದರಿಗಳಲ್ಲಿ ಹೇಗೆ ಬೆಳೆ ತೆಗೆಯುವರೆಂಬ ಜಾಣ್ಮೆ ತೋರಿಸಬಹುದು, ಮಲೆನಾಡಿನ ವೈವಿಧ್ಯಮಯ ತೋಟಗಾರಿಕಾ ಬೆಳೆಗಳ ಕೃಷಿ ಅರಿವನ್ನು ನೆಲದ ಮಕ್ಕಳಿಗೆ ತಿಳಿಸಬಹುದು. ಪ್ರತಿ ಶಾಲೆಯ ಸುತ್ತಲಿನ ಕೃಷಿ ಭೂಮಿಗೆ ಮಹತ್ವದ ಚಟುವಟಿಕೆ ವೀಕ್ಷಣೆಗೆ ಕರೆದೊಯ್ಯಬಹುದು.....ಹೀಗೆ ಸಾಧ್ಯತೆಗಳು ಹತ್ತಾರು. ಊರಿನ ಕೃಷಿ ಜ್ಞಾನ ಬಲ್ಲವರಲ್ಲಿ ತಿಂಗಳಿಗೊಮ್ಮೆ ಪಾಠ ಮಾಡಿಸಬಹುದು. ನಮ್ಮ ಶಾಲಾ ಮೇಷ್ಟ್ರುಗಳು ಹಳ್ಳಿ ಜ್ಞಾನಗಳನ್ನು ಶಾಲೆಯಲ್ಲಿ ಕ್ರೋಢೀಕರಿಸಿ ಮಕ್ಕಳಿಗೆ ಪರಿಣಾಮಕಾರಿಯಾಗಿ ಹಂಚುವ ಮನೋಭಾವ ಹೊಂದಬೇಕು. ಇದು ಒಂದು ಪಾಠದಲ್ಲಿ, ಪ್ರಶ್ನೋತ್ತರಕ್ಕೆ ನಡೆಯುವ ಚಟುವಟಿಕೆಯಾಗದೇ ಮನದಾಳಕ್ಕೆ ಇಳಿಯುವ ಪ್ರಾತ್ಯಕ್ಷಿಕೆಯಾಗಬೇಕು. ತರಗತಿಯಲ್ಲಿ ಮತ್ತೆ ಮತ್ತೆ ಹೇಳಿ ನೆನಪಿಸುವ ಕಾರ್ಯ ಬೇಕು. ಒಂದು ಕುತೂಹಲಕರ ಆಟ, ಮನೋರಂಜನೆ, ಹಬ್ಬ, ಆಸಕ್ತಿದಾಯಕ ಚಟುವಟಿಕೆಯಂತೆ ಮಕ್ಕಳಿಗೆ ಕೃಷಿ ವಿಚಾರ ಬಿತ್ತಬೇಕು. ಯಾವುದೇ ಕಾರಣಕ್ಕೂ ಮಕ್ಕಳಿಗೆ ಹೊರೆಯಾಗಬಾರದು. ಅಕಾಡೆಮಿಕ್ ಶಿಸ್ತು ಬೇಕಾಗಿಲ್ಲ, ಪರೀಕ್ಷೆ ಭಯದಲ್ಲಿ ಓದುವ ಅಗತ್ಯವಿಲ್ಲದೇ ಈ ಕಾರ್ಯ ನಡೆಸಬಹುದು.

ಕೃಷಿ ಅರಿವಿಗೆ ಮನೆಯಲ್ಲಿಯೇ ಅವಕಾಶವಿರುವಾಗ ಶಾಲೆಯ ಸಮಯವನ್ನು ಏಕೆ ಇದಕ್ಕೆ ಒಳಪಡಿಸಬೇಕು ? ಕೃಷಿ ವಿಚಾರ ಹೇಳುವದನ್ನು ಶಾಲೆ ಮಾಡುವದಾದರೆ ಮಕ್ಕಳನ್ನು ಶಾಲೆಗೆ ಕಳಿಸದೇ ಮನೆಯಲ್ಲಿಯೇ ಪಾಠ ನಡೆಸಬಹುದಿತ್ತಲ್ಲವೇ ? ಚರ್ಚೆಗಳು ಏಳಬಹುದು. ಮಕ್ಕಳೆಲ್ಲ ಸೇರಿ ಒಂದು ಮಾಹಿತಿ, ಚಟುವಟಿಕೆಯಲ್ಲಿ ಪಾಲ್ಗೊಳ್ಳುವಾಗ ಪೈಪೋಟಿಯಲ್ಲಿ ಮನಸ್ಸು ಕಲಿಕೆಗೆ ಒಗ್ಗುತ್ತದೆ. ಅಷ್ಟಕ್ಕೂ ಮನೆಯಲ್ಲಿ ಮಣ್ಣು ಮುಟ್ಟದಂತೆ ಮಕ್ಕಳನ್ನು ನೆಲದ ಎತ್ತರದಲ್ಲಿ ಬೆಳೆಸಲು ಭವಿಷ್ಯದ ವಿವೇಚನೆಯಿಲ್ಲದೇ ಕೃಷಿಕರು ಸಾಗಿದ್ದೇವೆ, ಕೃಷಿಗೆ ಭವಿಷ್ಯವೇ ಇಲ್ಲವೆಂದು ಬೊಬ್ಬೆ ಹೊಡೆದಿದ್ದೇವೆ. ಸ್ವತಃ ನಾವೇ ಕೃಷಿ ಅಭಿಮಾನ ಶೂನ್ಯರಾಗಿದ್ದೇವೆ. ಶಾಲೆ ಶಿಕ್ಷಣ ಈಗ ಮಕ್ಕಳ ಮುಖೇನ ಸಮುದಾಯವನ್ನು ಎಚ್ಚರಿಸುವ ಕೆಲಸ ಮಾಡಬೇಕಾಗಿದೆ. ಎಳೆಯ ಮಕ್ಕಳು ಕೃಷಿ ವಿಚಾರ ಪಡೆದ ಮಾತ್ರಕ್ಕೆ ಅವರೆಲ್ಲ ಮುಂದೆ ಒಳ್ಳೆಯ ಕೃಷಿಕರಾಗಿ ಹಳ್ಳಿಯಲ್ಲಿ ನೇಗಿಲು ಹಿಡಿದು ನೆಲೆಸುತ್ತಾರೆಂದು ಅರ್ಥವಲ್ಲ,

ಹಾಗೇ ಭಾವಿಸುವದೂ ಸರಿಯಲ್ಲ. ಆದರೆ ಪರಿಸರದ ಅರಿವು ಪರೋಕ್ಷವಾಗಿ ಭವಿಷ್ಯಕ್ಕೆ ನೆರವಾಗುತ್ತದೆ. ನಮ್ಮ ಮಕ್ಕಳು ಅಧಿಕಾರಿಯಾಗಿ ನಿರ್ಣಯ ತೆಗೆದುಕೊಳ್ಳುವ ಸಂದರ್ಭ ಬಂದಾಗ ನೆಲದ ಸಾಮಾನ್ಯ ಅರಿವು ಕೃಷಿಕಪರ ನಿರ್ಧಾರ ಕೃಷಿಗೊಳ್ಳಲು ಪ್ರೇರೇಪಿಸಬಹುದು.

ಬಿಳಿಗಿರಿ ರಂಗನ ಬೆಟ್ಟದ ಸೋಲಿಗರ ಮಕ್ಕಳಿಗೆ ಶಿಕ್ಷಣ ನೀಡಲು ಅಲ್ಲಿನ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಮಕ್ಕಳ ಪರಿಸರದ ಭಾಷೆ, ಹಾಡುಗಳ ಮುಖೇನವೇ ಪಾಠ ಮಾಡುವ ಪಠ್ಯ ರೂಪಿಸಿದೆ. ತಮ್ಮ ಸೋಲಿಗರ ಪೋಡಿನ ಅಜ್ಜ ಶಾಲೆಗೆ ಬಂದು ಗಿಡಮೂಲಿಕಾ ಜ್ಞಾನದ ಪಾಠ ಮಾಡುವಾಗ ಕಲಿಯುವ ಸಂಗತಿ ಪ್ಯಾಂಟು ಹಾಕಿದ ಮೇಷ್ಟ್ರಲ್ಲಿ ಮಾತ್ರವಲ್ಲ ಊರಿನ ಜನರಲ್ಲಿಯೂ ಇದೆ ಎಂಬ ಕಲ್ಪನೆ ಮೂಡಲು ಸಾಧ್ಯವಾಯಿತು. ಶಾಲಾ ಶಿಕ್ಷಣದಲ್ಲಿಯೂ ಈಗ ಆಗಬೇಕಾದುದು ಇದೇ ಕೆಲಸ, ಊರಿನ ಭೂಮಿಯಲ್ಲಿ ಅರಿಯುವ ಅವಕಾಶ ತೋರಿಸುವದು ಮುಖ್ಯ ಗುರಿ. ಆಗ ಅನ್ನದ ವೃತ್ತಿಯನ್ನು ಅಭಿಮಾನದಿಂದ ನೋಡಲು ಮನಸ್ಸಿಗೆ ಸಾಧ್ಯವಾಗುತ್ತದೆ. 'ಭಾರತದ ಕೃಷಿಕರು ಬಡವರು.....ಅವರು ಬೆವರಿಳಿಸಿ ದುಡಿಯುತ್ತಾರೆ' ಎಂದು ಕಾಲದ ಪಾಠ ಓದುತ್ತಿದ್ದರೆ ನೆಲದ ಪ್ರೀತಿ ರವಷ್ಟೂ ಹುಟ್ಟುವದಿಲ್ಲ, ಬದುಕಲು ಸಾಧ್ಯತೆ ತೆರೆದುಕೊಳ್ಳುವದಿಲ್ಲ. ಬದುಕಿ ಗೆದ್ದವರ, ನೆಮ್ಮದಿ ಕಂಡವರ ಮಾರ್ಗಪಥ ಅರಿತಾಗ ಮಾತ್ರ ಮಕ್ಕಳಿಗೆ ಕೃಷಿ ನೀತಿ ಆಪ್ತವಾಗುತ್ತದೆ.

ಒಂದು ಕಾಲಕ್ಕೆ ಬಹುತೇಕ ಶಾಲೆಗಳಿಗೆ ಕೃಷಿ ಚಟುವಟಿಕೆಗೆ ಭೂಮಿಯಿತ್ತು. ಶಾಲೆಯ ಮಕ್ಕಳು ಶಾಲೆಯ ಗದ್ದೆ ನಾಟಿ ಮಾಡುತ್ತಿದ್ದ ದಿನಗಳಿದ್ದವು. ಡೆನ್ಮಾರ್ಕ್ ನೆರವಿನ ಯೋಜನೆಯಲ್ಲಿ ಕರ್ನಾಟಕದ ಆಯ್ದ ಶಾಲೆಗಳಿಗೆ ತೋಟಕ್ಕೆ ಭೂಮಿ, ಹಣ್ಣು ಹಂಪಲು ಸಸಿ, ಪಂಪ್‌ಸೆಟ್ ವ್ಯವಸ್ಥೆಯನ್ನು ೪೦ ವರ್ಷಗಳ ಹಿಂದೆಯೇ ಸರಕಾರ ನೀಡಿತ್ತು. ಕಾಂಪೋಸ್ಟ್ ನಿರ್ಮಾಣ, ಸಸಿ ನೆಡುವ ವಿಧಾನ, ಕೃಷಿ ಬೆಳೆ ನಿರ್ವಹಣೆಯ ಪಾಠವನ್ನು ಆ ಕಾಲಕ್ಕೆ ಮಕ್ಕಳು ಕಲಿತಿದ್ದಾರೆ. ಈಗಲೂ ಹಲವು ಶಾಲೆಗಳು ಸರಕಾರದ ಕೃಷಿ ಪಾಠ ಶಾಲೆಗಳಿಗಿಂತ ಪರಿಣಾಮಕಾರಿಯಾಗಿ ಮಕ್ಕಳಿಗೆ ಅನುಭವ ಪಾಠ ಹಂಚುತ್ತಿವೆ. ಒಂದು ಅಡಿಕೆ ಸಸಿ ನಾಟಿ ಮಾಡಿ ಹೇಗೆ ನಿರ್ವಹಣೆ ಮಾಡಿದರೆ ನಾಲ್ಕು ವರ್ಷಕ್ಕೆ ಫಲ ಸಾಧ್ಯವೆಂಬ ಅರಿವು ಶಾಲೆಯಲ್ಲಿ ಸಸಿ ನೆಟ್ಟ ಮಕ್ಕಳಿಗೆ ಎಂದೂ ಮರೆಯದ ಪಾಠವಾಗುತ್ತದೆ. ಶಾಲೆಯ ಮಣ್ಣಿನಲ್ಲಿ ಕೃಷಿ ಭವಿಷ್ಯದ ಕನ್ನಡಿಯಿದೆ, ಬೆಳೆವ ಮಕ್ಕಳ ಬದುಕಿಗೆ ಮುನ್ನುಡಿ ಬರೆಯುವ ಕೆಲಸಕ್ಕೆ ಮಕ್ಕಳು, ಪಾಲಕರು, ಶಿಕ್ಷಕ ಸಹಭಾಗಿತ್ವದಲ್ಲಿ ಹಸುರು ಶಿಕ್ಷಣದ ಚಿಂತನೆ ಸಾಕಾರವಾಗಬೇಕು. ರಾಜ್ಯದ ಅಲ್ಲಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಲಾ ಪರಿಸರ ಶಿಕ್ಷಣ ಇಂತಹ ಯತ್ನಗಳಿಗೆ ಮಾದರಿ ಮಾರ್ಗ ತೋರಿಸಬಹುದು.

# ಕೃಷಿ ಅರಿವಿನಲ್ಲಿ ಬಾಲ್ಯದ ನೆನಪುಗಳು

ಎತ್ತಿನಗಾಡಿ ದುರಸ್ತಿ ಮಾಡಿಸಿ ಶಿವಣೆ ಮರದ ಹೊಸ ನೊಗ ಮಾಡಿಸಿದ್ದನ್ನು ಕೃಷಿ ವಕ್ತಾರರಂತೆ ಚೋಟುದ್ದದ ಮಕ್ಕಳು ಹೇಳುತ್ತಿದ್ದರು. ಕೂಲಿ ಕೆಲಸ ಮಾಡುವವರ ಹೆಸರು, ತೆಂಗಿನ ಮರದ ಬುಡಕ್ಕೆ ಕಾಸರಕದ ಸೊಪ್ಪು ತಂದವರ ವಿವರಗಳು ತಿಳಿದಿದ್ದವು. ಒಬ್ಬ ಆಳು ದಿನಕ್ಕೆ ಎಷ್ಟು ಹೊರೆ ಸೊಪ್ಪು ಕಡಿದು ದೊಡ್ಡಿಗೆ ತರಬಹುದು ಎಂಬ ಕಲ್ಪನೆಯಿತ್ತು. ಸೊಪ್ಪುಗತ್ತಿ, ಸದೆಗತ್ತಿ, ಹಲ್ಲುಗತ್ತಿ, ಕೈಗೊಡಲಿ, ಧಮಾಸು, ನೇಗಿಲು, ಕೊರಡು, ತಳೆ, ಕೊಕ್ಕೆ ಹೀಗೆ ನೂರಾರು ಕೃಷಿ ಉಪಕರಣ ಜ್ಞಾನವಂತೂ ತೀರ ಸಹಜ ಸಂಗತಿ. ಒಮ್ಮೆ ನಮ್ಮ ಮನೆಗೆ ರಜೆಯಲ್ಲಿ ಬಂದಿದ್ದ ೧೦ರ ಹುಡುಗ ಎಳೆ ಕರು ದಿನವಿಡೀ ತೆಳ್ಳನೆಯ ಸಗಣಿ ಹಾಕುವದು ನೋಡಿ ಔಷಧವಾಗಿ ಕಾಡಿನ ಬಿಕ್ಕೆ ಸೊಪ್ಪು ತಿನ್ನಿಸಲು ಹಿರಿಯರಿಗೆ ಸಲಹೆ ಮಾಡಿದ್ದು ಈಗಲೂ ನೆನಪಾಗುತ್ತಿದೆ!.

ಹಳ್ಳಿ ಮೂಲೆಯ ನಮಗೆ ಶಾಲೆಗೆ ಹೋಗುವ ಕಾಲಕ್ಕೆ ರಜೆ ಬಂದರೆ ಖುಷಿ. ಕಾಡು ಬೆಟ್ಟಗಳಲ್ಲಿ ದನ ಮೇಯಿಸುವುದು, ಕೃಷಿ ಭೂಮಿ ತಿರುಗುವುದು, ಏನೋ ಸಣ್ಣ ಪುಟ್ಟ ಕೃಷಿ ಕೆಲಸ ಮಾಡುವುದರಲ್ಲಿ ಉಮೇದಿ. ಹಿರಿಯರಿಗೂ ಅಷ್ಟೇ, ಮಕ್ಕಳಿಗೆ ಯಾವಾಗ ಶಾಲೆ ಆರಂಭವಾಗುತ್ತದೆ ಎಂಬುದಕ್ಕಿಂತ ಯಾವಾಗ ರಜೆ ಎಂಬುದು ಮುಖ್ಯ! ನಮ್ಮ ರಜಾ ದಿನಗಳ ಸಮರ್ಥ ಬಳಕೆಗಾಗಿಯೇ ಕೆಲವು ಕೆಲಸಗಳನ್ನು ಕಾಯ್ದಿರಿಸುತ್ತಿದ್ದರು. ನಾಳೆ ರಜೆಯೆಂದು ಪಾಟೀ ಚೀಲ ಬೀಸಾಕಿದ ಮರುಕ್ಷಣದಲ್ಲೇ ನಮ್ಮನ್ನು ಪುಸಲಾಯಿಸಿ ಸಣ್ಣಪುಟ್ಟ ಕೆಲಸಗಳಲ್ಲಿ ಸೆಳೆಯುವ ಮಹಾನ್ ಜಾಣ್ಮೆ ಅವರದು. ರುಚಿ ರುಚಿಯ ಕಾಡು ಹಣ್ಣು ಕೊಯ್ಯುವದು, ಜೇನು ತೆಗೆಯುವದು, ಹೊಳೆ ಹಳ್ಳಗಳಲ್ಲಿ ಸ್ನಾನಕ್ಕೆ ಕರೆದೊಯ್ಯುವ ಆಮಿಷಗಳು ಬತ್ತಳಿಕೆಯಲ್ಲಿರುತ್ತಿದ್ದವು. ಹೀಗಾಗಿ ನಾವು ಹಿರಿಯರ ಆಣತಿಯಂತೆ ಕೆಲಸ ಮಾಡುತ್ತಿದ್ದೆವು. ಹಾಣೀ ಗೆಂಡಿನಂತಹ ಹುಡುಗರಾದ ನಾವು ಕೆಲಸಕ್ಕೆ ನಿಂತು ಏನು ಮಹಾ ಸಾಧಿಸಿದೆವು ಎನ್ನುವದಕ್ಕಿಂತ ಅನ್ನ ನೀಡುವ ವೃತ್ತಿ ಜತೆ ಒಡನಾಡುತ್ತಿದ್ದೆವು ಎನ್ನುವುದು ಮುಖ್ಯ. ಟಿ.ವಿ. ಲೋಕ  ಹಳ್ಳಿ ಪ್ರವೇಶಿಸದ ಕಾಲಕ್ಕೆ ಕೃಷಿ ಕೆಲಸವೇ ಚೆಂದದ ಆಟ, ಭತ್ತದ ಹುಲ್ಲು ಒಕ್ಕುವಾಗ ಎತ್ತಿನ ಹಿಂದೆ ಮಕ್ಕಳೆಲ್ಲ ತಿರುಗುವುದು, ಗೊಬ್ಬರ ತೆಗೆದ ಬಳಿಕ ಗುಂಡಿಯ ಸುತ್ತ ಓಡುವದರಲ್ಲಿ ಸಿಗುವ ಖುಷಿಗೆ ಇವತ್ತಿಗೂ ಯಾವ ಸಾಟಿಯಿಲ್ಲ!

ಕೃಷಿ ಪರಿಸರಗಳು ಹೆಚ್ಚು ಆಪ್ತವಾಗಲು, ಅರ್ಥವಾಗಲು ಹಿರಿಯರ ಕೊಡುಗೆಗಳು ಮುಖ್ಯ. ಮಕ್ಕಳು ಅಂತ ಮುದ್ದು ಮಾಡುವ ಜಾಯಮಾನವಿಲ್ಲ, ದುಡಿದು ತಿನ್ನಬೇಕು ಎಂಬುದು ಸಾರ್ವತ್ರಿಕ ಗಟ್ಟಿ ನಿರ್ಧಾರ. ಅಡಿಕೆ ಹೆಕ್ಕುವುದು, ಏಲಕ್ಕಿ ಕೊಯ್ಯುವದು, ತೋಟದಲ್ಲಿ ನೆಲಕ್ಕೆ ಬಿದ್ದಕಾಳು ಮೆಣಸು ಆರಿಸುವದು, ಬಾಳೆಗೊನೆ ತಿನ್ನಲು ಬಂದ ಮಂಗಗಳನ್ನು ಓಡಿಸುವದು, ಭತ್ತದ ಗದ್ದೆಗೆ ಬೀಜ ಬಿತ್ತನೆ ಪೂರ್ವದಲ್ಲಿ ಉಳಿಮೆ ಮಣ್ಣಿನಲ್ಲಿದ್ದ ಹುಲ್ಲಿನ ಬುಡ ಹೆಕ್ಕಿ ರಾಶಿ ಹಾಕುವದು, ಬೀಜ ಬಿತ್ತನೆ ಬಳಿಕ ಪಕ್ಷಿಗಳ ಹಿಂಡು ಗದ್ದೆಗೆ ಬಾರದಂತೆ ಮುಂಜಾನೆ, ಸಾಯಂಕಾಲ ಡಬ್ಬಿ ಬಡಿಯುತ್ತ ಪಕ್ಷಿಗಳನ್ನು ದೂರ ಓಡಿಸುವುದು, ಕಬ್ಬು ನಾಟಿ ಸಂದರ್ಭದಲ್ಲಿ ಮೊಳಕೆ ಬಂದ ಬೀಜದ ಹೊರಸಿಪ್ಪೆ ತೆಗೆಯುವುದು, ಮಳೆಗಾಲದಲ್ಲಿ ಬೇಣದ ಹುಲ್ಲು ಮೇಯಲು ಜಾನುವಾರು ಬಾರದಂತೆ ನಿಗಾ ವಹಿಸುವುದೆಲ್ಲ ನಮ್ಮ ಹೊಣೆ. ಏಲಕ್ಕಿ ಗಿಡದ ಬುಡಕ್ಕೆ ನೆಲ್ಲಿ ಸೊಪ್ಪು ಮುಚ್ಚುವುದು, ಜಾನುವಾರು ಮೇವಿಗೆ ಅಡಿಕೆ ಹೊಂಬಾಳೆ ಸಂಗ್ರಹಿಸುವುದು ಹೀಗೆ ಕೆಲಸಗಳು ಕೈತುಂಬ. ಹೇಳಿದ ಕೆಲಸ ಪೂರೈಸಿದ ಬಳಿಕ ಮೇಲುಸ್ತುವಾರಿ ನಡೆಸುವ ಹಿರಿಯರು ನಮ್ಮ ಕಾರ್ಯವೈಖರಿಗೆ ಸ್ಥಳದಲ್ಲಿ ಸರ್ಟಿಫಿಕೇಟ್ ನೀಡುತ್ತಿದ್ದರು. ಸರಿಯಾಗಿ ಕೆಲಸ ಮಾಡಿದಾಗ ಬೆನ್ನು ತಟ್ಟುವದು, ತಪ್ಪಿದಾಗ ಬೆನ್ನಿಗೆ ಗುದ್ದು ಹಾಕುವದು ರೂಢಿ. ಅಳುವ/ನಗುವ ಯಾವುದೇ ಪ್ರಸಂಗಕ್ಕೂ ಮನಸ್ಸು ಅಣಿಯಾಗಿರುತ್ತಿತ್ತು. ಕೃಷಿ ಕಷ್ಟದ ಅನುಭವವಾಗುತ್ತಿತ್ತು. ನೆಲದ ಭಾಷೆ ನಿಧಾನಕ್ಕೆ ಅರ್ಥವಾಗುತ್ತಿತ್ತು. ಕೈಕಾಲು ಕೆಸರಾಗದೇ, ಮೈಯೆಲ್ಲಾ ಮಣ್ಣಾಗದೇ ಒಂದೇ ಒಂದು ರಜಾ ದಿನವೂ ಕೈ ಜಾರಿದ್ದು ನೆನಪಿಗೆ ಬರುವದಿಲ್ಲ. ಕಾಲೇಜಿನ ಕ್ಲಾಸ್‌ಮೇಟುಗಳ ಹಲವರ ಹೆಸರು ಕಾಲದ ಮಸುಕಿನಲ್ಲಿ ಮರೆತಿರಬಹುದು, ಆದರೆ ನಾಲ್ಕನೇ ಕ್ಲಾಸು ಓದುವ ಕಾಲಕ್ಕೆ ನಮ್ಮ ದೊಡ್ಡಿಯಲ್ಲಿದ್ದ 'ಜ್ಯೋತಿ, ಸೋಮಿನಿ,.....' ಹೀಗೆ ದನಕರುಗಳ ಬಹುತೇಕ ಹೆಸರು ಈಗಲೂ ನೆನಪಿವೆ. ಮನುಷ್ಯರ ಜತೆ ಮಾತಾಡುವ ಹಾಗೇ ತಾಸುಗಟ್ಟಲೆ ಎಳೆಗರುವಿನ ಜತೆ ಸಹಜವಾಗಿ ಮಾತಾಡುತ್ತಿದ್ದೆವು! ಸಗಣಿಯ ವಾಸನೆ, ಚಿಗುಟಿನ ಕಡಿತದ  ಮಧ್ಯೆ ಬಾಲ್ಯದ ಸೆಳೆತಗಳು ಕೃಷಿ ಪರಿಸರದ ಸುತ್ತ ಹೆಣೆದ ವಿಶೇಷಗಳು.

ಪುಟ್ಟ ಮಕ್ಕಳಾದ ನಾವು ನೆಂಟರ ಮನೆಗೆ ಹೋದರೆ ವಾರ ಗಟ್ಟಲೆ ಠಿಕಾಣಿ. ಅಲ್ಲಿನ ಹಿರಿಯರು ನಮ್ಮಲ್ಲಿ ಕೃಷಿ ಸುದ್ದಿ ಕೇಳುತ್ತಿದ್ದರು. ಎಮ್ಮೆ ಕರು ಹಾಕಿದ್ದು, ಅಡಿಕೆ ಕೊಯ್ಲು ನಡೆದದ್ದು, ಹೊಸ ಎತ್ತು ಖರೀದಿಸಿದ್ದು, ಎತ್ತಿನಗಾಡಿ ದುರಸ್ತಿ ಮಾಡಿಸಿ ಶಿವಣೆ ಮರದ ಹೊಸ ನೊಗ ಮಾಡಿಸಿದ್ದನ್ನೂ ಕೃಷಿ ವಕ್ತಾರರಂತೆ ಚೋಟುದ್ದದ ಮಕ್ಕಳು ಹೇಳುತ್ತಿದ್ದೆವು. ಕೂಲಿ ಕೆಲಸ ಮಾಡುವವರ ಹೆಸರು, ತೆಂಗಿನ ಮರದ ಬುಡಕ್ಕೆ ಕಾಸರಕ ಮರದ ಸೊಪ್ಪು ತಂದವರ ವಿವರಗಳು ನಮಗೆ ತಿಳಿದಿದ್ದವು. ಒಬ್ಬ ಆಳು ದಿನಕ್ಕೆ ಎಷ್ಟು ಹೊರೆ ಸೊಪ್ಪು ಕಡಿದು ದೊಡ್ಡಿಗೆ ತರಬಹುದು ಎಂಬ ಕಲ್ಪನೆಯಿತ್ತು. ಸೊಪ್ಪುಗತ್ತಿ, ಸದೆಗತ್ತಿ, ಹಲ್ಲುಗತ್ತಿ, ಕೈಕೊಡಲಿ, ಧಮಾಸು, ನೇಗಿಲು, ಕೊರಡು, ತಳೆ, ಏಣಿ, ಕೊಕ್ಕೆ ಹೀಗೆ ನೂರಾರು ಕೃಷಿ ಉಪಕರಣ ಜ್ಞಾನವಂತೂ ತೀರ ಸಹಜ ಸಂಗತಿ. ಒಮ್ಮೆ ನಮ್ಮ ಮನೆಗೆ ರಜೆಯಲ್ಲಿ ಬಂದಿದ್ದ ೧೧ರ ಹುಡುಗ ಎಳೆಗರು ದಿನವಿಡೀ ತೆಳ್ಳನೆಯ ಸಗಣಿ ಹಾಕುವದು ನೋಡಿ ಔಷಧವಾಗಿ ಕಾಡಿನ ಬಿಕ್ಕೆ ಸೊಪ್ಪು ತಿನ್ನಿಸಲು ಹಿರಿಯರಿಗೆ ಸಲಹೆ ಮಾಡಿದ್ದು ಈಗಲೂ ನೆನಪಾಗುತ್ತದೆ!. ಹೆಗ್ಗೆ, ಮುಳ್ಳರೆ, ರತ್ನಚಿವುಡ, ಹಕ್ಕಲಸಾಲೆ ಎಂದು ಊಟಕ್ಕೆ ಕುಳಿತಾಗ ಅನ್ನದ ಅರಿವು ಹಂಚುವ ರುಚಿ ಪ್ರಾತ್ಯಕ್ಷಿಕೆ ಹಿರಿಯರ ಸಾರಥ್ಯದಲ್ಲಿ  ನಡೆಯುತ್ತಿತ್ತು. ಯಾವ ಅಕ್ಕಿಯ ರುಚಿ ಹೇಗೆಂಬುದು ನಾಲಗೆಗೆ ನೆನಪಿತ್ತು. ಶಾಲೆ/ನೆಂಟರ ಮನೆಗೆ ಹೋದಾಗ ಅಲ್ಲಿನ ರೈತರಲ್ಲಿ ಬೀಜದ ಭತ್ತಕ್ಕೆ ಬೇಡಿಕೆ ಒಪ್ಪಿಸುವುದು, ಹಳ್ಳಿ ಔಷಧಿ ತರುವುದು ಮಕ್ಕಳ ಹೆಗಲಿಗೂ ಬರುತ್ತಿತ್ತು. ಶಾಲೆ ಪಾಠದಂತೆ ಇಂತಹ ಮನೆ ಪಾಠವನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದೆವು.

ಕೃಷಿ ಚಟುವಟಿಕೆಗಳ ನಡುವೆ ತಲ್ಲೀನವಾದ ನಮಗೆ ಓದುವುದು, ಬರೆಯುವುದು, ಮೇಷ್ಟ್ರ ಪ್ರಶ್ನೆಗೆ ಉತ್ತರ ಗೊತ್ತಿಲ್ಲದೇ ಬೆತ್ತದ ರುಚಿ ನೋಡುವ ಪ್ರಮೇಯ ಎದುರಾಗುತ್ತಿತ್ತು. ಆಗ ಶಾಲೆ, ಕೃಷಿ ಆಯ್ಕೆಯಲ್ಲಿ ನೆಲದ ಪ್ರೀತಿಯೇ ಕಾಡುತ್ತಿತ್ತು. ನೆನಪಿಗೆ ಸಿಕ್ಕ ಕೃಷಿ ಬಾಲ್ಯಗಳನ್ನು ಪರಿಸರದ ಪರಿವರ್ತನೆಯ ವರಾತಕ್ಕೆ ಈಗ ಹೆಕ್ಕಿ ಹೇಳುವ ಸಂದರ್ಭ ಬಂದಿದೆ. ಇಂದಿನ ಶಿಕ್ಷಣ ಪ್ರಯೋಗದಲ್ಲಿ ಮಕ್ಕಳಿಗೆ ಅಮೇರಿಕಾ, ಜಪಾನ್, ಹಿಮಾಲಯ, ಪೆಂಗ್ವಿನ್, ವಿದ್ಯುತ್, ಮೋಟಾರು ಮುಂತಾದ ನೂರಾರು ಸಂಗತಿಗಳು ತಿಳಿದಿವೆ. ಅದೇ ಊರು, ಅದೇ ಶಾಲೆಯಲ್ಲಿ ಓದಿದ ನಮಗೂ, ಈ ಕಾಲದ ಮಕ್ಕಳ ಕೃಷಿ- ಪರಿಸರ ಜ್ಞಾನಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಹೈಟೆಕ್ ಯುಗದಲ್ಲಿ ವಿಶ್ವದ ಎಲ್ಲೆಡೆಯಿಂದ ಜ್ಞಾನ ಹರಿದು ಬರಬೇಕು, ಮಾಹಿತಿಯುಳ್ಳವರು ಮಹದೇವ ಎನ್ನುವುದು ಇವತ್ತಿನ ಬೀಜ ಮಂತ್ರ. ಈಗ ಹತ್ತು ವರ್ಷದ ಹಿಂದೆ ದೀಪಾವಳಿಗೆ ಭತ್ತದ ಕದಿರನ್ನು ಪೂಜೆಗೆ ತರುತ್ತಿದ್ದವರಲ್ಲಿ 'ಅದೇನು ?' ಎಂದು ನಮ್ಮೂರಿನ ಹೈಸ್ಕೂಲು ಹುಡುಗ ಕುತೂಹಲದಲ್ಲಿ ಕೇಳಿದ್ದ! ಹತ್ತು ನಿಮಿಷ ನೋಡಿ ಹೇಳುವ ಸಮಯ ಕೊಟ್ಟರೂ ಆತ ಮುಖಮುಖ ನೋಡಿದನೇ ಹೊರತೂ ಕೊನೆಗೂ ಅವನಿಗೆ ಭತ್ತದ ಹಸುರು ಕದಿರು ಗುರುತಿಸಲಾಗಲಿಲ್ಲ ! ಆ ಹುಡುಗನ ಇಡೀ ಬಾಲ್ಯವನ್ನು ನಗರ ಹಾಗೂ ಟಿ.ವಿ. ಚಾನಲ್ ಕಸಿದುಕೊಂಡಿದ್ದನ್ನು ಹತ್ತಿರದಿಂದ ಗಮನಿಸಿದ್ದೇನೆ. ಅಂಗಳ ಇಳಿಯದೇ ಆಗಸಕ್ಕೆ ನೆಗೆದ ಪರಿಣಾಮ ಅದು.

ಉಣ್ಣುವ ಅನ್ನದ ಮೂಲ ಕದಿರೇ ಗೊತ್ತಾಗದಂತೆ ಸಮಾಜ ತಲೆಮಾರನ್ನು ಪೋಷಿಸುತ್ತಿದೆ. ಈ ಕಾಲಕ್ಕೆ ಇದು ಅಚ್ಚರಿಯಾಗಿ ಕಾಣುತ್ತಿಲ್ಲ, ಮಣ್ಣಿನ ಕತೆ ಅರಿಯದ ದಂಡೇ ಹಳ್ಳಿಯಲ್ಲಿದೆ. ಮಕ್ಕಳಿಗೆ ನೋಟುಬುಕ್, ಬಸ್‌ಪಾಸ್, ಕ್ರಿಕೆಟ್, ಮೊಬೈಲ್, ಚಾಕಲೇಟ್, ಐಸ್‌ಕ್ರೀಮ್ ಅರಿವು ಹೆಚ್ಚುತ್ತ ಕೃಷಿ ಜ್ಞಾನದ ಬರ ಆರಂಭವಾಗಿದೆ. ಈಗ ಹಳ್ಳಿಗಳು ಇದ್ದಕ್ಕಿದ್ದಂತೆ ಖಾಲಿ ಖಾಲಿಯಾಗುತ್ತಿವೆ. ಇದರ ಖಾಸಾ ಕಾರಣಗಳಲ್ಲಿ ನಮ್ಮ ವೈಫಲ್ಯವೂ ಇದೆ. ಮಕ್ಕಳನ್ನು ಶಾಲೆಯಲ್ಲಿ ಬೆಳೆಸಿ, ದೇಶವಿದೇಶಗಳ ಹೆಮ್ಮರವಾಗಿಸಲು ಆಸೆ ಪಡುವವರು ನೆಲದ ಋಣ ತೀರಿಸುವ ಹೊಣೆಗೆ ಭೂಮಿಯಲ್ಲೂ ಬೇರು ಬಿಡಲು ಎಚ್ಚರವಹಿಸಬೇಕು.

# ಕೋರ್ಟ್ ಕಲಾಪಕ್ಕೆ ಹೊಲದ ಕಾಳುಗಳು!

‘ಊರಾಗ ಹೊಲ ಊಳಾಕ.... ಆಳು ಸಿಗಂಗಿಲ್ರೀ.... ಕೋರ್ಟ್ ಕೇಸ್ ನೆಡಸಾಕ ಯಜಮಾನ್ರಾಗಿ ನಾವೇ ಬರ್ಬೇಕಲ್ರೀ!‘ ಕಟಕಟೆಯಲ್ಲಿ ನಿಂತವರಿಗೆ ಸಂದಿಗ್ಧವಿದೆ. ”ಹೊಲಕ್ಕೆ ಹೋಗೋದ್ಕ್ಕಿಂತ ಬರ್ತಾ ಬರ್ತಾ ಕೋರ್ಟ್ ತಿರುಗೋದು ಜಾಸ್ತಿ ಆತ್ರಿ!‘ ೧೫ ವರ್ಷಗಳಿಂದ ಅಲೆದಾಡಿದ ಹಾನಗಲ್ ರೈತನಿಗೆ ಜ್ಞಾನೋದಯವಾಗಿದೆ. ಆದರೆ ಕೇಸ್ ಬಿಡಲು ಮನಸ್ಸಿಲ್ಲ! ನ್ಯಾಯದ ನಿರೀಕ್ಷೆ, ಗೆದ್ದೇ ಗೆಲ್ಲಬೇಕೆಂಬ ಛಲವಿದೆ. ವಕೀಲರ ವಿಶ್ವಾಸ  ಮತ್ತೆ ಮತ್ತೆ ವಾಯಿದೆಗೆ ಎಳೆಯುತ್ತಿದೆ. ಮಕ್ಕಳ ಶಿಕ್ಷಣ, ಹಿರಿಮಗಳ ಮದುವೆ ಕೂಡಾ ಮರೆತು ನ್ಯಾಯದ ಬಾಗಿಲಲ್ಲಿ ವೃದ್ಧರಾದವರಿದ್ದಾರೆ!

‘ಬಯಲುಸೀಮೆಗೆ ಮಳೆ ಬಿದ್ದರೆ ಮುದಿ ಎತ್ತಿಗೂ ಮಲಗಲು ಪುರುಸೊತ್ತು ಸಿಗೋದಿಲ್ಲ‘ ಹದ ಮಳೆಗೆ ಕಾಯುವ ಇಲ್ಲಿನ ಕೃಷಿಕರ ಶ್ರಮದ ಎಚ್ಚರ ಅದು. ಬಿದ್ದ ಮಳೆಗೆ ಹೊಲಕ್ಕೆ ನೇಗಿಲು ಇಳಿಸಬೇಕು, ಇಲ್ಲದಿದ್ದರೆ ಕೃಷಿಯಲ್ಲಿ ಏಳುವದು ಕಷ್ಟ. ನೆಲ ಸತ್ಯ ಅರಿತವರು ಹೊಲದ ತುಂಬ ನೇಗಿಲ ಸೈನ್ಯ ಜಮಾಯಿಸುತ್ತಾರೆ. ಉತ್ಸಾಹದಲ್ಲಿ ಉಳುಮೆ ಮಾಡುತ್ತಾರೆ. ಭೂಮಿಗೆ ಬೆಳೆಯ ಕನಸು ಬಿತ್ತುತ್ತಾರೆ. ಇಂತಹ ಹದ ಮಳೆಯ ಕಾಲಕ್ಕೆ ಹಾವೇರಿಗೆ ಹೋಗಿದ್ದೆ. ಹೊಲದ ಚಿತ್ರ ಗಮನಿಸಿದ ಬಳಿಕ ಅಲ್ಲಿನ ನ್ಯಾಯಾಲಯ ಪ್ರಾಂಗಣದಲ್ಲೂ  ಅಂತಹುದೇ ದ್ರಶ್ಯ. ಕಿಕ್ಕಿರಿದ ರೈತರನ್ನು ಕಂಡರೆ ‘ಹದ ಮಳೆ ಮರೆತು ಹೊಲವೆಲ್ಲ ಕೋರ್ಟಗೆ ಬಂದಿದೆಯಾ?‘ ಹೌಹಾರುವಂತೆ ನ್ಯಾಯ ಸಂತೆಯಲ್ಲಿ ಜನ ಜನ. ಕೆಲಸದ ತರಾತುರಿ ಬದಿಗೊತ್ತಿ ಅವರೆಲ್ಲ ಕೋರ್ಟ್ ಕರೆಗೆ ಓಡಿ ಬಂದವರು. ನಿತ್ಯವೂ ಇದೇ ಕತೆ. ಜಮೀನು ಒತ್ತುವರಿ, ಭೂಮಿ ಹಿಸ್ಸೆ, ಹೊಲದ ರಸ್ತೆ ಅತಿಕ್ರಮಣ, ನೀರು ಕಾಲುವೆ ಕಣ್ಮರೆ, ಕೆರೆ ನೀರಿನ ಹಕ್ಕು, ಹಿತ್ತಲಿನ ಹುಣಸೆಮರದ ಜಾಗ ಮಾರಾಟಕ್ಕೆ ತಡೆಯಾಜ್ಞೆ.... ಹೀಗೆ ಒಡಹುಟ್ಟಿದವರು, ನೆರೆಹೊರೆಯವರ ಮಧ್ಯೆ ಉದ್ಭವಿಸಿದ ನೂರಾರು ಕಾರಣಗಳು ಕಾದಾಟಕ್ಕೆ ಸೆಳೆದಿವೆ. ರೊಕ್ಕದ ತಾಕತ್ತಿಗಿಂತ ಜಗಳ ಗೆಲ್ಲುವ ಜಿದ್ದು ಹಲವರನ್ನು ಹಿಡಿದು ನಿಲ್ಲಿಸಿದೆ.

‘ಊರಾಗ ಹೊಲ ಊಳಾಕ.... ಆಳು ಸಿಗಂಗಿಲ್ರೀ.... ಕೋರ್ಟ್ ಕೇಸ್ ನೆಡಸಾಕ ಯಜಮಾನ್ರಾಗಿ ನಾವೇ ಬರ್ಬೇಕಲ್ರೀ!‘ ಕಟಕಟೆಯಲ್ಲಿ ನಿಂತವರಿಗೆ ಸಂದಿಗ್ಧವಿದೆ. ”ಹೊಲಕ್ಕೆ ಹೋಗೋದ್ಕ್ಕಿಂತ ಬರ್ತಾ ಬರ್ತಾ ಕೋರ್ಟ್ ತಿರುಗೋದು ಜಾಸ್ತಿ ಆತ್ರಿ !‘ ೧೫ ವರ್ಷಗಳಿಂದ ಅಲೆದಾಡಿದ ಹಾನಗಲ್ ರೈತನಿಗೆ ಜ್ಞಾನೋದಯವಾಗಿದೆ. ಆದರೆ ಕೇಸ್ ಬಿಡಲು ಮನಸ್ಸಿಲ್ಲ! ನ್ಯಾಯದ ನಿರೀಕ್ಷೆ, ಗೆದ್ದೇ ಗೆಲ್ಲಬೇಕೆಂಬ ಛಲವಿದೆ. ವಕೀಲರ ವಿಶ್ವಾಸ  ಮತ್ತೆ ಮತ್ತೆ ವಾಯಿದೆಗೆ ಎಳೆಯುತ್ತಿದೆ. ಮಕ್ಕಳ ಶಿಕ್ಷಣ, ಹಿರಿಮಗಳ ಮದುವೆ ಕೂಡಾ ಮರೆತು ನ್ಯಾಯದ ಬಾಗಿಲಲ್ಲಿ ವೃದ್ಧರಾದವರಿದ್ದಾರೆ! ಕವಳದ ಸಂಚಿಯಲ್ಲಿ ಎಂಟು ಮಡಿಕೆ ಮಾಡಿಟ್ಟ ನೋಟು ತಿಕ್ಕುತ್ತ ದೊಡ್ಡ ರುಮಾಲದ ಹಿರಿಯರು ವಕೀಲರ ಫೀ ನೀಡುವ ಚಿತ್ರಗಳಂತೂ ಪ್ರವಾಹ, ಬರಕ್ಕಿಂತ ಮಿಗಿಲಾದ ಸಂಕಟ ಹುಟ್ಟಿಸುತ್ತಿದೆ. ನ್ಯಾಯದ ಬೆಲೆ ದುಬಾರಿಯಾಗಿದೆ, ಕೋರ್ಟ್ ಕೇಸ್ ಇಲ್ಲದಿದ್ದರೆ ಬಿತ್ತನೆ ಬೀಜ ಖರೀದಿ, ಮಕ್ಕಳ ಬಟ್ಟೆ, ಮುರಿದು ಬೀಳುವ ಮನೆ ದುರಸ್ತಿ ಮಾಡಬಹುದಿತ್ತು. ಒಂದು ಕ್ಷಣ ಯೋಚನೆ ಅಷ್ಟೆ! ಒಮ್ಮೆ ಕಾದಾಟ ಶುರುವಾದರೆ ಮುಕ್ತಾಯವಿಲ್ಲ, ಗಾಣಕ್ಕೆ ಕೈಕೊಟ್ಟಂತೆ ಪರಿಸ್ಥಿತಿ. ಹೆಚ್ಚಿನ ಪ್ರಕರಣಗಳಲ್ಲಿ ಮಧ್ಯವರ್ತಿ, ಫೈನಾನ್ಸ್ ಹಾಗೂ ವಕೀಲರು ಗೆಲ್ಲುತ್ತಾರೆ. ಹೋರಾಡುವ ಜಿದ್ದಿನಲ್ಲಿ ಮನದ ನೆಮ್ಮದಿ ಕಳಕೊಂಡು ಹೊಲದ ಕಾಳುಗಳುಗಳನ್ನು ಕಲಾಪಕ್ಕೆ ಸುರಿಯುತ್ತಾರೆ. ನ್ಯಾಯಾಲಯದಲ್ಲಿ ರಾಶಿ ಬಿದ್ದ ಪ್ರಕರಣಗಳು ರೈತರು ಮನಸ್ಸು ಮಾಡಿದರೆ ಊರಲ್ಲಿ ಬಗೆಹರಿಯುವಂತವು. ಒಡೆದ ಮನಸ್ಸು ಪೋಲಿಸ್ ಠಾಣ್ಯಕ್ಕೆ ಎಳೆಯಿತು, ಕೋರ್ಟಗೆ ಅಂಟಿದ ಬಳಿಕ ಹಿಂದಿರುಗುವ ದಾರಿ ಹಲವರಿಗೆ ಸಿಗಲಿಲ್ಲ. ಇದು ಪರಿಸ್ಥಿತಿ.

ಉಳುಮೆ, ಬಿತ್ತನೆ, ಗಿಡ ಬೆಳೆಸುವಂತಹ ರಚನಾತ್ಮಕ ಕೆಲಸಗಳಲ್ಲಿ ಬದುಕಿದವರು ಭೂ  ವ್ಯಾಜ್ಯಗಳಲ್ಲಿ ಹೆಚ್ಚಿನ ಸಮಯ ಕಳೆದಿದ್ದಾರೆ. ೧೯೮೦ರ ನಂತರದಲ್ಲಿ ಕೇಸಿನ ಕ್ರಾಂತಿ ಹೆಚ್ಚಿದೆ. ‘ವಾಯಿದೆ, ತಡೆಯಾಜ್ಞೆ, ಬಂಧನ, ವಾರೆಂಟ್, ಜಜ್‌ಮೆಂಟ್‘ ಓದು ಬಾರದ ಕೃಷಿಕರ ಕಲಿತ ಪದಗಳಾಗಿವೆ. ಗ್ರಾಮ ನ್ಯಯಾಲಯ, ಅರಳಿಕಟ್ಟೆ ಪಂಚಾಯಿತಿ, ಊರ ಪಟೇಲರ ನೇತೃತ್ವದಲ್ಲಿ ಖುಲ್ಲಾ ಆಗುತ್ತಿದ್ದ ಪ್ರಕರಣಗಳೆಲ್ಲ ನ್ಯಾಯಾಲಯದಲ್ಲಿ ಜಮೆಯಾಗಿವೆ. ವಿಳಂಬ ನ್ಯಾಯದ ವ್ಯವಸ್ಥೆ ರೈತರ ವಿಳಾಸಗಳನ್ನು  ಕೋರ್ಟ್‌ಗೆ ಬದಲಿಸಿದೆ. ತಂತ್ರ, ಪ್ರತಿತಂತ್ರ, ಮೇಲ್ಮನವಿ, ಹೈಕೋರ್ಟ್ ಎಂದು ಹನುಮನ ಬಾಲದಂತೆ ಬೆಳೆಯುತ್ತ ಹದ ಮಳೆಯಲ್ಲೂ ರೈತರಿಗೆ ಹೊಲ ಮರೆಯುವ ಕಾಠಿಣ್ಯ ಸಿದ್ದಿಸಿದೆ!  ಕೂಡಿ ಬಾಳುವದಕ್ಕಿಂತ ಕಾದಾಡುವ

ಮನಸ್ಸು ಹೆಚ್ಚಿದೆ.

'ಅವರು ವಕೀಲರ ಹೆಂಡ್ತಿಗೆ ಪವನ್ ಸರ ಮಾಡ್ಸಾಕ ಹತ್ಯಾರ' ಮಾತು ಎಲ್ಲರಿಗೂ ಅರ್ಥವಾಗುತ್ತದೆ. ರೈತರ ದುಡ್ಡಿನಲ್ಲಿ ವಕೀಲರು ಮನೆ ಕಟ್ಟಿಕೊಳ್ಳುತ್ತಾರೆಂದು ವ್ಯಾಜ್ಯದ ಬಗೆಗೆ ಹರಟೆ ಒಡೆಯುವಾಗ ಮಾತಾಡುತ್ತಾರೆ. ಆದರೆ ಸಂದರ್ಭ ಬಂದರೆ ಕೋರ್ಟ ಕೇಸಿಗಾಗಿ ಮಾಗಲ್ಯಸರ ಅಡವಿಡಲೂ ಹಿಂಜರಿಯದ ಭೂಪರಿದ್ದಾರೆ! ಒಂದೆರಡು ಗುಂಟೆ ನೆಲಕ್ಕೆ ಲಕ್ಷಾಂತರ ಕಳೆದಿದ್ದಾರೆ... ಗಳಿಸುವ ಛಲದಲ್ಲಿ ಹಣ ಕೈಜಾರುತ್ತಿದೆ. ಸಣ್ಣಪುಟ್ಟ ವಿಷಯಕ್ಕೂ 'ಕೋರ್ಟ್‌ಗೆ ಹೋಗಬೇಕು, ಕೇಸು ಹಾಕಬೇಕು, ನೋಟಿಸ್ ಕೊಡಬೇಕು' ಮನಸ್ಥಿತಿ ಬೆಳೆದಿದೆ. ಕೃಷಿ ಉತ್ಪಾದನೆ ಹೆಚ್ಚಳ, ಟ್ರ್ಯಾಕ್ಟರ್ ಖರೀದಿ, ಕೆರೆ ನಿರ್ಮಾಣ, ಹೊಸ ಕೃಷಿ ಬಗೆಗೆ ಕನಿಷ್ಠ ಸಮಯ ನೀಡಲು ಪುರುಸೊತ್ತಿಲ್ಲದವರು ನಿತ್ಯ ಕೋರ್ಟ್ ಕ್ಯಾಂಟೀನ್‌ಗಳಲ್ಲಿ ವಕೀಲರಿಗೆ ಚಹ ಕುಡಿಸುತ್ತಾರೆ, ಮುಂದಿನ ಜಗಳಕ್ಕೆ ಬೆಳ್ಳಂಬೆಳಗ್ಗೆ ಕತ್ತಿ ಮಸೆಯುತ್ತಾರೆ.

ಕೋರ್ಟ್ ಜಗಳಗಳು ಹೇಗಿರುತ್ತವೆಂಬುದಕ್ಕೆ ಉತ್ತರ ಕನ್ನಡದ ಸಿದ್ದಾಪುರ ಹಳ್ಳಿಯಲ್ಲೊಂದು ಸ್ವಾರಸ್ಯಕರ ಉದಾಹರಣೆ ಇದೆ. ಸಹೋದರರಿಬ್ಬರು ಕಳೆದ ಸುಮಾರು ೨೫ ವರ್ಷಗಳಿಂದ ಶಿರಸಿ ನ್ಯಾಯಾಲಯಕ್ಕೆ ಬರುತ್ತಿದ್ದಾರೆ. ೬೦-೬೫ರ ಹರೆಯದ ಈ ವ್ಯಕ್ತಿಗಳದು ಅಕ್ಕಪಕ್ಕದ ಮನೆ. ವಾಯಿದೆ ದಿನ ಬೆಳಿಗ್ಗೆ ಮನೆಯಿಂದ ಜತೆಯಾಗಿ ಹೊರಡುತ್ತಾರೆ. ಇಬ್ಬರೂ ಸೇರಿ ಬಸ್ಸೇರಿದರೆಂದರೆ ಅಂದು ಕೋರ್ಟ್‌ಗೆ ಹೋಗುತ್ತಾರೆಂಬುದು ಪುಟ್ಟ ಮಕ್ಕಳಿಗೂ ತಿಳಿದಿದೆ. ಶಿರಸಿ ತಲುಪಿದವರು ತಮ್ಮ ತಮ್ಮ ವಕೀಲರ ಕಚೇರಿಗೆ ಹೋಗುತ್ತಾರೆ, ನ್ಯಾಯ ಕಲಾಪಗಳಲ್ಲಿ ಭಾಗವಹಿಸಿ ವಕೀಲರ ಸಲಹೆ ಕೇಳುತ್ತಾರೆ. ಮಧ್ಯಾನ್ಹ ಇಬ್ಬರೂ ಸೇರಿ ಅಲ್ಲಿಯೇ ಖಾನಾವಳಿ ಊಟ. ಒಮ್ಮೆ ಅಣ್ಣ ಬಿಲ್ಲು ನೀಡಿದರೆ ಮತ್ತೊಮ್ಮೆ ತಮ್ಮ ನೀಡುತ್ತಾನೆ. ಸಾಯಂಕಾಲ ಕಿರಾಣಿ ಸಾಮಗ್ರಿ ಖರೀದಿಸಿ ಬಸ್ಸಿನಲ್ಲಿ ಹರಟೆ ಹೊಡೆಯುತ್ತ ಮನೆಗೆ ಮರಳುತ್ತಾರೆ. ಇವರು ಯಾವ ಕೇಸಿನ ಸಂಬಂಧ ಕೋರ್ಟ್ ತಿರುಗುತ್ತಾರೆ ? ವಿಚಿತ್ರವೆಂದರೆ ಸ್ವತಃ ಇವರಿಬ್ಬರ ನಡುವೆ ಜಮೀನು ವ್ಯಾಜ್ಯವಿದೆ! ಅಣ್ಣ ತನಗೆ ಸರಿಯಾಗಿ ಭೂಮಿ ನೀಡಲಿಲ್ಲ ಎಂದು ತಮ್ಮ ತಕರಾರು ತೆಗೆದು ಕೋರ್ಟ್ ಮೆಟ್ಟಿಲೇರಿದ್ದಾನೆ. ತಮ್ಮ ತನ್ನ ಮನೆಯ ಜಾಗ ಅತಿಕ್ರಮಿಸಿದ್ದನೆಂದು ಅಣ್ಣ ಪ್ರತಿಯಾಗಿ ಕೇಸ್ ಹಾಕಿದ್ದಾನೆ. ಇವತ್ತಿಗೂ ಪ್ರಕರಣ ನಡೆದಿದೆ! ವಕೀಲರ ವಾದದಲ್ಲಿ ಮಾತ್ರ ಜಗಳವಿದೆ. ಒಬ್ಬೊಬ್ಬರೂ ಲಕ್ಷಾಂತರ ರೂಪಾಯಿ ನೀರು ಮಾಡಿದ್ದಾರೆ. 'ಜಗಳ ಇರುವದು ಕೋರ್ಟ್‌ನಲ್ಲಿ, ನಾವು ಮಾತ್ರ ಪ್ರೀತಿಯಲ್ಲಿ ಇದ್ದೇವೆ!' ಎನ್ನುತ್ತಾರೆ. ನಿತ್ಯ ಜಗಳ, ಬೈಗುಳ, ಹೊಡೆದಾಟ ಯಾವುದೂ ಇಲ್ಲದೇ ತಣ್ಣಗೆ ಪ್ರಕರಣ ಸಾಗಿದೆ. ಇಷ್ಟೆಲ್ಲ ಸ್ನೇಹವಿರುವ ನೀವು ಕೋರ್ಟ್‌ಗೆ ಅಲೆಯದೇ ಮನೆಯಲ್ಲಿ ಇಬ್ಬರೇ ಕೂತು ಸಮಸ್ಯೆ ಬಗೆಹರಿಸಿಕೊಳ್ಳಬಹುದಿತ್ತಲ್ಲವೇ ? ಒಮ್ಮೆ ನಾನೇ ಕೇಳಿದ್ದೆ. 'ಕೋರ್ಟ್‌ಗೆ ಹೋಗಿದ್ದೇವೆ, ಅದು ಏನು ಹೇಳುತ್ತದೆಯೋ ಕೇಳಬೇಕು!' ಇಬ್ಬರೂ ಒಟ್ಟಾಗಿ ಹೇಳಿದ ಉತ್ತರಕ್ಕೆ ದಂಗಾಗಬೇಕು. ಹತ್ತಿರವಿದ್ದವರ ಹೃದಯಕ್ಕೆ ಅರ್ಥವಾಗದ ನ್ಯಾಯವನ್ನು ಮತ್ತೆಲ್ಲಿ ಹುಡುಕಲು ಸಾಧ್ಯವಿದೆ ?. ಕೇಸು ಹಾಕುವದಕ್ಕೆ ಸೆಕ್ಷನ್‌ಗಳಿವೆ, ವಾದಕ್ಕೆ ವಕೀಲರಿದ್ದಾರೆಂದು ಹೆಜ್ಜೆ ಹೆಜ್ಜೆಗೂ ಕೋರ್ಟ್‌ಗೆ ಅಲೆಯುವ ಚಾಳಿಗೆ ಮಿತಿ ಬೇಡವೇ ?

# ರೈತ ಮಕ್ಕಳಿಗೆ ಹೆಜ್ಜೇನು ಪತ್ರ

ಕಾಡಿನ ದಟ್ಟಣೆ, ವೈವಿಧ್ಯ ಕಡಿಮೆಯಾದ ಈ ಘಳಿಗೆಯಲ್ಲಿ ಹತ್ತಿ ಹೂವುಗಳ ಪರಾಗ, ಪುಷ್ಪರಸದ ಭರ್ಜರಿ ಅಂಗಡಿಗೆ ಜೇನು ದೊಡ್ಡ ಗಿರಾಕಿ. ಹತ್ತಿಯ ಹತ್ತೆಂಟು ಕುತ್ತು ಬಿಡಿಸಿದರೆ ಮಾತ್ರ ಬೆಳೆ ಬಚಾವು. ಜಿಗಿನೊಣ, ಕಾಯಿಕೊರಕ, ಮುರುಟು ರೋಗ ಎಂದು ಪ್ರತಿ ಹಂತವೂ ರೋಗ ರಂಗಸ್ಥಳ. ಬೆಳೆ ಗೆಲ್ಲಲು ಇಲ್ಲಿ ಮಳೆ ಸ್ನಾನದ ಹಾಗೇ ರಾಸಾಯನಿಕಗಳ ಸಿಂಚನ. ಅವನ್ತ್, ಎಡ್‌ಮಿಟ್, ಎಂಡೋಸಲ್ಫಾನ್, ಸೂಪರ್ ಕಿಲ್ಲರ್, ಮೊನೊಸಿಲ್, ಎಂಡೋಸಿಲ್, ಪಿನಾಲ್‌ಪಾಸ್‌ಗಳೆಂಬ ಬಜಾರಿನ ಹೊಸಹೊಸ ಭರವಸೆ! ಅಲ್ಲಿ ನಮ್ಮ ಪುಟ್ಟ ಜೇನಿಗೆ ಸಾವಿನ ಅಸ್ತ್ರವಿದೆ.

ಬಟಾಬಯಲಿನ ಬಣ್ಣದ ಸ್ವರ್ಗದಂತೆ ಮುಂಡಗೋಡದ ಟಿಬೇಟಿಯನ್ ಕಾಲೋನಿಯ ಭವ್ಯ ನಿರ್ಮಾಣವಿದೆ. ಇಲ್ಲಿನ ಮಂದಿರದ ಗ್ರೈನೇಟ್ ಹಾಸಿನಲ್ಲಿ ಕಣ್ಣಾಡಿಸಿದರೆ ಈಗ ಹೆಜ್ಜೇನಿನ ಶವಯಾತ್ರೆ ಕಾಣುತ್ತದೆ. ಕಟ್ಟಡದ ಗೋಡೆ, ಪಟ್ಟಿಗಳಲ್ಲಿ ನೇತು ಬಿದ್ದ ಗೂಡುಗಳಿಂದ ಆಗಾಗ ದುಂಬಿ ಕೆಳಕ್ಕುದುರುತ್ತವೆ. ಕಸಗುಡಿಸಿ ಪೊರಕೆ ಇಡುವದರೊಳಗೆ ಮತ್ತಿಷ್ಟು ಜೇನು ಸಾವಿನ ಸಾಲು. ನೆಲಚಕ್ರದಂತೆ ತಿರುಗಿ ತಿರುಗಿ ಕಣ್ಣೆದುರು ಅಸುನೀಗುವ ಮುಂಚೆ ಇವು ನಮ್ಮ ಕೃಷಿ ಬೆಳೆಗೆ ನೀಡಿದ ಪರಾಗಸ್ಪರ್ಶದ ನೆರವಿನ ಲೆಕ್ಕ ನೆನಪಿಸುತ್ತವೆ.

ಪ್ರತಿವರ್ಷ ೪೦-೫೦ ಜೇನು ಗೂಡುಗಳು ಇಲ್ಲಿನ ಟಿಬೆಟ್ ನಿರಾಶ್ರಿತರ ಕಾಲೋನಿಗಳಲ್ಲಿ ಆಶ್ರಯ ಪಡೆಯುತ್ತವೆ. ಲಾಮಾಗಳ ಧ್ಯಾನಕ್ಕೆ ಸಾಥ್ ನೀಡುವಂತೆ ಹೆಜ್ಜೇನಿನ ಝೇಂಕಾರ ಓಂಕಾರದ ಪರಿಷ್ಕೃತ ಧ್ವನಿಯಂತೆ ಕೇಳುತ್ತದೆ. ಬಯಲು ಹೊಲಗಳ ಮಧ್ಯೆ ಎದ್ದ ಭವ್ಯ ಕಟ್ಟಡಗಳೆಂದರೆ ಕೃಷ್ಣ ಕುವರಿಯರಿಗೆ ಯಾಕೋ ಅಚ್ಚುಮೆಚ್ಚು. ಗಗನಚುಂಬಿ ಕಟ್ಟಡಗಳ ಛಾವಣಿ ಏರಿ ಸುತ್ತಲಿನ ಹೊಲಗಳತ್ತ ಒಮ್ಮೆ ಕಣ್ಣಾಡಿಸಬೇಕು. ಅರಶಿನಗೇರಿ, ಕೊಪ್ಪ, ಇಂದೂರು, ಉಗ್ಗನಕೇರಿ, ಬಸಾಪುರ, ಎರಬೈಲು ಮುಂತಾದ ಊರಿನ ಭೂಮಿ ಕಾಣುತ್ತವೆ.ಮಳೆ ಆಶ್ರಿತವಾಗಿ ಗೋವಿನ ಜೋಳ, ಜೋಳ, ಭತ್ತ, ಹತ್ತಿ ಬೆಳೆಗಳಿವೆ. ಅಲ್ಲೊಂದು ಇಲ್ಲೊಂದು ಮನೆಗಳ ಪಕ್ಕ ತೆಂಗಿನಮರ, ಕೆರೆಯಂಚಿನ ತಂಪಿನಲ್ಲಿ ಒಂದಿಷ್ಟು ಮುಟ್ಟಿದರೆ ಮುನಿ, ಕಳೆಗಿಡ, ಹುಲ್ಲು ಹೂವುಗಳು ಮಕರಂದ, ಪರಾಗ ಹಿಡಿದು ಈ ಜೇನಿನ ಸಖ್ಯ ಬೇಡುತ್ತವೆ. ಮೀಸೆಯಲ್ಲಿ ವಾಸನೆ ಗ್ರಹಿಸುವ ಐದು ಸಹಸ್ರಗ್ರಂಥಿಗಳು, ಸಂಯುಕ್ತ ನೇತ್ರಗಳಲ್ಲಿನ ಹತ್ತು ಸಹಸ್ರ ಸೂಕ್ಷ್ಮ ಮಸೂರ ವಿನ್ಯಾಸದ ಅದ್ಬುತ ಶಕ್ತಿಯ ಜೇನು ದುಂಬಿಯ ಪರಿಶ್ರಮ ನಮಗೆ ಗೊತ್ತೇ ಇದೆ. ಇವು ಸುಲಭಕ್ಕೆ ಹೂವು ಪತ್ತೆ ಹಚ್ಚಿ ೧೦-೨೦ ಕಿಲೋ ಮೀಟರ್ ಸುತ್ತಳತೆಯಲ್ಲಿ ಹಾರಾಡುತ್ತವೆ. ಹೊಲದ ಹೂವು ಜೇನಿನ ಸಂಗದಲ್ಲಿ ಫಲ ಭಾಗ್ಯ ಪಡೆಯುತ್ತವೆ.

ಮಳೆ ಕಡಿಮೆಯಾದಂತೆ ಇತ್ತೀಚಿನ ದಶಕಗಳಲ್ಲಿ ಹತ್ತಿಯ ಪ್ರೀತಿ ಹೆಚ್ಚಿದೆ. ವರ್ಷದಿಂದ ವರ್ಷಕ್ಕೆ ವೈಟ್ ಡೈಮಂಡ್ ಸಾಮ್ರಾಜ್ಯ ವ್ಯಾಪಿಸಿದೆ. ಕಾಡಿನ ದಟ್ಟಣೆ, ವೈವಿಧ್ಯ ಕಡಿಮೆಯಾದ ಈ ಘಳಿಗೆಯಲ್ಲಿ ಹತ್ತಿ ಹೂವುಗಳ ಪರಾಗ, ಪುಷ್ಪರಸದ ಬರ್ಜರಿ ಅಂಗಡಿಗೆ ಜೇನು ದೊಡ್ಡ ಗಿರಾಕಿ. ಹತ್ತಿಯ ಹತ್ತೆಂಟು ಕುತ್ತು ಬಿಡಿಸಿದರೆ ಮಾತ್ರ ಬೆಳೆ ಬಚಾವು. ಜಿಗಿನೊಣ, ಕಾಯಿಕೊರಕ, ಮುರುಟು ರೋಗ ಎಂದು ಪ್ರತಿ ಹಂತವೂ ರೋಗ ರಂಗಸ್ಥಳ. ಬೆಳೆ ಗೆಲ್ಲಲು ಇಲ್ಲಿ ಮಳೆ ಸ್ನಾನದ ಹಾಗೇ ರಾಸಾಯನಿಕಗಳ ಸಿಂಚನ. ಎಕರೆಗೆ ೨೦-೨೫ ಸಾವಿರ ಆದಾಯದ ಕನಸು ಕಂಡವರ ಕೈಯಲ್ಲಿ ರಾಸಾಯನಿಕ ಅಸ್ತ್ರ. ಅವನ್ತ್, ಎಡ್‌ಮಿಟ್, ಎಂಡೋಸಲ್ಫಾನ್, ಸೂಪರ್ ಕಿಲ್ಲರ್, ಮೊನೊಸಿಲ್, ಎಂಡೋಸಿಲ್, ಪಿನಾಲ್‌ಪಾಸ್‌ಗಳೆಂಬ ಬಜಾರಿನ ಹೊಸಹೊಸ ಬರವಸೆ ನಂಬಿದ ರಕ್ಕಸ ನೃತ್ಯ. ಹೊಲಗಳ ತುಂಬ ಕೀಟನಾಶಕ ಕೋಟೆ. ಹೊಲದ ಅಂಚಿನ ರಸ್ತೆಯಲ್ಲಿ ಪಯಣಿಸಿದರೂ ರಾಸಾಯನಿಕದ ಘಾಟು. ಶತ್ರು ಹುಟ್ಟಡಗಿಸುವ ಅಸ್ತ್ರ ಮಿತ್ರ ಕೀಟಗಳ ಬದುಕು ದುಸ್ತರಗೊಳಿಸಿದೆ. ಜೇನಿನ ಸಾವು ಇಲ್ಲಿನ ಒಂದು ಪುಟ್ಟ ಸಾಕ್ಷ್ಯ. ಇಲ್ಲಿನ ಹೊಲದಂಚಿನ ಬೂರಗದ ಮರಕ್ಕೆ ಹತ್ತಾರು ಜೇನು ಗೂಡು ಕಟ್ಟುತ್ತವೆ. ಆದರೆ ಇಲ್ಲಿನ ಜೇನು ತೆಗೆಯುವ ಕಾಯಕ ಯಾರೂ ಮಾಡುವದಿಲ್ಲ. ಕಳೆದ ೬ ವರ್ಷದ ಹಿಂದೆ ಮರದ ಜೇನು ತೆಗೆದು ರುಚಿ ನೋಡಿದರೆ ಅಸಹ್ಯ ವಾಸನೆ! ಇಲ್ಲಿನ ಜೇನು ತುಪ್ಪ ತಿನ್ನುವುದಕ್ಕೆ ಅಸಾಧ್ಯ. ಹೀಗಾಗಲು ಹೇಗೆ ಸಾಧ್ಯ? ಜೇನು ಬಲ್ಲವರು ಬೆರಗಿನಿಂದ ಕೇಳುತ್ತಾರೆ.

ಮಲೆನಾಡಿನ ಜೊಯಿಡಾ, ಯಲ್ಲಾಪುರ, ಶಿರಸಿ, ಸಿದ್ದಾಪುರ ಪ್ರದೇಶದ ಕಾಡುಗಳಲ್ಲಿ ಹೆಜ್ಜೇನು ಮರಗಳಿವೆ. ಇವನ್ನು ಸತ್ನಾಲ್ ಮರ, ಪಡೆಮರ,

ಜರ್ಬಂಧಿ ಮರ, ಎರ್ನಾಲ್ ಮರಗಳೆಂದು ಸ್ಥಳೀಯರು ಗುರುತಿಸುತ್ತಾರೆ. ಪ್ರಮುಖವಾಗಿ ದೈತ್ಯಾಕಾರದಲ್ಲಿ ಗಗನಚುಂಬಿಯಾಗಿ ಬೆಳೆಯುವ "ಟೆಟ್ರಾಮೆಲಸ್ ನ್ಯೂಡಿಫ್ಲೋರಾ" ವೃಕ್ಷವನ್ನು ಜೇನುಮರವೆನ್ನುವದು ವಾಡಿಕೆ. ಈ ಮರಗಳಿಗೆ ಪ್ರತಿವರ್ಷ ಬೇಸಿಗೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜೇನುಗೂಡು ಕಟ್ಟುತ್ತವೆ. ಕಾಡಿನ ಇನ್ನುಳಿದ ಮರಗಳಿಗಿಂತ ಅತಿ ಎತ್ತರವಾಗಿರುವ ಇದು ಜೇನಿನ ಅಕ್ಕರೆಯ ವಾಚ್‌ಟವರ್ ! ಹಿಂದೆ ಕಾಡು, ನದಿದಂಡೆ, ದೇವರ ಕಾಡುಗಳಲ್ಲಿದ್ದ ಮರಗಳು ಈಗ ಬಯಲಿಗೆ ಬಂದು ಒಂಟಿಯಾಗಿ ನಿಂತಿವೆ. ಒಂದಾದ ನಂತರ ಒಂದರಂತೆ ಹೂವರಳಿಸುವ ಸಸ್ಯ ಸಂಕುಲಗಳು ಕಡಿಮೆಯಾಗಿವೆ. ಸಿದ್ದಾಪುರ ಕಾನಸೂರಿನ ಕರಮನೆ, ಯಲ್ಲಾಪುರದ ಹೆಮ್ಮಾಡಿ, ಶಿರಸಿಯ ಮುಷ್ಕಿಯ ದೊಣ್ಣೆಕಾನು ಪ್ರದೇಶದಲ್ಲಿನ ಒಂದೊಂದು ಮರಗಳಲ್ಲಿ ಪ್ರತಿವರ್ಷ ತಲಾ ೩೦೦-೫೦೦ ಹೆಜ್ಜೇನು ಗೂಡುಗಳಿದ್ದ ದಾಖಲೆಯಿದೆ!. ಕಳೆದ ೨೦೦೨ರಲ್ಲಿ ಈ ಪ್ರದೇಶಗಳ ೪೫ ಹೆಜ್ಜೇನು ಮರಗಳ ಚಿತ್ರ ತೆಗೆಯಲು ಖುದ್ದು  ಓಡಾಡಿದ್ದೇನೆ. ಕಾಡು ಬದಲಾಗಿದೆ, ಜೇನು ಬರುವ ಪ್ರಮಾಣವೂ ಕಡಿಮೆಯಾಗಿದೆ ಎಂದು ಜನ ಮಾತಾಡಿದರು. ನಮ್ಮ ಪರಿಸರದ  ಆಗುಹೋಗುಗಳ  ವರ್ತಮಾನಗಳ  ಚಿತ್ರಗಳನ್ನು  ಜೇನು ಮರಗಳಲ್ಲಿ ಕಾಣಲು ಸಾಧ್ಯವಿದೆ. ಯಲ್ಲಾಪುರ ತಾಲೂಕಿನ ಕಾಳಿ ಕಣಿವೆ ಮೂಲೆಯಿಂದ ಬೇಡ್ತಿ ಕೊಳ್ಳದ ಕಾಡುಗಳಲ್ಲಿನ ಜೇನುಮರಗಳ ಪಟ್ಟಿ ಕುತೂಹಲಕರವಾಗಿದೆ. ಇಲ್ಲಿ ಪ್ರತಿ ೬-೮ ಕಿಲೋ ಮೀಟರ್‌ಗೆ ಒಂದು ಪಡೆಮರಗಳಿವೆ!  ಇವು ಸುತ್ತಲಿನ ಕಾಡಿನ ಕತೆ ಹೇಳುವ ಹಸುರು ಶಾಸನದಂತಿವೆ.  ಆದರೆ ಈಗ ಕಾಡಷ್ಟೇ ಅಲ್ಲ, ರೈತರೂ ಬದಲಾಗಿದ್ದಾರೆ. ಹಣದ ಬೆಳೆಯ ಹಿಂದೆ ಸಾಗುವ ಅನಿವಾರ್ಯತೆಯಲ್ಲಿ ಹೊಲ ಬೆಳೆ ಆಯ್ಕೆ, ನಿರ್ವಹಣೆಯ ಸ್ವರೂಪ ಬದಲಾಗಿದೆ. ಬಣ್ಣ, ಸುವಾಸನೆಯ ನೈಸರ್ಗಿಕ ಬೆರಗು ಚೆಲ್ಲಿ  ಪುಟ್ಟ ಕೀಟಗಳನ್ನು  ಲಾಗಾಯ್ತಿನಿಂದ ಸೆಳೆಯುವ ಹೂ ಮುಖದಲ್ಲೂ ರಾಸಾಯನಿಕದ ಕೋಟೆ ಎದ್ದಿದೆ, ಪರಿಣಾಮ ಮಧುರ ಜೇನಿಗೆ ಮೃತ್ಯುಪಾಶ ಒದಗಿದೆ!

ಪುಟ್ಟ ಕೀಟಗಳು ಪರಾಗಸ್ಪರ್ಶದ ಕ್ರಿಯೆಗೆ ನೀಡುವ ಅಮೂಲ್ಯ ಸಹಾಯ ನಮಗಿನ್ನೂ ಅರ್ಥವಾದಂತಿಲ್ಲ. ಇಂದು ನಮ್ಮ ಅಡುಗೆ ಮನೆಯ ಖಾದ್ಯ ತೈಲವಾದ ಫಾಮ್ ಆಯಿಲ್ ಹಿಂದೆ ವಿವಿಲ್(Elaeidotis Kamerunicus Fst)  ಎಂಬ ದುಂಬಿಯ ನೆರವಿದೆ. ಎಣ್ಣೆ ತಾಳೆ ದಕ್ಷಿಣ ಆಫ್ರಿಕಾದ  ಕಾಡು ಮರ. ಇಲ್ಲಿನ ಮೂಲನಿವಾಸಿಗಳು ಫಲದಿಂದ ಎಣ್ಣೆ ತೆಗೆಯುತ್ತಿದ್ದರು. ಮಹತ್ವ ಗಮನಿಸಿದ ಮಲೇಶಿಯಾದ ಜನ ಆಫ್ರಿಕಾ ಕಾಡಿನ ಸಸ್ಯ  ಪಡೆದು  ೧೯೭೯ರಲ್ಲಿ ಕೃಷಿ ಆರಂಭಿಸಿದರು. ಮರ ಬೆಳೆದು ಹೂ ಗೊನೆಗಳು ಬಂದವು. ಆದರೆ ಇಳುವರಿ ಇರಲಿಲ್ಲ. ಪರಿಣಾಮದ ಅಧ್ಯಯನಕ್ಕೆ ಪುನಃ ಆಫ್ರಿಕಾ ಕಾಡಿನ ತಾಳೆ ಮರ ಏರಿದರು, ಪರಾಗಸ್ಪರ್ಶ ಕ್ರಿಯೆ ಗಮನಿಸಿದರು. ಸ್ಥಳೀಯ ವಿವಿಲ್ ದುಂಬಿ ನೆರವಾಗುತ್ತಿರುವದು ಗಮನಕ್ಕೆ ಬಂದಿತು. ೧೯೮೧ರಲ್ಲಿ ಪ್ರಥಮ ಬಾರಿಗೆ ವಿವಿಲ್ ದುಂಬಿಯನ್ನು ಮಲೆಶಿಯಾಕ್ಕೆ ತಂದರು. ಇಂದು ವಿಶ್ವದ ಪ್ರತಿಶತ ೫೮ ಪ್ರಮಾಣದ ಖಾದ್ಯತೈಲವನ್ನು ಮಲೇಶಿಯಾ ಉತ್ಪಾದಿಸುತ್ತಿದೆ.  ಇದರಲ್ಲಿ ಶೇಕಡಾ ೭೮ ಭಾಗ ಭಾರತ ಸೇರಿದಂತೆ ವಿವಿಧ ದೇಶಗಳಿಗೆ ರಫ್ತಾಗುತ್ತಿದೆ. ನಮ್ಮ ಅಡುಗೆಯ ಆಧಾರವಾಗಿದೆ. ಅಷ್ಟೇಕೆ ನಮ್ಮ ಶಿವಮೊಗ್ಗ ಪ್ರಾಂತ್ಯದಲ್ಲಿ ತಾಳೆ ಕೃಷಿ ಆರಂಭವಾಗಾಗ ಇಳುವರಿ ಸಮಸ್ಯೆ ಗೋಚರಿಸಿತು. ದೂರದ ಆಫ್ರಿಕಾದ ವಿವಿಲ್ ತಂದು ಮರಕ್ಕೆ ಬಿಟ್ಟ ಬಳಿಕ ಶೇಕಡಾ ೨೦-೩೦ರಷ್ಟು ಇಳುವರಿ ಹೆಚ್ಚಿದೆ.

ಕ್ರಿ.ಶ. ೧೮೪೦ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಐವಾ ಹಾಗೂ ಮಿಸೌರಿ ರಾಜ್ಯಗಳ ನಡುವೆ ಅಮೇರಿಕಾ ಸರ್ವೋಚ್ಚ ನ್ಯಾಯಾಲಯದಲ್ಲಿ ಸತತ ೧೨ ವರ್ಷ ಕಾಲ ಅಲ್ಲಿನ ಜೇನು ಮರಗಳ ಹಕ್ಕಿಗಾಗಿ ವ್ಯಾಜ್ಯ ನಡೆದಿದೆ. ಇದು ಹನಿವಾರ್ ಎಂದು ಪ್ರಸಿದ್ಧವಾಗಿದೆ. ಈಗ ಟಿಬೇಟಿಯನ್ ಕಾಲೋನಿಯ ಜೇನಿನ ಸ್ಥಿತಿ ಗಮನಿಸಿದರೆ ಜೇನಿನ ವಿರುದ್ಧ  ಇನ್ನೂ ದೊಡ್ಡ  ಹಿಟ್ಲರ್ ಕದನ  ನಡೆದಂತೆ ಕಾಣುತ್ತಿದೆ. "ನಮ್ಮ ಸಾವಿನ ಬಳಿಕ ವೆನಿಲ್ಲಾ ಹೂವನ್ನು ನೀವು ಪರಾಗಸ್ಪರ್ಶ ಮಾಡಿದಂತೆ ಎಲ್ಲ ಕೃಷಿ ಬೆಳೆಗಳ ಪರಾಗಸ್ಪರ್ಶಕ್ಕೆ ಶ್ರಮಿಸುತ್ತೀರಾ ?" ಹೆಜ್ಜೇನಿನ ಹೆಣದ ಮಗ್ಗುಲಲ್ಲಿ ಹುದುಗಿದ ಮರಣ ಪತ್ರದಲ್ಲಿ ಮೈನಡಗಿಸುವ ಸಾಲುಗಳಿವೆ. ರೈತ ಆತ್ಮಹತ್ಯೆ ನಿತ್ಯ ಗಮನಿಸಿದವರಿಗೆ ಪುಟ್ಟಕೀಟದ ಸಾವು ತೀರಾ ತೀರಾ ಚಿಕ್ಕದ್ದು ! ಆದರೆ ಪರಿಸರ ಪೋಲಿಸ್‌ರ ಪಂಚನಾಮೆ ನಡೆದರೆ ರೈತ ಸಾವಿಗೂ, ಹೆಜ್ಜೇನಿನ ಜೀವಯಾನಕ್ಕೂ ಸಂಬಂಧದ  ಸುಳಿವು ಸಿಗಬಹುದು.

# ಕಾಡುಗರ್ಭದಲ್ಲಿ ಕೀಟಾರಾಧನೆ!

ಪುಟ್ಟ ಕೀಟಗಳನ್ನು, ಬೆಳೆ ಹಾನಿ ಮಾಡುವ ವನ್ಯ ಜೀವಿಗಳನ್ನು ನಿಯಂತ್ರಿಸುವುದಕ್ಕೆ ಭೂತ ದೈವಗಳ ಆರಾಧನೆಯನ್ನು ಇಂದಿನ ವಿಜ್ಞಾನಯುಗದಲ್ಲಿ ಒಪ್ಪಲು ಸಾಧ್ಯವಿಲ್ಲ. ಅಪ್ಪಟ ಸೈಟಿಂಫಿಕ್ ಜೀವಿಗಳಿಗೆ ಇಂತಹ ವಿಚಾರಗಳ ಪ್ರಸ್ತಾಪ ಕೂಡಾ ಸಿಟ್ಟೇರಿಸಬಹುದು. ಕೀಟನಾಶಕಗಳ ಮುಖೇನ ನಿಯಂತ್ರಿಸಬಹುದಾದುದನ್ನು ಕಲ್ಲು ದೇವರ ಮುಖೇನ ಹೇಗೆ ನಿಯಂತ್ರಿಸುತ್ತಾರೆಂಬ ಪ್ರಶ್ನೆ ಉದಯಿಸಬಹುದು. ಕಾರ್ಯ-ಕಾರಣಗಳನ್ನು ನಂಬಿ ನಡೆಯುವ ವಿಜ್ಞಾನ ಇವು ಮೌಢ್ಯಗಳೆಂದು ಸುಲಭದಲ್ಲಿ ಬದಿಗೆ ತಳ್ಳಬಹುದು. ವಿಜ್ಞಾನ, ತಂತ್ರಜ್ಞಾನ ಎಷ್ಟೇ ಮುಂದುವರಿದಿದ್ದರೂ ಅದು ಹಳ್ಳಿಯ ರಸ್ತೆ ಬದಲಿಸಬಹುದು, ವಾಹನಗಳಲ್ಲಿ ಮಾರ್ಪಾಟು ಮಾಡಬಹುದು, ಆದರೆ ಹಳ್ಳಿಮನೆಗಳನ್ನು ಕಾಡುವ ಕ್ರಿಮಿ ಕೀಟಗಳ ಬಗೆಗಿನ ನಂಬಿಕೆ ಅಷ್ಟು ಬೇಗ ಬದಲಾಗದು ಎಂಬುದಕ್ಕೆ ಇರುವೆ, ಸೊಳ್ಳೆ, ದುಂಬಿಗಳ ಕುರಿತ ಸಂಗತಿಗಳೇ ಸಾಕ್ಷಿ.

ಮಳೆಗಾಲ ಆರಂಭದಲ್ಲಿ ಮಣ್ಣಿನ ಮನೆಯ ನೆಲಕ್ಕೆ ತಂಪೇರುತ್ತಿದ್ದಂತೆ ಭೂಗತದಿಂದ ಒಂದು ಜಾತಿ ಇರುವೆ ಸೈನ್ಯಗಳ ಆಗಮನವಾಗುತ್ತಿತ್ತು. ಕೆಂಪುಬಣ್ಣದ ಇವನ್ನು 'ಕೇಶ್‌ಯರಾ'( ಕೇಶ ಇರುವೆ) ಎಂದು ಗ್ರಾಮ್ಯದಲ್ಲಿ ಕರೆಯುತ್ತಿದ್ದರು. ಮಣ್ಣು ನೆಲದಲ್ಲಿ ಚಾಪೆಹಾಕಿ ಮಲಗಿದ್ದರೆ ನಡುರಾತ್ರಿಯಲ್ಲಿ ಇವುಗಳ ಸೈನ್ಯ ಪ್ರತ್ಯಕ್ಷವಾಗಿ ತಲೆಗೂದಲಿಗೆ ( ಬಹುಶಃ ಇದೇ ಕಾರಣಕ್ಕೆ ಇದಕ್ಕೆ ಕೇಶ ಇರುವೆ ಎಂದಿರಬಹುದು !) ಮುತ್ತುತ್ತಿದ್ದವು, ಕೈ ಕಾಲು ಕಿವಿಯೆನ್ನದೇ ಕಚ್ಚುತ್ತಿದ್ದವು. ಒಂದೆರಡು ಇರುವೆ ಕಡಿದರೂ ವಿಪರೀತ ಉರಿ, ಮಹಡಿ ಮನೆಗಳಿಲ್ಲದ ಕಾಲಕ್ಕೆ ಇವು ಮಲೆನಾಡಿನ ಮಣ್ಣಿನ ಮನೆಗೆ ಎರಗಿದಾಗಂತೂ ಥೇಟ್ ಭಯೋತ್ಪಾದಕ ಸೈನ್ಯಬಂದಂತೆ ಇಡೀ ರಾತ್ರಿ ಜಾಗರಣೆ! ವರ್ಷಕ್ಕೊ ಎರಡು ವರ್ಷಕ್ಕೊಮ್ಮೆ ಅತಿಥಿಗಳಂತೆ ಆಗಮಿಸುವ ಇವನ್ನು ಮನೆಮಂದಿ ಇರುವೆಯೆಂದು ಕರೆಯುವದಕ್ಕಿಂತ ದೇವಧೂತರೆಂದು ಭಾವಿಸುತ್ತಿದ್ದರು. 'ಚೆನ್ನಕೇಶವ ದೇವಸ್ಥಾನಕ್ಕೆ ಹಣ್ಣುಕಾಯಿ ಮಾಡಿಸಿದರೆ ಇರುವೆಗಳು ಹೋಗುತ್ತವೆಂಬುದು' ಎಲ್ಲ ಹಿರಿಯರ ಬಲವಾದ ನಂಬಿಕೆ! ಹತ್ತಿರದ ದೇವಾಲಯದತ್ತ ತೆಂಗಿನಕಾಯಿ ಹಿಡಿದು ಓಡುತ್ತಿದ್ದರು. ನಾವು ಚಿಕ್ಕವರಿದ್ದಾಗ ದೇವಾಲಯಕ್ಕೆ ಹಣ್ಣುಕಾಯಿಗೆ ಹೋದಾಗ 'ಓಹ್! ಕೇಶ್ ಇರುವೆ ಬಂತಾ?' ಎಂದು ಪೂಜೆಗೆ ಮುಂಚೆ ಪೂಜಾರಿ ಕೇಳುತ್ತಿದ್ದುದು ಇನ್ನೂ ನೆನಪಿದೆ. ಬಹುಶಃ ಪೂಜಾರಿಗೆ ಹೇಳಿಯೇ ಈ ದೇವಧೂತ ಇರುವೆಗಳು ನಮ್ಮ ಮನೆಗೆ ಬಂದಿರಬಹುದೆಂದೂ, ದೇವರನ್ನು ಮರೆತರೆ ನೆನಪಿಸುವ ಕೆಲಸ ಇವು ಮಾಡುತ್ತಿವೆಯೆಂದು ಆ ಕಾಲಕ್ಕೆ ಭಾವಿಸಿದ್ದೆವು. ಮನೆಗೆ ಈ ಕೆಂಪಿರುವೆ ಬಂದರಷ್ಟೇ ಚೆನ್ನಕೇಶವ ದೇವಾಲಯಕ್ಕೆ ಹಣ್ಣುಕಾಯಿಗೆ ಜನ ಬರುತ್ತಾರೆಂಬ ಪೂಜಾನುಭವದಲ್ಲಿ ಅವರು ಇರುವೆ ಭವಿಷ್ಯ ಹೇಳುತ್ತಿದ್ದರೆಂದು ಆ ಮೇಲೆ ತಿಳಿಯಿತು.

ಹೊಟ್‌ನುಶಿ ಎಂದು ಕರೆಯಲ್ಪಡುವ ಒಂದು ಜಾತಿಯ ಸಣ್ಣಕೀಟ ಉತ್ತರ ಕನ್ನಡದ ಕುಮಟಾದ ಮರ್ಸೆಹಳ್ಳಿಯ ಜನ, ಜಾನುವಾರುಗಳನ್ನು ವಿಪರೀತ ಕಾಡಿಸುತ್ತದೆ. ಏಪ್ರಿಲ್ ತಿಂಗಳು ಬಂತೆಂದರೆ ಕಾಡಿಗೆ ದನಕರು ಬಿಡುವಂತಿಲ್ಲ, ಅವು ಈ ಸೊಳ್ಳೆಕಡಿತದಿಂದ ಕಂಗಾಲಾಗಿ ಓಡುತ್ತವೆ. ದೂರದ ಊರುಗಳಿಂದ ಖರೀದಿಸಿ ತಂದ ಜಾನುವಾರುಗಳು ಕೀಟ ಕಡಿತದಿಂದ ಸಾವನ್ನಪ್ಪುತ್ತವೆ. ಇದು ಇತ್ತೀಚಿನ ಸಮಸ್ಯೆಯಲ್ಲ, ಲಾಗಾಯ್ತಿನಿಂದ ಈ ಸೊಳ್ಳೆಕಾಟ ಇದ್ದದ್ದೇ! ಅದಕ್ಕೆ ಈ ಊರಿನಲ್ಲಿ 'ಹೊಟ್‌ನುಶಿ ಭೂತ' ಎಂಬ ಭೂತಕ್ಕೆ ಗಡಿಹಬ್ಬದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ, ಕೀಟದಿಂದ ಬಚಾವು ಮಾಡಿಕೊಡಬೇಕೆಂದು ಪ್ರಾರ್ಥಿಸುವ ಪರಂಪರೆಯಿದೆ!.

ಕಾಡು ಗರ್ಭದ ಜೊಯಿಡಾದ ಶಿವಪುರದ್ದು ಇನ್ನೊಂದು ವಿಚಿತ್ರ ಕತೆ. ಇಲ್ಲಿ ಕಟ್ಟೇವಾಡ್ಲು ಎಂಬ ಬೀಟ್ಲ್ ಊರಿಗೆ ಭಯ ಹುಟ್ಟಿಸುತ್ತಿದೆ. ಇಲ್ಲಿನ ಕೆಲವೇ ಕೆಲವು ಮನೆಗಳಿಗೆ ಬೇಸಿಗೆಯಲ್ಲಿ ಒಂದೆರಡು ಮಳೆ ಸುರಿದ ಬಳಿಕ ಇವು ಹಾಜರು. ಮನೆ ಛಾವಣಿ, ಗೋಡೆ, ನೆಲ, ಸಂಧುಗಳಲ್ಲಿ ಇವುಗಳದೇ ದೈತ್ಯ ಸೈನ್ಯ, ಬಿಳಿ ಗೋಡೆಗೆ ಕಪ್ಪು ಚಾಪೆ ಹೊದೆಸಿಟ್ಟಂತೆ ಲಕ್ಷಾಂತರ ಬೀಟ್‌ಲ್‌ಗಳ ಹರಿದಾಟ. ಇಲ್ಲಿನ ೪-೫ಮನೆಗಳಲ್ಲಿ ಮಾತ್ರ ಕಾಣಸಿಗುವ ಈ ದುಂಬಿಗಳು ರಾತ್ರಿ ದೀಪ ಉರಿಸಿದ ಬಳಿಕ ಕಾಡಿನೆಡೆಯಿಂದ ಹಾರಿ ಮನೆ ಸೇರುತ್ತವೆ. ಒಮ್ಮೆ ಮನೆಗೆ ಬಂದವು ಅಲ್ಲೇ ಠಿಕಾಣೆ. ಹಾಸಿಗೆ ತುಂಬೆಲ್ಲ ಹರಿದಾಡಿ, ಮೈಮೇಲೆ ಕಚಗುಳಿ ಇಡುತ್ತ ಕಿವಿ ಸಂಧಿಯಲ್ಲಿ ನುಸುಳಿ ಅಸಾಧ್ಯ ಹಿಂಸೆ ನೀಡುತ್ತವೆ. ವಿದ್ಯುತ್ ಇದ್ದರೂ ದೀಪ ಉರಿಸುವಂತಿಲ್ಲ, ಹಾಸಿಗೆ ಹಾಸಿದರೂ ಮಲಗಿ ನಿದ್ದೆ ಮಾಡುವಂತಿಲ್ಲ!' ಎಂಬುದು ಪರಿಸ್ಥಿತಿ. ಬರೋಬ್ಬರಿ ೩-೪ ತಿಂಗಳ ಕಾಲ ಇವುಗಳ

ಉಪಟಳವಿರುತ್ತದೆ. ಇಲ್ಲಿನ ನೇತುರ್ಗಾ ಹಳ್ಳಿಯ ಗೋಪಾಲಕೃಷ್ಣ ಭಾಗ್ವತ್‌ರ ಮಹಾಮನೆಯಲ್ಲಂತೂ ಅಲ್ಲಿನ ಅಷ್ಟೂ ಕಟ್ಟೆವಾಡ್ಲು ಸಂಗ್ರಹಿಸಿದರೆ ಕನಿಷ್ಟ ೨-೩ಕ್ವಿಂಟಾಲ್ ಸಿಗಬಹುದು! ಇವು ಸರಿಸುಮಾರು ೫೦-೬೦ವರ್ಷಗಳಿಂದಲೂ ಹೀಗೆ ಕಾಟ ಕೊಡುತ್ತಿವೆ. ಜನ ಇದನ್ನು ನಿಯಂತ್ರಿಸಲು ಸಾಕಷ್ಟು ಪ್ರಯತ್ನಿಸಿ ಕೊನೆಗೆ ಸಹಜವೆಂಬಂತೆ ಒಪ್ಪಿಕೊಂಡು ಸಹಬಾಳ್ವೆ ನಡೆಸಿದ್ದಾರೆ. ಏನೇ ಮಾಡಿದರೂ ಇವು ಮನೆ ಬಿಟ್ಟು ತೊಲಗುವದಿಲ್ಲವೆಂದು ತಿಳಿದ ಬಳಿಕ ಮನೆ ಮಹಡಿಯಲ್ಲಿ ಇಡೀ ರಾತ್ರಿ ದೀಪ ಉರಿಸಿ ಒಂದೆಡೆ ಆಕರ್ಷಿಸುತ್ತಾರೆ, ಮನೆ ಜಗುಲಿಗೆ ಬರುವುದನ್ನು ಮಹಡಿಯಲ್ಲಿ ನಿಲ್ಲಿಸುತ್ತಾರೆ. ಇವನ್ನು ಕೀಟ ಎಂಬುದಕ್ಕಿಂತ ಈಶ್ವರನ ಗಣದ ಕಾಟ ಎಂದು ಹಿರಿಯರು ಗುರುತಿಸುತ್ತಾರೆ. ಊರಿನ ಈಶ್ವರ ದೇವಾಲಯ ಸರಿಪಡಿಸಿದರೆ, ಪೂಜೆ ಅರ್ಪಿಸಿದರೆ ಕಟ್ಟೆವಾಡ್ಲು ನಿಯಂತ್ರಿಸಬಹುದೆಂದು ಕೆಲವರು ಲೆಕ್ಕಹಾಕುತ್ತಾರೆ.

ಜಾನುವಾರುಗಳ ದೊಡ್ಡಿಯಲ್ಲಿ ವಿಪರೀತ ಉಣ್ಣೆ(ಉಣುಗು)ಗಳ ಕಾಟ, ಹಸುಕರುಗಳ ರಕ್ತ ಹೀರಿ ಅವುಗಳ ಆರೋಗ್ಯ ಹದಗೆಡಿಸುತ್ತವೆ, ಸಾವು ಸಂಭವಿಸುತ್ತವೆ. ಇವುಗಳ ನಿಯಂತ್ರಣಕ್ಕೆ ಧಾರ್ಮಿಕ ಕೆಲಸ ಮಾಡಿಸುವದನ್ನು ಮಲೆನಾಡಿನಲ್ಲಿ ಕಾಣುತ್ತೇವೆ. ಭತ್ತದ ಗದ್ದೆಗಳಿಗೆ ಕಾಡು ಪ್ರಾಣಿಗಳ ದಾಳಿ ನಿಯಂತ್ರಣಕ್ಕೆ ಹೊಲದ ಅಂಚಿನಲ್ಲಿ ಬೇಟೆ ಬೀರಪ್ಪನಿಗೆ ಹರಕೆ ಒಪ್ಪಿಸುವ ಪರಿಪಾಠವಿದೆ. ಪೂಜೆ ಅರ್ಪಿಸಿದರೆ ಬೀರಪ್ಪ ಹೊಲ ಕಾಯುತ್ತಾನೆ ಎಂಬುದನ್ನು ಯಾರು ಒಪ್ಪಲಿ ಬಿಡಲಿ ಇಂದಿಗೂ ಹಲವು ಹಳ್ಳಿಗಳಲ್ಲಿ ಬೇಟೆ ಬೀರಪ್ಪನಿಗೆ ಪೂಜೆ ಸಲ್ಲುತ್ತದೆ.

ಪುಟ್ಟ ಕೀಟಗಳನ್ನು, ಬೆಳೆ ಹಾನಿ ಮಾಡುವ ವನ್ಯ ಜೀವಿಗಳನ್ನು ನಿಯಂತ್ರಿಸುವದಕ್ಕೆ ಭೂತ ದೈವಗಳ ಆರಾಧನೆಯನ್ನು ಇಂದಿನ ವಿಜ್ಞಾನಯುಗದಲ್ಲಿ ಒಪ್ಪಲು ಸಾಧ್ಯವಿಲ್ಲ. ಅಪ್ಪಟ ಸೈಟಿಂಫಿಕ್ ಜೀವಿಗಳಿಗೆ ಇಂತಹ ವಿಚಾರಗಳ ಪ್ರಸ್ತಾಪ ಕೂಡಾ ಸಿಟ್ಟೇರಿಸಬಹುದು. ಕೀಟನಾಶಕಗಳ ಮುಖೇನ ನಿಯಂತ್ರಿಸಬಹುದಾದುದನ್ನು ಕಲ್ಲು ದೇವರ ಮುಖೇನ ಹೇಗೆ ನಿಯಂತ್ರಿಸುತ್ತಾರೆಂಬ ಪ್ರಶ್ನೆ ಉದಯಿಸಬಹುದು. ಕಾರ್ಯ-ಕಾರಣಗಳನ್ನು ನಂಬಿ ನಡೆಯುವ "ಜ್ಞಾನ ಇವು ಮೌಢ್ಯಗಳೆಂದು ಸುಲಭದಲ್ಲಿ ಬದಿಗೆ ತಳ್ಳಬಹುದು. ವಿಜ್ಞಾನ, ತಂತ್ರಜ್ಞಾನ ಎಷ್ಟೇ ಮುಂದುವರಿದಿದ್ದರೂ ಅದು ಹಳ್ಳಿಯ ರಸ್ತೆ ಬದಲಿಸಬಹುದು, ವಾಹನಗಳಲ್ಲಿ ಮಾರ್ಪಾಟು ಮಾಡಬಹುದು, ಆದರೆ ಹಳ್ಳಿಮನೆಗಳನ್ನು ಕಾಡುವ ಕ್ರಿಮಿ ಕೀಟಗಳ ಬಗೆಗಿನ ನಂಬಿಕೆ ಅಷ್ಟು ಬೇಗ ಬದಲಾಗದು ಎಂಬುದಕ್ಕೆ ಇರುವೆ, ಸೊಳ್ಳೆ, ದುಂಬಿಗಳ ಕುರಿತ ಸಂಗತಿಗಳೇ ಸಾಕ್ಷಿ. ಇದನ್ನು ಕಾಡು ಹಳ್ಳಿಗಳ ಕೀಟಾರಾಧನೆಯ ವಿಶಿಷ್ಟ ಸಂಸ್ಕೃತಿ ಎನ್ನಬಹುದು! ಇಲ್ಲಿ ಕೀಟ ಭಯದಲ್ಲಿ ಭಕ್ತಿ ಜನಿಸಿದ ಚಿತ್ರ ನೋಡಬಹುದು. ಕಾಡು ಗರ್ಭದಲ್ಲಿ ಬದುಕು ಕಟ್ಟುವಾಗಿನ ಸಂದರ್ಭದಲ್ಲಿ ಎದುರಾದ ಅಡಚಣೆಗಳನ್ನು ಪೂಜೆ ನಂಬಿಕೆಗಳ ಮುಖೇನ ಬಗೆಹರಿಸುವ ದಾರಿ ಹುಡುಕುವದು ಕಾಲಸ್ಥಳದ ಅನಿವಾರ್ಯ. ದೈವ ಭಕ್ತಿಯಲ್ಲಿ ನಿಯಂತ್ರಿಸಬಹುದೆಂಬ ನಂಬಿಕೆಯೇ ಬದುಕು ಸಾಗಿಸುವ ಏಕೈಕ ಆಧಾರ. ಕಷ್ಟಗಳ ನಡುವೆಯೂ ಭರವಸೆ ಹುಟ್ಟಿಸುವ ದಾರಿ. ಶಿವಪುರದ ಕಟ್ಟೆವಾಡ್ಲುಗಳ ನಡುವೆ ಒಂದು ರಾತ್ರಿ ಕಳೆದ ಅನುಭವವೇ ನನಗಿನ್ನೂ ಕಾಡುತ್ತಿದೆ. ಪ್ರತಿ ನಿಮಿಷಕ್ಕೊಂದರಂತೆ ಎಲ್ಲಿಂದಲೋ ನುಸುಳಿ ಹಾಸಿಗೆ ಹೊಕ್ಕು ಮೈಯಲ್ಲಿ ಹರಿದಾಡುವ ದುಂಬಿಗಳು ಇಡೀ ರಾತ್ರಿ ನಿದ್ದೆ ಕದ್ದವು, ಆ ಪ್ರತಿ ಕ್ಷಣವೂ ಈ ದುಂಬಿ ಕೊಲ್ಲಲು ಕೀಟನಾಶಕ ಸಿಂಪಡಿಸಬಹುದೆಂದು ಆಗಾಗ ಯೋಚಿಸುತ್ತಿದ್ದೆ, ಹೊತ್ತು ಕಳೆದಂತೆ ದುಂಬಿ ದಾಳಿಯ ಹಿಂಸೆ ಹೇಸಿಗೆಯಾಗಿ ದೇವರನ್ನೇ ಮೊರೆ ಹೋಗುವ ಹಂತಕ್ಕೆ ಪರಿವರ್ತನೆಯಾಗಿದ್ದೆ! ನಮ್ಮಂತವರ ಒಂದು ದಿನದ ಅನುಭವವೇ ಹೀಗಾಗಿರುವಾಗ ಹಲವು ತಿಂಗಳಕಾಲ ಇವುಗಳ ಜತೆ ಕಾಲಹಾಕಬೇಕಾದ ಕಾಡು ಗರ್ಭದ ಜನ ಹುಳುಹಪ್ಪಟೆ ನಿಯಂತ್ರಣಕ್ಕೆ ಕಾಣದ ದೇವರಿಗೆ ಕೈ ಮುಗಿದಿದ್ದು ಯಾರಿಗೂ ಅರ್ಥವಾಗುವಂತಹುದೇ!. ಅರ್ಥವಾಗದವರು ಈ ಪ್ರದೇಶಗಳಲ್ಲಿ ಒಂದೆರಡು ದಿನ ಇದ್ದು ಅನುಭವಿಸಿ ನೋಡಬಹುದು.

# ಇಂಗ್ಲೀಷರ ಕಡತದಲ್ಲಿ 'ಗೋ'ಪುರಾಣ!

ಹಸು ಎಂದರೆ ಹಿಂದೂಗಳಿಗೆ ಅಪಾರ ಭಕ್ತಿ, ಎಲ್ಲ ಸಾಕುಪ್ರಾಣಿಗಳಿಗಿಂತ ಇವಕ್ಕೆ ಮಹತ್ವದ ಸ್ಥಾನ. ಕಾಮದೇನು ಎಂದು ಗುರುತಿಸಲ್ಪಡುವ ಈ ಪ್ರಾಣಿ ನಿತ್ಯ ಪೂಜಿಸಲ್ಪಡುತ್ತದೆ, ವರ್ಷದ ಕೆಲದಿನಗಳಲ್ಲಿ ವಿಶೇಷ ಉತ್ಸವ ಆಚರಣೆಯಿದೆ. ಬ್ರಿಟಿಶ್ ದಾಖಲೆಯ ಈ ಸಾಲು ಓದಿದರೆ ಆಕಳ ಬಗೆಗೆ ಆಂಗ್ಲರು ಏಕೆ ನಿಬಂಧ ಬರೆದಿದ್ದರು ಎಂಬ ಪ್ರಶ್ನೆ ಉದಯಿಸಬಹುದು. ಗೋವಿನ ಬಗೆಗೆ ನಮಗೆ ಭಕ್ತಿ, ಇಂಗ್ಲೀಷರಿಗೆ ಭಯವಿತ್ತು! ನಾಡಿಗೆ ಬರುವವರಿಗೆ ಹಿಂದೂ ಸಂಸ್ಕೃತಿಯಲ್ಲಿನ ಹಸುವಿನ ಸ್ಥಾನ ಪರಿಚಯಿಸುವ ಅನಿವಾರ್ಯತೆ ಅವರನ್ನು ಆಗಾಗ ಕಾಡುತ್ತಿತ್ತು.

ಕ್ರಿ.ಶ. ೧೭೬೦ರಲ್ಲಿ ಇಂಗ್ಲೀಷರು ಕೆನರಾದ ಹೊನ್ನಾವರದಲ್ಲಿ ಕಾಳು ಮೆಣಸು ಗೋದಾಮಿನ ( ಕಾಳು ಮೆಣಸಿನ ಗೋದಾಮನ್ನು ಅವರು 'ಫ್ಯಾಕ್ಟರಿ' ಎನ್ನುತ್ತಿದ್ದರು!) ಒಂದು ಶಾಖೆ ಹೊಂದಿದ್ದರು. ಅಲ್ಲಿನ ಮೆಣಸು ಖರೀದಿಗೆ ಇಂಗ್ಲೀಷ್ ವರ್ತಕರ ಒಂದು ಹಡಗು ಬಂತು. ಜಾನ್‌ಬೆಸ್ಟ್ ನೇತ್ರತ್ವದಲ್ಲಿ ೧೭ ಜನ ಹಡಗು ಇಳಿದು ಹೊನ್ನಾವರ ಬೀದಿಗೆ ಬಂದರು. ಅವರು ತಮ್ಮ ಜತೆ 'ಬುಲ್‌ಡಾಗ್' ತಂದಿದ್ದರು. ಅದನ್ನು ಗೋದಾಮಿನ ಮುಖ್ಯಸ್ಥನಿಗೆ ನೀಡಬೇಕಿತ್ತು. ಗುಡ್ಡದಂಚಿನ ರಸ್ತೆಯಲ್ಲಿ ದೈತ್ಯ ನಾಯಿಯ ಜತೆ ಇವರು ನಡೆದು ಹೋಗುವಾಗ ಆ ನಾಯಿ ನಾಟಿ ಹಸುವೊಂದರ ಮೇಲೆರಗಿ ಕಚ್ಚಿ ಸಾಯಿಸಿತು! ವಿದೇಶಿ ನಾಯಿ ಆಕಳನ್ನು ಕಚ್ಚಿ ಕೊಂದ ಸುದ್ದಿ ಕ್ಷಣಾರ್ಧದಲ್ಲಿ ಊರೆಲ್ಲ ಹಬ್ಬಿತು, ಸ್ಥಳೀಯ ದೇವಾಲಯಕ್ಕೆ ಭಕ್ತನೊಬ್ಬ ದಾನ ನೀಡಿದ ಹಸು ಅದು. ದೇವಾಲಯಕ್ಕೆ ಬಿಟ್ಟ ಪವಿತ್ರ ಗೋವನ್ನು ಇಂಗ್ಲೀಷರ ನಾಯಿ ಕೊಂದಿದ್ದು ಜನರನ್ನು ವಿಪರೀತ ರೊಚ್ಚಿಗೆಬ್ಬಿಸಿತು. ತಕ್ಷಣ ಜಾನ್‌ಬೆಸ್ಟ್ ಹಾಗೂ ಜತೆಗಿದ್ದ ೧೭ ವರ್ತಕರನ್ನು ಕೊಚ್ಚಿ ಸಾಯಿಸಿದರು! ದೈತ್ಯ ನಾಯಿಯನ್ನು ಕೊಂದರು. ದುರಂತದ ಬಗೆಗೆ ಕನಿಕರ ವ್ಯಕ್ತಪಡಿಸಿದ ಕೆಲವರು ಅವರ ಹೆಣಗಳನ್ನು ಒಂದೆಡೆ ಹೂಳಿದರು. ಸುದ್ದಿ ತಿಳಿದು ಕಾರವಾರದಿಂದ ಸ್ಥಳಕ್ಕೆ ಇಂಗ್ಲೀಷ್ ಮುಖ್ಯಸ್ಥರು ಆಗಮಿಸಿದರು. "ಇದು ಜಾನ್ ಬೆಸ್ಟ್ ಹಾಗೂ ಅವರ ೧೭ ಜನ ಸಹಚರರನ್ನು ಹೂಳಿದ ಸ್ಥಳ, ಮೂರ್ಖ ಪೂಜಾರಿ ಹಾಗೂ ರೊಚ್ಚಿಗೆದ್ದ ಜನರಿಂದ ಇವರೆಲ್ಲ ಜೀವ ತ್ಯಜಿಸಬೇಕಾಯಿತು' ಎಂದು ಆ ಸಿಮೆಟ್ರಿ ಕಲ್ಲಿನ ಮೇಲೆ ಘಟನೆಯ ವಿವರ ದಾಖಲಿಸಿದರು.

ಕಾರವಾರದಿಂದ ದಕ್ಷಿಣಕ್ಕೆ ೪೦ ಮೈಲು ದೂರದ ಹೊನ್ನಾವರದಲ್ಲಿ ಘಟನೆ ನಡೆದಿದೆಯೆಂದು ಮಾದವ ಅನಂತ ದೇಸಾಯಿ ಚಿತ್ತಾಕುಲ-ಕಾರವಾರ ಗ್ರಂಥದಲ್ಲಿ ದಾಖಲಿಸಿದ್ದಾರೆ. ಫಿಲಿಪ್ ಎಂಡರಸನ್‌ರ 'ಇಂಗ್ಲೀಷ್ ಇನ್ ವೆಸ್ಟರ್ನ ಇಂಡಿಯಾ' ಪುಸ್ತಕ ಹಾಗೂ ಕ್ಯಾಪ್ಟನ್ ಅಲೆಕ್ಸಾಂಡರ್ ಆಂಡರ್‌ಸನ್‌ರ 'ನ್ಯೂ ಅಕೌಂಟ್ ಆಫ್ ಈಸ್ಟ್ ಇಂಡೀಸ್' ಕೃತಿಗಳು ಈ ಘಟನೆಯನ್ನು ದಾಖಲಿಸಿವೆ. ಸಿಮೆಟ್ರಿಯ ಬರೆಹ ಓದೋಣವೆಂದು ನಾನು ಹೊನ್ನಾವರದ ಸ್ಮಶಾನದಲ್ಲಿ ಒಂದೆರಡು ಸಾರಿ ಓಡಾಡಿದ್ದೇನೆ, ಆದರೆ ೧೭೪೦ರ ನಂತರದಲ್ಲಿ ಸತ್ತವರ ದಾಖಲೆ ದೊರಕಿದೆ. ಜಾನ್‌ಬೆಸ್ಟ್ ತಂಡದ ಸಾವಿನ ವಿವರ ಇನ್ನೂ ಸಿಮೆಟ್ರಿಯಲ್ಲಿ ದೊರೆಯಲಿಲ್ಲ.

'ನಾಯಿ ಆಕಳನ್ನು ಕಡಿದು ಸಾಯಿಸಿದ್ದು, ಜನರ ಸೇಡಿಗೆ ಇಂಗ್ಲೀಷರು ಕೊಲೆಯಾದದ್ದು ' ವಿದೇಶಿಯರನ್ನು ತಲ್ಲಣಗೊಳಿಸಿತು, ಹಸುವಿನ ಕುರಿತ ಅವರ ನೀತಿ ಬದಲಾಗಲು ಕಾರಣವಾಯಿತು. 'ಇಲ್ಲಿ ಹಸುವನ್ನು ಪೂಜಿಸುತ್ತಾರೆ, ಅವನ್ನು ಕೊಲ್ಲಬಾರದು, ಆಹಾರವಾಗಿ ಬಳಸಬಾರದು' ಎಂದು ಪ್ರವಾಸಿಗರಿಗೆ ಕಟ್ಟುನಿಟ್ಟಿನ ಸೂಚನೆ ನೀಡುವ ಪರಿಪಾಟಕ್ಕೆ ಅದು ಮೂಲವಾಯಿತು. ಘಟನೆಯಿಂದ ಭಯಗೊಂಡ ಬ್ರಿಟಿಶರು ಮುಂದೆ ಕಾಳುಮೆಣಸು ಮಾತ್ರ ಖರೀದಿಸುತ್ತಿದ್ದರೇ ವಿನಃ ಹೊನ್ನಾವರದಲ್ಲಿ ವಾಸ್ತವ್ಯ ಹೂಡುವ ಧೈರ್ಯ ಮಾಡಲಿಲ್ಲ ! ಸಮುದ್ರ ದಂಡೆಯಲ್ಲಿ ವಸಾಹತು ಸ್ಥಾಪನೆಯ ಸಂದರ್ಭದಲ್ಲಿ ಹೊನ್ನಾವರಕ್ಕೆ ಆದ್ಯತೆ ಕಡಿಮೆಯಾಯಿತು, ಸನಿಹದ ಹಳದೀಪುರ ಹಳ್ಳಿಗೆ ನೀಡಿದ ಮಹತ್ವವನ್ನು ಈ ನಗರಕ್ಕೆ ನೀಡಲಿಲ್ಲ! ಇದಾಗಿ ಮತ್ತೆ ೧೪ ವರ್ಷಗಳ ಬಳಿಕ ಕಾರವಾರದಲ್ಲಿ ಮೆಕ್ಸಿಕನ್ ಹಾಗೂ ಚೀನಾ ವ್ಯಾಪಾರಿಗಳು ಆಹಾರಕ್ಕಾಗಿ ಗೋವಧೆ ಮಾಡಿ ಶಿಕ್ಷೆ ಅನುಭವಿಸಿದ ಪ್ರಸಂಗ ನಡೆದಿದೆ. ಈ ಘಟನೆಗಳ ಕುರಿತು ಉನ್ನತ ಮಟ್ಟದ ಚರ್ಚೆಗಳು, ಪತ್ರ ವ್ಯವಹಾರಗಳೂ ನಡೆದಿವೆ!.

ಸಂಸ್ಕೃತಿ, ಕೃಷಿಯ ಅಗತ್ಯವಾಗಿ ನಾವು ಹಸುವನ್ನು ಲಾಗಾಯ್ತಿನಿಂದ ನೋಡಿದ್ದೇವೆ, ಆದರೆ ಬ್ರಿಟೀಷರ ದೃಷ್ಟಿ ಬೇರೆಯೇ ಆಗಿತ್ತು. ಕಾಡು ಹುಲಿಗಳನ್ನು ಭೇಟೆಯಾಡುವ ಖಯಾಲಿಗೂ ಹಸುಗಳ ಬೇಡಿಕೆಯಿತ್ತು. ನಾಲ್ಕಾಣೆ, ಎಂಟಾಣೆಗಳಿಗೆ ಖರೀದಿಸುತ್ತಿದ್ದರು. ಹುಲಿ ಓಡಾಡುವ

ಆಯಕಟ್ಟಿನ ನೆಲೆಗಳಲ್ಲಿ ಜಾನುವಾರುಗಳನ್ನು ಮರಕ್ಕೆ ಕಟ್ಟುತ್ತಿದ್ದರು. ಹಸು ತಿನ್ನಲು ಬರುವ ಹುಲಿಯನ್ನು ಬಿದಿರಿನ ಅಟ್ಟಣಿಗೆಯಲ್ಲಿ ಕೂತು ಕೊಲ್ಲುವ ಆಟ ನಡೆಯುತ್ತಿತ್ತು. ಶಿಕಾರಿ ಮೋಜಿಗೆ ಜಾನುವಾರು ನೀಡಲು ಕೃಷಿಕರು ಸಿದ್ದರಿರಲಿಲ್ಲ, ಇದಕ್ಕಾಗಿ ಪದೇ ಪದೇ ಸಂಘರ್ಷಗಳು ನಡೆಯುತ್ತಿದ್ದವು. ಹುಬ್ಬಳ್ಳಿ, ಹಾವೇರಿಯ ಬಯಲು ಸೀಮೆಗಳಿಂದ ದನಕರು ಖರೀದಿಸಿ ಹುಲಿ ಶಿಕಾರಿಗೆ ಬಳಸಲಾಗುತ್ತಿತ್ತು! ಪೂಜಿಸುವ ಹಸುಗಳನ್ನು ಕೊಲ್ಲುವ ಪ್ರಸಂಗ ಗಮನಿಸಿದ ಕೃಷಿಕರು ಆಗಾಗ ಸಿಡಿದೇಳುತ್ತಿದ್ದರು. ಹೊನ್ನಾವರ ಘಟನೆಯಂತೂ ವಿದೇಶಿಗರಿಗೆ ಭಾರತೀಯ ಹಸು ಸಂಸ್ಕೃತಿ ಕುರಿತು ಎಂದೂ ಮರೆಯಲಾಗದ ದೊಡ್ಡ ಪಾಠ ಕಲಿಸಿತ್ತು.

ಇಂದಿಗೂ ಕಸಾಯಿಖಾನೆಗೆ ಜಾನುವಾರು ಸಾಗಾಟ ವಿಚಾರದಲ್ಲಿ ಆಗಾಗ ಸಂಘರ್ಷ ನಡೆಯುತ್ತದೆ. ಹಸು ಕೊಲ್ಲುವವರ ವಿರುದ್ದ ದೂರುಗಳು ದಾಖಲಾಗುತ್ತಿವೆ. ಗೋ ಶಾಲೆಗಳ ಮುಖೇನ ತಳಿ ಸಂರಕ್ಷಣೆಯ ಜಾಗೃತಿ ಬಿತ್ತರವಾಗುತ್ತಿದೆ. ಕೃಷಿ ಬದುಕಿನ ಮಧ್ಯೆ ಲಾಭ-ನಷ್ಟದ ತುಲನೆ ನಡೆಸಿದವರು ೧೫ ವರ್ಷ ಉಳುಮೆಗೆ ಬಳಸಿದ ಎತ್ತುಗಳನ್ನು ನಿರ್ದಾಕ್ಷಿಣ್ಯವಾಗಿ ಕಸಾಯಿಖಾನೆಗೆ ನೀಡಿದ ಉದಾಹರಣೆಯಿದೆ. ಅಷ್ಟೇಕೆ ಒಂದು ಕಾಲದಲ್ಲಿ ಹುಲಿ ಶಿಕಾರಿಗೆ ಹಸು ನೀಡುವದಿಲ್ಲ ಎಂದು ಬ್ರಿಟಿಶರೆದುರು ಪ್ರತಿಭಟಿಸಿದ್ದ ಕಾಳಿ ಕಣಿವೆಯ ಹಳ್ಳಿಗರು ಈಗ ಸ್ವತಃ ಜಾನುವಾರುಗಳನ್ನು ಕಾಡಿಗೆ ಅಟ್ಟಿದ್ದಾರೆ! ಜಲಾಶಯ ಸನಿಹದ ಕಾಡುಗಳಲ್ಲಿ ಮೇವು ಅರಸುತ್ತ ಸಾವಿರಾರು ಸಂಖ್ಯೆಯಲ್ಲಿ ಹಸುಕರುಗಳು ೧೦-೨೦ ವರ್ಷಗಳಿಂದ ಅಪ್ಪಟ ಕಾಡು ಪ್ರಾಣಿಗಳಂತೆ ಬದುಕುತ್ತಿವೆ. ಕಾಡಲ್ಲಿ ಕರು ಹಾಕುತ್ತ ಸಂತಾನ ಬೆಳೆಯುತ್ತಿದೆ. ಅವು ವರ್ಷಕ್ಕೆ ಒಮ್ಮೆಯೂ ಕೃಷಿಕರ ಕೈಗೆ ಸಿಗುವದಿಲ್ಲ! 'ಖಂಡವಿದಕೋ, ಮಾಂಸವಿದಕೋ' ಎಂದು ಹುಲಿಗಳಿಗೆ ಆಹಾರವಾಗುತ್ತಿವೆ. ಒಂದು ಕಾಲಕ್ಕೆ ಇಂಗ್ಲೀಷರನ್ನು ಬೆಚ್ಚಿಬೀಳಿಸಿದ ಗೋವಧೆ ಪ್ರಸಂಗ ಈಗ ನಮ್ಮನ್ನೂ ಚಿಂತನೆಗೆ ಹಚ್ಚಿದೆ.

# ಪ್ರಾಧ್ಯಾಪಕರ ದಂಡು ಫಂಡಿನ ಹಿಂದೆ!

'ನಮ್ಮ ಪ್ರೊಫೆಸರ್‌ಗಳು ಪ್ರಾಜೆಕ್ಟ್ ಮಾಡಬೇಕು' ಎಂದು ಪ್ರಾಧ್ಯಾಪಕರ ದಂಡನ್ನು ಫಂಡಿನ ಹಿಂದೆ ಓಡಲು ಬಿಟ್ಟ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿಗಳಿದ್ದಾರೆ. ಪಾಠ ಕಲಿಸಲು ಸಮಯವಿಲ್ಲ, ಸಂಶೋಧನೆ ಕ್ಷೇತ್ರಕಾರ್ಯಕ್ಕೆ ಬಿಡುವಿಲ್ಲದವರು ಕೃಷಿ ಉತ್ಸವ, ಮೇಳಗಳಲ್ಲಿ ಮಾಹಿತಿಗೆ ಗಾಳ ಹಾಕಲು ಹಾಜರಾಗುತ್ತಾರೆ. ಮಧ್ಯಾಹ್ನ ಊಟದ ಖರ್ಚಿಗೆ ದುಡ್ಡಿಲ್ಲವೇನೋ ಎಂಬಂತೆ ವರ್ತಿಸುವ ಈ ಸಂಶೋಧಕರ ಪ್ರೊಜೆಕ್ಟ್ ರಿಪೋರ್ಟ್ ಕಸಿದು ನೋಡಿದರೆ ಹಣ ಬಿಡುವ ಹೈಬ್ರಿಡ್ ತಳಿ ಕಾಣುತ್ತದೆ!

ಬೀಜಮೇಳ, ಫಲಪುಷ್ಪ ಪ್ರದರ್ಶನ, ಕೃಷಿ ಉತ್ಸವ, ಮೂಲಿಕಾ ಮೇಳ ಹೀಗೆ ಗ್ರಾಮೀಣ ಜ್ಞಾನ ವಿನಿಮಯ ಕಾರ್ಯಕ್ರಮಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿವೆ. ಆಸಕ್ತ ಕೃಷಿಕರು, ವಿವಿಧ ಸ್ವಯಂ ಸೇವಾ ಸಂಸ್ಥೆಗಳು, ಕೃಷಿಕಪರ ಸಂಘಟನೆಗಳು ರೈತ ಮೂಲದ ಮಾಹಿತಿ ಸಂಗ್ರಹ ಹಾಗೂ ಜನಜಾಗ್ರತಿ ಕಾರ್ಯಗಳಲ್ಲಿ ನಿರತವಾಗಿವೆ, ಕೃಷಿ ಉತ್ಸವಗಳು ರೂಪುಗೊಳ್ಳುತ್ತಿವೆ. ಅಧಿಕಾರಿಶಾಹಿಯ ಸರಕಾರಿ ಕಾರ್ಯಕ್ರಮಗಳಿಗಿಂತ ಭಿನ್ನವಾದ ಇವು ಜನ ಸಹಭಾಗಿತ್ವದ ವಿಶೇಷವಾಗಿ ಜನಮನ್ನಣೆ ಗಳಿಸುತ್ತಿವೆ. ಕೃಷಿ-ಅರಣ್ಯ ಕ್ಷೇತ್ರಗಳ ವೈವಿಧ್ಯಗಳ ದರ್ಶನ ನೀಡುವ ಕಾರ್ಯಕ್ರಮಗಳು ಜನರಲ್ಲಿ ಸಂರಕ್ಷಣೆ ಪ್ರಜ್ಞೆ ಮೂಡಿಸಲು ಸಹಾಯಕವಾಗಿವೆ. ಆಸಕ್ತರು ಮಾಹಿತಿ ಅರಸಿ ಎಲ್ಲೋ ಹಳ್ಳಿ ಮೂಲೆ ಅಲೆಯುವ ಬದಲು ಇಂತಹ ಕಾರ್ಯದಲ್ಲಿ ಪಾಲ್ಗೊಂಡರೆ ಅನಾಯಾಸವಾಗಿ ಮಾಹಿತಿ ಸಂಪರ್ಕ ಸಾಧ್ಯವಾಗುತ್ತದೆ. ರಚನಾತ್ಮಕ ಮನಸ್ಸು, ಕಲಿಕೆ ಆಸಕ್ತಿಯ ಜನ ಯಾವ ಆಮಂತ್ರಣಕ್ಕೆ ಕಾಯದೇ ಮಾಧ್ಯಮ ಮಾಹಿತಿ ಮಾತ್ರದಿಂದ ಭಾಗವಹಿಸುತ್ತಾರೆ. ಸಂರಕ್ಷಣೆ ಕಾರ್ಯಕ್ಕೆ ಹೆಗಲು ನೀಡುತ್ತಾರೆ. ಬಿತ್ತಿ ಬೆಳೆದ ಅನುಭವ ಜ್ಞಾನ ವಿನಿಮಯ ನಡೆಯುತ್ತದೆ.

ಕಳೆದ ೫-೬ ವರ್ಷಗಳಿಂದ ಕರ್ನಾಟಕದಲ್ಲಿ ಜೀವ ವೈವಿಧ್ಯ, ಕೃಷಿ ವೈವಿಧ್ಯ ಸಂರಕ್ಷಣೆ ಹಿನ್ನೆಲೆಯಲ್ಲಿ ಹಲವು ಕಾರ್ಯಕ್ರಮಗಳು ಜರುಗಿವೆ. ಮಲೆನಾಡು, ಬಯಲು ಸೀಮೆಗಳಲ್ಲಿ ಬೀಜ ಸಂರಕ್ಷಕರ ಜಾತ್ರೆಗಳಿಗೆ ಮೆರಗು ಬಂದಿದೆ. ತಳಿ ಸಂರಕ್ಷಣೆ ಮಾಡಬೇಕು ಎಂಬ ಕಳಕಳಿಯಲ್ಲಿ ಶ್ರಮಿಸುವ ವ್ಯಕ್ತಿ, ಸಂಸ್ಥೆಗಳಿಲ್ಲದೇ ಇನ್ನೊಂದು ವರ್ಗ ಸದಾ ಇಂತಹ ಕಾರ್ಯಕ್ರಮಗಳಿಗಾಗಿ ಕಾಯುತ್ತಿರುತ್ತದೆ. ರಾಜ್ಯದ ಕೃಷಿ ವಿಶ್ವ ವಿದ್ಯಾಲಯದ ಆಯ್ದ ವಿಜ್ಞಾನಿಗಳು, ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳ ತಜ್ಞರು ಹೆಗಲಿಗೊಂದು ಕೆಮರಾ ಹಾಕಿಕೊಂಡು ವಾಸನೆ ಹಿಡಿದು ಕಾರ್ಯಕ್ರಮಕ್ಕೆ ಮುದ್ದಾಂ ಓಡಿ ಬರುತ್ತಾರೆ. ಇವರಲ್ಲಿ ನಿಜವಾದ ವಿಷಯ ಆಸಕ್ತಿ, ಕಲಿಕಾ ಶ್ರದ್ಧೆ, ಸಂಶೋಧನಾ ಪ್ರಜ್ಞೆ ಮಾತ್ರದಿಂದ ಬರುವವರ ಸಂಖ್ಯೆ ಎಷ್ಟು? ಅನುಮಾನವಿದೆ. ಯಾವುದೋ ರಿಸರ್ಚ್ ಪ್ರಾಜೆಕ್ಟ್‌ಗೆ ಮಾಹಿತಿ ಸಂಗ್ರಹಿಸಬೇಕು, ಸ್ಪೆಸಿಮನ್ಸ್ ಸಂಗ್ರಹಿಸಬೇಕು ಎಲ್ಲಕ್ಕಿಂತ ಮುಖ್ಯವಾಗಿ ಸಂಶೋಧನೆಯನ್ನು ಸುಲಭದಲ್ಲಿ ಮುಗಿಸಬೇಕು, ಮುಂದಿನ ಸಂಶೋಧನೆಗೆ ಹೊಸ ವಿಷಯ ಹುಡುಕಬೇಕು, ಫಂಡು ಹುಡುಕಬೇಕು ಎಂದು ಲೆಕ್ಕಹಾಕುವವರು ಜಾಸ್ತಿ. ಬೇರು ಮೂಲದ ಮಾಹಿತಿ ನೀಡಬಲ್ಲ ನೂರಾರು ಜನ ಕಾಲು ಮುರಿದಂತೆ ಕೂಡ್ರುವ ಇಲ್ಲಿ ಬಂದರೆ ತಮ್ಮ ರೊಟ್ಟಿ ಜಾರಿ ಸುಲಭದಲ್ಲಿ ತುಪ್ಪಕ್ಕೆ ಬಿದ್ದಂತಾಗುತ್ತದೆ! ಒಂದೆರಡು ವರ್ಷ ಅಲೆದರೂ ಮಾಡಲಾಗದ್ದು ದಿನದಲ್ಲಿ ಮುಗಿಸಲು ಸಾಧ್ಯವಾಗುತ್ತದೆ ಎಂಬುದು ಪಾಲ್ಗೊಳ್ಳುವಿಕೆಯ ಮುಖ್ಯಕಾಳಜಿ!.

'ನಿಮಗೆ ಈ ಮಾಹಿತಿ ಏಕೆ? ನಿಮ್ಮ ಪ್ರಾಜೆಕ್ಟ್ ವಿವರಗಳೇನು? ಎಷ್ಟು ವರ್ಷಗಳಿಂದ ಸಂಶೋಧನೆ ಮಾಡುತ್ತಿದ್ದೀರಿ? ಈ ವರೆಗೆ ಏನೇನು ಮಾಹಿತಿ ಸಂಗ್ರಹಿಸಿದ್ದೀರಿ? ರೈತರಿಗೆ ಮಾಹಿತಿ ಒದಗಿಸಲು ನಿಮ್ಮಲ್ಲಿ ಯಾವ ವ್ಯವಸ್ಥೆ ಇದೆ?..... ನಿಮ್ಮ ವಿಶ್ವವಿದ್ಯಾಲಯದ ಅಧಿಕೃತ ಪತ್ರ ಕೊಟ್ಟು ಮಾತಾಡಿ..... ವಿವರ ನೀಡಬೇಕೋ ..ಬೇಡವೋ ಪರಿಶೀಲಿಸಿ ಆಮೇಲೆ ಹೇಳುತ್ತೇನೆ' ಎಂದು ಥೇಟ್ ಸರಕಾರಿ ಕೆಂಪುಪಟ್ಟಿ ಶೈಲಿಯಲ್ಲಿ ನಮ್ಮ ಯಾವ ಕೃಷಿಕರೂ ಯಾವ ಮುಲಾಜಿಲ್ಲದೇ ವಿಜ್ಞಾನಿಗಳನ್ನು ಇಲ್ಲಿ ಕೇಳುವದಿಲ್ಲ! ನಮ್ಮ ಬಾಸ್‌ಗಳ ಸಹಿ ಹಾಕಿಸಿ ಉತ್ತರಿಸುತ್ತೇನೆಂದು ಸಾಗ ಹಾಕುವದಿಲ್ಲ. 'ಕಾಫಿ ಕುಡಿತೀರಾ? ಊಟ ಆಯ್ತಾ?' ಎಂದು ವಿಚಾರಿಸಿ ಅವರು ಕೇಳುವ ಮಾಹಿತಿಗಳನ್ನೆಲ್ಲ ಕಣ್ಮುಚ್ಚಿ ನೀಡುತ್ತಾರೆ. ವಿಜ್ಞಾನಿಗಳು, ಸಂಶೋಧಕರು ಎಂದರೆ ನಮ್ಮ ಹಳ್ಳಿ ಜನಕ್ಕೆ ಇವತ್ತಿಗೂ ಬಹಳ ಗೌರವವಿದೆ. ಸಂಶೋಧನೆಯ ಮಾಹಿತಿ ನಾಳೆ ನಮ್ಮ ಏಳ್ಗೆಗೆ ನೆರವಾಗುತ್ತದೆ ಎಂಬ ಮುಗ್ಧ ತಿಳುವಳಿಕೆಯಿದೆ. ಆದರೆ ಸಂಶೋಧಕರು, ವಿಜ್ಞಾನಿಗಳಲ್ಲಿ ಎಷ್ಟು ಜನ ನಂಬಿಕೆಗೆ ಅರ್ಹರಾಗಿದ್ದಾರೆ? ಹುಡುಕಬೇಕು.

ನಮ್ಮ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲ ವಿಜ್ಞಾನಿಗಳ ಕಾರ್ಯ ವೈಖರಿಯನ್ನು ಅನುಮಾನದಿಂದ ನೋಡಲು ಕಾರಣವಿದೆ. ರೈತರ ಜೊತೆ ತಮಗೆ ಅಗತ್ಯವಿರುವ ಮಾಹಿತಿ ಸಂಗ್ರಹಣೆ ಸಂದರ್ಭದಲ್ಲಿ ಇವರು ವ್ಯಕ್ತಪಡಿಸುವ ನಾಟಕೀಯ ವಿಧೇಯತೆ ಹಿಂದೆ ಇರುವ ಅಸಲಿ ಮುಖವೇ ಬೇರೆ! ನೂರಾರು ರೈತರು ಕಷ್ಟಪಟ್ಟು ಸಂಗ್ರಹಿಸಿದ ನಾಟಿ ಬೀಜವನ್ನೋ, ತಳಿ ವೈವಿಧ್ಯದ ಚಿತ್ರ ತೆಗೆದು ಸುಲಭದಲ್ಲಿ ದಾಖಲಿಸಿ ಕಾಲೇಜು/ಫಂಡಿಂಗ್ ಏಜನ್ಸಿ ಎದುರು ಉಪನ್ಯಾಸ ನೀಡುವ ಮಹನೀಯರು ಇಲ್ಲಿದ್ದಾರೆ. ಒಂದು ಗ್ರಾಮೀಣ ಸಂಘಟನೆಯಲ್ಲಿ ಕೃಷಿ, ಅರಣ್ಯ ಮೇಳ ಹೇಗೆ ನಡೆಯಿತು ? ಸಂಘಟನೆ ಹಿಂದಿನ ಪರಿಶ್ರಮವನ್ನು ಕನಿಷ್ಠ ಸೌಜನ್ಯಕ್ಕೂ ವಿಚಾರಿಸದೇ ಫೋಟೋ ಹೊಡೆಯಲು ಬರುವ ಘಟಿಂಗರ ಹಾಗೇ ವರ್ತಿಸುತ್ತಾರೆಂದರೆ ಇಂತಹ ವಿಜ್ಞಾನಿಗಳನ್ನು ಯಾವ ತಕ್ಕಡಿಯಲ್ಲಿಟ್ಟು ನೋಡಬೇಕು ? ಈಗ ಕಾಲ ಬದಲಾಗುತ್ತಿದೆ, ಸಂಶೋಧನೆ ಹಿಂದಿನ ಸತ್ಯವನ್ನು ಅರಿಯುವ ದಾರಿಗಳು ಹಲವಿದೆ. ಶಿಕ್ಷಣ ಜಾಗ್ರತಿಯಿಂದಾಗಿ ನಿಧಾನಕ್ಕೆ ಇಂತಹ ವರ್ತನೆಯನ್ನು ಪ್ರಶ್ನಿಸುವ ಸಂದರ್ಭಗಳು ಹೆಚ್ಚುತ್ತಿರುವಾಗ ಪ್ರೊಜೆಕ್ಟ್ ಫಂಡು ಪ್ರೇರಿತ ಕಾಯಂ ಸಂಶೋಧಕರ ವೈಖರಿ ಬದಲಾಗಬೇಕು.

'ನಾವು ನೀಡಿದ ನಾಟಿ ಭತ್ತ ಎಲ್ಲಿ ಬೆಳೆದಿದ್ದಾರೆ?' ಎಂದು ಭತ್ತ ಸಂಶೋಧನಾ ಕೇಂದ್ರಕ್ಕೆ ಮೂರು ವರ್ಷದ ಹಿಂದೆ ಕರಾವಳಿ ಕೃಷಿಕರೊಬ್ಬರು ಹೋಗಿ ವಿಚಾರಿಸಿದ್ದರು. ಸಂಶೋಧನೆಗೆಂದು ಸಂಗ್ರಹಿಸಿದ ಭತ್ತಗಳನ್ನು ಸಣ್ಣ ಸಣ್ಣ ಪ್ರಾತ್ಯಕ್ಷಿಕಾ ತಾಕುಗಳಲ್ಲಿ ಬೆಳೆದು ಇಳುವರಿ ಲೆಕ್ಕ ನಡೆಯುತ್ತಿತ್ತು, ೪೫ ಲಕ್ಷ ರೂಪಾಯಿ ವೆಚ್ಚದಲ್ಲಿ ತಳಿ ಸಂರಕ್ಷಣೆಯ ಸಂಶೋಧನೆ ಸಾಗುತ್ತಿತ್ತು. ನೂರಾರು ವರ್ಷಗಳಿಂದ ಕರಾವಳಿಯ ಗಜನಿ ಭೂಮಿಯ ಉಪ್ಪು ನೀರಿನಲ್ಲಿ ಬೆಳೆಯುತ್ತಿದ್ದ ಕಗ್ಗ ಭತ್ತವನ್ನು ಸಿಹಿ ನೀರಿನಲ್ಲಿ ಬೆಳೆಯಲಾಗಿತ್ತು! ತಮ್ಮ ಸಂಶೋಧನೆಯ ಅನುಕೂಲಕ್ಕೆಂದು ಇರುವ ಸಣ್ಣ ಹೊಲದಲ್ಲಿ ವಿಜ್ಞಾನಿ ಎಲ್ಲ ಜಾತಿಯ ಭತ್ತ ಬೆಳೆಯುವದಕ್ಕೂ, ರೈತರು ಮಣ್ಣು ಗುಣ ಗಮನಿಸಿ ನೂರಾರು ವರ್ಷಗಳಿಂದ ಯಾವ ತಳಿ ಎಲ್ಲಿ ಬೆಳೆಯಬೇಕೆಂದು ನಿರ್ಧರಿಸಿ ಫಲ ಅನುಭವಿಸುತ್ತಿರುವದಕ್ಕೂ ವ್ಯತ್ಯಾಸವಿದೆ. ಕೃಷಿ ತಳಿ ವಿಚಾರದಲ್ಲಿ ರೈತ ಎತ್ತರದಲ್ಲಿದ್ದರೂ ನಮ್ಮ ವ್ಯವಸ್ಥೆಯಲ್ಲಿ ಆತ ವಿಜ್ಞಾನಿಯಲ್ಲ! ತಳಿ ಸಂರಕ್ಷಣೆಯಲ್ಲಿ ಎಂತಹ ಮಹತ್ವದ ಕೊಡುಗೆ ರೈತರದ್ದಾದರೂ ಈಗಲೂ ನಾಲ್ಕು ಬೀಜ ಸಂಗ್ರಹಿಸಿ ತಮ್ಮ ಸಂಶೋಧನೆಯೆಂದು ದಾಖಲಿಸಿಕೊಳ್ಳುವ ಪಟಾಲಮ್ಮುಗಳಿವೆ. ಇಂತಹವರ ಬಗೆಗೆ ಪ್ರಶ್ನೆಗಳು, ಅನುಮಾನಗಳು ಹುಟ್ಟಲು ಇಷ್ಟು ಸಾಕು.

ಪ್ರಾಧ್ಯಾಪಕರಾಗಿ ಸೇರಿ ಪಾಠಕ್ಕಿಂತ ಪ್ರಾಜೆಕ್ಟ್‌ಗಳಲ್ಲೇ ಕಳೆದು ಹೋದವರ ದಂಡು ಕರ್ನಾಟಕದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಎಲ್ಲೆಂದರಲ್ಲಿ ತುಂಬಿದೆ. ಕಲಿಯಲು ಬಂದ ವಿದ್ಯಾರ್ಥಿಗಳನ್ನು ಸರಪಳಿ ಬಿಗಿದಂತೆ ರಿಸರ್ಚ್‌ಗಳಲ್ಲಿ ಜೀತಕ್ಕೆ ಬಳಸುವುದೂ ಮಾಮೂಲಿಯಾಗಿದೆ. 'ನಮ್ಮ ಪ್ರೊಫೆಸರ್‌ಗಳು ಪ್ರಾಜೆಕ್ಟ್ ಮಾಡಬೇಕು' ಎಂದು ಪ್ರಾಧ್ಯಾಪಕರ ದಂಡನ್ನು ಫಂಡಿನ ಹಿಂದೆ ಓಡಲು ಬಿಟ್ಟ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿಗಳಿದ್ದಾರೆ. ಪಾಠ ಕಲಿಸಲು ಸಮಯವಿಲ್ಲ, ಸಂಶೋಧನೆಯ ಕ್ಷೇತ್ರಕಾರ್ಯಕ್ಕೆ ಬಿಡುವಿಲ್ಲದವರು ಕೃಷಿ ಉತ್ಸವ, ಮೇಳಗಳಲ್ಲಿ ಮಾಹಿತಿಗೆ ಗಾಳ ಹಾಕಲು ಹಾಜರಾಗುತ್ತಾರೆ. ಮಧ್ಯಾಹ್ನ ಊಟದ ಖರ್ಚಿಗೆ ದುಡ್ಡಿಲ್ಲವೇನೋ ಎಂಬಂತೆ ವರ್ತಿಸುವ ಈ ಸಂಶೋಧಕರ ಪ್ರೊಜೆಕ್ಟ್ ರಿಪೋರ್ಟ್ ಕಸಿದು ನೋಡಿದರೆ ಹಣ ಬಿಡುವ ಹೈಬ್ರಿಡ್ ತಳಿ ಕಾಣುತ್ತದೆ, ಅದರಲ್ಲಿ ವರ್ಷಕ್ಕೆ ಕನಿಷ್ಟ ೪೫-೫೦ ಲಕ್ಷ ವಿನಿಯೋಗ ವ್ಯವಹಾರ, ಇದು ರೈತರ ಮಾಹಿತಿ ಹುಡುಕಲು ಹೊರಟ ಹಲವರ ನಿಜ ಮುಖ.

# ದೇವರ ಹಣದಲ್ಲಿ ಭಕ್ತರಿಗೆ ಸಾಲ!

ಬಾಂಗ್ಲಾದಲ್ಲಿ ರಿಕ್ಷಾ ಎಳೆಯುವವರ ಸ್ಥಿತಿ ಸುಧಾರಣೆಗೆ ಅಲ್ಲಿನ ಗ್ರಾಮೀಣ ಬ್ಯಾಂಕ ೧೯೮೦ ರಲ್ಲಿ ಸ್ವಸಹಾಯ ಸಂಘ ಸ್ಥಾಪಿಸಿದ್ದನ್ನು ಕೇಳುತ್ತೇವೆ. ಕರಾವಳಿಯ ಸಣ್ಣಪುಟ್ಟ ಗುಡಿಗಳು ಶತಮಾನಗಳಿಂದ ಭಕ್ತರಿಗೆ  ಸಾಲ ನೀಡುತ್ತ ಬಡವರ ಕಷ್ಟ ಪರಿಹರಿಸುತ್ತಿದ್ದ  ವಿಶಿಷ್ಟ ಪರಂಪರೆ ಇಲ್ಲಿದೆ.

ಪೂಜಾರಿ ಸಾಲ ಕೇಳಿದ್ದೇವೆ, ಇದು ದೇವರ ಸಾಲ! ಕಾಣಿಕೆ ಡಬ್ಬಿಹಣ ಸಾಲವಾಗಿ ಗ್ರಾಮೀಣ ಬದುಕಿನ ಸಂಕಷ್ಟ ನಿವಾರಣೆಗೆ ನೆರವಾಗುವ ವಿಶೇಷ. ರಾಜ್ಯದ ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕಿನ ಹಳಕಾರು ಹಳ್ಳಿಯಲ್ಲಿ ಅಂಕನಕುಳಿ ಜಟಕ ಹಾಗೂ ನಾಗದೇವತೆ ಎಂಬ ಎರಡು ದೇವರ ಗುಡಿಗಳಿವೆ. ಸುತ್ತಲಿನ ಹತ್ತಾರು ಸಮುದಾಯದ ಜನ ಭಕ್ತಿಯಿಂದ ಪೂಜಿಸುವ ಈ ದೇವರು ವರ ಕೊಡುತ್ತಾನೋ, ಪ್ರತ್ಯಕ್ಷನಾಗುತ್ತಾನೋ ಗೊತ್ತಿಲ್ಲ!. ಆದರೆ ಅಗತ್ಯವಿದ್ದವರಿಗೆ ಸಾಲವನ್ನಂತೂ ನೀಡುತ್ತಾನೆ. ದೇವರು ಕಷ್ಟ ಪರಿಹಾರಕ ಎಂಬುದಕ್ಕೆ ಕಳೆದ ೬೦ ವರ್ಷಗಳಿಂದ  ಇಲ್ಲಿ ಪುರಾವೆದೆ.

ಊರಿನ ದೇವಸ್ಥಾನದಲ್ಲಿ ವಿವಿಧ ಜನಾಂಗದವರೆಲ್ಲ ಸೇರಿ ವಾರ್ಷಿಕ ಗಡಿಪೂಜೆ ಮಾಡುತ್ತಾರೆ. ಪೂಜೆಯ ಅನುಕೂಲಕ್ಕಾಗಿ ಹಳ್ಳಿಯ ಪ್ರತಿ ಮನೆಯವರೂ ಸೂಲಗೆ(ಅಕ್ಕಿ ಅಳೆಯುವ ಪಾತ್ರೆ) ಅಕ್ಕಿ ನೀಡುತ್ತಿದ್ದರು. ಸಂಗ್ರಹವಾದ ಅಕ್ಕಿಯಿಂದ ಅಡುಗೆ ಮಾಡಿ ಹಬ್ಬದ ಸಂಭ್ರಮದ ಊಟ ನಡೆಯುತ್ತಿತ್ತು. ಇಡೀ ದಿನ ಹಳ್ಳಿಗರನ್ನು ಸೇರಿಸಲು ನೆರವಾಗುವ ಗಡಿಹಬ್ಬ ಹಳ್ಳಿಯನ್ನು ಒಂದು ಆಂತರಿಕ ಆಡಳಿತ ವ್ಯವಸ್ಥೆಯಾಗಿ ಬಂಧಿಸಿದೆ. ಕಾಲ ಬದಲಾದಂತೆ ಸೂಲಗೆ ಅಕ್ಕಿ ಬದಲು ಒಂದು ಆಣೆ ನೀಡುವ ರೂಢಿ ಬಂತು. ಇದರಿಂದ ಪೂಜೆ, ಊಟ ನಿರ್ವಹಣೆ. ಸಂಗ್ರಹವಾದ ಹಣ ಹಬ್ಬದ ಊಟದ ಖರ್ಚಿನ ಬಳಿಕ ಮಿಕ್ಕಿ ಉಳಿಯುತ್ತಿತ್ತು. ಇದನ್ನು ಎಲ್ಲಾದರೂ ತೊಡಗಿಸಿದರೆ ದೇವಸ್ಥಾನದ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂಬ ವಿಚಾರ ಬಂತು. ಹಣ ಉತ್ಪಾದಕ ಉದ್ದೇಶಗಳಿಗೆ ಬಳಕೆಯಾಗಬೇಕು ಎನ್ನುವ ಯೋಚನೆ ಬಂದಿದ್ದೇ ಅಗತ್ಯವಿದ್ದವರಿಗೆ ಸಾಲ ನೀಡಲು ಈ ಹಣ ಬಳಸಬಹುದೆಂದು ಹಿರಿಯರು ತೀರ್ಮಾನಿಸಿದರು. ಕಾಣಿಕೆ ಹಣ ಸಾಲದ ಬಂಡವಾಳವಾಯಿತು. ಆರಂಭದಲ್ಲಿ ಅತ್ಯಂತ ಬಡ ಕುಟುಂಬದವರು ೧೦೦-೧೨೫ ರೂಪಾಯಿ ಸಾಲ ಪಡೆದರು. ಪ್ರತಿ ವರ್ಷ ಅಕ್ಷತತದಿಗೆ ದಿನ ಶೇಕಡಾ ೧೦ ಬಡ್ಡಿ ಸಹಿತ ಸಾಲ ಮರುಪಾವತಿ ಮಾಡಬೇಕೆಂಬ ಒಪ್ಪಂದ ವಿಧಿಸಲಾಯಿತು. ತಪ್ಪಿದರೆ ದಂಡದ ಬಡ್ಡಿ ತೆರಬೇಕು ಎಂಬ ನಿಯಮ ಹೇರಲಾಯಿತು. ಭಕ್ತರ ಸಮೂಹದ ಹಿರಿಯರೊಬ್ಬರು ದೇವಾಲಯ ಆಡಳಿತ ನೋಡಿಕೊಳ್ಳುತ್ತ ಹಣದ ನಿರ್ವಹಣೆ ಆರಂಭಿಸಿದರು.

ದೇವರ ಸಾಲ ಸರಕಾರದ ಪೂಜಾರಿ ಸಾಲದಂತೆ ಯಾವತ್ತೂ ಹಳ್ಳ ಹಿಡಿದಿಲ್ಲ, ಸಬ್ಸಿಡಿ ಉದ್ದೇಶಕ್ಕೆ ಮುಡುಪಾಗಿಲ್ಲ. ಆಶ್ಚರ್ಯವೆಂದರೆ ಸಾಲ ಪಡೆದವರೆಲ್ಲ ಸಮಯಕ್ಕೆ ಸರಿಯಾಗಿ ಹಿಂದಿರುಗಿಸಿದ್ದಾರೆ. ಒಬ್ಬನೇ ಒಬ್ಬ ಕಟ್ಟಬಾಕಿದಾರನಾಗಿ ಉಳಿಯಲಿಲ್ಲ ಬಡ್ಡಿ ಹಣದಿಂದ ಕ್ರಮೇಣ ದೇವಾಲಯದ ಆದಾಯ ಹೆಚ್ಚಿದೆ. ದೇವರ ಹಣದಲ್ಲಿ ಸಾಲ ಪಡೆದು ಉದ್ಯೋಗ ಮಾಡಿದರೆ ಯಶಸ್ಸು ಸಾಧ್ಯವೆಂಬ ನಂಬಿಕೆ ಬೆಳೆದಿದೆ. ಪ್ರತಿ ವರ್ಷವೂ ಅಕ್ಷತ ತದಿಗೆ ದಿನ ಹಣ ಹಿಂದಿರುಗಿಸುವಾಗ ತಾನು ಪಡೆದ ಸಾಲದಿಂದ ಹೇಗೆ ಅಭಿವೃದ್ಧಿಯಾದೆ ಎಂಬ ಮಾತನ್ನು ಸಾಲಗಾರರು ಪ್ರಾಸಂಗಿಕವಾಗಿ ಮಾತಾಡುತ್ತಾರೆ. ಹೀಗಾಗಿ ವಾರ್ಷಿಕ ಹಬ್ಬ ವೃತ್ತಿ ಯಶೋಗಾಥೆಗಳ ದರ್ಶನ ನೀಡುತ್ತದೆ. ಹೊಸ ಉದ್ಯೋಗಿಗಳಲ್ಲಿ ವಿಶ್ವಾಸ ಹೆಚ್ಚಿಸಿದೆ. ದೇವರ ಸಾಲಗಾರರ ಸಂಖ್ಯೆ ಹೆಚ್ಚುತ್ತಿದೆ. ನಾಗದೇವತೆ ಹಣದಲ್ಲಿ ತಲಾ ೫೦೦ ರೂಪಾಯಿಗಳಂತೆ ೪೮ ಜನ ಹಾಗೂ ಅಂಕಣಕುಳಿ ಜಟಕ ದೇವರಲ್ಲಿ ೩೫೦ ರೂಪಾಯಿಯಂತೆ ೪೨ ಜನ ಸಾಲ ಪಡೆದಿದ್ದಾರೆ! ವರ್ಷದಿಂದ ವರ್ಷಕ್ಕೆ ಸಾಲ ಬೇಡಿಕೆ ಹೆಚ್ಚುತ್ತಿದೆ. ದೇವಾಲಯ ಅಭಿವೃದ್ದಿಯಾಗುತ್ತಿದೆ.

ಇಷ್ಟು ಕಡಿಮೆ ಹಣದಿಂದ ಏನು ಸಾಧನೆ ಸಾಧ್ಯ ಎಂಬ ಪ್ರಶ್ನೆ ಹುಟ್ಟಬಹುದು. ಹಿಂದುಳಿದ ಜನರ ವರ್ಗಕ್ಕೆ ಇದು ದೊಡ್ಡ ಮೊತ್ತ! ಇಷ್ಟು ಹಣವನ್ನು ಪಡೆಯಲು ಕಾಲದಿಂದ ಮನೆಯ ಧಾನ್ಯ, ಪಾತ್ರೆ ಮಾರುವ ಸ್ಥಿತಿ ಇತ್ತು. ೫೦೦ ರೂಪಾಯಿ ಸಂಗ್ರಹಿಸಲು ಒಬ್ಬ ಕೂಲಿಕಾರ ೧೦ ದಿನ ದುಡಿದರೂ ಸಾಧ್ಯವಾಗುವದಿಲ್ಲ. ಒಮ್ಮೆ ದೇವರ ಸಾಲವಾಗಿ ಇಷ್ಟು ಹಣ ಸಿಕ್ಕಾಗ ಆತ ಅದನ್ನು ಕುಡಿತ, ಜೂಜು ಇತ್ಯಾದಿ ಕಾರ್ಯಗಳಿಗೆ ವಿನಿಯೋಗಿಸುವುದಿಲ್ಲ. ದೇವರ ಹಣವಾದ್ದರಿಂದ ಕೆಟ್ಟ ಚಟಗಳಿಗೆ ತೊಡಗಿಸಲು ಎದೆಯೊಳಗೆ ಭಯ ಕಾಡುವುದರಿಂದ ನಮ್ಮ ಬ್ಯಾಂಕುಗಳು ನೀಡಲಾಗದ ಸಂಸ್ಕಾರವನ್ನು

ಹಳ್ಳಿ ಮೂಲೆಯ ನಂಬಿಕೆ ನೀಡುತ್ತದೆ. ಸಾಲ ಮರುಪಾವತಿಯೂ ಸಾಂಗವಾಗುತ್ತದೆ. ಇದಕ್ಕಿಂತ ಮುಖ್ಯವಾಗಿ ಹಬ್ಬದ ದಿನ ಊರವರೆಲ್ಲ ಸೇರಿದಾಗ ಸಾಲ ಏಕೆ ಪಡೆಯಲಾಗುತ್ತದೆ ಎಂಬ ವಿಚಾರ ಕೂಲಂಕಷವಾಗಿ ತಿಳಿದ ನಂತರವೇ ಮಂಜೂರಿ ಹಣ ದೊರೆಯುತ್ತದೆ.

ವಿವರ ಗಮನಿಸಿದರೆ ಇಂದಿನ ಸ್ವಸಹಾಯ ಸಂಘಗಳ ರೀತ್ಯಾ ಕಾಣುತ್ತದೆ. ಗ್ರಾಮೀಣ ಆರ್ಥಿಕ ವ್ಯವಸ್ಥೆ, ಸಂಘಟನೆ ಪೂರಕವಾಗಿ ಕೆಲಸ ಮಾಡಿದ್ದು ಕಾಣುತ್ತದೆ. ಬಾಂಗ್ಲಾದಲ್ಲಿ ರಿಕ್ಷಾ ಎಳೆಯುವವರ ಸ್ಥಿತಿ ಸುಧಾರಣೆಗೆ ಅಲ್ಲಿನ ಗ್ರಾಮೀಣ ಬ್ಯಾಂಕ್ ೧೯೮೦ರಲ್ಲಿ ಸ್ವಸಹಾಯ ಸಂಘ ಸ್ಥಾಪಿಸಿದ್ದನ್ನು ಇಂದು ಸ್ವಸಹಾಯ ತರಬೇತಿ ಕಾರ್ಯಕ್ರಮಗಳಲ್ಲಿ ಕೇಳುತ್ತೇವೆ. ನಮ್ಮ ಎಲ್ಲಾ ಉದಾಹರಣೆಗಳೂ ಅಲ್ಲಿಂದ ಆರಂಭವಾಗುತ್ತವೆ. ಕರಾವಳಿಯ ಸಣ್ಣಪುಟ್ಟ ಗುಡಿಗಳು ಶತಮಾನಗಳಿಂದ ಸಾಲ ನೀಡಿಕೆಯನ್ನು ಪರಂಪರೆಯಾಗಿ ಬೆಳೆಸಿದ ವಿಶೇಷ ನಾವು ಗಮನಿಸಬೇಕು! ಯೋಜನೆಗಳು ಮೇಲುಸ್ತರದಿಂದ ಆದರೆ ಅಭಿವೃದ್ದಿಯಾಗುವುದಿಲ್ಲ, ಕೆಳಹಂತದಲ್ಲಿ ರಚನೆಯಾಗಬೇಕು ಎಂದು ಸ್ವಸಹಾಯದ ಮಹತ್ವ ಹೇಳುತ್ತೇವೆ. ಬಾವಿಯಲ್ಲಿ ಬಿದ್ದವರಿಗೆ ಆಹಾರ ನೀಡುವುದಕ್ಕಿಂತ ಹಗ್ಗ ನೀಡುವುದು ಮುಖ್ಯವಾದುದು. ನಾವು ಬಡತನವನ್ನು ಮೇಲೆತ್ತಲು ನೀಡುವ ಹಗ್ಗ ಕೂಡ ಸ್ಥಳೀಯ ಮಾದರಿ ಬಳಸಿದಾಗ ಅಭ್ಯುದಯ ಪರಿಣಾಮ ಹೆಚ್ಚು. ನಮ್ಮ ಸ್ವಸಹಾಯ ಸಂಘಗಳಿಗೆ ನೆಲದ ಪಾಠ ಹೇಳುವ ತಾಕತ್ತು ಜನಪದ ಪರಂಪರೆಗೆ ಇದೆ. ಕಣ್ತೆರೆದು ನೋಡುವ ತಾಕತ್ತು ನಮ್ಮೆಲ್ಲರಿಗೆ ಬರಬೇಕು.

# ಹೈಟೆಕ್ ಸಿಟಿಯಲ್ಲಿ ದೇಸೀ ಜ್ಞಾನಪಾಠ

ಹಳ್ಳಿಯಲ್ಲಿ ತಯಾರಾಗುವ ಮಿಡಿಮಾವಿನ ಉಪ್ಪಿನಕಾಯಿ, ಹಲಸಿನ ಸಂಡಿಗೆ, ತೊಡೆದೇವು, ಹಪ್ಪಳ, ಶ್ಯಾವಿಗೆ, ಅಕ್ಕಿರೊಟ್ಟಿ, ದ್ರವರೂಪದ ಬೆಲ್ಲ, ಹುಣಸೆ ತೊಕ್ಕು ಹೀಗೆ ಆಹಾರ ಉತ್ಪನ್ನಗಳಿಗೆ ಹೆಸರು ಮಾತ್ರದಿಂದ ಜನರನ್ನು ಗೆಲ್ಲುವ ತಾಕತ್ತಿದೆ. ಹಳ್ಳಿಗಾಡಿನ ಮಹಿಳೆಯರು ಅನುಭವ ಮಾರ್ಗದಲ್ಲಿ ಕಂಡುಕೊಂಡ ಆಹಾರ ರುಚಿ ಯಾವ ಪ್ರಚಾರದ ಅಗತ್ಯವಿಲ್ಲದೇ ಮತ್ತೆ ಮತ್ತೆ ಜನರನ್ನು ಸೆಳೆಯಬಲ್ಲದು. ಕೋಕಂ ಜ್ಯೂಸ್, ನೆಲ್ಲಿ ಜ್ಯೂಸ್, ಕರಬೂಜ್ ಜ್ಯೂಸ್, ಎಳ್ಳುನೀರು, ಒಂದೆಲಗದ ತಂಬಳಿ ಸೇರಿದಂತೆ ನೂರಾರು ವಿಧದ ಪಾನೀಯಗಳು ಹಳ್ಳಿಯಲ್ಲಿವೆ. ವಿವಿಧ ಋತುಮಾನಗಳಲ್ಲಿ ಬಳಸುವ ಪಾನೀಯಗಳ ಹಿಂದೆ ಆರೋಗ್ಯ ಪಾಠಗಳಿವೆ. ಜಾಗತೀಕರಣ ಗೆಲ್ಲುವ ದಾರಿಯಿದೆ.

ಉತ್ತರ ಕರ್ನಾಟಕದಲ್ಲಿ ಬಿಳಿಜೋಳದ ರೊಟ್ಟಿ ಊಟ ಅತ್ಯಂತ ಜನಪ್ರಿಯ. ಊಟಕ್ಕೆ ತರಹೇವಾರು ಪಲ್ಯ, ಚಟ್ನಿಗಳು ದೇಸೀ ಸೊಗಡಿನ ಗಮ್ಮತ್ತು. ಖಡಕ್ ರೊಟ್ಟಿ ಹಾಗೂ ಬ್ಯಾಡಗಿ ಮೆಣಸಿನ ಖಾರ ಮರೆತು ಇಲ್ಲಿನ ಹಳ್ಳಿ ಊಟ ಯೋಚಿಸಲಾಗದು. ಆದರೆ ನಗರದಲ್ಲಿ ತಲೆ ಎತ್ತಿದ ಚೆಂದದ ಹೊಟೆಲ್‌ಗಳು ಈ ಪ್ರದೇಶದಲ್ಲಿ ಮೈಸೂರು, ಬೆಂಗಳೂರು, ಉಡುಪಿ ಶೈಲಿಯ ಊಟ ನೀಡಲು ಆರಂಭಿಸಿದ್ದವು. 'ರೊಟ್ಟಿ ಇಲ್ಲದ ಊಟ ಹ್ಯಾಂಗ್ ಆಗ್ತೇತ್ರಿ?' ಪ್ರಶ್ನೆ ಹೋಟೆಲ್‌ಗಳ ತಲೆ ಬಿಸಿ ಮಾಡಿದವು. ಇಷ್ಟು ಕಾಲ 'ಊಟ ಸಿಗುತ್ತದೆ' ಎಂದಷ್ಟೆ ಬೋರ್ಡು ತಗಲಿಸಿದವರು ಈಗ ಜನರ ರುಚಿ ರಹಸ್ಯ ಅರಿತ ಬಳಿಕ 'ನಮ್ಮಲ್ಲಿ ಬಿಳಿಜೋಳದ ರೊಟ್ಟಿ ಸಿಗುತ್ತದೆ' ಎಂಬ ಸಾಲು ಸೇರಿಸಿದರು! ಅಷ್ಟೇಕೆ ಡೆಲ್ಲಿಯಿಂದ ಬಾಂಬೆವರೆಗೂ ಊಟಕ್ಕೆ ಚಪಾತಿ, ಪೂರಿ ನೀಡುವುದೇ ತಮ್ಮ ಊಟದ ವಿಶೇಷವೆಂದ ಕಾಮತ್ ಹೊಟೆಲ್‌ಗಳೂ ಈಗ ಉತ್ತರ ಕರ್ನಾಟಕದಲ್ಲಿ ರೊಟ್ಟಿ ಊಟ ಸಿಗುತ್ತದೆಂದು ಬೋರ್ಡು ತಗಲಿಸಿವೆ. ಪಿಜ್ಜಾ, ಪಾನಿಪುರಿ, ಗೋಬಿ ಮಂಚೂರಿ, ಪರೋಟಾ ಹೀಗೆ ಉತ್ತರ ಭಾರತದ ಅಡುಗೆ ವಿಶೇಷಗಳು ಎಷ್ಟೇ ಬರಲಿ ನಮ್ಮ ನಾಲಗೆ ಮಾತ್ರ ಖಾನಾವಳಿ, ಹಳ್ಳಿಮನೆ ಅಡುಗೆಯನ್ನು ಬಿಟ್ಟುಕೊಡಲು ಸಿದ್ದವಿಲ್ಲ.

ಹಳ್ಳಿಯಲ್ಲಿ ಬೆಳೆದವರೇ ಉದ್ಯೋಗ ನಿಮಿತ್ತ ನಗರ ಸೇರಿದ್ದಾರೆ. ಒಂದಿಷ್ಟು ಕಾಲ ಇದ್ದಬಿದ್ದ ರುಚಿಗೆ ಮರುಳಾದರೂ ಕೊನೆಗೆ ನಗರದ ಮಾಮೂಲಿ ಊಟಕ್ಕೆ ಬೇಜಾರು ಹುಟ್ಟಿಕೊಳ್ಳುವುದು ಸಹಜ. ಆಗ ಹಾಸನದ ಜನಕ್ಕೆ ಮುದ್ದೆ ಬೇಕು, ಮಂಗಳೂರಿನ ಮಂದಿಗೆ ಕುಚ್ಚಿಗೆ ಅಕ್ಕಿಯ ಅನ್ನ ಬೇಕು, ರೊಟ್ಟಿ ಇಲ್ಲದಿದ್ದರೆ ಊಟವೇ ಇಲ್ಲ ಎಂದು ಬಯಲು ಸೀಮೆಯ ಜನ ನೆಲದ ಅಡುಗೆ ನೆನಪು ಹುಡುಕಿ ಹೊರಟಾಗ ದೇಸೀ ರುಚಿ ಸಿದ್ದಗೊಳಿಸುವ ಬಾಣಸಿಗರಿಗೆ ಬಲ, ಕೃಷಿ ಮಾರುಕಟ್ಟೆ ವಿಸ್ತರಣೆಗೆ ಬೆಂಬಲ! ಬೆಳೆ ಸಂರಕ್ಷಣೆ ಬಗೆಗೆ ದೊಡ್ಡ ದೊಡ್ಡ ಮಾತಾಡುವ ನಾವು ದೇಸೀ ಅಡುಗೆ ವಿಶೇಷಗಳ ಮುಖೇನ ಗ್ರಾಮೀಣ ಉತ್ಪನ್ನಗಳಿಗೆ ಮಾರುಕಟ್ಟೆ ಮಾರ್ಗದ ಅವಕಾಶ ಅರ್ಥಮಾಡಿಕೊಳ್ಳಬೇಕು. ನಮ್ಮ ಅಡವಿ, ಕೃಷಿ ಉತ್ಪನ್ನಗಳನ್ನೇ ಬಳಸಿ ತಯಾರಿಸುವ ಅಡುಗೆಗಳ ಬಗೆಗೆ ಇತ್ತೀಚಿನ ಜನಪ್ರಿಯತೆ ಗಮನಿಸಿದರೆ ಗೆಲ್ಲುವ ದಾರಿಗಳು ಗೋಚರವಾಗುತ್ತದೆ. ಟಿ.ವಿ. ರೇಡಿಯೋ, ಪತ್ರಿಕೆಗಳಂತೂ ಅಡುಗೆ ವಿಶೇಷಗಳನ್ನು ಪ್ರಚಾರ ಮಾಡಲು ಪ್ರತ್ಯೇಕ ಕಾರ್ಯಕ್ರಮಗಳನ್ನೇ ಪ್ರಸ್ತುತಪಡಿಸುತ್ತಿವೆ. ಇಂತಹ ಕಾರ್ಯಕ್ರಮಗಳಲ್ಲಿ ದೇಸೀ ಅಡುಗೆ ಪ್ರಾಧಾನ್ಯತೆ ಪಡೆಯುತ್ತಿವೆ. ನಮ್ಮ ಅಡುಗೆ ಮನೆ ಹೊಸರುಚಿ ಜನಮನ ಗೆದ್ದರೆ ಅದನ್ನು ತಯಾರಿಸಲು ಬಳಸುವ ನಮ್ಮ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಸಾಧ್ಯವಾಗುತ್ತದೆ.

ಹಳ್ಳಿಯಲ್ಲಿ ತಯಾರಾಗುವ ಮಿಡಿಮಾವಿನ ಉಪ್ಪಿನಕಾಯಿ, ಹಲಸಿನ ಸಂಡಿಗೆ, ತೊಡೆದೇವು, ಹಪ್ಪಳ, ಶ್ಯಾವಿಗೆ, ಅಕ್ಕಿರೊಟ್ಟಿ, ದ್ರವರೂಪದ ಬೆಲ್ಲ, ಹುಣಸೆ ತೊಕ್ಕು ಹೀಗೆ ಆಹಾರ ಉತ್ಪನ್ನಗಳಿಗೆ ಹೆಸರು ಮಾತ್ರದಿಂದ ಜನರನ್ನು ಗೆಲ್ಲುವ ತಾಕತ್ತಿದೆ. ಹಳ್ಳಿಗಾಡಿನ ಮಹಿಳೆಯರು ಅನುಭವ ಮಾರ್ಗದಲ್ಲಿ ಕಂಡುಕೊಂಡ ಆಹಾರ ರುಚಿ ಯಾವ ಪ್ರಚಾರದ ಅಗತ್ಯವಿಲ್ಲದೇ ಮತ್ತೆ ಮತ್ತೆ ಜನರನ್ನು ಸೆಳೆಯಬಲ್ಲದು. ಕೋಕಂ ಜ್ಯೂಸ್, ನೆಲ್ಲಿ ಜ್ಯೂಸ್, ಕರಬೂಜ್ ಜ್ಯೂಸ್, ಎಳ್ಳುನೀರು, ಒಂದೆಲಗದ ತಂಬಳಿ ಸೇರಿದಂತೆ ನೂರಾರು ವಿಧದ ಪಾನೀಯಗಳು ಹಳ್ಳಿಯಲ್ಲಿವೆ. ವಿವಿಧ ಋತುಮಾನಗಳಲ್ಲಿ ಬಳಸುವ ಪಾನೀಯಗಳ ಹಿಂದೆ ಆರೋಗ್ಯ ಪಾಠಗಳಿವೆ. ಕೋಕೋ ಕೋಲಾ, ಪೆಪ್ಸಿಗಳ ಅಬ್ಬರದ ಜಾಹೀರಾತಿನ ಎದುರು ಈಗಲೂ ಇವು ಜನಪ್ರಿಯತೆ ಉಳಿಸಿಕೊಂಡಿವೆ. ಹಳ್ಳಿಯಂಚಿನ ಪುಟ್ಟ ಪೇಟೆಗಳಲ್ಲಿ ದೊರೆಯುವ ಎಷ್ಟೋ ಸ್ಥಳೀಯ ಪಾನಿಯಗಳು ದೂರದ ನಗರ ತಲುಪಿಲ್ಲ. ಇಂತಹ ಆಹಾರ – ಪಾನೀಯಗಳನ್ನು ಗುರುತಿಸಿ ನಗರಕ್ಕೆ ಪರಿಚಯಿಸಲು ಅವಕಾಶ ಬಳಸಿಕೊಂಡರೆ ಉದ್ಯೋಗ ಸೃಷ್ಟಿ ಸಾಧ್ಯವಿದೆ. ತುಂಗಾಮೂಲ ಉಳಿಸಿ ಆಂದೋಲನ ಒಮ್ಮೆ ಶಿವಮೊಗ್ಗೆಯಲ್ಲಿ ಕವಿಗೋಷ್ಠಿ ಆಯೋಜಿಸಿತ್ತು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಾಹಿತಿ ಯು.ಆರ್. ಅನಂತಮೂರ್ತಿ ತುಂಗಾ ನದಿ ಸಂಸ್ಕೃತಿ ಬಗೆಗೆ ಮಾತಾಡುತ್ತ ತೀರ್ಥಹಳ್ಳಿಯಲ್ಲಿ ಮಾಡುತ್ತಿದ್ದ "ಇಬ್ಬನಿ ಹಿಟ್ಟನ್ನು" ನೆನಪಿಸಿಕೊಂಡರು. ಇವರ ಬಳಿಕ ಮಾತಿಗೆ ನಿಂತ ಬಹುತೇಕ ಕವಿಗಳು, ಭಾಷಣಕಾರರು ಇಬ್ಬನಿ ಹಿಟ್ಟನ್ನು ಕೊಂಡಾಡಿದರು. ಇದೊಂದು ಸಿಹಿ ತಿಂಡಿ ಎಂಬುದು ಮಾತ್ರ ಅವತ್ತಿನ

ಕಾರ್ಯಕ್ರಮದಲ್ಲಿ ತಿಳಿಯಿತಾದರೂ ಮುಂದಿನ ಯಾವ ವಿವರವೂ ಯಾರಲ್ಲಿಯೂ ಸಿಗಲಿಲ್ಲ. ಪ್ರಶ್ನಿಸಿದಾಗ 'ಅದು ತೀರ ಹಳ್ಳಿಗಾಡಿನ ತಿಂಡಿ, ಈಗ ಯಾರೂ ಮಾಡುವುದಿಲ್ಲ' ಎಂದು ಹಳ್ಳಿಗರೇ ಹೇಳಿದರು! ಆ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಲ್ಪಟ್ಟ 'ಇಬ್ಬನಿಹಿಟ್ಟು' ಸೇರಿದ ನೂರಾರು ಜನರಿಗೆ ಹಳ್ಳಿ ರುಚಿಯ ನೆನಪು ತಂದಿದ್ದು ನಿಜ. ರುಚಿ ನೋಡುವ ಕುತೂಹಲ ಮೂಡಿಸಿತು. ಮಲೆನಾಡಿನ ಆಲೆಮನೆ ಸಂದರ್ಭದಲ್ಲಿ ತಯಾರಿಸುವ ಇದು ನಗರದ ಹೊಟೆಲ್ ಮೆನುಗೆ ಸೇರಲು ಯೋಗ್ಯವಿದೆ. ರುಚಿ ನೆನಪುಗಳು ಇಂತಹ ದೇಸೀ ರುಚಿಗೆ ಮರುಜೀವ ನೀಡಬೇಕಿದೆ. ಇಂತಹ ವಿಶೇಷ ಭಕ್ಷ್ಯಗಳ ಮಾಹಿತಿ ಸಂಗ್ರಹ, ತಯಾರಿ ಮುಖೇನ ಹೈಟೆಕ್ ಸಿಟಿಯಲ್ಲೂ ದೇಸೀ ಸೊಗಡು ಬೀರಬಹುದು.

ನಾವು ಪ್ರವಾಸ ಹೊರಡುವಾಗ ಇಂತಹ ದೇವಸ್ಥಾನಕ್ಕೆ ಭೇಟಿ ನೀಡಬೇಕು, ಜಲಪಾತ ನೋಡಬೇಕು, ಸಮುದ್ರ ತೀರದಲ್ಲಿ ನಡೆದಾಡಬೇಕು ಎಂದು ಯೋಚಿಸುತ್ತೇವೆ. ಆದರೆ ಅಲ್ಲಿನ ಅಡುಗೆ ವಿಶೇಷಗಳ ಸ್ವಾದ ಅರಿಯಲು ಮರೆಯುತ್ತೇವೆ. ಇತ್ತೀಚೆಗೆ ನಿಧಾನಕ್ಕೆ ನಮ್ಮ ಪ್ರವಾಸಿ ಸ್ಥಳಗಳಲ್ಲಿ ಗ್ರಾಮೀಣ ಅಡುಗೆಯನ್ನು ಪರಿಚಯಿಸುವ ಪ್ರಯತ್ನ ಆರಂಭವಾಗಿದೆ. ಚಿಂತಾಮಣಿ ಮಸಾಲೆ ಕಡ್ಲೆ, ಕಿನ್ನಾಳದ ಪುರಿ ಹಾಗೂ ಇಳಕಲ್ ಚಟ್ನಿ, ಬಾಂಡ್ರಾವಿಯ ಮಿರ್ಚಿ ಹಾಗೂ ಇಡ್ಲಿ, ದಾವಣಗೆರೆಯ ಬೆಣ್ಣೆ ದೋಸೆ, ತುಮಕೂರಿನ ಕಾಯಿ ಇಡ್ಲಿ, ಪುತ್ತೂರಿನ ನೀರು ದೋಸೆ, ಹೊನ್ನಾವರ ಗುಣವಂತೆ ತುಪ್ಪದ ದೋಸೆ, ಶಿರಸಿ ರಾಗಿಹೊಸಳ್ಳಿಯ ಬನ್ಸ್, ಬೆಳಗಾವಿಯ ಕುಂದಾ, ಧಾರವಾಡದ ಫೇಡಾ, ಗೋಕಾಕದ ಕರದಂಟು ಈಗಾಗಲೇ ಜನರನ್ನು ಗೆದ್ದ ಆಯ್ದ ಆಹಾರಗಳು. ಸರಕಿನ ಹಿಂದೆ ರೈತ ಉತ್ಪನ್ನಗಳ ಬೆಂಬಲವಿದೆ. ರಾಗಿಹೊಸಳ್ಳಿಯ ಬನ್ಸ್ ಇನ್ನಷ್ಟು ಜನಪ್ರಿಯವಾಗುವಾಗ ಅದಕ್ಕೆ ಸ್ಥಳೀಯವಾಗಿ ಬೆಳೆಯುವ 'ಮೆಟ್ಲ ಬಾಳೆ' ನಾಟಿ ತಳಿಗೆ ಜೀವ ಬರುತ್ತದೆ. ಚಿಂತಾಮಣಿಯ ಮಸಾಲೆ ಕಡ್ಲೆಯ ಹಿಂದೆ ನೆಲಗಡಲೆಯ ಗೆಲುವಿದೆ. ಇಂತಹ ಶುಚಿ-ರುಚಿಯ ಆಹಾರಗಳು ಜನರಿಗೆ ಸುಲಭ ಲಭ್ಯವಾದರೆ ಇನ್ಯಾವುದೋ ಪರದೇಸೀ ಆಹಾರಕ್ಕೆ ಓಡುವವರನ್ನು ಸೆಳೆದು ನಿಲ್ಲಿಸಬಹುದು. ನಮ್ಮ ನೆಲದ ಉತ್ಪನ್ನಗಳೇ ಸಂಸ್ಕರಿತಗೊಂಡು ಜನಮನ ಗೆಲ್ಲುವ ಸುಲಭ ಸಾಧ್ಯತೆಗಳನ್ನು ಗುರುತಿಸುವದು ಕೃಷಿಯಲ್ಲಿ ಗೆಲ್ಲುವ ದಾರಿಯಾಗುತ್ತದೆ. ದೇಸೀ ಆಹಾರ ಪರಂಪರೆಯನ್ನು ಹೈಟೆಕ್ ಸಿಟಿಯಲ್ಲಿ ಪರಿಚಯಿಸಬೇಕು, ಹಳ್ಳಿ ಕೃಷಿ ಉತ್ಪನ್ನಗಳ ಸಂಸ್ಕರಣೆ ದೊಡ್ಡ ಲಾಭ ಹಳ್ಳಿಗೆ ದೊರಕಿಸುವ ಪ್ರಯತ್ನಗಳು ಬೇಕು. ಪರದೇಸೀ ರುಚಿಗೆ ಪರಿಪಾಟಲು ಅನುಭವಿಸುತ್ತಿರುವ ನಗರವಾಸಿಗಳಿಗೆ ದೇಸೀ ರುಚಿಯನ್ನು ಹಳ್ಳಿ ಮನೆಯ ಪ್ರೀತಿಯಲ್ಲಿ ಕಟ್ಟಿಕೊಡುವವರು ಪ್ರಸ್ತುತ ಜಾಗತೀಕರಣ ವಿರುದ್ಧ ಹೋರಾಡುವ ಇಂದಿನ ಚೆನ್ನಮ್ಮರಾಗುತ್ತಾರೆ, ಕೃಷಿ ವಹಿವಾಟಿನ ಮಹತ್ವದ ಕೊಂಡಿಯಾಗುತ್ತಾರೆ.

# ಬಿದಿರು:ಹಸುರು ಹೊನ್ನಿಗೆ ಸುಗ್ಗಿ ಸಂಭ್ರಮ

ಮಲೆನಾಡಿಗೆ ಬಂದಿದೆ  ಒಂದು ಬಿದಿರಿನ ಕಾಗದ,

ಕಾಡು ಮನೆಯಲ್ಲೀಗ ದುಃಖದ ಸಾಗರ ಎಂಬುದು ಸದ್ಯದ ಸ್ಥಿತಿ.

ಹೂವರಳಿ ಒಣಗಿ ಸಾಯುವ ಇದೇ ಬಿದಿರು ಗಳುಗಳು ಮಣ್ಣು ಮೆತ್ತಿಕೊಂಡು ಬಯಲು ಸೀಮೆಯಲ್ಲಿ ಶತಮಾನಗಳಿಂದ ಉಳಿದಿವೆ, ಎಳೆ ಶಿಶುಗಳ ಅಳು ನಿಲ್ಲಿಸುವ ತೊಟ್ಟಿಲಾಗಿವೆ.  ವಿಚಿತ್ರವೆಂದರೆ ಪಶ್ಚಿಮ ಘಟ್ಟದ ಜೀವಜಾಲದ ತೊಟ್ಟಿಲಲ್ಲಿ  ನಕ್ಕು ನಲಿದಾಡಿ ಬೆಳೆದ  ಹೆಮ್ಮೆಯ ಬಿದಿರು ಈಗ ಅಲ್ಲಯೇ  ಹೆಣವಾಗಿ ಮಲಗುತ್ತಿದೆ.

ಕಾಡು ಬಿದಿರಿನ ಬೀಜಮೇಳಕ್ಕೆ ಜೀವಮಾನದ ಕಟ್ಟಕಡೆಗೆ ಕಾಲನ ಕರೆ ಬಂದಿದೆ. ಕಸುವಿನ ಮಣ್ಣಲ್ಲಿ ಮುಂಗಾರಿಗೆ ಮತ್ತೆ  ಹುಲ್ಲು ಚಿಗುರಾಗಿ ಮೊಳೆಯಬೇಕು, ಹೀಗಾಗಿ  ಹೊಸ ಬಿದಿರು ಬೆಳೆಗೆ ನಿಸರ್ಗ ಚಕ್ರದ ಸಿದ್ದತೆ ಸಾಗಿದೆ.  ಸಹಜ ಉಳುಮೆ ನಡೆದು ಬಿತ್ತನೆಯೂ ಶುರುವಾಗಿದೆ. ಹಳ್ಳ ಕೊಳ್ಳಗಳಲ್ಲಿ  ಬೀಜದಿಂದ ಬಿದಿರು ಬೆಳೆಯುವ ಮಹಾ ಕನಸು ಮೂಡಿದೆ. ಹೂವರಳಿ ಶಕ್ತಿ ಬೀಜಗಳಾಗಿ ಹಿಗ್ಗಿದ ಹೆಬ್ಬಿದಿರು( ಬಾಂಬೂಸಾ ಅರುಂಡೀನೆಸಿಯಾ) ಪಶ್ಚಿಮ ಘಟ್ಟದ ತುಂಬ  ಇಮ್ಮಡಿ ಉತ್ಸಾಹದಲ್ಲಿ ಚೆಂದದ ತೆನೆ ತೋರಣ ಕಟ್ಟಿದೆ. ಬಿದಿರು ಹಿಂಡುಗಳ ಫಲಿತ ಬೀಜಗಳೆಲ್ಲ ಇನ್ನೇನು  ಭೂ ತಾಯಿಯ ಮಡಿಲು ಸೇರುವ ಕ್ಷಣ ಎದುರಿದೆ.

ಹಸುರು ಹೊನ್ನಾಗಿ ಇಷ್ಟು ಕಾಲ  ನಳನಳಿಸಿ  ಜೀವ ಜಾಲದ  ತೊಟ್ಟಿಲಾದದ್ದು  ಇದು. ಕರಕುಶಲ ವಸ್ತುಗಳ ಆಧಾರ, ಬಡವರ ಮನೆ ನಿರ್ಮಾಣದ ಅಗತ್ಯ, ಕೃಷಿಕರ ಊರುಗೋಲಾಗಿ ಬಳಕೆ ಬಹುವಿಸ್ತಾರ. ಮೂಲನೆಲೆ ಮಲೆನಾಡು, ಆದರೂ  ಬಯಲು ನಾಡಿನ ತುಂಬ ಬಿದಿರಿಗೆ ಭಾರೀ ನೆಂಟರು. ಕಾಡಿನಂಗಳದಲ್ಲಿ ನಾಳಿನ ತಲೆಮಾರಿಗೆಂದು  ಬೀಜ  ಚೆಲ್ಲಿ ತಾನು  ಒಣಗುತ್ತ ಒಣಗುತ್ತ  ಬಾಣಂತಿಯಂತೆ ಬಸವಳಿದಿದೆ. ತಾನೇ ಹೆತ್ತ ಬೀಜಗಳ ಎದುರು ನಮ್ಮ ಕಾಡಿನ ಈ ದೊಡ್ಡ ಹುಲ್ಲು ಸಾವಿನ ಸೆರಗು ಹೊದ್ದಿದೆ. ಹಿಂಡಿಗೆ ಹಿಂಡೇ ಒಮ್ಮೆಗೆ ಒಣಗಿ ನಿಂತ ರೀತಿಯಲ್ಲಿ ಕಾಳ್ಗಿಚ್ಚಿಗೆ ಕೊರಳೊಡ್ಡುವ ಭೀತಿ ಕಾಣುತ್ತಿದೆ. ಮುಂಬರುವ ದಶಕ  ಸಾರ್ವತ್ರಿಕ ಬಿದಿರು ಬರ!. ಮಲೆನಾಡಿನ ಕಾಡು  ಸೂತಕದ ಮನೆ.

ಇದೇನು ಇದ್ದಕ್ಕಿದ್ದಂತೆ ಘಟಿಸಿದ ಸಂಗತಿಯಲ್ಲ, ಬಿದಿರು ಹೊಲದ ಇಂತಹುದೇ ಕಾಡು ಸುಗ್ಗಿ  ಈಗ ೪೫ ವರ್ಷಗಳ ಹಿಂದೆ ಜರುಗಿದ ಮಾತು ಕೇಳಿದ್ದೇವೆ. ಹಲವು ಹಿರಿ ಜೀವಗಳಿಗೆ ಬಿದಿರಕ್ಕಿ ಉಂಡ ನೆನಪುಗಳಿವೆ. ಬಿದಿರು ಕಾಡಿಗೆ ಬೆಂಕಿ ತಗಲಿದ ದಾಖಲೆಗಳಿವೆ. “ಬಿದಿರು ಹೂವರಳಿಸಿದರೆ ಬರಗಾಲ’ ಎಂಬ ಭಯದ ಮಾತು ಮಲೆನಾಡಿನಲ್ಲಿದೆ. ೪೦-೪೫ ವರ್ಷಕ್ಕೆ ಒಮ್ಮೆ ಹೂವರಳಿಸುವ ಹೆಬ್ಬಿದಿರು ಸಂಭ್ರಮವನ್ನು ಬರಗಾಲದ ಜತೆ ಅರ್ಥಮಾಡಿಕೊಂಡಿದ್ದಕ್ಕೆ ಕಾರಣ ಸ್ವಾರಸ್ಯಕರ. ಮನುಷ್ಯನಿಗೆ ತನ್ನ ಜೀವಿತದಲ್ಲಿ ಒಂದೆರಡು ಸಾರಿ ಮಾತ್ರ  ಬಿದಿರು ಹೂವು ನೋಡುವ ಅವಕಾಶ. ಕಾಡಿನಲ್ಲಿ ಬಿದಿರು ಹೂವರಳಿಸಿದಂತೆ ಇತ್ತ ನಾಡಿನ ಜನ ವಿವಿಧ ರೋಗರುಜಿನೆಗಳಿಗೆ ತುತ್ತಾಗುತ್ತಿದ್ದರು. ಹೀಗಾಗಿ  ಬಿದಿರು ಹೂವನ್ನು ಭವಿಷ್ಯದ ಅಪಾಯದ ಸಂಕೇತವೆಂಬ ಊಹೆ.

ಬಿದಿರಕ್ಕಿ ತಿಂದು ಇಲಿಗಳು ಬೆಳೆಯುತ್ತವೆ, ನಂತರ ಪ್ಲೇಗ್ ಬರುತ್ತಿದ್ದ ಕತೆಗಳನ್ನು ನಾವು ಕೇಳುತ್ತೇವೆ. ಆದರೆ  ಬಿದಿರು ಹೂವರಳಿಸಿದ್ದಕ್ಕೆ ಬರಗಾಲ ಬಂದ ಅಧಿಕೃತ ದಾಖಲೆಗಳು ತೀರ ಕಡಿಮೆ. ಹೂವರಳಿಸಿದ ವರ್ಷಗಳಲ್ಲಿ  ಬಿದಿರಕ್ಕಿ ಸಂಗ್ರಹಕ್ಕೆ ಬರಗಾಲ ಪ್ರದೇಶದ ಜನ ತಂಡೋಪ ತಂಡವಾಗಿ ಮಲೆನಾಡಿಗೆ ವಲಸೆ ಬರುತ್ತಿದ್ದರು. ಅವರ ಜತೆಯಲ್ಲಿ  ಪ್ಲೇಗ್, ಮೈಲಿ ಬೇನೆಗಳು  ಒಕ್ಕರಿಸುತ್ತಿದ್ದವು. ರೋಗದಿಂದ ಹಳ್ಳಿ ಹಳ್ಳಿಗಳೇ ಖಾಲಿಯಾಗುತ್ತಿದ್ದವು, ಅಪಾರ ಸಾವು ನೋವು ಸಂಭವಿಸುತ್ತಿದ್ದವು.  ಬಿದಿರಕ್ಕಿ ಆದ ವರ್ಷ ಇದು ನಡೆಯುತ್ತಿದ್ದುದರಿಂದ  ಬಿದಿರು ಹೂವರಳಿಸಿದರೆ ಜನರಲ್ಲಿ ಭಯ ಮೂಡುತ್ತಿತ್ತು. ಕಾಡಲ್ಲಿ ಬಿದಿರಕ್ಕಿ ಆದ ವರ್ಷ ಸಾಂಕ್ರಾಮಿಕ ರೋಗಗಳು ಹೆಚ್ಚುತ್ತಿದ್ದವು. ಬಯಲುಸೀಮೆ ಜನ ಮಲೆನಾಡಿಗೆ ವಲಸೆ

ಬಂದು ವಿವಿಧ ರೋಗಗಳು ವ್ಯಾಪಿಸುತ್ತಿದ್ದ ಉಲ್ಲೇಖವಿದೆ. ಕ್ರಿ.ಶ. ೧೮೬೫-೬೬ರಲ್ಲಿ ಬಿದಿರು ಹೂವರಳಿಸಿದಾಗ ಉತ್ತರ ಕನ್ನಡ ಪ್ರದೇಶಕ್ಕೆ ಬಯಲು ಸೀಮೆಯ ೫೦,೦೦೦ ಜನ ಬಂದು ಬಿದಿರಕ್ಕಿ ತಿಂದು ಬದುಕಿದರು!. ಕ್ರಿ.ಶ. ೧೮೯೩ರ ಮುಂಬಯಿ ಇಲಾಖೆಗೆ ಸೇರಿದ ಗ್ಯಾಝೇಟಿಯರ್‌ನಲ್ಲಿ ಕ್ರಿ.ಶ. ೧೮೭೬ರ ಭೀಕರ ಬರಗಾಲದಲ್ಲಿ ಬೆಳಗಾವಿ ಜಿಲ್ಲೆಯ ಬಡ ಜನರು ತಿನ್ನುತ್ತಿದ್ದ ಆಹಾರದ ಪಟ್ಟಿಯಿದೆ. ಅದರಲ್ಲಿರುವ ಮೊದಲ ಹೆಸರು ಬಿದರಕ್ಕಿಯದು!. ಬಿದಿರಕ್ಕಿ ಬಡ ಜನರ ಅನ್ನದ ಅಧಾರವಾಗಿ ಮಲೆನಾಡಿನ ಕಾಡುಗಳು ಬಯಲುಸೀಮೆಯ ಜನರ ಬರಗಾಲದ ಪುನರ್‌ವಸತಿ ತಾಣಗಳಾಗಿದ್ದವು.

ನಮ್ಮ ಪಶ್ಚಿಮ ಘಟ್ಟದಲ್ಲಿ ಬಿದಿರೆಂದರೆ ಅವಜ್ಞೆಗೆ ಗುರಿಯಾದ ಕಾಡು ಕಳೆ. ಸ್ವಾತಂತ್ರ್ಯದ ಹೊಸತರಲ್ಲಿ ನೈಸರ್ಗಿಕ ಸಂಪನ್ಮೂಲ ಬಳಸಿ ಕೈಗಾರಿಕೆ ಬೆಳೆಸಿ ಎಂದ ನೆಹರು ನೀತಿಯಿಂದ ಅರಣ್ಯಾಧರಿತ ಕೈಗಾರಿಕೆಗಳು ಬೆಳೆದು ಬಂದವು. ಬಿದಿರು ಕಡಿಯಲು ಕಾಡು ಗುಡ್ಡಗಳಲ್ಲಿ ಲಾರಿ ಓಡಾಟ, ಹೊಸ ರಸ್ತೆ ನಿರ್ಮಾಣ, ಕೊಳ್ಳದ ಬಿದಿರು ಸಂಪತ್ತು ಕಾಗದ ಕಾರ್ಖಾನೆಗಳತ್ತ ಹೊರಟ ಕಾಲ ಅದು. ಚದರ ಕಿಲೋ ಮೀಟರ್‌ಗೆ ೧೫ ಜನರೂ ಇಲ್ಲದ ನಿರ್ಜನ ಅರಣ್ಯ. ಮಲೆನಾಡು ಪೂರ್ತಿ ಅಪ್ಪಟ ಅರಣ್ಯ ಜಿಲ್ಲೆ. ವನ್ಯ ಸಂಪತ್ತಿನ ಬಗೆಗೆ ಇದ್ದ ಕಳಕಳಿಯೂ ತೀರ ಕಡಿಮೆ. ಸ್ವತಃ ಅರಣ್ಯ ಇಲಾಖೆಗೂ ನೈಸರ್ಗಿಕ ಕಾಡು ಕಡಿಯುವುದು, ಸುಡುವುದು, ಶಿಸ್ತಿನಲ್ಲಿ ಸಾಗವಾನಿ ನೆಡುವ ಏರು ಪ್ರಾಯ! ಕೃಷಿಕರಿಗೆ ಇತ್ತ ಹೊಸ ಕೃಷಿ ಭೂಮಿ ಮಾಡುವ ಉತ್ಸಾಹ. ಕೃಷಿಗಾಗಿ ಅರಣ್ಯ ಭೂಮಿಯನ್ನು ಹೆಚ್ಚು ಹೆಚ್ಚು ನೀಡುವುದು ಸರಕಾರದ ಜನಪರ ಧೋರಣೆ. ಕೃಷಿ ವಿಸ್ತರಣೆಗೆ ಕಂದಾಯ ಇಲಾಖೆಗೆ ಕಾಡು ಭೂಮಿ ಹಸ್ತಾಂತರಿಸುವುದು ಅರಣ್ಯಾಧಿಕಾರಿಗಳ ದಕ್ಷತೆಯ ದೊಡ್ಡ ಮಾನದಂಡ! ಬಿದಿರು ಕಡಿಯಲು ರಸ್ತೆಯಾದರೆ ಊರಿಗೆ ಚಕ್ಕಡಿ ಓಡಾಟ ಸಾಧ್ಯವಾಗುತ್ತದೆ, ಬಿದಿರಿಗೆ ಬೆಂಕಿ ಬಿದ್ದರೆ ಕೃಷಿ ಭೂಮಿ ಫಲವತ್ತತೆ ಹೆಚ್ಚಿಸಲು ಹೆಚ್ಚು ಹೆಚ್ಚು ಬೂದಿ ದೊರೆಯುತ್ತದೆಂಬ ಸರಳ ಲೆಕ್ಕಾಚಾರ ಮಲೆನಾಡಿನ ಮನೆಮನೆಯಲ್ಲಿದ್ದ ಕಾಲ ಆದು .

ಈಗ ಕಾಡಿನ ಕತೆ ಸಾಕಷ್ಟು ಬದಲಾಗಿದೆ, ನಾಡು ಹಿಗ್ಗಿದೆ. ಕಾಡು, ಕಣಿವೆಗಳು ಬಯಲಾಗಿ ಚದರ ಕಿಲೋ ಮೀಟರ್ ಕ್ಷೇತ್ರದಲ್ಲಿ ೩೦೦-೪೦೦ ಜನಸಂಖ್ಯೆ ಏರಿ ಮಾನವ ಹಸ್ತಕ್ಷೇಪಗಳು ಮಿತಿಮೀರಿವೆ. ನಗರ ಬೆಳೆಯುತ್ತ ಮೂಲಭೂತ ಸಂಪರ್ಕ ಸುಧಾರಣೆಯಾಗುತ್ತಿದೆ, ಉರುವಲು, ಜಾನುವಾರು ಮೇವು, ಬೃಹತ್ ಯೋಜನೆಗಳ ಪ್ರಹಾರಕ್ಕೆ ಅಪಾರ ನಾಶ ನಡೆದು ಪರಿಸ್ಥಿತಿ ಬಿಗಡಾಯಿಸಿದೆ. ನದಿ ತೊರೆಗಳು ಬತ್ತಿವೆ, ಅಂತರ್ಜಲ ಕುಸಿದಿದೆ. ವನ್ಯಜೀವಿಗಳ ವಾಸದ ನೆಲೆಗೆ ಇನ್ನಿಲ್ಲದ ಆಘಾತ ಒದಗಿದೆ.

ಹೂವರಳಿಸುವ ಸಹಜ ಕ್ರಿಯೆಗೆ ಈಗ ಬಿದಿರಿಗೆ ಸಂಭ್ರಮವಿದ್ದರೂ ಇಡೀ ಕಾಡು ಕಂಗಾಲಾಗಿದೆ. ಕಾಡು ಕೊಳ್ಳದ ಚಿತ್ರ ತೆಗೆದು ಅಲ್ಲಿನ ಬಿದಿರನ್ನು ಅಳಿಸಿದರೆ ಅರ್ಧ ಕಾಡಿಗೇ ಕಾಡೇ ಖಾಲಿ ಖಾಲಿ! ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಂಗಳೂರು ಪ್ರದೇಶದ ದಟ್ಟ ಕಾಡುಗಳಲ್ಲಿ ಪ್ರತಿ ಹೆಕ್ಟೇರ್‌ನಲ್ಲಿ ೧೦೦-೨೦೦ ಬಿದಿರು ಹಿಂಡುಗಳಿವೆ, ಪ್ರತಿ ಹಿಂಡುಗಳಲ್ಲಿ ನೂರಾರು ಬಿದಿರು ಹೆಮ್ಮರಗಳ ಎತ್ತರಕ್ಕೆ ಹಸುರು ಛಾವಣಿ. ಈಗ ಒಣಗಿ ಮುಂದಿನ ಎರಡು ಮೂರು ವರ್ಷಗಳಲ್ಲಿ ನಾಶವಾಗಲಿವೆ. ರಾಜ್ಯದಲ್ಲಿ ೭೫೦೦ ಚದರ ಕಿಲೋ ಮೀಟರ್ ಕ್ಷೇತ್ರದಲ್ಲಿ ಬಿದಿರು ಕಾಡಿದೆ. ಇವುಗಳ ಪೈಕಿ ೨೫೦೦ ಹೆಕ್ಟೇರ್ ಪ್ರದೇಶ ರಾಷ್ಟ್ರೀಯ ಉದ್ಯಾನ ಹಾಗೂ ಅಭಯಾರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿದೆ. ಇಲ್ಲಿ ವಾರ್ಷಿಕ ೧೦೦೦-೨೫೦೦ ಮಿಲಿ ಮೀಟರ್ ಮಳೆ ಸುರಿಯುತ್ತದೆ. ಒಂದೊಂದು ಎಕರೆಯಲ್ಲಿ ವರ್ಷಕ್ಕೆ ೫೦-೮೦ಲಕ್ಷ ಲೀಟರ್ ಮಳೆ ನೀರು ಸುರಿಯುತ್ತದೆ. ಪ್ರವಾಹದ ಅಬ್ಬರದಲ್ಲಿ ಕಾಡಿನ ದಟ್ಟಣೆಯಿತ್ತು. ಇಷ್ಟುಕಾಲ ಕಡಿದಾದ ಕೊಳ್ಳಗಳಿಗೆ ಹಾನಿ ತಗಲದಂತೆ ಬೇಲಿಯಾಗಿ ಬಿದಿರು ನಿಂತಿತ್ತು. ನೆಲ, ಜಲ ಸಂರಕ್ಷಣೆಗೆ ನೆರವಾಗಿತ್ತು. ಭೂಮಿ ಬಚಾವು ಮಾಡುವ ಸುಲಭ ಆಸ್ತ್ರ ಈಗ ನಮ್ಮ ಕೈತಪ್ಪಿದೆ. ಕಡಿದಾದ ಕೊಳ್ಳಗಳಲ್ಲಿ ನಿಸರ್ಗ ನೇಮಿಸಿದ ಅಕ್ಕರೆಯ ಹಸುರು ನೌಕರರು ಸುದೀರ್ಘ ರಜೆಗೆ ಹೊರಟಿದ್ದಾರೆ.

ಹೊಸ ಹೊಸ ಸಮಸ್ಯೆಗಳು ಎದುರಾಗಲಿವೆ. ನೆಲಕ್ಕೆ ಬಿದ್ದ ಬೀಜ ಮೊಳೆತು ಬೆಳೆಯಲು ಇನ್ನು ಕನಿಷ್ಟ ಹತ್ತಾರು ವರ್ಷ ಬೇಕು. ಕಾಡಿಗೆ ಮೇವಿಗೆ ಹೋಗುವ ನಮ್ಮ ಜಾನುವಾರುಗಳು ಎಳೆ ಚಿಗುರು ತಿನ್ನುತ್ತವೆ. ಕಾಳ್ಗಿಚ್ಚು ಸಮಸ್ಯೆ ಉಲ್ಬಣಗೊಂಡು ಬೆಂಕಿ ಕಾವಲು ದೊಡ್ಡ ಸಮಸ್ಯೆ. ಮಣ್ಣಿನಲ್ಲಿ ಸತ್ವ ಇದ್ದರೆ ಮಾತ್ರ ಭವಿಷ್ಯದಲ್ಲಿ ಗುಣಮಟ್ಟದ ಬಿದಿರು ಬೆಳೆಯುತ್ತದೆ. "ಬಿದಿರಿಗೆ ಬೀಜ ಕನಸು, ಅರಣ್ಯ ಇಲಾಖೆಗೆ ಕಡಿಯುವ ಮನಸು" ಎಂಬುದು ಇಂದಿನ ಸ್ಥಿತಿ. ರಾಜ್ಯ ಅರಣ್ಯ ಇಲಾಖೆಯ ಅರಣ್ಯ ಕಾರ್ಯಯೋಜನೆಯ ಮಾರ್ಗದರ್ಶಿಯಲ್ಲಿ ಬಿದಿರು ಕಟಾವಿಗೆ ನಿರ್ದೇಶನವಿದೆ. ಬಿದಿರು ಹೂವರಳಿಸುವ ಪೂರ್ವದಲ್ಲಿ ಪ್ರತಿ ಹಿಂಡಿನಲ್ಲಿರುವ ಶೇಕಡಾ ೭೦-೮೦ ಬಿದಿರು ಗಳು ಕಡಿಯಬೇಕು. ಇನ್ನುಳಿದ ಆಯ್ದ ಶೇಕಡಾ ೩೦ರಷ್ಟನ್ನು ಹೂವರಳಲು ಸಂರಕ್ಷಿಸಬೇಕು ಎಂದು ಸೂಚಿಸಲಾಗಿದೆ.

ಕಳೆದ ಕ್ರಿ.ಶ. ೧೯೭೩ರಲ್ಲಿ ಮಲೆನಾಡಿನಲ್ಲಿ ಬಿದಿರು ಹೂವರಳಿಸಿದ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ಬೆಂಕಿ ಅನಾಹುತವಾಗಿತ್ತು. ಈ ಹಿನ್ನೆಲೆಯಲ್ಲಿ ಹೂವರಳುವ ಪೂರ್ವದಲ್ಲಿ  ವ್ಯಾಪಕ ಪ್ರಮಾಣದಲ್ಲಿ ಬಿದಿರು ಕಡಿಯುವ ನಿರ್ಧಾರ ಮಹತ್ವ ಪಡೆದಿದೆ. ಬೆಂಕಿ ತಡೆಗೆ ವಿಶೇಷ ಮುಂಜಾಗೃತೆ ವಹಿಸಬೇಕು. ಬಿದಿರು ಕಾಳುಗಳನ್ನು  ಸಂಗ್ರಹಿಸಿ  ಸಂರಕ್ಷಿಸಿ ಆಯ್ದ ಸ್ಥಳಗಳಲ್ಲಿ ಬಿತ್ತನೆ ಮಾಡುವ ಮೂಲಕ ಮುಂದೆ  ಹೊಸ ಸಸ್ಯ ಬೆಳೆಸಲು ಪ್ರಯತ್ನ ಮಾಡಬೇಕು  ಎಂಬುದು ಇಲಾಖೆಯ ಆಸೆ. ಹೇಳಿ ಕೇಳಿ ಇದು  ನಮ್ಮ ಕಾಡಿನ ಶೂನ್ಯ ಕೃಷಿಯ ಸಂಪಾದನೆ. ನಮ್ಮ  ಕರ್ನಾಟಕ ಅರಣ್ಯ ಇಲಾಖೆ ರಾಜ್ಯದ ಬಿದಿರು ಬೆಳೆಯ ದೊಡ್ಡ ಜಮೀನ್ದಾರ!  ಬಿದಿರು ಸಂಪತ್ತು ಹಾಗೂ ಇವುಗಳ ಸುಸ್ಥಿರ ಬಳಕೆ, ಸಂರಕ್ಷಣೆ  ವಿಚಾರದಲ್ಲಿ  ಇಲಾಖೆಯ ಅರಿವು ಮಾತ್ರ ಸೀಮಿತ.  ಕಾರ್ಖಾನೆಗೆ ಗುತ್ತಿಗೆ ನೀಡುವದು, ಮೇದಾರರಿಗೆ ರಿಯಾಯತಿ ದರದಲ್ಲಿ ಬಿದಿರು ನೀಡುವುದೇ ಆದ್ಯತೆ ಕೆಲಸ.

ಬಿದಿರು ಸಂಪನ್ಮೂಲಗಳ ವಿಸ್ತ್ರತ ಆಧ್ಯಯನ, ಮಾಹಿತಿ ಸಂಗ್ರಹ, ನೈಸರ್ಗಿಕ ಸಂಪತ್ತು ರಕ್ಷಣೆ ವಿಚಾರದ  ಇಡೀ ಬಿದಿರು ವ್ಯವಹಾರ ಗಮನಿಸಿದರೆ ಅದು ಬಿದಿರಿನಷ್ಟೂ ನೆಟ್ಟಗಿಲ್ಲ ! ಬಡ ಮೇದಾರರಿಗೆ ಅನುಕೂಲವಾಗಲೆಂದು ಸರಕಾರದ ರಿಯಾಯತಿ ದರದಲ್ಲಿ ಬಿದಿರು ನೀಡುತ್ತದೆ. ಪಾಪ ಆದು ಬಡವರ ಕೈತಪ್ಪಿ ಬಯಲು ನಾಡಿನ ಬಾಂಬೂ ಬಜಾರಗಳ ತುಂಬ ಮಾರಾಟಕ್ಕೆ ನಿಂತರೂ ಇಲಾಖೆ ಕಣ್ಣೆತ್ತಿ ನೋಡಿದ್ದಿಲ್ಲ ! ಸಿಂದನೂರು, ಗಂಗಾವತಿ ದಾಟಿ ನೆರೆಯ ಆಂಧ್ರಕ್ಕೆ ಹೋದರೂ ಕೇಳುವವರಿಲ್ಲ. ಮಳೆಗಾಲದಲ್ಲಿ ಬಿದಿರು ಕಟಾವು ಮಾಡಬಾರದು, ಒಂದು ಹಿಂಡಿನಲ್ಲಿ  ಎಳೆಯ ಬಿದಿರು ಕಡಿಯಬಾರದು, ಕನಿಷ್ಟ ೮-೧೦ ಬಿದಿರು ಉಳಿಸಬೇಕು ಎಂಬ ನಿಯಮವೇನೋ ಲಾಗಾಯ್ತಿನಿಂದ ಇದೆ. ಕಟಾವು ನಿಯಮ ಮುರಿದ್ದಕ್ಕೆ ದಂಡ ವಿಧಿಸಿದ, ಸ್ವಯಂ ಸ್ಫೂರ್ತಿಯಿಂ◌ಂದ ಕಾನೂನು ಕ್ರಮ ಕೈಗೊಂಡ ದಾಖಲೆಗಳಿವೆಯೇ ಅರಣ್ಯ ಭವನವೇ ಹೇಳಬೇಕು ! ಹೋಗಲಿ ಈಗ  ಬೆಂಕಿ ನಿಯಂತ್ರಣ ಕಾರಣ ಮುಂದೊಡ್ಡಿ ಅರಣ್ಯ ಕಾರ್ಯಯೋಜನೆಗಳಲ್ಲಿ  ಶೇಕಡಾ ೮೦ ಬಿದಿರು ಕಡಿಯಲು ಶಿಫಾರಸ್ಸು ನೀಡಿದ ಕ್ರಮ ಕೂಡಾ ಕೇವಲ ವ್ಯಾವಹಾರಿಕ ನೋಟದ್ದು. ಕಳೆದ ೧೯೯೯ರಿಂದ ಈವರೆಗೆ ಬಿದಿರು ಹೂವರಳಿಸಿದ ಚಿಕ್ಕಮಂಗಳೂರು, ಶಿವಮೊಗ್ಗ ಪ್ರದೇಶಗಳಲ್ಲಿ  ಪ್ರತಿ ಹಿಂಡಿನಲ್ಲಿ ಶೇಕಡಾ ೨೫, ಶೇಕಡಾ ೫೦, ಶೇಕಡಾ ೬೦ ಬಿದಿರುಗಳನ್ನು ಕಡಿದು ಅಲ್ಲಿನ ಪ್ರಯೋಗ ಫಲಿತಾಂಶ ಗಮನಿಸಿದ ಅನುಭವ ಇಲಾಖೆಗೆ ಬೇಕಿತ್ತು, ಕಲಿಯುವ ಮನಸ್ಸು ಕಾಡು ಕಾಯುವವರಲ್ಲಿ ಕಾಣುತ್ತಿಲ್ಲ. ತಜ್ಞರ ನೆರವು, ನೆಲಮೂಲ ಸಮಸ್ಯೆಗಳ ಅರಿವು ಬಿದಿರು ಬೆಂಕಿಯ ಸಮಸ್ಯೆಗೆ ಪರಿಣಾಮಕಾರಿ ಪರಿಹಾರ ಹೇಳಬಹುದು. ಅರಣ್ಯ ಭವನದ ತುಂಬ ಹಿರಿಯ ಅಧಿಕಾರಿಗಳ ದಂಡೇ ಇದೆ, ಆದರೆ ಕಾಡು ನೆಲದಲ್ಲಿ ಓಡಾಡುವ ಸಿಬ್ಬಂದಿಗಳ ದೊಡ್ಡ ಕೊರತೆಯಿದೆ. ಗಾರ್ಡ, ಫಾರೆಸ್ಟ್‌ಗಳ ಹುದ್ದೆಗಳು ಖಾಲಿ ಇವೆ. ಸೆಮಿನಾರು, ಮೀಟಿಂಗು, ಫೈಲುಗಳಲ್ಲಿ  ಸಮಯ ಜಾರುತ್ತಿದೆ. ಕಾಡು ನೋಡುವ ಪುರುಸೂತ್ತು  ಕಡಿಮೆಯಾಗಿದೆ.

ಬಿದಿರು ಹೂವರಳಿದ್ದು ಕಾಡಿನ ಸಂಭ್ರಮಕ್ಕಿಂತ ಸಂಕಟ ಹೆಚ್ಚಿಸಿದ್ದಂತೂ ಖಾತ್ರಿಯಾಗಿದೆ. ಸಂರಕ್ಷಣೆಯ ಇಡೀ ಸಮಸ್ಯೆಯನ್ನು ಕೇವಲ ಇಲಾಖೆಯ ಹೆಗಲಿಗೆ ಬಿಡುವದು ಸರಿಯಲ್ಲ.  ಸಂರಕ್ಷಣೆಗೆ ನಾವೂ ಸಹಾಯ ನೀಡಬೇಕಿದೆ. ಕಾಂಕ್ರೀಟು, ಕಬ್ಬಿಣದಲ್ಲಿ  ನಮ್ಮ ಬಳಕೆ ಬೆಳೆದರೂ  ಇದು ಇಂದಿಗೂ ಬಡವರ ಬಂಧು. ಬಯಲು ಸೀಮೆಗೆ ಮಳೆ ಚೆನ್ನಾಗಿ ಸುರಿದು  ರೈತರ ಕೈಯ್ಯಲ್ಲಿ ಹಣ ಓಡಾಡಿದರೆ ಅಲ್ಲಿನ ಬಾಂಬೂ ಬಜಾರಿನ ಬಿದಿರಿನ ಬೆಲೆ ಏರುತ್ತದೆ. ಹೂವರಳಿ ಒಣಗಿ ಸಾಯುವ ಇದೇ ಬಿದಿರಿನ ಗಳುಗಳೇ ಅಲ್ಲಿ ಮಣ್ಣು ಮೆತ್ತಿಕೊಂಡು ಮನೆಗಳಾಗಿ ಶತಮಾನಗಳಿಂದ  ಉಳಿದಿವೆ, ಎಳೆ ಶಿಶುಗಳ ಅಳು ನಿಲ್ಲಿಸುವ ತೊಟ್ಟಿಲಾಗಿವೆ. ವಿಚಿತ್ರವೆಂದರೆ ಪಶ್ಚಿಮ ಘಟ್ಟದ ಜೀವಜಾಲದ ತೊಟ್ಟಿಲಲ್ಲಿ ನಕ್ಕು ನಲಿದಾಡಿದ ಬೆಳೆದ ನಮ್ಮ ಹೆಮ್ಮೆಯ ಬಿದಿರು ಈಗ ಅಲ್ಲಿಯೇ  ಹೆಣವಾಗಿ ಮಲಗುತ್ತಿದೆ. ಬೆಂಕಿ, ಜಾನುವಾರುಗಳಿಂದ ಬಚಾವು ಮಾಡಿ ಮತ್ತೆ ಹಸುರು ನಗು ಮೂಡಲು ನೀವೇನು ಮಾಡುವಿರಿ ? ಕೃಷಿಕರ ಮನೆ ಮನೆಯೆದುರು ಬಡ ಬಿದಿರಿನ ಪ್ರಶ್ನೆಯಿದೆ.

# ಅರಣ್ಯೀಕರಣ:ಬೇರು ಬದುಕಿನ ಭೂಗತ ಮುಖಗಳು!

ಜಮಖಂಡಿ, ಬೀಳಗಿ, ರಾಮದುರ್ಗ, ಸವದತ್ತಿ ಪ್ರದೇಶದ ಕಾಡುಗುಡ್ಡ ಅಲೆಯುವಾಗ ರೈತರು ಬೇರಿನ ಬಗೆಗೆ ಮಾತಾಡುತ್ತಿದ್ದರು. ಕಲ್ಲುಗುಡ್ಡದಲ್ಲಿ ಬೆಳೆಯುವ ಇಲ್ಲಿನ ನೈಸರ್ಗಿಕ ಸಸಿಗಳು ಕಾಂಡ ಬೆಳೆಸುವದಕ್ಕಿಂತ ಹೆಚ್ಚಿನ ಕಾಳಜಿ ಬೇರು ಬೆಳೆಸಲು ನೀಡುತ್ತವೆ! ಆಳಕ್ಕೆ ಬೇರಿಳಿಸಿ ಸದೃಢ ಬೇರು ಹೊಂದಿದ ತರುವಾಯದಲ್ಲಿ ಭೂಗತದಿಂದ ಹೊರಕ್ಕೆ ತಲೆಯಾಡಿಸುತ್ತವೆ. ಬರಗಾಲ, ಬಿಸಿಲಿನ ಪ್ರಖರತೆ ಮಧ್ಯೆ ಬದುಕಿ ಬೆಳೆಯುವ ಸಸ್ಯಜಾಣ್ಮೆ ಇದು.

ನಮ್ಮ ಸೊಪ್ಪಿನ ಬೆಟ್ಟದಲ್ಲಿ ಸಸಿ ಬೆಳೆಸುವ ಕೆಲಸ ಅರಂಭಿಸಿ ಆರೆಂಟು ವರ್ಷಗಳಾಗಿವೆ. ನೆಟ್ಟ ಸಸಿಗಳಲ್ಲಿ ಹಲವು ನೆಲಕಚ್ಚಿವೆ, ಒಂದಿಷ್ಟು ಅತ್ತ ಸಾಯದೇ ಇತ್ತ ಬೆಳೆಯದೇ ಅಂತೂ ಬದುಕಿವೆ. ಶಿವಣೆ, ಗೇರು, ಮುರುಗಲು ಹೀಗೆ ಕೆಲವು ಜಾತಿ ಕೊಂಚ ಮೇಲೆದ್ದು ನೆಡುವ ಆಸಕ್ತಿ ಉಳಿಸಿವೆ. ಎರಡು ಮೂರು ಅಡಿ ಆಳದ ಕುಳಿ ತೆಗೆದು ಸೊಪ್ಪು ಗೊಬ್ಬರ ಹಾಕಿ ಚೆನ್ನಾಗಿ ಬೆಳೆಯಲೆಂದು ನಾಟಿಮಾಡಿದವು ಬೇಸಿಗೆಯಲ್ಲಿ ಒಣಗಿದ್ದಾದರೂ ಹೇಗೆ? ಇಷ್ಟೆಲ್ಲ ಆರೈಕೆ ಮಾಡಿಯೂ ಮುನಿಸಿ ಮಡಿದಿದ್ದೇಕೆ? ಕಾಡಿನೊಳಗಡೆ ನೈಸರ್ಗಿಕವಾಗಿ ಒಂದಕ್ಕೊಂದು ಹೊಂದಿ ಮರ ಬೆಳೆಯುತ್ತದೆ, ಆದರೆ ಮರಗಳೆಡೆಯಲ್ಲಿ ಸ್ವತಃ ನಾವು ನೆಟ್ಟ ಸಸಿಗಳು ಏಕೆ ಚಿಗುರಿ ನಿಲ್ಲುತ್ತಿಲ್ಲ? ಸಸ್ಯ ಭಾಷೆ ತಟ್ಟನೆ ಅರ್ಥವಾಗಲಿಲ್ಲ.

ಶಾಲೆಯ ವನಮಹೋತ್ಸವದಲ್ಲಿ ಈ ವರ್ಷ ಗಿಡ ನೆಟ್ಟ ಸ್ಥಳದಲ್ಲಿ ಮತ್ತೆ ಮರುವರ್ಷ ಗಿಡ ನೆಡಬಹುದೆಂದು ಕಲಿತಿದ್ದೆ! ಕುಳಿ ತೆಗೆಸುವ ಕೆಲಸವಿಲ್ಲದೇ ಸಸಿ ಸತ್ತ ಹಳೆಯ ಕುಳಿ ಕಿದಕಿ ಸಸಿ ನೆಡುವ ಹೊಸ ತಯಾರಿ ಆರಂಭಿಸಿದೆ. "ಸಸಿ ನೆಟ್ಟರೆ ಮರವಾಗುತ್ತದೆ' ಎಂದು ಉಪದೇಶ ಮಾಡುವವರನ್ನು ಒಮ್ಮೆ ಕರೆದು ಪ್ರಾತ್ಯಕ್ಷಿಕೆ ನಡೆಸುವಂತೆ ಅಲ್ಲಿನ ದೃಶ್ಯ. ಹಳೆಯ ಕುಳಿಯಲ್ಲಿದ್ದ ಫಲವತ್ತಾದ ಮಣ್ಣು, ಸತ್ವಾಂಶ ಲಪಟಾಯಿಸಲೆಂದು ಅಕ್ಕಪಕ್ಕದ ಕೌಲು, ಮತ್ತಿ, ಹುನಾಲು, ಬಸರಿ, ಹೊನ್ನೆ, ಇಪ್ಪೆ, ನೇರಲು ಹೀಗೆ ಹತ್ತಾರು ಜಾತಿ ಹೆಮ್ಮರಗಳ ಬಿಳಿ, ಕೆಂಪು, ಹಳದಿ, ಗುಲಾಬಿ ಹೀಗೆ ಬಣ್ಣ ಬಣ್ಣದ ಅಸಂಖ್ಯ ಎಳೆ ಬೇರುಗಳ ಜಾಲ ಅಸಡಾಬಸಡಾ ಮುಖ ತೂರಿದ್ದವು. ಹೆಚ್ಚು ಕಡಿಮೆ ಸಸಿ ಸತ್ತ ಎಲ್ಲ ಕುಳಿಗಳಲ್ಲೂ ಹತ್ತಿರದ ಮರದ ಅಡ್ಡಬೇರು ಅಸ್ತಿತ್ವ ಸಾಧಿಸಿದ್ದವು. ಈಗಾಗಲೇ ನೈಸರ್ಗಿಕವಾಗಿ ಬೆಳೆದಿರುವ ಗಿಡ ಮರಗಳ ಮಧ್ಯೆ ಮತ್ತೆ ಅರಣ್ಯೀಕರಣ ಮಾಡುವಾಗ ಎದುರಿಸಬಹುದಾದ ಭೂಗತ ಬೇರಿನ ವಿಚಿತ್ರ ಸಮಸ್ಯೆಯಿದು.

ಮೂಲ ಕೆದಕಿದರೆ ಇಡೀ ಸಮಸ್ಯೆಗೆ ಕಾರಣ ನಮ್ಮ ಬಳಿಯೇ ಇತ್ತು. ಸಸಿ ನೆಡಲೆಂದು ಬೇಸಿಗೆಯಲ್ಲಿ ಎರಡು ಮೂರು ಅಡಿ ಚೌಕದ ಕುಳಿ ತೆಗೆಯುತ್ತೇವೆ. ಕುಳಿ ತೆಗೆಯುವಾಗ ಅಕ್ಕಪಕ್ಕದ ಮರದ ಬೇರು ಭೂಗತದಲ್ಲಿ ಪ್ರತ್ಯಕ್ಷ, ಅಗೆತಕ್ಕೆ ಅಡ್ಡಿಯಾಗುವ ಈ ಅಡ್ಡಬೇರು ಕತ್ತರಿಸಿ ಕುಳಿ ತೆಗೆಯುವ ಕೆಲಸ ಮುಗಿಯುತ್ತದೆ. ಮಳೆಗಾಲದಲ್ಲಿ ಪುನಃ ಮಣ್ಣುತುಂಬಿ ಸಸಿ ನೆಡುತ್ತೇವೆ, ಗೊಬ್ಬರ ಎರಚುತ್ತೇವೆ. ಆದರೆ ನೆಟ್ಟ ಗಿಡಕ್ಕೆ ಬೆಳೆಯುವ ಉತ್ಸಾಹ ಕೆಲವು ದಿನ ಮಾತ್ರ. ಆರಂಭದಲ್ಲಿ ಚಿಗುರಿ ಬೆಳವಣಿಗೆ ತೋರಿದ ಸಸ್ಯ ಕ್ರಮೇಣ ಬೆಳವಣಿಗೆ ಕುಂಠಿತ. ಕುಳಿ ತೆಗೆಯುವಾಗ ಕತ್ತರಿಸಿದ ಬೇರಿನ ತುದಿಯ ಹಳೆಯ ಗಾಯ ನೆನಪಿಸಿಕೊಂಡ ಮರಗಳು ಇಮ್ಮಡಿ ಉತ್ಸಾಹದಲ್ಲಿ ಮಳೆಗಾಲದಲ್ಲಿ ನೂರಾರು ಬೇರಿನ ಜಾಲ ಬೆಳೆಸಿ ಬದುಕುವ ಪೈಪೋಟಿ ಆರಂಭಿಸುತ್ತವೆ. ಹೊಸ ಸಸಿ ಬುಡದ ಸತ್ವಾಂಶ ಕಬಳಿಸಲು ಜಗಳ ಅರಂಭ. ಬೇರು ಕತ್ತರಿಸಿದಕ್ಕೆ ಸಸಿಕುಳಿಯಲ್ಲಿ ಬೇರಿಳಿಸುವ ಸೇಡು. ಪಂದ್ಯದಲ್ಲಿ ಬಲಿಷ್ಠ ಉಳಿಯುತ್ತಾನೆಂಬ ನಿಸರ್ಗ ನಿಯಮ ಸಾಬೀತು! ಮರ ಗಿಡಗಳಿಲ್ಲದ ಬಯಲಲ್ಲಿ ನೆಟ್ಟ ಮಾವು ಅಕ್ಕಪಕ್ಕದ ಮರಗಳ ಬೇರಿನ ಪ್ರಹಾರದಿಂದ ಬಚಾವಾಗಿ ಬಿಸಿಲು ಮೆಂದು ಎರಡೇ ವರ್ಷಕ್ಕೆ ಫಲ ನೀಡಬಹುದು, ಮರಗಳ ಮಧ್ಯೆ ನೆಟ್ಟವು ೧೦-೨೦ ವರ್ಷ ಕಳೆದರೂ ಪೈಪೋಟಿ ಎದುರಿಸಲಾಗದೇ ಕೊರಗಿ ಕಮರುವದನ್ನು ಕಂಡಿದ್ದೇವೆ. ಬಹುಶಃ ಇಂತಹ ಪ್ರಮೇಯ ಗಮನಿಸಿಯೇ ೮೦ರ ದಶಕದ ಅರಣ್ಯೀಕರಣದಲ್ಲಿ ರಿಪ್ಪಿಂಗ್ ಯಂತ್ರ, ಜೆಸಿಬಿ ಬಳಸಿ ಕಾಡುಗುಡ್ಡ ಉಳುಮೆ ನಡೆಸಿ ನೈಸರ್ಗಿಕ ಗಿಡದ ಬೇರುಗಳನ್ನೂ ಕಿತ್ತೆಸೆದು ಅರಣ್ಯ ಇಲಾಖೆ ಹೊಸ ನೆಡುತೋಪು ಬೆಳೆಸುವ ಕೆಲಸ ನಡೆಸಿತ್ತು! ಹಳೆ ಬೇರು ಕಿತ್ತೆಸೆದ ಬಳಿಕವಷ್ಟೇ ಏಕಜಾತಿ ತೋಪು ಎದ್ದು ನಿಂತಿವೆ.

ಅರಣ್ಯೀಕರಣ ಮಾದರಿಯಲ್ಲಿ ಎಡೆ ಸಸಿ( ಗ್ಯಾಪ್ ಪ್ಲಾಂಟಿಂಗ್) ನಾಟಿಯ ವಿಧಾನವಿದೆ. ತೇಗದ ನೆಡುತೋಪಿನ ನಡುವೆ ಖಾಲಿ ಜಾಗಗಳಲ್ಲಿ ಸಸಿ

ಊರುವದು ಇವುಗಳಲ್ಲೊಂದು. ನೆಡುವದಷ್ಟೇ ನಮ್ಮ ಕೆಲಸ ಎಂದು ಹಲವು ದಶಕಗಳಿಂದ ಮಾದರಿ ಅರಣ್ಯೀಕರಣ ನಡೆದಿದೆ. ನಾಟಿ ಮಾಡಿದ ೩೦ ವರ್ಷಕ್ಕೂ ಈ ಗಿಡಗಳು ಗಿಡಗಳಾಗಿಯೇ ಉಳಿದು ಮರದ ನೆರಳಲ್ಲಿ ಜೀವ ಹಿಡಿದುಕೊಂಡಿರುತ್ತವೆ. ಅರಣ್ಯ ಇಲಾಖೆ ಯಾವತ್ತೂ ಈ ಮಾದರಿಯಲ್ಲಿ ಸಸಿ ನೆಡುವ ಪ್ರಯೋಜನದ ಬಗೆಗೆ ಚಿಂತಿಸಿಲ್ಲ, ನೆಡುವ ಕೆಲಸ ಬಿಟ್ಟಿಲ್ಲ. ವರ್ಷದ ಅರಣ್ಯೀಕರಣ ಲೆಕ್ಕಕ್ಕೆ ಇಲ್ಲಿ ಲಕ್ಷಾಂತರ ಸಸಿಗಳು ಸೇರಬಹುದು, ಆದರೆ ಬೆಳೆಯುವದು ಸಾವಿರವೂ ಇಲ್ಲ. ಪಾಪ! ದುರ್ಬಲ ಸಸಿಗಳನ್ನು ಹೆಮ್ಮರಗಳು ಸದಾ ಹಣಿಯುತ್ತವೆ, ಹಂಗಿಸುತ್ತವೆ, ಬೇರು ಬಿಟ್ಟು ಬಸವಳಿಸುತ್ತವೆ. ಹೊಸ ಸಸಿ ನೆಡುವ ಉಮೇದಿಯಲ್ಲಿ ನಿಂತವರು ಬೇರು ಹೇಳಿದ ಇಂತಹ ಪಾಠ ಆಲಿಸಬೇಕು. ಬೇರು ಕತ್ತರಿಸಿದರೆ ಪ್ರತಿಕ್ರಿಯಿಸುವ ಗಿಡ ಮರಗಳ ಸಂಧಿಯ ಫಲವತ್ತಾದ ಮಣ್ಣಿನಲ್ಲಿ ಬೀಜ ಬಿದ್ದಾಗ ಒಪ್ಪಿಕೊಳ್ಳುತ್ತವೆ, ತೆಪ್ಪಗಿರುತ್ತವೆ. ಅಕ್ಕಪಕ್ಕದ ಮರಗಳಿಗೆ ಸುಳಿವು ಸಿಗದಂತೆ ಮೊಳೆತು ತಾಯಿಬೇರಿಳಿಸಿ ಮರದ ಜತೆ ಹೊಸ ಗಿಡ ಚಿಗಿತು ಪೈಪೋಟಿ ನಡೆಸುತ್ತದೆ. ಮರಗಳ ಜತೆ ಗಿಡ ಸೇರಿ ಕಾಡು ಕೂಡುತ್ತದೆ. ಕಾಡನ್ನು ಅದರ ಪಾಡಿಗೆ ಬಿಟ್ಟಾಗ ಇದೆಲ್ಲ ಘಟಿಸುತ್ತದೆ. ಮನುಷ್ಯ ಹೋಗಿ ಗಿಡ ನೆಡಲು ಗುಂಡಿ ತೆಗೆದಾಗ ಸಮಸ್ಯೆ ಶುರುವಾಗುತ್ತದೆ. ಮಣ್ಣು ಸಸಿಗಿಂತ ಬೀಜಗಳನ್ನು ಹೆಚ್ಚು ಪ್ರೀತಿಸಿದಂತೆ ಕಾಣುತ್ತದೆ. ಅದಿಲ್ಲದಾಗ (ಬೀ)ಜಗಳ ಆರಂಭವಾಗುತ್ತದೆ.

ಎಲ್ಲೆಡೆಯೂ ಬೇರಿನ ತಾಕತ್ತು ಬದುಕು ಬೆಳವಣಿಗೆಯ ಬೆಂಬಲವಾಗಿದೆ. ತಾಯಿ ಬೇರು ನೀರಿನ ಆಸರೆ ಹುಡುಕಿ ಭೂಗತಕ್ಕೆ ಇಳಿಯುವದಂತೂ ಸೋಜಿಗ. ಮಧ್ಯಪ್ರದೇಶ, ಉತ್ತರ ಪ್ರದೇಶಗಳಲ್ಲಿ ಪ್ರಸಿದ್ಧ ಸಾಲ್ ಮರದ ಎರಡು ವರ್ಷದ ಎಳೆ ಸಸಿಗಳು ಮೂರೂವರೆ ಮೀಟರ್ ಆಳಕ್ಕೆ ಬೇರಿಳಿಸುತ್ತವೆ. ಕಾಡು ತಾಳೆಯ ಪುಟ್ಟ ನೆಡುತೋಪು ಮಾಡೋಣವೆಂದು ಇತ್ತೀಚೆಗೆ ಸಸಿ ಕೀಳಲು ಕಾಡಿಗೆ ಹೋಗಿದ್ದೆ. ಭೂಮಿಯ ಮೇಲೆ ಎರಡು ಇಂಚು ಬೆಳೆದ ಎಳೆ ಸಸಿಯ ಬೇರುಗಳು ಬರೋಬ್ಬರಿ ಒಂದೂವರೆ ಅಡಿ ಆಳಕ್ಕೆ ಇಳಿದಿದ್ದವು! ತೆರೆದ ಬಾವಿಗೆ ನೀರಿಂಗಿಸಲು ಸಲಹೆ ನೀಡಲೆಂದು ಶಿರಸಿಯ ಶಿವಳ್ಳಿ ಎಂಬ ಹಳ್ಳಿಗೆ ಹೋದಾಗ ಬಾವಿಯ ತುಂಬ ಬೇರಿನ ಜಾಲ ಅಚ್ಚರಿ ಹುಟ್ಟಿಸಿತ್ತು. ಮರದ ಈ ಬೇರುಗಳ ಮೂಲ ಬಸರಿ ಜಾತಿಯ ಹೆಮ್ಮರ, ಅದು ೨೫೦ ಮೀಟರ್ ದೂರದಲ್ಲಿತ್ತು, ಬಾವಿ ನೀರು ಕುಡಿಯಲೆಂದು ಅಷ್ಟುದೂರ ಭೂಗತ ಯಾನ ನಡೆಸಿತ್ತು !

ಜಮಖಂಡಿ, ಬೀಳಗಿ, ರಾಮದುರ್ಗ, ಸವದತ್ತಿ ಪ್ರದೇಶದ ಕಾಡುಗುಡ್ಡ ಅಲೆಯುವಾಗ ರೈತರು ಬೇರಿನ ಬಗೆಗೆ ಮಾತಾಡುತ್ತಿದ್ದರು. ಕಲ್ಲುಗುಡ್ಡದಲ್ಲಿ ಬೆಳೆಯುವ ಇಲ್ಲಿನ ನೈಸರ್ಗಿಕ ಸಸಿಗಳು ಕಾಂಡ ಬೆಳೆಸುವದಕ್ಕಿಂತ ಹೆಚ್ಚಿನ ಕಾಳಜಿ ಬೇರು ಬೆಳೆಸಲು ನೀಡುತ್ತವೆ! ಆಳಕ್ಕೆ ಬೇರಿಳಿಸಿ ಸದೃಢ ಬೇರು ಹೊಂದಿದ ತರುವಾಯದಲ್ಲಿ ಭೂಗತದಿಂದ ಹೊರಕ್ಕೆ ತಲೆಯಾಡಿಸುತ್ತವೆ. ಬರಗಾಲ, ಬಿಸಿಲಿನ ಪ್ರಖರತೆ ಮಧ್ಯೆ ಬದುಕಿ ಬೆಳೆಯುವ ಸಸ್ಯಜಾಣ್ಮೆ ಇದು. ನಮ್ಮ ಕಾಡುಗಳಲ್ಲಿನ ಕಲ್ಲು ಅಶ್ವತ್ಥ, ಕಲ್ಲತ್ತಿ, ಕುರುಡು ನಂದಿಯಂತಹ ಗಿಡಗಳು ಯಾವತ್ತೂ ಬೇರಿಳಿಸಿ ಬೆಳೆಯಲು ಹಿಡಿಮಣ್ಣು ಇಲ್ಲದ ಕಲ್ಲುಗುಡ್ಡ ಪ್ರೀತಿಸಿ ಸಸ್ಯ ವಿಸ್ಮಯ ಪ್ರದರ್ಶಿಸುತ್ತವೆ. ಪಶ್ಚಿಮಘಟ್ಟದ ಕಾಡಿನ ಕಲ್ಲುಬಾಳೆಯಂತೂ ವರ್ಷದಲ್ಲಿ ನಾಲ್ಕು ತಿಂಗಳು ಮಳೆ ಸುರಿಯುತ್ತದೆಂಬ ಆಸೆ ಬಗಲಲ್ಲಿಟ್ಟುಕೊಂಡು ಕಲ್ಲುಬಂಡೆಯಲ್ಲಿ ಜೀವನ ಸಾಗಿಸುತ್ತದೆ, ಬಿಸಿಲಿನ ಕಾವುಸಹಿಸಿ ಬೇರು ಬದುಕಿಸುತ್ತದೆ. ಕರಾವಳಿಯ ಕೆಂಪುಕಲ್ಲಿನ ಹಾಸಿನಲ್ಲಿ ಒಂದು ಬುಟ್ಟಿ ಮಣ್ಣುಹಾಕಿ ಕೃಷಿಕರು ಬಾಳೆ ಬೆಳೆಸುತ್ತಾರೆ. ಇವರು 'ಬಾಳೆ ಬೇರು ಕಲ್ಲು ಕರಗಿಸುತ್ತದೆ' ಎಂದು ಹೇಳುವದು ಕೇಳಿದ್ದೇನೆ. ಎರಡು ಮೂರು ವರ್ಷ ಬಾಳೆ ಕೃಷಿ ಮಾಡಿದರೆ ಕಲ್ಲುಮಣ್ಣು ಮಿದುವಾಗಿ ಅಡಿಕೆ ಕೃಷಿಗೆ ಯೋಗ್ಯವಾಗಿ ಮಾರ್ಪಡುತ್ತದಂತೆ! ಬಾಳೆ ಬೇರಿಗೆ ಕಲ್ಲು ಕರಗಿಸುವ ಶಕ್ತಿ ಇದೆಯೇ ? ತಿಳಿದವರು ಹೇಳಬಹುದು. ಬೇರಿನ ಕತೆಗಳೇ ಹಾಗೇ ಅಲ್ಲಿ ಕಲ್ಲು ಕರಗುವ ಸಮಯವಿದೆ, ಭೂಗತದ ವ್ಯಥೆಗಳಿವೆ. ಮರ, ಸಸಿ ನೋಡಿದಾಗ ನಮಗೆ ಬೇರು ನೆನಪಾಗಬೇಕು. ಮಳೆ ಆರ್ಭಟಕ್ಕೆ ಬಿರುಗಾಳಿಗೆ ಕಿತ್ತು ಬಿದ್ದ ಮರದಲ್ಲಿ ಕಣ್ಣರಳಿಸಿ ಬೇರು ನೋಡಿದರೆ ಅಲ್ಲಿ ಪಾಠಗಳಿವೆ, ಕಾಡು ಬೇರಿನ ಪೈಪೋಟಿ, ಜಗಳ, ಒಳಜಗಳದ ಭೂಗತ ಮುಖಗಳಿವೆ.

# ಕೂಡಿ ಬಾಳುವ ಕುಟುಂಬ ಶಕ್ತಿ

ಹತ್ತು ವರ್ಷ ಹಿಂದೆ ಉತ್ತರ ಕನ್ನಡದ ಜೊಯಿಡಾ ತಾಲೂಕಿನ ಡೇರಿಯೇ ಹಳ್ಳಿಗೆ ಹೋಗಿದ್ದೆ. ಅಲ್ಲಿನ ಮನೆಯ ಯಜಮಾನ ಗಣಬಾ ಗಾವಡೆಯಲ್ಲಿ ಕುಟುಂಬದ ಸದಸ್ಯರ ಹೆಸರು ಹೇಳಲು ವಿನಂತಿಸಿದೆ. ಆತ ತಡಬಡಿಸಿದ.... ಏಕೆಂದರೆ ೧೧೪ ಜನರ ಮಹಾ ಕುಟುಂಬ ಅದು! ಇವರ ಮನೆಯ ಮಕ್ಕಳಿಗಾಗಿಯೇ ಅಲ್ಲಿ ಒಂದು ಕಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿಗಳಿದ್ದವು. ೫೦ ಎಕರೆ ಭತ್ತದ ಗದ್ದೆ, ವರ್ಷಕ್ಕೆ ಮನೆ ಮಂದಿಯ ಊಟಕ್ಕೆ ೩೫೦ ಕ್ವಿಂಟಾಲ್ ಅಕ್ಕಿ ಬೇಕು. ಮನೆಗೆ ಬಟ್ಟೆ ತರಬೇಕೆಂದರೆ ಯಜಮಾನ ಒಂದೇ ಬಣ್ಣದ ನೂರಾರು ಮೀಟರ್ ಬಟ್ಟೆ ತರುತ್ತಿದ್ದರು. ಎಲ್ಲರಿಗೂ ಸಮಾನ ಗುಣಮಟ್ಟದ ವಸ್ತ್ರ ನೀಡುತ್ತ ಎಲ್ಲರನ್ನೂ ಒಂದೇ ದೃಷ್ಟಿಯಿಂದ ಕಾಣುತ್ತಿದ್ದರು! ಇವರ ಮನೆ ಮಂದಿ ಎಲ್ಲಾದರೂ ಮಧುವೆ ಮನೆಗೆ ಹೋದರೆ ಡೇರಿಯೇ ಕುಟುಂಬದವರು ಯಾರು? ಎಂಬುದನ್ನು ವಸ್ತ್ರದ ಬಣ್ಣ ನೋಡಿ ಸುಲಭದಲ್ಲಿ ಗುರುತಿಸಬಹುದಿತ್ತು.

ರಾಯಚೂರಿನ ಹಳ್ಳಿ ಅಡ್ಡಾಡುತ್ತಿದ್ದೆ. ಜತೆಗಿದ್ದ ಗೌಡರ ಮಗ ದುಃಖ ಹೇಳಿಕೊಳ್ಳುತ್ತಿದ್ದರು. 'ಮನೆತನಾ ಅಂದ್ರ.....ಸೀಮೆಗೆ ಹೆಸರಾಗಿತ್ರಿ, ಊರಾನ ಮಂದಿ ನ್ಯಾಯ ಕೇಳಾಕ ಬರ್ತಿದ್ರು, ನಮ್ಮ ಮನೆ ಯಜಮಾನ ಊರಿಗೆ ಯಜಮಾನ ಆಗಿದ್ದ, ಅಂವ ಹೇಳಿದ್ ಮಾತು ಮೀರಿ ಯಾರೂ ಹೆಜ್ಜೆ ಹಾಕ್ತಿರಲಿಲ್ಲ, ಏನಾದ್ರು ತೀರ್ಮಾನ ಆಗೋವಾಗ 'ಗೌಡ್ರು.... ಏನಂತಾರ?' ಅನ್ನೋದಕ್ಕ ಮಹತ್ವ ಇತ್ತು..... ಈಗ ಊರಿಗೆ ತಲೆ ಬಗ್ಗಿಸಿ ನಡೀಬೇಕಾಗದ' ಎಂದರು. ಮಾತು ಕೇಳಿದರೆ ಏನೋ ದೊಡ್ಡ ಅನಾಹುತವಾಗಿದೆ ಎಂದು ಊಹಿಸಿದೆ. ವಿಷಯ ಕೆದಕಿದೆ. ೪೫ ಜನರ ದೊಡ್ಡ ಕುಟುಂಬ, ನೂರಾರು ಎಕರೆ ಹೊಲ, ನ್ಯಾಯ ತೀರ್ಮಾನಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದ ಈ ಸಂಸಾರದಲ್ಲಿ ಮನೆ ಮಂದಿಗೆ ಕೂಡಿ ಬಾಳಲಾಗದೇ ಇತ್ತೀಚಿನ ವರ್ಷಗಳಲ್ಲಿ 'ಹಿಸ್ಸೆ' ಆಗಿದ್ದರು. ವಿಶಾಲ ಮನೆ ಒಡೆದು, ನಾಲ್ಕಾರು ಭಾಗವಾದವು. ಗೌಡರನ್ನು ನಂಬಿ ನಡೆಯುತ್ತಿದ್ದ ಊರು ಒಡೆದ ಮನೆಯನ್ನು ನ್ಯಾಯ ತಕ್ಕಡಿಯಲ್ಲಿ ತೂಗತೊಡಗಿತು. ಊರಿನ ಮಂದಿಯೆದುರು ಮಾತಾಡುವಾಗ ಇದ್ದ ಧೈರ್ಯ, ನ್ಯಾಯ ದೃಷ್ಟಿ, ಸಂಘಟನಾ ಶಕ್ತಿಗಳು ಇದ್ದಕ್ಕಿದ್ದಂತೆ ಊನವಾದವು.

'ಊರು ಆಳೋ ಗೌಡ.... ಈಗ ಮನೆ ಒಡೆದಾನ' ಎಂಬುದು ಬೀದಿಯ ಮಾಮೂಲಿ ಮಾತಾಯಿತು. ಕೂಡಿ ಬಾಳಿದರೆ ಸುಖಾ ಇದೆ, ಶಕ್ತಿ ಇದೆ ಎಂದು ಅರಿತವರಿಗೆ ಮನೆ ಒಡೆದ ಬಳಿಕ ಮನದ ಸ್ಥೈರ್ಯವೂ ಅಡಗಿತು. ಊರಿಗೆ ಊರೇ ಕೊಂಡಾಡುವಂತೆ ಇದ್ದವರಿಗೆ ಆಡುವ ಬಾಯಿಗೆ ಬೀಳುವಂತಾಯಿತು. ಸೀಮೆಯನ್ನು ಸಂಘಟನಾ ಶಕ್ತಿಯಲ್ಲಿ ಕೂಡಿಸಿದ ಮನಸ್ಸು ಈ ಸೋಲಿಗೆ ಕೊರಗತೊಡಗಿತು. ನೋವು ರಾಯಚೂರಿನ ಒಂದು ಕುಟುಂಬದ್ದಲ್ಲ, ನಮ್ಮ ಬಹುತೇಕ ಹಳ್ಳಿಗಳಲ್ಲಿ ಕಂಡುಬರುವ ಸಂಗತಿಗಳಿವು. ಗೌಡರು, ಪಟೇಲರು, ದೊಡ್ಡಮನೆಗಳೆಲ್ಲವೂ ಕಳೆದ ಮೂರು ದಶಕಗಳ ಈಚೆಗೆ ಬದಲಾಗಿವೆ.

ಈಗ ಹತ್ತು ವರ್ಷಗಳ ಹಿಂದೆ ಉತ್ತರ ಕನ್ನಡದ ಜೊಯಿಡಾ ತಾಲೂಕಿನ ಕುಣಬಿ ಜನಾಂಗದ ಡೇರಿಯೇ ಹಳ್ಳಿಗೆ ಹೋಗಿದ್ದೆ. ಅಲ್ಲಿನ ಮನೆಯ ಯಜಮಾನ ಗಣಬಾ ಗಾವಡೆಯಲ್ಲಿ ಕುಟುಂಬದ ಸದಸ್ಯರ ಹೆಸರು ಹೇಳಲು ವಿನಂತಿಸಿದೆ. ಆತ ತಡಬಡಿಸಿದ..... ಏಕೆಂದರೆ ೧೧೪ ಜನರ ಮಹಾ ಕುಟುಂಬ ಅದು! ಇವರ ಮನೆಯ ಮಕ್ಕಳಿಗಾಗಿಯೇ ಅಲ್ಲಿ ಒಂದು ಕಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿಗಳಿದ್ದವು. ೫೦ ಎಕರೆ ಭತ್ತದ ಗದ್ದೆ, ವರ್ಷಕ್ಕೆ ಮನೆ ಮಂದಿಯ ಊಟಕ್ಕೆ ೩೫೦ ಕ್ವಿಂಟಾಲ್ ಅಕ್ಕಿ ಬೇಕು. ಕುಟುಂಬದ ಯಜಮಾನ ಎಲ್ಲರನ್ನು ಪ್ರೀತಿಯಿಂದ ನಡೆಸಿಕೊಂಡು ಹಿರಿಯಜ್ಜನ ಹಿಡಿತದಲ್ಲಿ ಸಂಸಾರ ಬೆಳೆದಿತ್ತು. ಮನೆ ಮಂದಿಗೆ ಬಟ್ಟೆ ತರಬೇಕೆಂದರೆ ಯಜಮಾನ ಒಂದೇ ಬಣ್ಣದ ನೂರಾರು ಮೀಟರ್ ಬಟ್ಟೆ ತರುತ್ತಿದ್ದರು. ಎಲ್ಲರಿಗೂ ಸಮಾನ ಗುಣಮಟ್ಟದ ವಸ್ತ್ರ ನೀಡುತ್ತ ಎಲ್ಲರನ್ನೂ ಒಂದೇ ದೃಷ್ಟಿಯಿಂದ ಕಾಣುತ್ತಿದ್ದರು. ಮನೆ ಮಂದಿ ಎಲ್ಲಾದರೂ ಮದುವೆ ಮನೆಗೆ ಹೋದರೆ ಡೇರಿಯೇ ಕುಟುಂಬದವರು ಯಾರು? ಎಂಬುದನ್ನು ವಸ್ತ್ರದ ಬಣ್ಣ ನೋಡಿ ನಾವು ಸುಲಭದಲ್ಲಿ ಗುರುತಿಸಬಹುದಿತ್ತು. 'ಒಂದು ಸೂರು ಮಂದಿ ನೂರು' ಎಂದು ಕೃಷಿ ಕೆಲಸ, ಕೂಲಿಯಲ್ಲಿ ಜೀವನ ನಡೆಸಿದ ಮನೆತನದಲ್ಲಿ ಶೈಕ್ಷಣಿಕ ಬದಲಾವಣೆಗಳಾದವು. ಪೇಟೆ ಪ್ರಪಂಚ ಅರ್ಥವಾಗತೊಡಗಿತು. ಮಕ್ಕಳು ಓದಿ ಬೆಳೆದಂತೆ ಅವರ ಮನಃ ಪರಿವರ್ತನೆಗಳಾದವು. ಉಡುಗೆ, ಊಟದ ಆಸಕ್ತಿ ಬದಲಾಯಿತು, ಕನಸುಗಳು ಬೆಳೆದವು. ನೂರಾರು ಮೀಟರ್ ಒಂದೇ ಬಣ್ಣದ ಬಟ್ಟೆ ತರುತ್ತಿದ್ದ ಯಜಮಾನ ಈಗ ಅದರ ಬದಲು ಹಣ ನೀಡ ತೊಡಗಿದರು. ಬಟ್ಟೆ ಬದಲಾಯಿತು, ಮನಸ್ಸು ಕ್ರಮೇಣ ಬದಲಾಗ ತೊಡಗಿತು. ಪಾರಿವಾಳದ ಸಂಸಾರದಂತೆ ಕೂಡಿ ಬಾಳಿದ ಕುಟುಂಬ ಈಗ ಒಡೆದಿದೆ.

'ಚಿಕ್ಕ ಕುಟುಂಬ ಚೊಕ್ಕ ಕುಟುಂಬ' ಜಾಹೀರಾತು ನಮ್ಮ ಅವಿಭಕ್ತ ಕುಟುಂಬದ ಮನಸ್ಸನ್ನು ಅತಿಯಾಗಿ ಕಾಡಿವೆ. ನೂರಾರು ಜನ ಕೂಡಿ ಬಾಳಬೇಕೆಂಬ ಕಾರಣಕ್ಕೆ ಎದೆಯ ಕನಸುಗಳನ್ನು ಹತ್ತಿಕ್ಕಬೇಕು, ತಲೆಬಗ್ಗಿಸಿ ನಡೆಯಬೇಕು, ಒಳ್ಳೆಯ ಶಿಕ್ಷಣ ಪಡೆಯುವ ಆಸೆಯಿದ್ದರೆ ತಂದೆತಾಯಿ ಅಷ್ಟೇ ಅಲ್ಲ ಇಡೀ ಮನೆ ಮಂದಿಯ ಪ್ರೋತ್ಸಾಹ ಬೇಕು! ಬದುಕಿಗೆ ಮಿತಿಯ ಬೇಲಿ ಹಾಕಬೇಕು, ಇದು ಇವತ್ತಿನ ವ್ಯವಸ್ಥೆಯಲ್ಲಿ ಅಸಾಧ್ಯದ ಮಾತು. ಇಂದು ಸರಕಾರದ ಪಡಿತರ ಚೀಟಿ, ಮನೆ, ಸಬ್ಸಿಡಿ, ಸಾಲ ಹೀಗೆ ಇನ್ನಿತರ ಸೌಲಭ್ಯ ಪಡೆಯಲು ಚಿಕ್ಕ ಕುಟುಂಬಗಳು ಅನುಕೂಲ. ಇಡೀ ಭೂಮಿಯೆಲ್ಲ ಯಜಮಾನನ ಹೆಸರಿರುವಲ್ಲಿ ನೂರಾರು ಜನರಿದ್ದಾರೆ, ಬಡತನವಿದೆ ಎನ್ನುವದಕ್ಕಿಂತ ಇವರಿಗೆ ೫೦ ಎಕರೆ ಜಮೀನಿದೆ ಎಂಬುದು ಮುಖ್ಯವಾಗುತ್ತದೆ. ಕುಟುಂಬದ ಸದಸ್ಯರೆಲ್ಲ ಒಂದೇ ಮನೆಯಲ್ಲಿ ವಾಸವಾಗಿರುವ ದಾಖಲೆಯಿರುವಾಗ ಸರಕಾರದ ಮನೆ ನಿರ್ಮಾಣ ಸೌಲಭ್ಯಗಳು ಸಿಗುವದಿಲ್ಲ. ಹೀಗಾಗಿ ಕೂಡಿ ಬಾಳಿದರೆ ಸಿಗುವ ಸುಖಕ್ಕಿಂತ ಮನೆ ಒಡೆಯುವಲ್ಲಿಯೇ ಎಲ್ಲರ ಲಾಭ!. ಇದರ ಪರಿಣಾಮ ಕಾಲದ ಅವಿಭಕ್ತ ಕುಟುಂಬಗಳು ಛಿದ್ರ  ಛಿದ್ರವಾಗಿವೆ. ಮನೆಯ ಜತೆಗೆ ಮನಸ್ಸು ಒಡೆದಿವೆ.

ದಿನವಿಡೀ ಕೃಷಿ ಕೆಲಸದಲ್ಲಿ ತಲ್ಲೀನವಾದ ಗ್ರಾಮೀಣ ಜೀವನದಲ್ಲಿ ಸಹಬಾಳ್ವೆ ಅನಿವಾರ್ಯ ಆಯ್ಕೆ. ಈಗ ಅಧಿಕ  ಸಂಪಾದನೆ, ನಗರ ನೌಕರಿಯ ಸಹಜ ಆಸೆಯಲ್ಲಿ ಮನಸ್ಸು ಓಡಿದೆ. ಒಂದು ಕಾಲಕ್ಕೆ ೪೦-೫೦ ಜನ ಒಂದಾಗಿ ಬಾಳುವದು ಸಾಮಾನ್ಯವಾದ ನೆಲೆಯಲ್ಲಿ ಇವತ್ತು ಕೂಡು ಕುಟುಂಬಗಳನ್ನು ಅಚ್ಚರಿಯಿಂದ ನೋಡುವಂತಾಗಿದೆ. ಯಜಮಾನರ ಪ್ರಾಮಾಣಿಕತೆ, ಎಲ್ಲರನ್ನು ಕೂಡಿಸಿ ಮುನ್ನಡೆಸುವ ಸಂಯಮ ಶಕ್ತಿ ಉಳಿದಿರುವಲ್ಲಿ ಇಂತಹ ಕುಟುಂಬ ನೋಡಬಹುದು. 'ಇವತ್ತು ಕೂಡು ಕುಟುಂಬ ನಡೆಸುವದೆಂದರೆ ಒಂದರ್ಥದಲ್ಲಿ ಸಮ್ಮಿಶ್ರ ಸರಕಾರ ನಡೆಸಿದಂತೆ.....! ಯಾವಾಗ ಯಾರು ಬೇಕಾದರೂ ಬೆಂಬಲ ವ್ಹಾಪಸ್ ಪಡೆಯಬಹುದು' ವನವಾಸಿ ಜನಾಂಗದ ಅವಿಭಕ್ತ ಕುಟುಂಬದ ಯಜಮಾನರೊಬ್ಬರು ಹೇಳಿದ ಮಾತು ಮಾರ್ಮಿಕವಾಗಿದೆ. ಹತ್ತಾರು ದಿಕ್ಕು, ವಿವಿಧ ಸಂಸ್ಕಾರ ಮೂಲದಿಂದ ಹೆಣ್ಣನ್ನು ಮನೆ ತುಂಬಿಸಿಕೊಳ್ಳುತ್ತಾರೆ. ಎಲ್ಲರೂ ಕೂಡಿ ಬಾಳುವ ಆಸೆಯಿದ್ದಾಗ ಸಂಸಾರ ಸರಾಗ. ಅನುಮಾನ, ಅಪನಂಬಿಕೆ ಬೆಳೆದಂತೆ ಮನಸ್ಸು ಹಾಳಾಗಲು ಆರಂಭವಾಗುತ್ತದೆ. ಹಿಂದೆ ಮನೆಯ ಯಜಮಾನರ ಹಿಡಿತ  ಮನೆಮಂದಿಯನ್ನು ಒಂದಾಗಿ ಹಿಡಿದಿತ್ತು. ಯಾರೂ ಎದುರು ನಿಂತು ಪ್ರಶ್ನಿಸುವ ಪ್ರಮೇಯವಿರಲಿಲ್ಲ. ಆದರೆ ಇವತ್ತು ಸ್ವಂತ ಮಕ್ಕಳೇ ತಂದೆ ತಾಯಿಯ ಜತೆ ಕೂಡಿ ಬಾಳದಷ್ಟು ವ್ಯವಸ್ಥೆ ಸಿನಿಕವಾಗಿದೆ. ಸಹಬಾಳ್ವೆಯ ಚಿತ್ರಗಳು ಸುಳ್ಳೇ ಸುಳ್ಳು ಎನ್ನುವಂತೆ ನೆಲ ಅಣಕಿಸುತ್ತಿದೆ. ಇಂದು ನೂರಾರು ಜನ ಒಟ್ಟಿಗೆ ಬಾಳಿದರೆ ಮುಂದೆ ನಿರ್ವಹಣೆ ಕಷ್ಟವಾಗಬಹುದೆಂದು ಕೆಲವರು ದೂರ ದೂರ ಜಮೀನು ಖರೀದಿಸಿ, ಮಕ್ಕಳಿಗೆ ಶಿಕ್ಷಣ, ನೌಕರಿ ಒದಗಿಸಿ ಎಲ್ಲರೂ ಅವರವರ ದುಡಿಮೆಯಲ್ಲಿ ಸುಖ ಕಾಣುವ ಸೂತ್ರ ಹುಡುಕಿದ್ದಾರೆ. ಭೂಮಿ, ಮನಸ್ಸು ಒಡೆಯುವದಕ್ಕಿಂತ ಹೀಗಾದರೂ ಕೂಡಿರುವದು ಕ್ಷೇಮ ಎಂಬ ತಿಳುವಳಿಕೆಯಿದೆ.

ಅಪರೂಪದ ಅವಿಭಕ್ತ ಕುಟುಂಬ ನೋಡಿದಾಗ ಅವರ ಮನೆಗೆ ವರ್ಷಕ್ಕೆ ೩೦೦ ಕ್ವಿಂಟಾಲ್ ಅಕ್ಕಿ ಬೇಕು, ೧೦೦ ಡಬ್ಬಿ ಬೆಲ್ಲ ಬೇಕು, ೨-೩ ಕ್ವಿಂಟಾಲ್ ಬೇಳೆಕಾಳು ಬೇಕು ಎಂದು ಮನೆ ಮಂದಿ ಲೆಕ್ಕ ಹಾಕಿ ಆಹಾರ ಬಳಕೆ ಅಂದಾಜಿಸುತ್ತೇವೆ. ನಮ್ಮ ಮನಸ್ಸು ವಸ್ತು, ಹಣಗಳನ್ನು ಅಳೆಯಲು ಪಳಗಿದೆ. ಆದರೆ ಇಷ್ಟೆಲ್ಲ ಜನರನ್ನು ಕೂಡಿಸಿ ಮುನ್ನಡೆಸಲು ಅಡುಗೆ ಮನೆಯಲ್ಲಿ ಮಹಿಳೆ ಎಷ್ಟು ಶ್ರಮ ಪಡುತ್ತಾಳೆ, ಮಕ್ಕಳು ಎಂತಹ ತ್ಯಾಗ ಮಾಡುತ್ತಾರೆ, ವಿವಿಧ ಮನಸ್ಥಿತಿಯ ಮಂದಿಯನ್ನು ಒಟ್ಟಿಗೆ ಜೋಡಿಸಿ ನೌಕೆ ನಡೆಸಲು ಯಜಮಾನ ಎಂತಹ ಮುತ್ಸದ್ದಿಯಾಗಬೇಕು ಎಂಬುದನ್ನು ಮರೆಯುತ್ತೇವೆ. ಕೂಡಿ ಬಾಳುವ ಪರಂಪರೆಯ ಕುಟುಂಬ ಶಕ್ತಿ, ಸಂಸ್ಕಾರಗಳನ್ನು ಇವತ್ತು ಸಮಾಜ ಕಳಕೊಂಡಿದೆ.

# ‘ಅವಳ’ ಕಣ್ಣೀರು ಒರೆಸಿದ ಸಗಣಿ ತಂ(ಮ)ತ್ರ

ಇಂದು ಗೋಬರ್ ಅನಿಲ ಸ್ಥಾವರ ಸ್ಥಾಪನೆ ಬಳಿಕ ಹೊಗೆ ರಹಿತ ವಾತಾವರಣದಿಂದ ಗ್ರಾಮೀಣ ಮಹಿಳೆಯರ ಶ್ವಾಸಕೋಶಗಳು ಕೊಂಚ ಸುಧಾರಿಸಿಕೊಂಡಿವೆ, ಕಟ್ಟಿಗೆ ಹೊರೆ ಭಾರಕ್ಕೆ ಕ್ಷಯ ಬಡಿದ ಅರಣ್ಯಗಳಿಗೆ ಒತ್ತಡ ಕಡಿಮೆಯಾಗಿ ಪರಿಸರ ಸಂರಕ್ಷಣೆಯ ರಚನಾತ್ಮಕ ಮಾರ್ಗ ಹಳ್ಳಿಗಳಲ್ಲಿ ತೆರೆದುಕೊಂಡಿದೆ.

ಅಡುಗೆ ಮನೆಯಲ್ಲಿ ಮಹಿಳೆಯರು ಅನ್ನ ಬೇಯಿಸುತ್ತಾರೋ ? ಹೊಗೆ ಮನೆಯಲ್ಲಿ ಕೂತು ಇನ್ನಿಲ್ಲದ ರೋಗ ಎದುರು ನೋಡುತ್ತಾರೋ ಅನುಮಾನ. ಮಹಿಳೆಯರ ಪಾಲಿಗೆ ಅದೊಂದು ಹೊಗೆ ಕಾರ್ಖಾನೆ, ಅಲ್ಲಿ ಸದಾ ಕೊಳವೆ ಹಿಡಿದು ಒಲೆ ಎದುರು ಬೆಂಕಿ ಊದುತ್ತ ದಿನಂಪ್ರತಿ ಹೊಗೆ ಸೇವಿಸುತ್ತ ಅನಾರೋಗ್ಯದ ಜೀವನ. ಕತ್ತಲಲ್ಲಿ ಕಳೆದು ಹೋದ ಬದುಕು. ಇಂತಹ ಪರಿಸ್ಥಿತಿಯಲ್ಲಿ ಸಗಣಿಯಿಂದ ಮೀಥೇನ್ ಅನಿಲ ಉತ್ಪಾದಿಸುವ ಜೈವಿಕ ಅನಿಲ ಸ್ಥಾವರ ತಂತ್ರಜ್ಞಾನ ಹಳ್ಳಿ ಹಳ್ಳಿಗೆ ನಡೆದು ಬಂದು ದೊಡ್ಡ ಕ್ರಾಂತಿ ಮಾಡಿದೆ. ಇಂದು ಗೋಬರ್ ಅನಿಲ ಸ್ಥಾವರ ಸ್ಥಾಪನೆ ಬಳಿಕ ಹೊಗೆ ರಹಿತ ವಾತಾವರಣದಿಂದ ಗ್ರಾಮೀಣ ಮಹಿಳೆಯರ ಶ್ವಾಸಕೋಶಗಳು ಕೊಂಚ ಸುಧಾರಿಸಿಕೊಂಡಿವೆ, ಕಟ್ಟಿಗೆ ಹೊರೆ ಭಾರಕ್ಕೆ ಕ್ಷಯ ಬಡಿದ ಅರಣ್ಯಗಳಿಗೆ ಒತ್ತಡ ಕಡಿಮೆಯಾಗಿ ಪರಿಸರ ಸಂರಕ್ಷಣೆಯ ರಚನಾತ್ಮಕ ಮಾರ್ಗ ತೆರೆದುಕೊಂಡಿದೆ.

ಕ್ರಿ,ಶ, ೧೯೩೦ರ ಸುಮಾರಿಗೆ ಸಗಣಿಯಿಂದ ಮೀಥೇನ್ ಅನಿಲ ಉತ್ಪಾದಿಸುವ ಸಂಶೋಧನೆ ಬೆಳಕಿಗೆ ಬಂದಿದ್ದರೂ ಅದು ೧೯೭೦ರ ನಂತರದಲ್ಲಿ ಗ್ರಾಮಾಲಯಕ್ಕೆ ನಡೆದು ಬಂದಿದೆ. ಕ್ರಿ,ಶ, ೧೯೮೦ರ ಹೊತ್ತಿಗೆ ರಾಜ್ಯದಲ್ಲಿ ೮೦೨೪ ಅನಿಲ ಸ್ಥಾವರಗಳು ಹಳ್ಳಿಗಳಲ್ಲಿ ನಿರ್ಮಾಣಗೊಂಡ ಬಳಿಕ ಮಾದರಿ ನಿಧಾನಕ್ಕೆ ಜನಪ್ರಿಯವಾಯಿತು. ಇಂದು ಇಂಧನ ಸ್ವಾವಲಂಬನೆ ಮುಖೇನ ಗ್ರಾಮೀಣಾಭಿವೃದ್ಧಿ ಯಶಸ್ಸು ಲಕ್ಷ ಲಕ್ಷ ಕುಟುಂಬಗಳಲ್ಲಿ ಸಾಕಾರವಾಗಿದೆ. ಒಂದು ಎಕರೆ ಹೊಲವಿದ್ದು ಒಂದೆರಡು ಜಾನುವಾರು ಹೊಂದಿದ ಬಡ ರೈತನಿಗೂ ತಂತ್ರಜ್ಞಾನ ಕೈಗೆಟುಕಿದೆ. ಸಂಶೋದನಾಲಯದಿಂದ ಗ್ರಾಮಾಲಯಕ್ಕೆ ಬಂದು ಇದು ಜನಪ್ರಿಯವಾದ ಮಾರ್ಗದಲ್ಲಿ ಹಲವು ವ್ಯಕ್ತಿ, ಸಂಸ್ಥೆಗಳ ಶ್ರಮವಿದೆ.

ಕೃಷಿ ಜೊತೆ ಹೈನುಗಾರಿಕೆ ನಡೆದು ಬಂದ ಪರಂಪರೆಯಲ್ಲಿ ಜಾನುವಾರು ಸಗಣಿ ಕೃಷಿ ಗೊಬ್ಬರವಾಗಿ ಮಾತ್ರ ಬಳಕೆ. ಅಲ್ಪಸ್ವಲ್ಪ ಕೃಷಿ ಮೇವು ಬಿಟ್ಟರೆ ಮಲೆನಾಡು, ಅರೆ ಮಲೆನಾಡಿನ ಪ್ರದೇಶಗಳಲ್ಲಂತೂ ಹುಲ್ಲಿಗೆ ಕಾಡೇ ಗತಿ. ಜಾನುವಾರುಗಳು ದಿನವಿಡೀ ಕಾಡಿನಲ್ಲಿ ಅಲೆದಾಡಿ ಸಾಯಂಕಾಲ ದೊಡ್ಡಿಗೆ ಮರಳುತ್ತಿದ್ದವು, ಆದರೆ ಇವನ್ನು ಖಾಯಂ ದೊಡ್ಡಿಯಲ್ಲಿ ನಿಲ್ಲಿಸಲು ನೆರವಾದದ್ದು ಈ ಜೈವಿಕ ಅನಿಲ ಸ್ಥಾವರಗಳು !. ಅಡುಗೆಗೆ ಕಟ್ಟಿಗೆ ತರಲು ಕಾಡು ದೂರ, ಇಂಧನ ಭಾರ ಇಳಿಸಲು ಸುಲಭ ದಾರಿಯಾಗಿ ಅನಿಲ ಸ್ಥಾವರ ನಿರ್ಮಾಣ. ಈ ಸಂದರ್ಭದಲ್ಲಿ ಜಾನುವಾರುಗಳನ್ನು ಕಾಡಿಗೆ ಮೇವಿಗೆ ಬಿಟ್ಟರೆ ಸಗಣಿಯೆಲ್ಲ ಕಾಡು ಪಾಲಾಗುತ್ತದೆ. ದೊಡ್ಡಿಯಲ್ಲಿ ಸಲಹಿದರೆ ಮಾತ್ರ ಹೆಚ್ಚಿನ ಸಗಣಿ ದೊರೆತು ಅನಿಲ ಸ್ಥಾವರದ ಅಗತ್ಯ ಪೂರೈಸಬಹುದು. ಹೀಗಾಗಿ ಜಾನುವಾರುಗಳನ್ನು ಕಟ್ಟಿ ಸಾಕುವದು ಆರಂಭ. ಇದರಿಂದ ಕಾಡಿನಲ್ಲಿ ಮೇವಿನ ಒತ್ತಡ ಕೊಂಚ ಕಡಿಮೆಯಾಯಿತು. ಉತ್ಪಾದಿತ ಮೀಥೇನ್ ಅನಿಲ ಅಡುಗೆಗೆ ನೆರವಾಗಿ ಹೊಗೆ ಕವಿದ ಪರಿಸರ ಬದಲಾಗಿ ಅಡುಗೆ ಮನೆಗೆ ಆಧುನಿಕ ಮೆರಗು ಬಂತು. ಮಹಿಳೆಯರ ಮುಖದಲ್ಲಿ ಹೊಸ ಕಳೆ ಮೂಡಿತು. ಇದ್ದಲಿ ಡ್ರಮ್, ಕಬ್ಬಿಣದ ಡ್ರಮ್, ಭಾಗ್ಯ ಲಕ್ಷ್ಮಿ, ಫೈಬರ್  ಡ್ರಮ್‌ನ ಮಾದರಿ ಬಳಿಕ ಇತ್ತೀಚಿನ ವರ್ಷಗಳಲ್ಲಿ ಧೀನಬಂಧು ಎಂಬ ಅನಿಲ ಸ್ಥಾವರ ಮಾದರಿ ಹೆಚ್ಚು ಜನಪ್ರಿಯ. ಸುಮಾರು ೧೪-೧೮ ಸಾವಿರ ರೂಪಾಯಿ ವೆಚ್ಚದಲ್ಲಿ ಸ್ಥಾಪಿಸಬಹುದಾದ ಇವು ಬಡವರ ಉರುವಲು ಇಂಧನದ ಗಂಭೀರ ಸಮಸ್ಯೆಗೆ ಪರಿಹಾರ ನೀಡಿವೆ. ಒಮ್ಮೆ ನಿರ್ಮಿಸಿದರೆ ೨೦-೨೫ ವರ್ಷಗಳ ಕಾಲ ಬಾಳಿಕೆ. ಸುಲಭ ತಂತ್ರಜ್ಞಾನ.

ಇಲ್ಲಿ ಇದ್ದಕ್ಕಿದ್ದಂತೆಯೇ ಕ್ರಾಂತಿಯಾಗಲಿಲ್ಲ, ಆರಂಭದ ದಿನಗಳಲ್ಲಿ  ತಂತ್ರಜ್ಞಾನದ ಬಗೆಗೆ ಕೃಷಿಕರಲ್ಲಿ ಅನುಮಾನ, ಅಪಸ್ವರ, ಹಿಂದೇಟು, ಚರ್ಚೆ, ಸವಾಲು. ಸಗಣಿಯನ್ನು ತಿಪ್ಪೆಗುಂಡಿಗೆ ಹಾಕಿ ಗೊಬ್ಬರ ಮಾಡುವ ವಿಧಾನ ನೂರಾರು ವರ್ಷಗಳಿಂದ ಬಳಕೆಯಲ್ಲಿದ್ದರಿಂದ ಅನಿಲ ಸ್ಥಾವರಕ್ಕೆ ಈಗ ಸಗಣಿ ಬಳಕೆ ನಡೆದಾಗ ಸಹಜವಾಗಿ ಗೊಬ್ಬರ ಗುಣಮಟ್ಟ ವ್ಯತ್ಯಾಸ ಎಂಬ ಚರ್ಚೆ. ಸಗಣಿಯ ಸತ್ವಾಂಶಗಳೆಲ್ಲ ಅನಿಲ ಉತ್ಪಾದನೆಗೆ

ವ್ಯಯವಾಗುವದರಿಂದ ಸಗಣಿರಾಡಿಯಿಂದ ತಯಾರಿಸುವ ಗೊಬ್ಬರದಲ್ಲಿ ಸಸ್ಯಕ್ಕೆ ಅಗತ್ಯ ಖನಿಜಾಂಶ ಪೂರೈಕೆಯಾಗುವದಿಲ್ಲ ಎಂಬ ಅಭಿಪ್ರಾಯ. ಕಾಂಪೋಸ್ಟ್ ಗೊಬ್ಬರಕ್ಕೆ ತುಂಬಿದ ಸಗಣಿಗಿಂತ ಮೂರು ಪಟ್ಟು ಜಾಸ್ತಿ ಸಾರಜನಕ ಪ್ರಮಾಣ ಅನಿಲ ಸ್ಥಾವರದಿಂದ ಹೊರ ಬೀಳುವ ರಾಡಿಯಲ್ಲಿರುತ್ತದೆ ಎಂಬುದನ್ನು ವಿಜ್ಞಾನಿಗಳು ಮನದಟ್ಟು ಮಾಡಿದರು. ಭಾರತೀಯ ವಿಜ್ಞಾನ ಮಂದಿರದ ಅಸ್ತ್ರ ವಿಭಾಗ, ಖಾದಿ ಗ್ರಾಮೋದ್ಯೋಗ ಮಂಡಳಿ, ಕೃಷಿ ವಿಶ್ವ ವಿದ್ಯಾಲಯಗಳು ವಿವಿಧ ಮಾದರಿ ಅನಿಲ ಸ್ಥಾವರ ವಿನ್ಯಾಸ ರೂಪಿಸಿದವು. ರೈತ ಸಭೆ, ಚರ್ಚೆ, ವಿಚಾರ ಗೋಷ್ಠಿ ನಡೆದವು. ಸ್ಥಾವರ ನಿರ್ಮಾಣ ವೆಚ್ಚ ಭರಿಸಲು ರೈತರು ಹಿಂದೇಟು ಹಾಕಿದರು, ಆಗ ಸರಕಾರ ಸಹಾಯಧನ ನೀಡಲು ಆರಂಭಿಸಿತು. ಜಿಲ್ಲಾ ಪಂಚಾಯತ್, ಖಾದಿ ಗ್ರಾಮೋದ್ಯೋಗ ಮಂಡಳಿ, ಕೃಷಿ ಇಲಾಖೆ, ಅರಣ್ಯ ಇಲಾಖೆಗಳು ರಚನೆ ನಿರ್ಮಾಣಕ್ಕೆ ಉತ್ತೇಜನ ನೀಡಿದವು. ನೋಡಿ ಕಲಿಯುವ ರೈತ ಆಸಕ್ತಿ ಸ್ಥಾವರ ಸ್ಥಾಪನೆಗೆ ವೇಗ ತಂದಿತು. ಪರಿಣಾಮ ಇಂದು ಹಳ್ಳಿ ಹಳ್ಳಿಗಳಲ್ಲಿ ಇದು ಜನಪ್ರಿಯವಾಗಿದೆ. ಹೋಬಳಿ ಮಟ್ಟದಲ್ಲಿ ನಿರ್ಮಾಣ ತಜ್ಞತೆ ಪಡೆದ ಕುಶಲ ಕೆಲಸಗಾರರ ಪಡೆ ಇದೆ. ವಿದ್ಯುತ್ ಸಂಪರ್ಕದ ಹಾಗೇ ಇದು ಮೂಲಭೂತ ಅಗತ್ಯವಾಗಿದೆ. ಅಡುಗೆ ಅನಿಲವಲ್ಲದೇ ವಾಹನ ಓಡಿಸಲೂ ಇದು ಉಪಯುಕ್ತವೆಂಬುದು ಈಗಷ್ಟೇ ಸಾಬೀತಾಗಿದೆ. ಇಂಧನ ಸ್ಥಾವರದಿಂದ ಈಚೆ ಹೊರ ಬೀಳುವ ಸಗಣಿ ರಾಡಿಯು ಕಾಂಪೋಸ್ಟ್ ಗೊಬ್ಬರ ತಯಾರಿಗೆ ಉಪಯುಕ್ತವೆಂಬುದು ರೈತರಿಗೆ ಮನದಟ್ಟಾಗಿದೆ. ಕೃಷಿ ತ್ಯಾಜ್ಯಗಳಾದ ಹುಲ್ಲು, ಅಡಿಕೆ ಸಿಪ್ಪೆ, ತೆಂಗಿನನಾರಿನ ಜತೆ ಸೇರಿಸಿ ಅತ್ಯುತ್ತಮ ಸಾವಯವ ಗೊಬ್ಬರ ತಯಾರಿಸುವ ವಿಧಾನ ಕರಗತವಾಗಿದೆ.

ಮನೆ ಸನಿಹದಲ್ಲಿ ಉರಿಯುವ ಮೀಥೇನ್ ಅನಿಲ ಸ್ಥಾವರ ನಿರ್ಮಿಸಿದರೆ ಅಪಾಯ ಎಂದು ಹೆದರಿದ ಹಳ್ಳಿಗರು ಈಗ ತಂತ್ರಜ್ಞಾನ ಸುರಕ್ಷಿತ ಎಂದು ಒಪ್ಪಿದ್ದಾರೆ. ಅಕ್ಕರೆಯ ಸುರಕ್ಷಿತ ಜಾಗ ನೀಡಿದ್ದಾರೆ. ಕಟ್ಟಿಗೆಗೆ ಅಲೆಯುವದು, ಅಡುಗೆ ಅನಿಲಕ್ಕಾಗಿ ಪೇಟೆಯಲ್ಲಿ ಕ್ಯೂ ನಿಲ್ಲುವದನ್ನು ತಪ್ಪಿಸಿಕೊಂಡಿದ್ದಾರೆ. ಒಂದು ತಂತ್ರಜ್ಞಾನ ಪ್ರಯೋಗಾಲಯದಿಂದ ಹಳ್ಳಿಮೂಲೆಗೆ ಹರಿದು ಬಂದ ದಾರಿಯ ಉದ್ದಕ್ಕೂ ಪರಿಸರ ಸ್ನೇಹಿ ಅಭಿವೃದ್ಧಿ ಅನುಭವವಿದೆ, ಆರೋಗ್ಯ ವಿಜ್ಞಾನ ಪಾಠಗಳ ಯಶೋಗಾಥೆಗಳಿವೆ.

ತೋಟದಂಚಿನ ಕಾಡುಮರದಲ್ಲಿ ಎಲೆಮರೆಯ ಸೇವಕರು:ಲೇಖಕರು: ಶಿವಾನಂದ ಕಳವೆ

ಕಾಡಿಗೂ ಹತ್ತಿರದ ನಮ್ಮ ಕೃಷಿ ಭೂಮಿಗೂ ಜೀವದಾರಿ (Physical Corridar) ಇದೆ. ರಾಷ್ಟ್ರೀಯ ಉದ್ಯಾನ, ಅಭಯಾರಣ್ಯ ಸೇರಿದಂತೆ ಕಾಡಿನ ಪಕ್ಕ ಕೃಷಿಯಿರುವ ಎಲ್ಲೆಡೆ ಇದನ್ನು ಗುರುತಿಸಬಹುದು. ಹಗಲು ರಾತ್ರಿ ಇಲ್ಲಿ ಸಂಚರಿಸುವ ಹಾವು, ಕಪ್ಪೆ, ಪಕ್ಷಿ, ಪ್ರಾಣಿ, ಜೇನುಗಳಿವೆ. ಪರಾಗಸ್ಪರ್ಶ, ಫಲವತ್ತಾದ ಹಿಕ್ಕೆ ವಿಸರ್ಜನೆ, ಬೀಜ ಬಿತ್ತನೆ ಕಾರ್ಯಕ್ಕೆ ಜೀವ ಲೋಕದ ನೆರವಿದೆ. ನಮ್ಮ ನೆಲದ ಕಾಡಿನ (Indigenous forests) ಆವಾಸಿಗಳಾದ ಇವು ಇಡೀ ಪರಿಸರದ ಅಮೂಲ್ಯ ಅವಿ ಭಾಜ್ಯ ಅಂಶಗಳು. ನಮ್ಮ ತೋಟದ ಮಾದರಿ ಸ್ಥಳೀಯ ಕಾಡಿಗೂ ಸಾಮ್ಯತೆಯ ಸಂಬಂಧವಿರುವದರಿಂದ ವನ್ಯ ಒಡನಾಟ ಸಾಧ್ಯವಾಗಿದೆ.

ಮಲೆನಾಡಿನಲ್ಲಿ ಸಾಂಪ್ರದಾಯಿಕ ಅಡಿಕೆ ತೋಟಗಳು ಕಣಿವೆಯಲ್ಲಿವೆ. ಇಲ್ಲಿ ತೋಟದಲ್ಲಿನ ಸಸ್ಯಗಳ ಪಟ್ಟಿ ಮಾಡಿದರೆ ಕೃಷಿ ವೈವಿಧ್ಯತೆ ಬೆರಗು ಮೂಡಿಸುವಂತಿದೆ.

ಬೆಳೆ ವಿಶೇಷ ಗಮನಿಸಿದರೆ ಕೃಷಿ ಅಡವಿ ಜ್ಞಾನದ ಮೂಲವಾಗಿರುವದು ಸ್ಪಷ್ಟವಾಗುತ್ತದೆ. ಕಾಡಿನ ಎತ್ತರದ ಮರ, ಬಳ್ಳಿ, ಪೊದೆಗಳ ಸ್ವರೂಪವನ್ನು ಬೆಳೆ ರೂಪದಲ್ಲಿಯೂ ಕಾಣಬಹುದು. ಅಡಿಕೆ, ಬಾಳೆ, ಕಾಳುಮೆಣಸು, ಏಲಕ್ಕಿ, ಅರಿಶಿನ, ಜಾಯಿಕಾಯಿ, ಅಮಟೆ, ಬೇರು ಹಲಸು, ಹಲಸು, ಲಿಂಬೆ, ಸೂಜಿ ಮೆಣಸು, ಸುವರ್ಣಗಡ್ಡೆ, ಮರ ಗೆಣಸು, ಲವಂಗಗಳನ್ನು ಇಲ್ಲಿನ ತೋಟಗಳಲ್ಲಿ ಕಾಣಬಹುದು. ಮಳೆಗಾಲದಲ್ಲಿ ಸವತೆ, ಗೆಣಸಿನ ಬಳ್ಳಿಗಳನ್ನು ತೋಟದ ನೆಲಕ್ಕೆ ಹಬ್ಬಿಸುವ ವಿಧಾನವಿದೆ. ಇವು ಮುಚ್ಚಿಗೆ ಬೆಳೆಯಾಗಿ ಕಾರ್ಯನಿರ್ವ"ಸುತ್ತವೆ. ತೆಂಗಿನ ತೋಟದಲ್ಲಿ ಕಾಫಿ, ಅನಾನಸ್, ಕಾಳುಮೆಣಸು ಕಾಣಬಹುದು. ಅಬ್ಬರದ ಮಳೆ ಸುರಿಯುತ್ತದೆ. ಬಹು ಅಂತಸ್ತಿನಲ್ಲಿ ಸಸ್ಯದಟ್ಟನೆ ಇದ್ದಾಗ ಭೂಸವಕಳಿ ತಡೆಯುವದು ಸುಲಭವಾಗುತ್ತದೆ. ಕೃಷಿ ಮಣ್ಣಿನ ಸಂರಕ್ಷಣೆಗೆ ಅಡವಿ ಸಸ್ಯಗಳ ಸ್ವರೂಪ ಗಮನಿಸಿಯೇ ಬೆಳೆ ಮಾದರಿ ರೂಪುಗೊಂಡಿದೆ.

ನಮ್ಮ ಕೃಷಿ ಬೆಳೆಯಲ್ಲಿ ಹಾನಿಕಾರಕ ಕೀಟ ನಿಯಂತ್ರಣಕ್ಕೆ ಪಕ್ಷಿಗಳ ಕೊಡುಗೆ ದೊಡ್ಡದು. ಪಶ್ಚಿಮ ಘಟ್ಟದ ಮೈನಾ ಹಕ್ಕಿಗಳು ಸಂತಾನಾಭಿವೃದ್ಧಿ ಹಾಗೂ ಮರಿಗಳ ಪಾಲನೆ ಕಾಲಕ್ಕೆ ದಿನವೊಂದಕ್ಕೆ ೨೦೦-೮೦೦ ಕೀಟ ತಿನ್ನುತ್ತವೆ! ಕೊಲರ್ಯಾಡೋ ಎಂಬ ಒಂದು ಜೊತೆ ದುಂಬಿ ವರ್ಷಕ್ಕೆ ಆರು ಕೋಟಿ

ಮರಿ ಉತ್ಪಾದಿಸುತ್ತದೆ. ವರ್ಷದಲ್ಲಿ ತನ್ನ ಸಂಕುಲದ ೧೩ ತಲೆಮಾರು ಬೆಳೆಸುತ್ತದೆ. ಕೆಲವೇ ಕೆಲವು ಗಂಟೆಗಳಲ್ಲಿ ನೂರಾರು ಎಕರೆ ಬೆಳೆಯನ್ನು ತಿನ್ನಬಹುದಾದ ಮಿಡತೆಗಳ ಬಗೆಗೆ ಕೇಳಿರಬಹುದು. ಇಂದು ಇಡೀ ಪಕ್ಷಿ ಸಂಕುಲಗಳಲ್ಲಿ ಶೇಕಡಾ ೮೫ರಷ್ಟು ಕೀಟ ಭಕ್ಷಕಗಳಾಗಿ ಕೀಟ ನಿಯಂತ್ರಣದಲ್ಲಿ ಮಹತ್ವದ ಪಾತ್ರವಹಿಸಿವೆ. ಕಾಡುಕೋಳಿ ಗೆದ್ದಲು ನಿಯಂತ್ರಣ ಮಾಡುತ್ತದೆ. ನೊಣ ಹಿಡುಕ, ಬುಶ್‌ಚಾಟ್, ಚಂದ್ರ ಮುಕುಟ, ಕಾಜಾಣ, ಕಳಿಂಗ, ಮರಕುಟಿಗ ಹೀಗೆ ನಿತ್ಯ ನಾವು ನೋಡುವ ಪಕ್ಷಿಗಳು ಕೀಟ ನಿಯಂತ್ರಣದಲ್ಲಿ ತೊಡಗಿವೆ. ಒಂದು ಗುಬ್ಬಚ್ಚಿ ದಿನಕ್ಕೆ ೨೨೦-೨೬೦ ಬಾರಿ ತನ್ನ ಗೂಡಿಂದ ಹೊರಗಡೆ ಹಾರುತ್ತದೆ, ಮರಳಿ ಬರುವಾಗ ತನ್ನ ಮರಿಗೆಂದು ತರುವ ಆಹಾರಗಳಲ್ಲಿ ಕಂಬಳಿ ಹುಳುಗಳೂ ಇರುತ್ತವೆ! ನಮಗಿಂತ ೨೦ ಪಟ್ಟು ಸೂಕ್ಷ್ಮವಾಗಿ ಪರಿಸರವನ್ನು ನೋಡುವ ಶಕ್ತಿ ಪುಟ್ಟ ಪಕ್ಷಿಗಳಿಗಿದೆ. ಹೀಗಾಗಿ ನಮ್ಮ ಹೊಲದ ಮೂಲೆಯಲ್ಲಿ ಕೀಟಗಳ ಸಂಖ್ಯೆಯನ್ನು ದೂರದಿಂದಲೇ ಗುರುತಿಸಿ ತಮ್ಮ ಆಹಾರ ಸಂಪಾದಿಸುತ್ತವೆ. ನಮ್ಮ ಕೃಷಿ ಬೆಳೆ ನಮಗೆ ಉಳಿಸುತ್ತವೆ.

ಪಕ್ಷಿಗಳ ಮಲ ಒಳ್ಳೆಯ ಗೊಬ್ಬರ. ಇದರಲ್ಲಿ ಯೂರಿಯಾ, ರಂಜಕ ಅಧಿಕ ಪ್ರಮಾಣದಲ್ಲಿವೆ. ಮೀನು ತಿನ್ನುವ ಮಿಂಚುಳ್ಳಿ, ಬೆಳ್ಳಕ್ಕಿ, ಕೊಕ್ಕರೆ, ಹೆಜ್ಜಾರ್ಲೆಗಳ ಹಿಕ್ಕೆಯಂತೂ ಅಧಿಕ ಫಲವತ್ತಾದ ಗೊಬ್ಬರ. ಮಾಂಸಾಹಾರಿ ಪಕ್ಷಿಗಳು ಇಲಿಗಳ ನಿಯಂತ್ರಣಕ್ಕೆ ಸಹಾಯಕವಾಗಿವೆ. ಒಂದು ಜೊತೆ ಇಲಿಗಳು ವರ್ಷದಲ್ಲಿ ೮೮೦ ಇಲಿಗಳಾಗಿ ಬೆಳೆಯಬಲ್ಲ ತಾಕತ್ತು ಪಡೆದಿವೆ. ಗೂಬೆ, ಕೇರೆ ಹಾವು, ಬೆಕ್ಕುಗಳು ಇವನ್ನು ನಿಯಂತ್ರಿಸುವ ಕೆಲಸ ಮಾಡುತ್ತಿವೆ. ಅಡಿಕೆ ತೋಟದ ಪಕ್ಕ ಒಂದಿಷ್ಟು ಮರ ಉಳಿಸುವ ಕಾರಣಕ್ಕೆ ನಮಗೂ ಅನುಕೂಲವಾಗಿದೆ, ವನ್ಯಲೋಕಕ್ಕೂ ನೆರವಾಗಿದೆ.

ನಮ್ಮ ಭೂಮಿಯಲ್ಲಿ ನಿಂತು ಸುತ್ತಲಿನ ಕಾಡು ನೋಡಬೇಕು. ಅಲ್ಲಿರುವ ನೈಸರ್ಗಿಕ ಮರ, ಗಿಡ, ಬಳ್ಳಿ, ಪೊದೆ, ಹುಲ್ಲುಗಳು ನೆಲದ ಪಾಠ ಹೇಳುತ್ತವೆ. ಸದಾ ಪೈಪೋಟಿಯ ನಿಸರ್ಗ ರಂಗದಲ್ಲಿ ಒಂದಿಷ್ಟು ಹೆಮ್ಮರ, ಒಂದಿಷ್ಟು ಕೆಳ ಹಂತದ ಸಸಿಗಳು, ಇನ್ನೊಂದಿಷ್ಟು ಬಳ್ಳಿಗಳು ಬೆಳೆಯುವದನ್ನು ಗಮನಿಸಬಹುದು. ಮಾನವ ಹಸ್ತಕ್ಷೇಪ ಕಡಿಮೆ ಇರುವ ನೆಲೆಯಲ್ಲಿ ಕಾಡು ಎಲ್ಲ ಹಂತದ ಸಸ್ಯಗಳಿಂದ ಸಮೃದ್ಧವಾಗಿರುತ್ತದೆ. ಅಂತಹ ಸ್ಥಳಗಳಲ್ಲಿ ಮಣ್ಣಿನ ಫಲವತ್ತತೆ ಹೆಚ್ಚುತ್ತ ಅಂತರ್ಜಲ ಸುಧಾರಣೆಯಾಗುತ್ತದೆ. ಕೃಷಿ ವಿಸ್ತರಣೆಯ ಉತ್ಸಾಹದಲ್ಲಿ ತೋಟದಂಚಿನ ಹಸುರು ನಾಶ ಮಾಡಿದರೆ ಗುಡ್ಡ ಕಡಿದು ಮೈಮೇಲೆ ಎಳೆದುಕೊಂಡಂತಾಗುತ್ತದೆ. ಕೃಷಿ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ.

ರಾಜ್ಯ ಅರಣ್ಯ ಇಲಾಖೆ ದಶಕದ ಹಿಂದೆ ಕೃಷಿ ಅರಣ್ಯ ಪದ್ಧತಿ ಕುರಿತು ಒಂದು ಸಮೀಕ್ಷೆ ನಡೆಸಿತ್ತು. ೧೯ ಜಿಲ್ಲೆಗಳ ಆಯ್ದ ೨೫ ತಾಲೂಕಿನ ೫೩ ಹಳ್ಳಿಯ ೨೬೫೦ ಕುಟುಂಬಗಳಲ್ಲಿ ಮರ ಆಧಾರಿತ ಕೃಷಿ ಕುರಿತು ವಿವರ ಸಂಗ್ರಹಿಸಿತು. ರೈತರು ಹೊಲಗಳಲ್ಲಿ ಹಿಂದಿನಿಂದ ಯಾವ ಜಾತಿ ಮರಗಳನ್ನು ಬೆಳೆಯುತ್ತಿದ್ದಾರೆ? ಈಗ ಯಾವ ಜಾತಿ ಮರ ಬೆಳೆಸಲು ಇಚ್ಚಿಸಿದ್ದಾರೆ? ರೈತರು ಕೃಷಿ ಅರಣ್ಯ ಪದ್ದತಿಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಇರುವ ತೊಡಕುಗಳೇನು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ನಡೆಯಿತು. ಬೆಂಗಳೂರು, ಧಾರವಾಡ ಕೃಷಿ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ನಡೆದ ಈ ಅಧ್ಯಯನ ನಮ್ಮ ಕೃಷಿ ಅರಣ್ಯದ ಕತೆ ಹೇಳುತ್ತವೆ. ಸಾಕಷ್ಟು ಭೂಮಿ ಇಲ್ಲ, ಆದಾಯ ದೊರಕಲು ಹೆಚ್ಚು ವರ್ಷ ಕಾಯಬೇಕು, ಅಕ್ಕಪಕ್ಕದ ರೈತರಿಂದ ತೊಂದರೆ, ಕಳ್ಳತನದ ಭಯ, ನೀರಿನ ಸಮಸ್ಯೆ, ಮುಖ್ಯ ಪೈರಿನ ಇಳುವರಿ ಕಡಿಮೆಯಾಗುತ್ತದೆ, ಮರ ಬೆಳೆಸುವ ಕುರಿತು ತಿಳುವಳಿಕೆ ಇಲ್ಲ ಹೀಗೆ ಕಾರಣಗಳು ದೊರೆತವು. ಸಣ್ಣ ಮತ್ತು ಅತಿ ಸಣ್ಣ ಹಿಡುವಳಿ ದೊಡ್ಡ ಸಮಸ್ಯೆಯಾಗಿರುವದು ಇನ್ನೊಂದು ಪ್ರಮುಖ ಸಮಸ್ಯೆ. ಈಗಿರುವ ಮರಗಳ ಮಾಹಿತಿ ಗಮನಿಸಿದಾಗ ಸ್ವಾರಸ್ಯಕರ ಸಂಗತಿ ಹೊರಬಿತ್ತು. ಬೇವು ಒಟ್ಟೂ ಕೃಷಿ ಅರಣ್ಯದ ಶೇಕಡಾ ೧೬ ಭಾಗದಲ್ಲಿತ್ತು. ಅದರಂತೆ ತೆಂಗು ಶೇ. ೧೫, ಮಾವು ಶೇ. ೧೧, ಹುಣಸೆ ಶೇ. ೧೦, ಕರಿಜಾಲಿ ಶೇ. ೪.೫, ಹಲಸಿನ ಮರಗಳಿಗೆ ಶೇಕಡಾ ೪ ಪ್ರದೇಶಗಳಲ್ಲಿ ನೆಲೆ ನೀಡಲಾಗಿತ್ತು. ಮಲೆನಾಡಿನಲ್ಲಿ ತೆಂಗು, ಮಾವು, ಅಡಿಕೆ, ಹಲಸು, ತೇಗ, ಗೋಡಂಬಿ ಬೆಳೆಯುತ್ತಿದ್ದರು. ಮೈಸೂರು ಸೀಮೆಗಳಲ್ಲಿ ತೆಂಗು, ಮಾವು, ನೀಲಗಿರಿ, ಹೊಂಗೆ, ಆಲದ ಮರ ಬೆಳೆಸುತ್ತಾರೆ. ಉತ್ತರ ಕರ್ನಾಟಕ ಪ್ರದೇಶದಲ್ಲಿ ಬೇವು, ಮಾವು, ಕರಿಜಾಲಿ, ನೀಲಗಿರಿ, ಬಳ್ಳಾರಿ ಜಾಲಿ, ಬಿದಿರು ಆಸಕ್ತಿ ಕಂಡುಬಂದಿತು.

ರೈತರು ಇತ್ತೀಚಿನ ವರ್ಷಗಳಲ್ಲಿ ಮೇವು, ಗೊಬ್ಬರ ನೀಡುವ ಮರಗಳಿಗಿಂತ ವಾಣಿಜ್ಯ ದೃಷ್ಟಿಯಿಂದ ಮಹತ್ವವಾದ ತೇಗ, ನೀಲಗಿರಿ, ಅಕೇಸಿಯಾ, ಸರ್ವೆ, ಸಿಲ್ವರ್‌ಓಕ್‌ದಂತಹ ಮರ ಬೆಳೆಸಲು ಇಷ್ಟಪಡುತ್ತಿರುವುದು ಗಮನಕ್ಕೆ ಬಂದಿದೆ. ಸ್ಥಳೀಯ ಜೀವ ಪರಿಸರಕ್ಕೆ ಸಂಬಂಧವಿರುವ ನೆಲದ ಸಸ್ಯ ಪೋಷಣೆಗೆ ನಾವು ಲಕ್ಷ್ಯವಹಿಸಬೇಕು.

# ನಗರ ಪರಿಸರ, ಮರ ಬೆಳೆಸಲು ಹಿತ್ತಲ ಮದ್ದು!

ಬೆಂಗಳೂರಿನಲ್ಲಿ ಸಾಲು ಮರಗಳು ಏಕೆ ಸಾಯುತ್ತಿವೆ? ಪರಿಸರ ತಜ್ಞ ಎ.ಎನ್.ಎಲ್ಲಪ್ಪರೆಡ್ಡಿ ನೇತ್ರತ್ವದಲ್ಲಿ ೫ ವರ್ಷದ ಹಿಂದೆ ಸರಕಾರ ಒಂದು ಸಮಿತಿ ನೇಮಿಸಿತ್ತು. ರಸ್ತೆಯಂಚಿನ ಮರಗಳ ಸ್ಥಿತಿಗತಿ ಅಧ್ಯಯನ ಮಾಡಿದ ತಂಡ ಮರದ ಸಾವಿಗೆ ಕಾರಣ ಪಟ್ಟಿ ಮಾಡಿತು. ಜಾನುವಾರು ಮೇವಿಗಾಗಿ ಟೊಂಗೆ ಕಡಿಯುವದು, ಮರಕ್ಕೆ ಜಾನುವಾರು ಕಟ್ಟುವದು, ಮರಗಳಿಗೆ ಫಲಕ ಹಾಕಲು ಮೊಳೆ ಹೊಡೆಯುವದು, ತೊಗಟೆ ತೆಗೆಯುವದು, ರಸ್ತೆ ಗಟಾರಕ್ಕೆ ಕಲ್ಲು, ಕಾಂಕ್ರೀಟ್ ಹಾಕುವಾಗ ಬೇರು ಬೆಳವಣಿಗೆ ಅಡ್ಡಿಯಾಗುವುದು, ವಿದ್ಯುತ್ ಮಾರ್ಗ, ಒಳಚರಂಡಿ, ನೀರು ಸರಬರಾಜಿಗೆ ಭೂಮಿ ಅಗೆಯುವ ಕೆಲಸಗಳು ಮರ ಕೊಲ್ಲುತ್ತಿವೆಯೆಂದು ವರದಿ ಹೇಳಿತು.

ಶುದ್ಧ ಪರಿಸರ, ನಗರ ಸೌಂದರ್ಯಕ್ಕೆ ಸಾಲು ಮರಗಳು ಬೇಕು. ಇಷ್ಟಾಗಿಯೂ ಅಂಗಡಿ, ಮನೆ, ಶಾಲೆ, ಗೋಡೆಯಂಚಿನ ಮರಗಳನ್ನು ಪ್ರೀತಿಸುವವರಿಗಿಂತ ದ್ವೇಷಿಸುವವರ ಸಂಖ್ಯೆ ಜಾಸ್ತಿ. ಯಾವುದೋ ಬಡಾವಣೆಯಲ್ಲಿ ಒಂದು ಮರದ ಟೊಂಗೆ ಮುರಿದು ಸಾವು ನೋವು ಘಟಿಸಿದರೆ ಮಾಧ್ಯಮ ಮುಖೇನ ಸುದ್ದಿ ಬಿತ್ತರಗೊಳ್ಳುತ್ತದೆ. ಮರುಕ್ಷಣದಲ್ಲಿ ರಸ್ತೆ ಪಕ್ಕದ ಎಲ್ಲ ಮರಗಳ ಬಗೆಗೂ ವಿಚಿತ್ರ ದ್ವೇಷ ಸಮೂಹ ಸನ್ನಿಯಾಗಿ ಎಲ್ಲ ಮರಗಳು ಮಕ್ಕಳ ಮೇಲೆ ಮುರಿದು ಬೀಳಬಹುದೆಂಬ ಭಯ ಆರಂಭವಾಗುತ್ತದೆ! ಪರಿಸರ, ಮರ ಗಿಡಗಳ ಮಹತ್ವದ ಬಗೆಗೆ ಎಷ್ಟೇ ಮಾಹಿತಿ, ಪಾಠ, ಕಾನೂನು, ಜಾಗೃತಿ, ಆಂದೋಲನ ನಡೆದರೂ ನಗರ ಪರಿಸರದಲ್ಲಿ ಮರ ಪ್ರೀತಿಸುವ ಮಂದಿ ಕಡಿಮೆಯಾಗುತ್ತಿದ್ದಾರೆ. ಅರಣ್ಯ ಮೂಲದಿಂದ ನೀರು, ವಿದ್ಯುತ್, ನಾಟಾ, ಔಷಧ, ಆಹಾರ ಪಡೆಯುತ್ತಿರುವ ಸತ್ಯಗಳನ್ನು ನಾವು ಮರೆಯುತ್ತಿದ್ದೇವೆ. ಪರಿಸರ ನಾಶದ ಬಿಕ್ಕಟ್ಟಿನ ಮಧ್ಯೆ ಬಡಾವಣೆಗಳ ಜನ ಒಗ್ಗಟ್ಟಾಗಿ ಹೇಗೆ ಮರ ಬೆಳೆಸಬಹುದೆಂದು ಚಿಂತಿಸುವುದು ಮರೆತಿದ್ದೇವೆ. ಡಿಗ್ರಿ, ಪಿಎಚ್‌ಡಿ, ಇಂಜಿನಿಯರ್, ಡಾಕ್ಟರ್ ಹೀಗೆ ಟನ್‌ಗಟ್ಟಲೇ ಅಕ್ಷರಸ್ಥ ಸಮೂಹ ತುಂಬಿ ತುಳುಕುವ ನಗರದಲ್ಲಿ ಪರಿಸರ ವಿಚಾರದಲ್ಲಿ ಮಿಲಿಗ್ರ್ಯಾಮ್ ಕಾಳಜಿಯಿಲ್ಲ, ದಟ್ಟ ದಾರಿದ್ರ್ಯ ಏಕೆ ತುಂಬಿದೆ!? ಗ್ರಾಮೀಣ ನೈಸರ್ಗಿಕ ಸಂಪತ್ತು ದೋಚಿ ನಗರ ಬೆಳೆಯುತ್ತಿದೆ, ಕಸಿದುಕೊಂಡಿದ್ದನ್ನು ಸಾಲುಮರದ ಮುಖೇನವಾದರೂ ಕೊಂಚ ಭೂಮಿಗೆ ಹಿಂದಿರುಗಿಸೋಣ ಎಂಬ ಕನಿಷ್ಟ ಪ್ರಜ್ಞೆಯಾದರೂ ಇರಬೇಕು.

'ಸಸಿ ನೆಡ ಬೇಕೆಂದಿದ್ದೇನೆ, ಅದು ಮರವಾಗಿ ಬೆಳೆದಾಗ ಎಲೆ ಉದುರಿಸಬಾರದು, ಅಂಗಳಕ್ಕೆ ವಿಪರೀತ ಕಸ ಉದುರಿಸಬಾರದು' ಮನೆ ಎದುರಿನ ರಸ್ತೆಯಂಚಿನಲ್ಲಿ ಸಾಲು ಸಸಿ ಬೆಳೆಸುವ ಆಸಕ್ತಿ ಹೊಂದಿದ ಸ್ನೇಹಿತರೊಬ್ಬರು ಹೇಳಿದ್ದರು. ಮರದ ಸಹಜ ಕ್ರಿಯೆಯನ್ನು ನಮ್ಮ ಶಿಸ್ತಿಗೆ ಒಳಪಡಿಸಿ ನೋಡುವದಾದರೆ ಖಂಡಿತಾ ಪ್ಲಾಸ್ಟಿಕ್ ಮರ ಮಾತ್ರ ಪ್ರೀತಿಸಬಹುದು! ಇನ್ನು ಕೆಲವರಿಗೆ ಮನೆ ಎದುರು ನಿಲ್ಲಿಸಿದ ಕಾರಿನ ಮೇಲೆ ಮರದ ಎಲೆ, ಕಸಕಡ್ಡಿ ಬೀಳಬಾರದು, ಪಕ್ಷಿಗಳು ಕೂತು ಹಿಕ್ಕೆ ಹಾಕುವದು ನಿಷೇಧ. ಹಸುರಿನ ಅನ್ಯೋನ್ಯ ಒಡನಾಡಿಗಳನ್ನು ಆಚೆಯಿಟ್ಟು ಎಂತಹ ನಿಸರ್ಗ ಪ್ರೇಮ ಸಾಧಿಸುತ್ತೇವೆ? ಗಮನಿಸಿ ನೋಡಿ, ಬಡಾವಣೆಗಳಲ್ಲಿ ಹೆಚ್ಚು ಹೆಚ್ಚು ಮರ ಇದ್ದರೆ ವಾತಾವರಣ ಸಹ್ಯವಾಗಿರುತ್ತದೆ, ಇಲ್ಲದಿದ್ದರೆ ಸಿಮೆಂಟ್ ಛಾವಣಿಗಳು ಕಾದ ಕಾವಲಿ, ವಿದ್ಯುತ್ ಇಲ್ಲದಿದ್ದರೆ ಸಹಿಸಲೂ ಅಸಾಧ್ಯ ಸೆಕೆ ಹೆಚ್ಚುತ್ತದೆ. ಶಬ್ಧ ಮಾಲಿನ್ಯ, ವಾಯುಮಾಲಿನ್ಯ ನಿಯಂತ್ರಣಕ್ಕೆ ಮರಗಳು ಯಂತ್ರವಾಗಿ ಸೇವೆ ನಿರ್ವಹಿಸುತ್ತವೆ. ರಾಜ ಮಹಾರಾಜರ ಕಾಲದಲ್ಲಿ ಅಶ್ವತ್ಥ, ಆಲ,ಬೇವು, ಮಾವಿನ ಮರಗಳನ್ನು ರಸ್ತೆಯಂಚಿನಲ್ಲಿ ಬೆಳೆಸಿದ್ದು ನೋಡುತ್ತೇವೆ. ಕುದುರೆ, ಚಕ್ಕಡಿ, ಕಾಲ್ನಡಿಗೆ ಸಂಚಾರದ ಕಾಲಕ್ಕೆ ನೆರಳು ನೀಡುವ ಮರಗಳು ಮಹತ್ವ ಪಡೆದಿದ್ದವು. ಒಮ್ಮೆ ಬೆಳೆಸಿದವು ನೂರಾರು ವರ್ಷ ಬಾಳಿದವು. ರಸ್ತೆ ಅಗಲೀಕರಣ ಶತಮಾನದ ಮರಗಳನ್ನು ನಿರ್ದಾಕ್ಷಿಣ್ಯವಾಗಿ ನುಂಗಿದ್ದನ್ನು ನಿತ್ಯ ಹೆದ್ದಾರಿಗಳಲ್ಲಿ ನೋಡುತ್ತೇವೆ. ಈಗ ಸಾಲು ಮರಗಳು ಬೇಗ ಬೆಳೆಯಬೇಕು, ಹೂವು ಬಿಡಬೇಕು ಎಂಬುದಕ್ಕೆ ಹೆಚ್ಚಿನ ಆದ್ಯತೆ. ವಿದೇಶಿ ಸಸಿಗಳಲ್ಲಿ ಸಾಲು ಚೆಂದ ನೋಡುವ ಹುಚ್ಚು ಹತ್ತಿದೆ. ನೆಡುವವರು ಕೆಲವರು, ಕಡಿಯುವವರು ಹಲವರು ತುಂಬಿದ ರಸ್ತೆಯಂಚಿನಲ್ಲಿ ಮರ ಬೆಳೆಸುವದು ದೊಡ್ಡ ಸಾಹಸ.

ನಗರ ಪರಿಸರದಲ್ಲಂತೂ ಸಸಿ ಬೆಳೆಸುವ ನಮ್ಮ ದೃಷ್ಟಿ ಕೊಂಚ ಬದಲಾಗಬೇಕು. ಸಂಪಿಗೆ, ಮೇ ಫ್ಲವರ್, ಬೇವು, ಹಲಸು ಎಂದು ಮಾಮೂಲಿ ಸಸಿ ನೆಡುವ ಬದಲು ಯಾವ ಸಸಿಯನ್ನು ಜನ ಪ್ರೀತಿಸುತ್ತಾರೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ ನೋಡಬೇಕು. ಅಷ್ಟಕ್ಕೂ ರಸ್ತೆ ಪಕ್ಕದಲ್ಲಿ ಸಸಿ ನೆಡುವದಕ್ಕಿಂತ ನೆಟ್ಟ ಸಸಿ ಜೋಪಾನವಾಗಿ ಬೆಳೆಸುವ ಜಾಗೃತಿ ಬೇಕು. ಮನೆ ಮನೆಯ ಹಿತ್ತಲುಗಳಲ್ಲಿ ಜನ ಎಂತಹ ಸಸಿ ಬೆಳೆಸಿದ್ದಾರೆ ಎಂಬುದನ್ನು ಪಟ್ಟಿ ಮಾಡಬೇಕು. ಎಲ್ಲಾದರೂ ಹೆಚ್ಚು ಹೆಚ್ಚು ಸಸಿ ಬೆಳೆಸೋಣ ಎಂಬ ಕಾಳಜಿ ಬೇಕು. ದಾಲ್ಚಿನ್ನಿ, ಜಾಯಿಕಾಯಿ, ಲವಂಗ, ಹಲಸು, ಅಮಟೆ,

ಬಿಂಬಳೆ, ನುಗ್ಗೆ, ಸಾಂಬಾರಬೇವು, ಮಾವು, ಕಂಚಿ, ಲಿಂಬು, ಬೇರು ಹಲಸು ಇಂತಹ ಸಸ್ಯಗಳನ್ನು ಮಲೆನಾಡಿನ ಶಹರಗಳಲ್ಲಿ ಬಹಳ ಕಾಳಜಿಯಿಂದ ಬೆಳೆಸುತ್ತಾರೆ. ಸ್ನಾನ, ಪಾತ್ರೆ ತೊಳೆದ ನೀರು ಒದಗಿಸಿ ಬೇಸಿಗೆಯಲ್ಲಿ ಸಸಿ ಒಣಗದಂತೆ ಕಾಪಾಡುತ್ತಾರೆ. ಈ ಸಸಿಗಳು ಅವರ ಆಹಾರ, ಆರೋಗ್ಯ ಸಂಸ್ಕೃತಿಯಲ್ಲಿ ಮಹತ್ವ ಪಡೆದಿವೆ. ಬೆಳೆಸಿದ ಹಿತ್ತಲ ಸಸಿಗಳ ಪುಟ್ಟ ಟೊಂಗೆ ಕಡಿಯುವಾಗಲೂ ಬಹಳ ಎಚ್ಚರವಹಿಸುತ್ತಾರೆ. ಬಳಕೆ ಪ್ರೀತಿ ಸಂರಕ್ಷಣೆ ಕಾಳಜಿಯ ಮೂಲವಾಗಿದೆ. ಈ ತತ್ವವನ್ನು ನಗರ ಪರಿಸರ ಅಭಿವೃದ್ಧಿ ರೂಪಿಸಲು ಬಳಸಬೇಕು. ಕಿಲೋ ಮೀಟರ್ ಉದ್ದಕ್ಕೂ ಸಸಿ ನೆಟ್ಟು ವನಮಹೋತ್ಸವ ಮಾಡಿ ಫೋಟೊ ಪತ್ರಿಕೆಯಲ್ಲಿ ಬರುವದಕ್ಕಿಂತ ಹತ್ತಿಪ್ಪತ್ತು ಮನೆಗಳನ್ನು ಆಯ್ದು ಸುತ್ತಲಿನ ಸಸ್ಯ ಸಂಪತ್ತು ಹೆಚ್ಚಿಸುವ ಯೋಜನೆ ಮಾಡುವದು ಉತ್ತಮ ಕೆಲಸ. ಖಾಸಗಿ ಭೂಮಿಯಲ್ಲಿ ಬೆಳೆದ ಮರ ಸುತ್ತಲಿನ ವಾತಾವರಣಕ್ಕೆ ತನ್ನ ಕೊಡುಗೆ ಧಾರಾಳ ನೀಡುತ್ತದೆ. ಔಷಧ, ಆಹಾರ, ಅಲಂಕಾರಿಕ ಮಹತ್ವ ಪಡೆದ ಸಸ್ಯಗಳ ಬಗೆಗೆ ಒಂದು ಬಡಾವಣೆಯ ಜನ ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಂಡು ಸಸ್ಯ ಸಂಗ್ರಹ, ಬಳಕೆ ವಿಧಾನ ಚರ್ಚಿಸಬೇಕು. ಕರಾವಳಿ ಮೂಲದವರಾಗಿ ನಗರದಲ್ಲಿರುವವರು ಜಾಯಿಕಾಯಿ, ಬೇರು ಹಲಸಿನ ಅಡುಗೆ ಮಹತ್ವವನ್ನು ಇನ್ನುಳಿದವರಿಗೆ ತಿಳಿಸಬಹುದು. ತೋಟದ ದಾಳಿಂಬೆ, ಲಿಂಬು ಹೇಗೆ ಆರೈಕೆ ಮಾಡಬೇಕೆಂದು ಬಯಲುನಾಡಿನ ಜನ ವಿವರಿಸಬಹುದು. ವಿವಿಧ ಪ್ರಾದೇಶಿಕ ಮೂಲದವರು ಒಂದಾಗಿ ಗಿಡ ಜ್ಞಾನ ಪಡೆಯುವ ಅವಕಾಶಗಳು ಬಡಾವಣೆಯ ಜನರನ್ನು ರಚನಾತ್ಮಕ ಕೆಲಸದಲ್ಲಿ ತೊಡಗಿಸುತ್ತದೆ. ಮಾರುಕಟ್ಟೆ ತರಕಾರಿ ಬದಲು ಹಿತ್ತಲಿನ ಫಲದಲ್ಲಿ ಸ್ವಾವಲಂಬನೆ, ಆರೋಗ್ಯದ ಪರ್ಯಾಯ ಹುಡುಕಬಹುದು. ಮನೆ ಮನೆಯ ಹಿತ್ತಲನ್ನು ಆರೋಗ್ಯದ ಹಸುರು ಮಾತ್ರೆಗಳ ಸುಂದರ ಖಜಾನೆಯಾಗಿ ಪರಿವರ್ತಿಸಬಹುದು.

ಗದಗದ ಕಪ್ಪತಗುಡ್ಡದ ಹಳ್ಳಿಯೊಂದರ ಮನೆ ಹಿತ್ತಲಲ್ಲಿ ನೂರಾರು ಹಲಸಿನ ಫಲಗಳಿದ್ದವು. ಅವು ಹಣ್ಣಾಗಿ ಹಾಳಾಗುತ್ತಿದ್ದವು. ವಿಚಾರಿಸಿದರೆ 'ಹಲಸು ತಿಂದ್ರೆ ಜಡ್ಡು ಆಗ್‌ತೈತ್ರೀ' ಎಂದು ಹೇಳಿದರು. ಮಲೆನಾಡಿನ ಮನೆಮನೆಗಳಲ್ಲಿ ತಯಾರಿಸುವ ಹಲಸು ಖಾದ್ಯಗಳ ವಿವರ ನೀಡಿದಾಗ ಅಚ್ಚರಿಪಟ್ಟರು. ಶಿವಮೊಗ್ಗ ಸಾಗರದ ಗೋಳಗೋಡಿನ ಗೀತಕ್ಕ ಹಲಸಿನಿಂದ ೨೫೦ ಅಡುಗೆ ತಯಾರಿಸುವ ವಿಚಾರ ತಿಳಿಸಿದಾಗ ಮರ ನೋಡುವ ದೃಷ್ಟಿ ಬದಲಾಯಿತು. ಒಂದು ಫಲದ ವಿವಿಧ ಭಾಗಗಳನ್ನು ಹೇಗೆ ಬಳಸಬಹುದು ಎಂಬ ವಿಚಾರದಲ್ಲಿ ಬಡಾವಣೆಗಳಲ್ಲಿ ಮಾಹಿತಿ ಕೊರತೆಯಿದೆ. ನಗರ ಬಡಾವಣೆಗಳಲ್ಲಿ ಇಂತಹ ಗಿಡ ಗೆಳೆತನ ಪಾಠ ದೊರೆತರೆ ರಾಜ್ಯದ ವಿವಿಧ ಭಾಗಗಳಿಗೆ ತಲುಪುವ ಅವಕಾಶವಾಗುತ್ತದೆ. ದೇಸೀ ಆಹಾರ ಸಂಸ್ಕೃತಿ ಉಳಿಸುವ ಸಾಧ್ಯತೆಯಾಗುತ್ತದೆ. ಮರ ಗಿಡಗಳ ಬಳಸಿಬಲ್ಲ ಪ್ರೀತಿ ನಗರದ ಮನೆ ಮನೆಗಳಲ್ಲಿ ಉದ್ಯಾನ ಬೆಳೆಸುವ ನವಚೇತನವಾಗುತ್ತದೆ.

ನಗರದ ಮಹಿಳಾ ಸಂಘ, ಸ್ವಸಹಾಯ ಸಂಘ, ಯುವಕ ಸಂಘ, ಗಣೇಶೋತ್ಸವ ಸಮಿತಿ ಹೀಗೆ ಯಾವುದೇ ಸಂಘಟನೆ ವನಮಹೋತ್ಸವದ ಸಿದ್ಧ ಕಲ್ಪನೆಗಳ ಹೊರತಾಗಿ ಗಿಡ ಬೆಳೆಸುವ ಜಾಣತನ ಹುಡುಕಬೇಕು. ೩೬೪ ದಿನದ ಸಕತ್ ನಿದ್ದೆ ಹಾಗೂ ಒಂದು ದಿನದ ಸಾಂಕೇತಿಕ ಎಚ್ಚರದಂತೆ ವನಮಹೋತ್ಸವದಲ್ಲಿ ಗಿಡ ನೆಡುವ ಬದಲು ನಿತ್ಯ ಸಲಹುವ ಸಾಧ್ಯತೆ ಹುಡುಕಬೇಕು. ಅದು ನಮ್ಮ ನಗರ ಪರಿಸರ ಬದಲಿಸುವ ದಾರಿಯಾಗುತ್ತದೆ. ಪ್ರತಿ ವರ್ಷ ವಿವಿಧ ಬಡಾವಣೆಗಳು ಇಂತಹ ಗಿಡ ವೈವಿಧ್ಯ ಸಂರಕ್ಷಿಸಿದ ಮನೆಗಳನ್ನು ಗುರುತಿಸಬಹುದು, ಬಹುಮಾನ ನೀಡಬಹುದು, ಸಸಿ ಮುಖೇನ ಸಂಬಂಧ ಬೆಸೆಯಬಹುದು. ಬಡಾವಣೆಯ ಸಸ್ಯ ವೈವಿಧ್ಯ ರೆಜಿಸ್ಟರ್ ಇಡಬಹುದು !

ಇಂದು ನಗರ ಬಹುತೇಕ ಬಡಾವಣೆಗಳು ನೌಕರ ಯಂತ್ರಗಳ ದೊಡ್ಡ ದಾಸ್ತಾನಿನಂತೆ ಕಾಣುತ್ತಿವೆ, ಬೆಳಿಗ್ಗೆ ೧೦ರಿಂದ ಸಾಯಂಕಾಲ ೫ರವರೆಗೆ ದುಡಿದು ಸುಸ್ತಾದವರ ನಿಲ್ದಾಣವಾಗಿವೆ. ಇಲ್ಲಿ ಮರಗಳು ಪರಸ್ಪರ ಸ್ನೇಹ ಬೆಸೆಯುವ ಸುಲಭ ಸೂತ್ರವಾಗಬಹುದು. ಮರ ಗಿಡ ಬೆಳೆಸುವ ಆಸಕ್ತಿ ಇಡೀ ಕಾಲನಿಯ ಎಲ್ಲ ಜನರಲ್ಲಿ ಏಕಕಾಲಕ್ಕೆ ಉದುಸುತ್ತದೆ, ನಾವು ಹೇಳಿದಾಕ್ಷಣ ಅವರೆಲ್ಲ ಗಿಡ ಬೆಳೆಸುತ್ತಾರೆ, ಇಡೀ ಪ್ರದೇಶ ಒಮ್ಮೆಲೇ ಸಸ್ಯ ಸಮೃದ್ಧವಾಗುತ್ತದೆಂಬ ಭ್ರಮೆ ಬೇಡ. ಆರಂಭದಲ್ಲಿ ಒಂದಿಬ್ಬರು ಗೆಳೆಯರು ಇಂತಹ ಕೆಲಸ ಶುರುಮಾಡಬೇಕು, ಟೀಕೆಗಳು ಬಂದರೆ ಕುಗ್ಗುವದು ಬೇಡ. ಶ್ರದ್ಧೆಯಿಂದ ಕೆಲಸ ನಡೆಯಲಿ, ಮನೆ ಮನೆ ತಲುಪುವ ಸಸಿಗಳು ಕ್ರಮೇಣ ಎಲ್ಲರ ಮನಸ್ಸು ಸೇರಿಸುವದರಲ್ಲಿ ಸಂದೇಹವಿಲ್ಲ. ಮರ ಬೆಳೆಸುವ ಈ ಹಿತ್ತಲ ಮದ್ದು ನಿಮ್ಮೊಳಗೂ ಪರಿವರ್ತನೆ ತರುತ್ತಿದೆಯೇ ?. ಈಗ ಹೇಳಬೇಡಿ, ಗಿಡ ಬೆಳೆದು ಫಲ ಬಿಟ್ಟ ಬಳಿಕ ಮತ್ತೆ ಮಾತಾಡೋಣ !

# ಈಜು ಬಾರದ ಪಂಡಿತರು

ಹೊಳೆದಂಡೆಗೂ ನಮ್ಮ ಹಳ್ಳಿ ಬದುಕಿಗೂ ಒಂದು ಗಾಢ ಸಂಬಂಧವಿದೆ. ಬೇಸಿಗೆಯ ರಜಾ ದಿನಗಳಲ್ಲಿ ಮಲೆನಾಡಿನ ಮಕ್ಕಳೆಲ್ಲ ಒಂದರ್ಥದಲ್ಲಿ ಜಲಚರ ಜೀವಿಗಳು! ಬಾಲ್ಯದ ತುಂಬ ಉರಿ ಬಿಸಿಲಲ್ಲಿ ನೀರಿನಾಟದ ಖುಷಿಯ ಕ್ಷಣಗಳಿಗೆ ಮೀಸಲು. ಮಾವಿನ ಎಲೆಯಲ್ಲಿ ಹಲ್ಲು ಉಜ್ಜುವದು, ಸೀಗೆಯಲ್ಲಿ ಮೈ ತಿಕ್ಕಿಕೊಳ್ಳುತ್ತ ಈಜುತ್ತ ಮೈ ಮರೆಯುವದು ಕಾಲಯೋಗ. ಹುಳಿಮಾವಿನಕಾಯಿ, ಹೊಳೆದಾಸವಾಳದ ಹಣ್ಣು, ಮುರುಗಲು ಹಣ್ಣು, ಸಂಪಿಗೆ ಹಣ್ಣು, ಸಳ್ಳೆ ಹಣ್ಣು ತಿನ್ನುತ್ತ ನಡೆಯುವ ನೀರಾಟದಲ್ಲಿ ನಿಸರ್ಗ ಕಲಿಕೆ. ಹಿರಿಯರ ಕಣ್ಗಾವಲಲ್ಲಿ ಈಜು ತರಬೇತಿ! ಬಂಡೆಯ ಮೇಲೇರಿ ನೀರಿಗೆ ದುಮ್ಮಿಕ್ಕಿ ಮುಳುಗುವ ಸಾಹಸ. ಹಳ್ಳ ಕೊಳ್ಳಗಳ ಬದುಕಿಗೆ ಅಲ್ಲಿ ದೊಡ್ಡ ಪಾಠ.

ನಿತ್ಯ ಶಾಲೆಗೆ ಹೋಗುವಾಗ, ಪಕ್ಕದ ಗುಡ್ಡ ಏರುವಾಗ, ತೋಟ ಸುತ್ತುವಾಗೆಲ್ಲ ನಡುವೆ ಹಳ್ಳ ದಾಟಬೇಕು. ಕಾಲು ಸಂಕದಲ್ಲಿ ಕೆಳಗಡೆ ನೋಡಿದರೆ ಪ್ರಪಾತ, ನಡೆಯಲು ಸರ್ಕಸ್ ಮಾಡಬೇಕು. ಭಯ ಪಟ್ಟರೆ ಬದುಕಿಲ್ಲ, ನೀರಿಗೆ ಬಿದ್ದರೆ ಈಜು ಬಲ್ಲವರಿಗೆ ಮಾತ್ರ ಏಳುವ ಧೈರ್ಯ! ೨-೩ನೇ ತರಗತಿ ಓದುವ ಕಾಲಕ್ಕೆ ಮಕ್ಕಳೆಲ್ಲ ಈಜಿನಲ್ಲಿ ಪಾಸು. ತೇಲುವದು, ಮುಳುಗುತ್ತ ಈಜುವದು, ಎತ್ತರದಿಂದ ಜಿಗಿದು ಗೆಲ್ಲುವ ಆಟ ಜೀವನ ಪಾಠ. ಮಳೆಗಾಲದ ಪ್ರವಾಹದ ಅಬ್ಬರ, ಹಳ್ಳಕೊಳ್ಳಗಳ ಜತೆಗೆ ನಿತ್ಯ ಒಡನಾಡುವವರಿಗೆಲ್ಲ ಈ ವಿದ್ಯೆ ಬೇಕು. ಇನ್ನು ಕರಾವಳಿಯ ಮಕ್ಕಳಾದರೆ ಆಳ ನದಿಗಳಲ್ಲಿ ನೀರಿನ ಭಯ ಮರೆಯಬೇಕು! ದೋಣಿ ನಡೆಸಲು ಕಲಿಯಬೇಕು! ನೀರಿಗೆ ಹೆದರುವವರು ಊರಲ್ಲಿ ಬದುಕಲು ಸಾಧ್ಯವಿಲ್ಲದ ಸ್ಥಿತಿ.

ಮರ್ಸೆ ಎಂಬ ಊರಿಗೆ ಕೆಲವು ವರ್ಷಗಳ ಹಿಂದೆ ಹೊರಟಿದ್ದೆ. ಅಘನಾಶಿನಿ ನದಿ ದಂಡೆಯ ಊರಿಗೆ ಹೋಗಲು ೩೦೦ ಅಡಿ ವಿಸ್ತಾರಕ್ಕೆ ಹರಿಯುವ ನದಿಯನ್ನು ಆಚೀಚೆ ಓಲಾಡುವ ಪಾತಿ ದೋಣಿಯಲ್ಲಿ ದಾಟಬೇಕು. ನದಿ ದಂಡೆಯ ಸನಿಹದಲ್ಲಿ ಯಾರ ವಸತಿಯೂ ಇಲ್ಲ. ಅಲ್ಲಿ ನದಿ ದಾಟುವ ಅನುಕೂಲಕ್ಕೆ ಒಂದು ದೋಣಿಯೇನೋ ಇತ್ತು. ಊರಿನ ಜನರೆಲ್ಲ ದೋಣಿ ನಡೆಸುವ ಪರಿಣಿತರಾದ್ದರಿಂದ ಆ ದೋಣಿ ದಾಟಿದವರ ಸಂಗಡವೇ ಒಂದೊಂದು ದಡದಲ್ಲಿ ತೇಲುತ್ತಿತ್ತು. ಈಚೆ ದಡದಲ್ಲಿದ್ದವರು ಆಚೆ ದಡದ ದೋಣಿ ಪಡೆಯುವದು ಸುಲಭವಲ್ಲ, ೧-೨ ಕಿಲೋ ಮೀಟರ್ ದೂರದ ಮನೆಯ ಯಾರಾದರೂ ಬಂದು ಈಚೆ ದಂಡೆಗೆ ದೋಣಿ ತರಬೇಕು! ಅಲ್ಲಿನ ರಸ್ತೆಯಂಚಿನ ಅಂಗಡಿಯಲ್ಲಿ ಯಾವತ್ತೂ ಗರ್ನಾಲ್ ಸಿಗುತ್ತಿತ್ತು. ಹೊಳೆ ದಂಡೆಗೆ ಹೋಗಿ ಗರ್ನಾಲ್ ಸಿಡಿಸಿದರೆ ಸಪ್ಪಳ ಮರ್ಸೆ ಹಳ್ಳಿಗೆ ಕೇಳುತ್ತದೆ. ಸಪ್ಪಳ ಕೇಳಿದವರು ಹೊಳೆ ದಂಡೆಯಲ್ಲಿ ಯಾರೋ ದೋಣಿಗಾಗಿ ಕಾಯುತ್ತಿದ್ದಾರೆ ಎಂದು ತಿಳಿದು ದೋಣಿ ದಡಕ್ಕೆ ತಂದು ನೆರವಾಗುತ್ತಿದ್ದರು. ಶಾಲೆಗೆ ಹೋಗುವ ಮಕ್ಕಳು, ಮಹಿಳೆಯರೆಲ್ಲ ಅಲ್ಲಿ ದೋಣಿ ನಡೆಸುವ ಪರಿಣಿತರು. ಈ ಊರಿನ ಶಾಲೆಗೆ ಒಮ್ಮೆ ಹೊಸ ಮೇಷ್ಟ್ರು ಬಂದಿದ್ದರು, ನೀರು ಕಂಡರೆ ಇವರಿಗೆ ಸದಾ ಭಯ. ಶಾಲೆ ಮುಗಿಸಿ ಮನೆಗೆ ಹೊರಟರೆ ದೋಣಿ ನಡೆಸಲಾಗದ ಮೇಷ್ಟ್ರು ಒಮ್ಮೊಮ್ಮೆ ರಾತ್ರಿವರೆಗೂ ದಂಡೆಯಲ್ಲಿ ಕಾಯುತ್ತ ಕುಳಿತ ಪ್ರಸಂಗಗಳಿವೆ ! ಕಟ್ಟಕಡೆಗೆ ಕಾಡುಕಷ್ಟ ಮೇಷ್ಟ್ರಿಗೂ ಪಾಠ ಹೇಳಿತು, ಮುಂದಿನ ಎರಡು ಮೂರು ತಿಂಗಳಲ್ಲಿ ಅವರು ಸ್ವತಃ ದೋಣಿ ಬಿಡಲು ಕಲಿತರು.

ನಮ್ಮ ಹಳ್ಳಿಗಳಲ್ಲಿ ಮಕ್ಕಳ ಜತೆಗೆ ಮಾತಾಡುವಾಗ ಹಿರಿಯರು ಈಜು ಬರುತ್ತದೆಯೇ ಎಂಬ ಪ್ರಶ್ನೆ ಸಹಜವಾಗಿ ಕೇಳುತ್ತಿದ್ದರು. ಯಾವ ಮಕ್ಕಳಿಗೆ ಈಜು ಬರುವದಿಲ್ಲವೋ ಅವರ ಮನೆಯ ಸನಿಹದಲ್ಲಿ ಹಳ್ಳ, ಹೊಳೆಗಳಿಲ್ಲವೆಂದು ಅರ್ಥೈಸಬಹುದಿತ್ತು. ಅಂತಹ ಮಕ್ಕಳು ಈಜು ಕಲಿಯುವದನ್ನೇ ನೆಪಮಾಡಿಕೊಂಡು ರಜಾ ದಿನಗಳಲ್ಲಿ ಹೊಳೆದಂಡೆ ಹತ್ತಿರವಿರುವ ನೆಂಟರ ಮನೆಗೆ ಹೋಗುತ್ತಿದ್ದರು. ಹತ್ತಾರು ಮಕ್ಕಳ ತಂಡ ಕಟ್ಟಿಕೊಂಡು ನೀರಿನ ಭಯ ಮರೆತು ಈಜು ಕಲಿಯುತ್ತಿದ್ದರು. ಆ ಕಾಲಕ್ಕೆ ಈಜುವುದರಿಂದ ವ್ಯಾಯಾಮವಾಗುತ್ತದೆ ಎಂಬುದಕ್ಕಿಂತ ಬದುಕಿಗೆ ಅನಿವಾರ್ಯ ವಿದ್ಯೆ ಅದೆಂಬ ತಿಳುವಳಿಕೆಯಿತ್ತು. ಉರಿಬಿಸಿಲಲ್ಲಿ ಒಳ್ಳೆಯ ಆಟವಾಗಿತ್ತು.

ಈಗ ಹಳ್ಳಿ ಮಕ್ಕಳ ಬಾಲ್ಯವನ್ನೊಮ್ಮೆ ಕಣ್ತೆರೆದು ನೋಡಿ, ಪ್ರತಿ ಊರಲ್ಲಿ ಈಜುಬಾರದ ಪಂಡಿತರ ಸಂತತಿ ಬೆಳೆಯುತ್ತಿದೆ. ಹುಟ್ಟಿದ ಒಂದು ಮಗುವಿಗೆ ವಿದ್ಯೆ ಕಲಿಸುವಲ್ಲಿ ಅಪಾರ ಗಮನ ನೀಡುವ ಪಾಲಕರು ಅವರ ಮೇಲೆ ಇನ್ನಿಲ್ಲದ ಒತ್ತಡ ಹೇರಿದ್ದಾರೆ. ಹಳ್ಳದ ನೀರಿನಲ್ಲಿ ಈಜು ಕಲಿಸಲು ಯಾರಿಗೂ ಆಸಕ್ತಿಯಿಲ್ಲ. ವಹಿರಿಯರ ಸಂರಕ್ಷಿತ ವಲಯದಲ್ಲಿ ಬಾಲ್ಯದ ದಿನಗಳು ಕಳೆಯುತ್ತಿವೆ. ನೀರು ಎಂದರೆ ಅಪಾಯ, ಹಳ್ಳದ ನೀರಲ್ಲಿ ಸ್ನಾನ ಮಾಡಿದರೆ ಚರ್ಮ ರೋಗ ಬಂದೀತು, ಕಾಯಿಲೆ ಬಂದೀತೆಂಬ ಭಯ ಮಕ್ಕಳಲ್ಲಿ ಮೂಡುತ್ತಿದೆ. ನಾವು ಚಿಕ್ಕವರಾಗಿದ್ದಾಗ ನದಿ,

ನದಿದಂಡೆ ನಮಗೆ ತೋರಿಸಿದ ಪ್ರೀತಿಯನ್ನು ಈಗಿನ ಮಕ್ಕಳು ಕಳಕೊಂಡಿದ್ದಾರೆ. ಪುಟ್ಟ ಮಿದುಳಲ್ಲಿ ಏನೆಲ್ಲ ವಿದ್ಯೆ ತುಂಬಿದ ನಾವು ನೆರೆಯ ನದಿಯಲ್ಲಿ ಬದುಕುವ ವಿದ್ಯೆ ಹೇಳುತ್ತಿಲ್ಲ!. ಕೆಲವು ಮಕ್ಕಳಂತೂ ನದಿ ಈಜಿನ ನೈಸರ್ಗಿಕ ಅವಕಾಶ ಮರೆತು ನಗರದ ಈಜು ಕೊಳಗಳಲ್ಲಿ ದುಬಾರಿ ವಿದ್ಯೆ ಹುಡುಕುತ್ತಿದ್ದಾರೆ.

# ಕಂಪ್ಯೂಟರ್ ಊಟ ಹಾಗೂ ಹಳ್ಳಿ ಮಾರಾಟ

ಹಿರಿಯರೊಬ್ಬರು ಮನೆಗೆ ಬಂದ ಅತಿಥಿಗಳಿಗೆ ತಮ್ಮ ಮಕ್ಕಳ ಪರಿಚಯ ಮಾಡಿಸುತ್ತಿದ್ದರು. "ಇವರು ಎಲ್ಐಸಿ ಡವಲೆಪ್‌ಮೆಂಟ್ ಆಫೀಸರ್, ರಾಯಚೂರಿನಲ್ಲಿರ್ತಾರೆ, ಇವರು ಹಿರಿಯ ಮಗ ಸುಮ್ಮನೆ ಕೃಷಿ ಕೆಲಸ ಮಾಡ್ತಾ ಮನೆಯಲ್ಲಿ ಇದ್ದಾರೆ!" ಎಂದು ಮಾತು ನಿಲ್ಲಿಸಿದರು. ವಾಸ್ತವಿಕವಾಗಿ ಹಿರಿಯ ಮಗ ಕೃಷಿ ಕೆಲಸ ನಿರ್ವಹಿಸುವದರ ಜತೆಗೆ ನಾಲ್ಕಾರು ಹಸು ಸಾಕುತ್ತ ಪುಟ್ಟ ಡೇರಿ ನಡೆಸುತ್ತಿದ್ದರು, ನೆಮ್ಮದಿಯಲ್ಲಿ ಅನ್ನದ ದಾರಿ ಹುಡುಕಿದ್ದರು. ಯಾವ ನೌಕರಿಯಿಲ್ಲದೇ ಮನೆಯಲ್ಲಿ ಕೆಲಸ ಮಾಡುವವರನ್ನು ಸಮಾಜ ಕೆಲಸವಿಲ್ಲದವರೆಂದು ಗುರುತಿಸುತ್ತದೆ.

ಮುಂಜಾನೆ ಆಕ್ಕೆ ಎದ್ದು ದೊಡ್ಡಿ ಶುಚಿಗೊಳಿಸುವ ಮುಖೇನ ಆರಂಭವಾಗುವ ಹಳ್ಳಿ ಕೆಲಸ ರಾತ್ರಿವರೆಗೂ ನಿರಂತರ ನಡೆಯುತ್ತದೆ. ಅಡಿಕೆ, ಭತ್ತ, ಕಾಫಿ, ಜೋಳ, ರಬ್ಬರ್ ಹೀಗೆ ಕೃಷಿ ಯಾವುದೇ ಇರಲಿ ವರ್ಷವಿಡೀ ಕೆಲಸ. ನಮ್ಮ ಸರಕಾರಿ ನೌಕರರಿಗೆ ಇರುವಂತೆ ರಜಾದಿನ, ಭತ್ಯೆ, ಪ್ರಮೋಶನ್‌ಗಳಿಲ್ಲ!. ಒಮ್ಮೊಮ್ಮೆ ಕಾಡು ಪ್ರಾಣಿ, ಕಳ್ಳಕಾಕರ ಹಾವಳಿಯಿದ್ದಾಗ ನಡುರಾತ್ರಿಯೂ ತೋಟ ಅಡ್ಡಾಡುವ ಪ್ರಸಂಗ. ಅಷ್ಟೇಕೆ ವಿದ್ಯುತ್ ಕೊರತೆಯ ದಿನಗಳಲ್ಲಿ ರಾತ್ರಿ ೨ ಗಂಟೆಗೆ ತ್ರೀಫೇಸ್ ವಿದ್ಯುತ್ ಬಂದರೆ ನೀರಾವರಿ ಪಂಪ್ ಚಾಲೂ ಮಾಡಲು ನಿದ್ದೆಗೆಡಬೇಕು! ಕೃಷಿ ಕೂಲಿ ಅಭಾವದ ಈ ದಿನಗಳಲ್ಲಿ ಹಳ್ಳಿ ಬದುಕಿನ ಒತ್ತಡ ಹಲವರನ್ನು ಕಂಗಾಲೆಬ್ಬಿಸಿದೆ. ನಿಜವಾಗಿ ಕೃಷಿ ಬಗೆಗೆ ಕಳಕಳಿಯಿರುವವರು ಯಾರೂ ಹಳ್ಳಿಯಲ್ಲಿ ಕೆಲಸವಿಲ್ಲದೇ ಆರಾಮವಾಗಿರಲು ಸಾಧ್ಯವಿಲ್ಲ.

ಸಮಾಜದ ವಿಚಿತ್ರ ದೃಷ್ಟಿ ದೋಷ ಇದು. ಲಾಗಾಯ್ತಿನಿಂದಲೂ ಮಕ್ಕಳನ್ನು ನಮ್ಮ ಹಳ್ಳಿಮನೆಗಳಲ್ಲಿ ಶಾಲೆಬಿಡಿಸಿ ಕೃಷಿ ಕೆಲಸಕ್ಕೆ ಹಚ್ಚಲು ಒಂದು ಸೂತ್ರವಿದೆ. ಏಳನೇ ಇಯತ್ತೆಯೋ, ಪ್ರೌಢ ಶಿಕ್ಷಣದಲ್ಲೋ ಒಮ್ಮೆ ಎಡವಟ್ಟಾಗಿ ನಪಾಸಾದರೆ ಅಲ್ಲಿಗೆ ಶಾಲೆಯ ದಾರಿ ಬಂದ್! ಶಾಲಾ ರಜಾ ದಿನಗಳಲ್ಲಿ ಮನೆಯ ಕೃಷಿ ಕೆಲಸದ ಬಗೆಗೆ ಆಸಕ್ತಿ ತೋರಿಸುವವರನ್ನು ಗಮನಿಸಿ ಇವನಿಗೆ ವಿದ್ಯೆ ತಲೆಗೆ ಹತ್ತುವದಿಲ್ಲ ಎಂಬ ನಿರ್ಧಾರ. ಪಾಸಾಗುವವ, ರ್‍ಯಾಂಕ್ ಬರುವವರು ಬುದ್ದಿವಂತರು. ಒಬ್ಬ ತಂದೆಗೆ ಇಬ್ಬರು ಮಕ್ಕಳಿದ್ದರೆ ಅವರಲ್ಲಿ ಒಬ್ಬ ದಡ್ಡನಾಗುತ್ತಿದ್ದ ! ಹೀಗೆನ್ನುವದಕ್ಕಿಂತ ಒಬ್ಬನನ್ನು ದಡ್ಡನೆಂದು ಗುರುತಿಸಿ ಶಾಲೆ ಬಿಡಿಸಲಾಗುತ್ತಿತ್ತು ಎನ್ನುವದೇ ಹೆಚ್ಚು ಸೂಕ್ತ. ಮನೆಪಾಠ, ಹಿರಿಯರ ಮಾರ್ಗದರ್ಶನವಿಲ್ಲದ ಆ ಕಾಲಕ್ಕೆ ಸಹಜವಾಗಿ ಕೆಲವರು ಓದಿನಲ್ಲಿ ಹಿಂದಿರುತ್ತಿದ್ದರು. ಇನ್ನೂ ಕೆಲವು ಪಾಲಕರು ಮೇಷ್ಟ್ರ ದೋಸ್ತಿಮಾಡಿಕೊಂಡು ಮಗನನ್ನು ಫೇಲ್‌ಮಾಡಿಸಿ ಕೃಷಿ ಕೆಲಸಕ್ಕೆ ತೊಡಗಿಸಿದ ಉದಾಹರಣೆಗಳಿವೆ. ಶಾಲೆಯ ವಿದ್ಯೆ ಹತ್ತದವರು, ಲೆಕ್ಕಬಾರದವರು, ನೌಕರಿ ಮಾಡಲು ಅಯೋಗ್ಯರಾದವರು, ಶಕ್ತಿಹೀನರನ್ನು ಮನೆಯಲ್ಲಿಯೇ ಕೂಡಿಟ್ಟು ಕೃಷಿ ದುಡಿಮೆ ಆರಂಭಿಸಿದ್ದನ್ನು ಕಳೆದ ೬೦ರ ದಶಕದೀಚೆಗೆ ಗಮನಿಸಿದ್ದೇವೆ. ಈಗ ಯಾರು ಮನೆಯಲ್ಲಿ ಇದ್ದಾರೆ? ವಿಚಾರಿಸಿದರೆ ಇಂತವರು ಕಾಣುತ್ತಾರೆ. ಒಂದು ಕಾಲಕ್ಕೆ ಎಸ್ ಎಸ್ ಎಲ್ ಸಿ ಫೇಲಾದವರು ಮಾತ್ರ ಊರಲ್ಲಿದ್ದರೆ ಈಗ ಡಿಗ್ರಿ ಓದಿಯೂ ಮುಂದೆ ಗತಿಯಿಲ್ಲದವರು ಇಲ್ಲಿ ಸಿಗುತ್ತಾರೆ. ತೋಟ ನೋಡಲು ಬೇರೆಯಾರೂ ಇಲ್ಲ ಎಂಬ ಕಾರಣಕ್ಕೆ ಹಿರಿಯರ ಒತ್ತಾಯಕ್ಕೆ ಊರಲ್ಲಿ ಉಳಿದವರು ಸಿಗುತ್ತಾರೆ. ಒಟ್ಟಿನಲ್ಲಿ ಅವಶ್ಯಕತೆಗಿಂತ ಅನಿವಾರ್ಯತೆಗೆ ಊರಲ್ಲಿ ಬೇರು ಬಿಟ್ಟವರು ಜಾಸ್ತಿ.

ವೈದ್ಯ, ಇಂಜಿನಿಯರ್, ಕಂಪ್ಯೂಟರ್ ತಂತ್ರಜ್ಞ ಇವರನ್ನು ಇಡೀ ಸಮಾಜ ವಿಶೇಷವಾಗಿ ಪರಿಗಣಿಸುತ್ತಿದೆ. ಹಳ್ಳಿಬಿಟ್ಟು ನಗರಗಳ ಬ್ಯಾಂಕು, ಸಂಸ್ಥೆ, ಸರಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುವವರನ್ನು ದುಡಿಯುವವರೆಂದು ಕರೆಯುತ್ತದೆ. ಹಳ್ಳಿ ಮೂಲೆಯಲ್ಲಿ ಕೃಷಿ ನೋಡಿಕೊಂಡು ಮರ್ಯಾದೆಯಿಂದ ಬದುಕಿದವರು ಯಾವುದಕ್ಕೂ ನಾಲಾಯಕ್! ಹೆಚ್ಚು ಹೆಚ್ಚು ಹಣ ಸಂಪಾದನೆಯ ವೃತ್ತಿಗಳೆದುರು ಮಣ್ಣಿಗೆ ಬೆವರು ಸುರಿಸಿದವರು ಕಸದ ಲೆಕ್ಕ. ಆದರೆ ಇಂತವರೇ ಇವತ್ತು ಎಲ್ಲರಿಗೂ ಅನ್ನ ಕೊಡುವವರು, ಆರೋಗ್ಯ ಹಂಚುವವರು ಎಂಬ ಸತ್ಯ ಮರೆತಿದ್ದೇವೆ. ಇವರ ಬೆವರಿನ ಅನ್ನ ಕಸಿದುಕೊಳ್ಳುವ ತಂತ್ರ ಅನುಸರಿಸುವ ನಗರ ಸೇರಿದ ಬುದ್ದಿವಂತರು ಹಳ್ಳಿಯ ನೆಮ್ಮದಿಯ ಬದುಕಿಗೆ ಏನು ಮಾಡಬಹುದು ಎಂದು ಯೋಚಿಸಲು ಮರೆತಿದ್ದಾರೆ.

ಗೆಳೆಯರೊಬ್ಬರು ಇತ್ತೀಚೆಗೆ ಒಂದು ಹಳ್ಳಿ ಮಾರಾಟದ ಸುಳಿವು ನೀಡಿದ್ದಾರೆ. ಮಲೆನಾಡಿನ ಗುಡ್ಡದ ತುತ್ತ ತುದಿಯಲ್ಲಿ ಕೃಷಿ ಜೀವನ ನಡೆಸಿದ ೧೨ ಕುಟುಂಬಗಳು ತಮ್ಮ ಭೂಮಿಯನ್ನು ಸಾರಾಸಗಟಾಗಿ ೬೨ ಲಕ್ಷಕ್ಕೆ ಮಾರುವ ಸಿದ್ದತೆಯಲ್ಲಿದ್ದಾರೆ. ಇನ್ನೇನು ವ್ಯವಹಾರ ಮಾತುಕತೆ ಮುಗಿದು

ನೋಂದಣಿ ನಡೆಯುತ್ತದೆಂಬ ಸುದ್ದಿಯಿದೆ. ಮುಂದೆ ಹಳ್ಳಿಗರು ಎಲ್ಲಿಗೆ ಹೋಗುತ್ತಾರೆ? ವಿಚಾರಿಸಿದೆ. ಖರೀದಿಸಿದಾತ ಔಷಧ ಸಸ್ಯ ಕೃಷಿ ಮಾಡುತ್ತಾರಂತೆ, ಇವರಿಗೆ ದಿನಕ್ಕೆ ೧೫೦ರೂಪಾಯಿ ಸಂಬಳದಂತೆ ಕೂಲಿ ಕೆಲಸ ನೀಡುವ ಒಳ ಒಪ್ಪಂದವಿದೆ ಎಂಬ ಮಾಹಿತಿಯಿದೆ. ಹಿಂದೆ ಹಳ್ಳಿಗಳಲ್ಲಿ ಎಂತಹ ಕಷ್ಟವಿದ್ದರೂ ಜಮೀನು ಮಾರುತ್ತಿರಲಿಲ್ಲ, ಈಗ ಹಳ್ಳಿಗೆ ಹಳ್ಳಿಯೇ ಮಾರಾಟವಾಗುವ ವಾರ್ತೆ ಭವಿಷ್ಯದ ದಿಕ್ಸೂಚಿ. ಹಿಂದಿನಗಳಲ್ಲಿ ಗಣಿಗಾರಿಕೆ ಹಣ ರಿಯಲ್ ಎಸ್ಟೇಟ್ ರಂಗಕ್ಕೆ ಹೋಗುತ್ತಿತ್ತು. ಆದು ಬೆಂಗಳೂರು, ಮೈಸೂರಿನಂತಹ ಮಹಾನಗರಗಳ ಸುತ್ತ ನಡೆಯುತ್ತಿತ್ತು. ಈಗ ಮಲೆನಾಡಿನ ಸಣ್ಣಪುಟ್ಟ ತಾಲೂಕುಗಳಲ್ಲಿಯೂ ಕೃಷಿ ನೆಲ ಖರೀದಿಯ ಏಜೆಂಟರಿದ್ದಾರೆ. ಒಮ್ಮೆಗೆ ೫೦೦-೧೦೦೦ ಎಕರೆ ಸಿಕ್ಕರೂ ಖರೀದಿಗೆ ಸಿದ್ದವಿರುವವರಿದ್ದಾರೆ. ಭೂಮಿ ಖರೀದಿಸಿದವರು ಕೃಷಿ ಮಾಡುತ್ತಾರೋ, ರೆಸಾರ್ಟ ಮಾಡುತ್ತಾರೋ ಗೊತ್ತಿಲ್ಲ. ಅಂತೂ ಹಲವರ ಭೂಮಿ ಕೆಲವರಿಗೆ ತುರ್ತಾಗಿ ಬೇಕಾಗಿದೆ.

ಹಳ್ಳಿ ಮೂಲೆಯಲ್ಲಿ "ಸುಮ್ಮನೆ ಉಳಿದವರು' ಈಗ ಯೋಚಿಸತೊಡಗಿದ್ದಾರೆ. ಹಣವೇ ಸಮಾಜದ ಮುಖ್ಯ ಅಂಶವಾದರೆ ಭೂಮಿಯನ್ನು ಹಣಕ್ಕೆ ಮಾರುವುದೇ ಜಾಣತನ ಎಂಬ ತರ್ಕ ಮೂಡಿದೆ. ಬೇಸಾಯದ ಬವಣೆಗಿಂತ ಇದ್ದಷ್ಟು ದಿನ ಆರಾಮವಾಗಿ ಬದುಕಬಹುದು ಎಂಬ ತತ್ವ ಮಾನ್ಯತೆಗಳಿಸುತ್ತಿದೆ. ಮುಂದಿನ ತಲೆಮಾರಿನವರು ಕೃಷಿಯಲ್ಲಿ ಎಷ್ಟು ಜನ ನಿಲ್ಲುತ್ತಾರೆ ಎಂಬ ಚರ್ಚೆ ಹಳ್ಳಿಹಳ್ಳಿಯ ಮನೆ ಮನೆಗಳಲ್ಲಿ ನಡೆಯುತ್ತಿದೆ. ಈಗ ೧೦ ವರ್ಷದ ಹಿಂದೆ ಹಿರಿಯಜ್ಜ, ತಂದೆ, ಮಕ್ಕಳ ನಡುವೆ ಭೂಮಿ ಮಾರಾಟದ ವಿಚಾರಗಳಲ್ಲಿ ಸಂಘರ್ಷ ನಡೆಯುತ್ತಿತ್ತು. ಭಾವನಾತ್ಮಕವಾಗಿ ಊರು ನಂಬಿ, ನೆಲ ನಂಬಿ ಬದುಕಿದ ಜನ ಭೂಮಿ ವ್ಯವಹಾರವನ್ನು ವಿರೋಧಿಸುತ್ತಿದ್ದರು. ಈಗ ಎಲ್ಲರಿಗೂ ಜ್ಞಾನೋದಯವಾಗುತ್ತಿದೆ, ಕೃಷಿ ಕೂಲಿಕಾರರಿಗೆ ಕೆಲಸ ನೀಡುವ ನಷ್ಟದ ರಂಗವೆಂದು ಢಾಳಾಗಿ ಕಾಣುತ್ತಿದೆ. ಕೃಷಿಯಲ್ಲಿ ಹೇಗೆ ಗೆಲ್ಲಬೇಕೆಂದು ಯೋಚಿಸುವವರಿಗಿಂತ ಮಗ, ಮೊಮ್ಮಗನ ಜತೆ ಯಾವ ನಗರದಲ್ಲಿರಬೇಕು ಎಂಬ ಆಯ್ಕೆಗಳಲ್ಲಿ ಹಿರಿಯ ತಲೆಮಾರು ತೊಳಲಾಡುತ್ತಿದೆ. ರಬ್ಬರ್ ನೆಟ್ಟರೆ ೧೨ ವರ್ಷಕ್ಕೆ ಆದಾಯ, ಅಡಿಕೆಯಿಂದ ೧೦ ವರ್ಷಕ್ಕೆ ಫಸಲು, ತೆಂಗು ನೆಟ್ಟರೆ ಅನುಕೂಲ ಎಂಬ ಲೆಕ್ಕಾಚಾರಗಳು ಹಿಂದೆ ಸರಿದಿವೆ. ನೆಟ್ಟ ಒಂದೆರಡು ವರ್ಷಕ್ಕೆ ದಿಢೀರ್ ದುಡ್ಡು ನೀಡುವ ಗಿಡ ಬೇಕಾಗಿದೆ. ಕೃಷಿಯನ್ನು ಹೈಟೆಕ್ ಮಾಡಿ ಗೆಲ್ಲಿಸಿ ಲಾಭ ನೀಡುವ ಉದ್ಯಮ ತಂತ್ರಗಳಿವೆ. ಓದಿದ ಜಾಣ ಹುಡುಗರು ಹೇಗೋ ಇಲ್ಲಿಯೂ ಗೆಲ್ಲುವ ಆಟ ಆಡುತ್ತಾರೆ. ಇಷ್ಟುಕಾಲ ನಾಟಿ ಭತ್ತ ಉಳಿಸಿದವರು, ವಿವಿಧ ತಳಿಗಳ ಹಣ್ಣು ಬೆಳೆಸಿದವರು, ಬೇಸಾಯದ ಸೂಕ್ಷ್ಮಬಲ್ಲವರೆಲ್ಲ ಈ ಕೃಷಿ ಅರ್ಥವಾಗದೆ ಅನುಮಾನದಿಂದ ನೋಡಿದ್ದಾರೆ. ಸೋಲುವ ಯುದ್ಧಕ್ಕಿಂತ ಭೂಮಿ ಮಾರಿ ಗೆಲ್ಲುವದೇ ಲಾಯಕ್ಕೆಂದು ಯೋಚಿಸಿದ್ದಾರೆ.

ಇಂತಹ ವಾಸ್ತವದ ಮಧ್ಯೆ ಒಂದು ಮಾತು ನೆನಪಿರಬೇಕು, ನಮಗೆ ಬದುಕಲು ಅನ್ನ ಬೇಕೇ ಬೇಕು. ಇನ್ನೇನು ೪-೫ ವರ್ಷಗಳಲ್ಲಿ ಕಿಲೋ ಅಕ್ಕಿಯ ಬೆಲೆ ೫೦ರೂಪಾಯಿ ದಾಟಿದರೂ ಅಚ್ಚರಿಯಿಲ್ಲ. ಅಂತಹ ಕಾಲಕ್ಕೆ ಮೊಬೈಲ್ ಕರಿ, ಸೀಡಿ ಸಲಾಡ್, ಟಿ.ವಿ. ಫ್ರೈ, ಕಂಪ್ಯೂಟರ್ ರಾಯತ, ಕಾರ್ ಬೋಂಡ, ಬೈಕ್ ಬೇಳೆ ಬಾತ್, ಐಪಾಡ್ ತಂಬುಳಿ ಊಟ ಮಾಡಲಾಗುತ್ತದೆಯೇ? ಯೋಚಿಸಬೇಕು. ಹಳ್ಳಿ, ಕೃಷಿ ಉಳಿಸುವ ಕೆಲಸ ಕೇವಲ ಸರಕಾರದ ಜವಾಬ್ದಾರಿಯಲ್ಲ, ಸಬ್ಸಿಡಿಗಳ ಗುತ್ತಿಗೆಯಲ್ಲ, ಹೈಟೆಕ್ ನಗರ ಸೇರಿದವರ ಪ್ರಥಮ ಕರ್ತವ್ಯವೂ ಹೌದೆಂಬ ಎಚ್ಚರ ಬೇಕು.

# ಕಾಡು ಸಸ್ಯಗಳಿಗೆ ಕೃಷಿ ಆರೈಕೆ

ರಾಮದುರ್ಗದ ಶಬರಿಕೊಳ್ಳದಲ್ಲಿ ವಲಯ ಅರಣ್ಯಾಧಿಕಾರಿ ಕೆ.ಬಿ.ಮಂಜುನಾಥ ೧೯೮೫ರ ಸುಮಾರಿಗೆ ಅರಣ್ಯೀಕರಣ ಚಟುವಟಿಕೆಯಲ್ಲಿ ನಿರತರಾಗಿದ್ದರು. ಕಲ್ಲುಗುಡ್ಡದ ಉರಿಬಿಸಿಲಲ್ಲಿ ಅಡ್ಡಾಡಿ ಬಾಯಾರಿಕೆ ಹೆಚ್ಚಿತು, ಕುಡಿಯಲು ನೀರು ತರಲು ವಾಚಮನ್‌ಗೆ ಹೇಳಿದ್ದರು. ಆದರೆ ನೀರಿರಲಿಲ್ಲ. ‘ಸರ್! ನೆಲ್ಲಿಕಾಯಿ ತಿಂದ್ರೆ ಬಾಯಾರಿಕೆ ನೀಗುತ್ತೆ! ಎಂದು ನಾಲ್ಕಾರು ನೆಲ್ಲಿಕಾಯಿಗಳನ್ನು ರೇಂಜರ್ ಸಾಹೇಬರಿಗೆ ಕೊಟ್ಟರು. ನೆಲ್ಲಿ ಗಾತ್ರ ನೋಡಿ ಮಂಜುನಾಥ್‌ಗೆ ಅಚ್ಚರಿ. ಬರೋಬ್ಬರಿ ಲಿಂಬುಗಾತ್ರ! ಬೆಟ್ಟದ ನೆಲ್ಲಿ ಇಷ್ಟೆಲ್ಲ ದೊಡ್ಡದಾಗಿ ಬೆಳೆದದ್ದು ಹೇಗೆಂದು ಅಚ್ಚರಿಪಟ್ಟರು. ಸಂಸ್ಥಾನದ ಅರಸನೊಬ್ಬ ಬನಾರಸ್‌ನಿಂದ ನೆಲ್ಲಿ ತರಿಸಿ ಶಬರಿಕೊಳ್ಳದಲ್ಲಿ ಅರಣ್ಯೀಕರಣ ಮಾಡಿದ ದಾಖಲೆ ಪತ್ತೆ ಹಚ್ಚಿದರು, ಬೀಜ ಸಂಗ್ರಹಿಸಿ ಸಸಿ ಬೆಳೆಸಿದರು. ಹೊಸ ಕೃಷಿ ಹುಡುಕಾಟದಲ್ಲಿದ್ದ ರಾಮದುರ್ಗದ ಕೃಷಿಕ ಅಖಿಲ್‌ಅಮೃತ ಸರದೇಶಪಾಂಡೆಗೆ ನೆಲ್ಲಿಕೃಷಿ ಮಾಡಲು ಸೂಚಿಸಿದರು. ಪರಿಣಾಮ ೧೯೮೮ರಲ್ಲಿ ಸುರೇಬಾನ್‌ನ ಶಬರಿಕೊಳ್ಳದ ನೆಲ್ಲಿ ಲಿಂಗದಾಳ ಹಳ್ಳಿಯಲ್ಲಿ ಸರದೇಶಪಾಂಡೆಯ ಕೃಷಿ ನೆಲಕ್ಕೆ ಏರಿತು. ನಾವು ಅಡಿಕೆ,ತೆಂಗಿನ ತೋಟ ಮಾಡುವಂತೆ ಐದು ಎಕರೆಯಲ್ಲಿ ೫೦೦ ನೆಲ್ಲಿ ನೆಟ್ಟರು. ಲಿಂಬುಗಾತ್ರದ ನೆಲ್ಲಿಯನ್ನು ಬೆಳಗಾವ, ಧಾರವಾಡ, ಹುಬ್ಬಳ್ಳಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರು. ಬಜಾರದ ನೆಲ್ಲಿ ಮಾರಾಟ ಬೇಜಾರಾಗಿ ಮೌಲ್ಯವರ್ಧನೆಯ ಮೊರೆ ಹೋದರು. ಹೆಂಡತಿ ಅಶ್ವಿನಿ ಸರದೇಶಪಾಂಡೆ ನೇತ್ರತ್ವದಲ್ಲಿ ನೆಲ್ಲಿಯ ಜ್ಯಾಮ್, ಉಪ್ಪಿನಕಾಯಿ, ಜ್ಯೂಸ್, ಮೊರಬ್ಬ, ಆವಳಾ ಸುಫಾರಿ, ಹುಳಿಪುಡಿ, ಕ್ಯಾಂಡಿ ಹೀಗೆ ವಿವಿಧ ಉತ್ಪನ್ನ ತಯಾರಿ ಆರಂಭಿಸಿದರು. ರಾಮದುರ್ಗದ ಪೇಟೆಯಲ್ಲಿ ‘ಅಲಕಾ ನೆಲ್ಲಿ ಉತ್ಪನ್ನಗಳು’ ಮಾರಾಟಕ್ಕೆಂದು ಅಂಗಡಿ ತೆರೆದರು! ರಾಜ್ಯದ ಪ್ರಥಮ ನೆಲ್ಲಿ ಕೃಷಿಕನ ಯಶೋಗಾಥೆ ಹಲವರನ್ನು ಸೆಳೆಯಿತು. ಕಳೆದ ೨೦ವರ್ಷಗಳ ಅಖಿಲ್‌ರ ನೆಲ್ಲಿ ಕೃಷಿ ಅನುಭವ ಪರಿಣಾಮ ಈಗ ರಾಜ್ಯದ ವಿವಿಧ ಪ್ರದೇಶಗಳಲ್ಲಿ ನೆಲ್ಲಿ ತೋಟಗಳಾಗಿವೆ.

ಕುಂದಾಪುರ ಆಜ್ರಿಯ ಶಶಿಧರ ಶೆಟ್ಟರ ಕಾಡು ತೋಟ(ಅನಲಾಗ್ ಫಾರೆಸ್ಟ್)ದಲ್ಲಿ ತಿಂಗಳಿಗೆ ಎರಡು ಕ್ವಿಂಟಾಲ್ ನೋನಿ ಹಣ್ಣು ದೊರೆಯುತ್ತಿದೆ. ಈಗ ಇವನ್ನು ಕಷಾಯವಾಗಿಸಿ ಮಾರುಕಟ್ಟೆಗೆ ಕಳಿಸುವ ಸಿದ್ದತೆ ನಡೆದಿದೆ. ಸಾಗರದ ಮಂಚಾಲೆ ಪ್ರಕಾಶ್‌ರಾವ್ ತಮ್ಮ ಮನೆ ಹಿಂದಿನ ಗುಡ್ಡದ ಭೂಮಿಯಲ್ಲಿ ದಾಲ್ಚಿನ್ನಿ ನೆಟ್ಟು ಎರಡು ವರ್ಷವಾಗಿವೆ. ನೀರಾವರಿ ಅಗತ್ಯವಿಲ್ಲ, ದನಕರುಗಳ ಉಪಟಳವಿಲ್ಲ,ರೋಗಬಾಧೆಯಿಲ್ಲದ ಕಾಡು ಸಸ್ಯ ಸಮೃದ್ಧವಾಗಿ ಹಸಿರಾಡುತ್ತಿದೆ. ಚಿಕ್ಕಮಗಳೂರಿನ ಕೊಪ್ಪದ ಗ್ರಾಮ ಅರಣ್ಯ ಸಮಿತಿ ಕಾಡು ದಾಲ್ಚಿನ್ನಿ ಎಲೆಗಳನ್ನು ಕಿಲೋಗೆ ೮-೨೦ರೂಪಾಯಿಗೆ ಮಾರಾಟ ಮಾಡಿದೆ. ಇವನ್ನು ಒಟ್ಟು ಮಾಡಿಸಿದರೆ ಕಿಲೋಗೆ ೧೮೦ ರೂಪಾಯಿ ದೊರೆಯುವ ಮಾಹಿತಿಯಿದೆ!. ಉತ್ತರ ಕನ್ನಡದ ಮುಂಡಗೋಡದ ಅರಿಶಿನಗೇರಿ ಪ್ರದೇಶದಲ್ಲಿ ಕೇರಳ ಮೂಲದ ಹಲವು ಕುಟುಂಬಗಳಿವೆ. ಇವರು ಮಾಡಹಾಗಲು(ಕಾಟುಪೀರೆ) ಕೃಷಿ ಮಾಡುತ್ತಾರೆ. ಕಾಡು ಬಳ್ಳಿಗೆ ಕೃಷಿ ಆರೈಕೆ ನೀಡಿ ಕಣ್ಮರೆಯಾಗಲಿದ್ದ ಸಂಕುಲ ಉಳಿಸಿಕೊಂಡಿದ್ದಾರೆ. ಪ್ರತಿವರ್ಷ ಜುಲೈ-ಅಗಸ್ಟ್ ಸಂದರ್ಭದಲ್ಲಿ ಮುಂಡಗೋಡ, ಹುಬ್ಬಳ್ಳಿ, ಶಿರಸಿ ಮಾರುಕಟ್ಟೆಗೆ ಇಲ್ಲಿನ ಮಾಡಹಾಗಲು ಪೂರೈಕೆಯಾಗುತ್ತದೆ. ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳದ ಕರಾವಳಿ ಮನೆಯ ಹಿತ್ತಲು, ಬೇಲಿಯಂಚಿನಲ್ಲಿ ಜುಮ್ಮಿನಮರ ನೋಡಿರಬಹುದು. ಅವನ್ನು ಯಾರೂ ಬೆಳೆಸಿಲ್ಲ, ಆದರೆ ನೈಸರ್ಗಿಕವಾಗಿ ಹುಟ್ಟಿದ್ದನ್ನು ಕಡಿಯದೇ ಕಾಳಜಿಯಿಂದ ಜೋಪಾನ ಮಾಡಿದ್ದಾರೆ ಅಷ್ಟೇ!. ಹತ್ತಾರು ಕಿಲೋ ಮೀಟರ್ ನಡೆದು ಹಸಿ ಹಸಿ ಮರಗಳನ್ನು ಕಡಿದು ಕಟ್ಟಿಗೆ ತರುವವರು ಮನೆ ಸನಿಹ ಮುಳ್ಳಿನ ಮರ ಉಳಿಸಿದ್ದಾದರೂ ಏಕೆ? ಕುತೂಹಲವಿತ್ತು. ಕರಾವಳಿಗರ ಮೀನು ಅಡುಗೆಗೆ ಜುಮ್ಮಿನಕಾಯಿ ವಿಶಿಷ್ಟ ರುಚಿ ನೀಡುತ್ತದೆ! ಹಿತ್ತಲಿನ ಸಾಂಬಾರವಾಗಿ ಕಾಡು ಮರ ಸಂರಕ್ಷಣೆಯಾಗಿದೆ.

ಮಲೆನಾಡಿನ ನಮ್ಮ ಕೃಷಿ ಬೆಳೆ ಆಯ್ಕೆಯ ಬದಲಾವಣೆ ಘಟ್ಟ ಇದು. ಅಡಿಕೆ, ತೆಂಗು, ಮಾವು, ಸಪೋಟ, ದಾಳಿಂಬೆ, ಕಾಫಿಗಿಂತ ಬೇರೆ ದಾರಿ ಹುಡುಕುವವರಿಗೆ ಕಾಡು ಸಸ್ಯಗಳು ಒಂದು ಅವಕಾಶ ತೆರೆದಿವೆ. ಕಾಡು ದಟ್ಟವಾಗಿದ್ದಾಗ ಅಡವಿ ಸಸ್ಯಗಳ ಬಳಸಿಬಲ್ಲ ಜ್ಞಾನ ಮನೆಮನೆಗಿತ್ತು. ಸ್ಥಳೀಯರ ಆಹಾರ, ಔಷಧ ಮೂಲವಾದ ಈ ಸಂಪತ್ತನ್ನು ಅರಣ್ಯ ಇಲಾಖೆ ಕಿರು ಅರಣ್ಯ ಉತ್ಪನ್ನಗಳೆಂದು ಲಿಲಾವು ಮಾಡಿತು, ಕಾಡು ಮೂಲೆಯ ಬಳಕೆ ಸೀಮೆ ದಾಟಿ ಮಾರುಕಟ್ಟೆಯತ್ತ ತಿರುಗಿಸಿತು. ದಾಲ್ಚಿನ್ನಿ, ಉಪ್ಪಾಗೆ, ಮುರುಗಲು, ರಾಮಪತ್ರೆ, ಮರಾಠಿಮೊಗ್ಗು ಹೀಗೆ ಹಲವು ಸಾಂಬಾರಗಳು ಸಿಟಿಗೆ ಹೊರಟವು. ಕಾಡು ಮರಗಳ ಟೊಂಗೆ ಕತ್ತರಿಸಿ, ಮರ ಕಡಿದು, ಚಕ್ಕೆ ಎತ್ತಿ ಇವನ್ನು ಸಂಗ್ರಹಿಸುವ ಪೈಪೋಟಿಯಲ್ಲಿ ಅಡವಿ ಸಸ್ಯಗಳಿಗೆ ಆಪತ್ತು ಒದಗಿತು. ಉತ್ಪನ್ನಗಳಿಗೆ ಬೆಲೆ ಏರುತ್ತಿರುವಂತೆ ಕೃಷಿ ಭೂಮಿಯಲ್ಲಿ ಕಾಡು ಸಸ್ಯ ಬೆಳೆಸುವ ಕಾಳಜಿ ಗೋಚರಿಸಿತು. ಬೊಜ್ಜು ಕರಗಿಸಲು ಅಗತ್ಯವಾದ

ಹೈಡ್ರಾಕ್ಸಿ ಸಿಟ್ರಿಕ್ ಆಸಿಡ್ ಉಪ್ಪಾಗೆ, ಮುರುಗಲಿನಲ್ಲಿದೆ ಎಂದು ತಿಳಿದ ಬಳಿಕ ಬೆಲೆ ಗಗನಕ್ಕೇರಿತು. ಅರಣ್ಯ ನರ್ಸರಿಗಳಲ್ಲಿ ಸಸಿಗಳು ಉದುಸಿದವು. ಮೌಲ್ಯವರ್ಧನೆ, ಮಾರುಕಟ್ಟೆ ವಿಸ್ತರಣೆ ನಿಧಾನಕ್ಕೆ ಹೆಚ್ಚಿತು. ಗ್ರಾಮೀಣ ಕೈಗಾರಿಕೆಗಳು ಕೋಕಂ ಜ್ಯೂಸ್ ತಯಾರಿಗೆ ನಿಂತವು. ಹತ್ತಾರು ವರ್ಷ ಬಳಿಕ ಈಗ ನೋಡಿದರೆ ಒಂದಿಷ್ಟು ಸಸ್ಯ ಬೆಳೆಸಿದವರು ಕಣ್ಣೆದುರು ನಿಲ್ಲುತ್ತಾರೆ. ಕಿಸೆಗೆ ಕಾಸು ನೀಡುವ ಕಾಡು ಸಸ್ಯಗಳು ಕೃಷಿಗೆ ಒಲಿದಿವೆ.

ನಮ್ಮ ಕೃಷಿ ಬೆಳೆಗಳ ಮೂಲ ಕಾಡು. ಅಡವಿ ಸಸ್ಯ ಹುಡುಕಿ ಕೃಷಿ ಮಾನ್ಯತೆ ನೀಡುವ ಕೆಲಸ ವನವಾಸಿ ಮೂಲದಿಂದ ಆರಂಭ. ಈಗ ಮಾರುಕಟ್ಟೆಗೆ ತಕ್ಕಂತೆ ನಮ್ಮ ಅರಣ್ಯ ಪ್ರೀತಿ ಬದಲು. ಕಾಡು ಗಿಡ ಎಂದು ಹೆಸರೇ ಗೊತ್ತಿಲ್ಲದಂತಿದ್ದ ಹಲವು ಸಸ್ಯಗಳತ್ತ ಸಂಶೋಧನೆಯ ಹೊಸ ಬೆಳಕು ಮೂಡುತ್ತಿದೆ. ಅಡಿಕೆ, ತೆಂಗಿನ ತೋಟಗಳಲ್ಲಿ ಶ್ರೀಗಂಧ, ಶತಾವರಿ, ಗೌರಿಹೂವು ಹೀಗೆ ವಿವಿಧ ಸಸ್ಯ ಬೆಳೆಸುವ ಆಸಕ್ತಿ ಕಾಣುತ್ತಿದೆ. ರಾಮಪತ್ರೆಯ ಕಸಿಗಿಡಗಳು, ಕಾಡು ನೋನಿಯ ಸುಧಾರಿತ ತಳಿಗಳ ಹುಡುಕಾಟ ಸಹಜವಾಗಿದೆ. ಒಂದು ಮಿಡಿಮಾವಿನ ಮರ ವರ್ಷಕ್ಕೆ ೪೫ ಸಾವಿರ ಆದಾಯ ನೀಡುತ್ತದೆಂಬ ವರ್ತಮಾನ ಶಿರಸಿಯ ಮಾಳಂಜಿಯ ನಾಗೇಶ ನಾಯ್ಕರ ಹೊಲದಲ್ಲಿ ಕೇಳಿಸಿತು. ಮಿಡಿಮಾವು ಮಾರುಕಟ್ಟೆ ಬೇಡಿಕೆ ಗಮನಿಸಿದವರು ಸಸಿ ನೆಡಲು ಆರಂಭಿಸಿದರು. ಉತ್ತರ ಕನ್ನಡದಲ್ಲಿ ಅಪ್ಪಟ ಕಾಡು ಮಾವಿನ ಕಸಿಗಿಡಗಳು ಕಳೆದ ೪-೫ ವರ್ಷಗಳ ಈಚೆಗೆ ಲಕ್ಷಾಂತರ ನಾಟಿಯಾಗಿವೆ, ಮಿಡಿಮಾವಿನ ತೋಟಗಳೆದ್ದಿವೆ. ದುರ್ನಾತ ಬೀರುವ ಗಿಡವೆಂದೇ ಅವಜ್ಞೆಗೆ ಗುರಿಯಾದ ಹೇತಾರಿ ಸಸ್ಯಕ್ಕೆ ಔಷಧೀಯ ಮಹತ್ವ ಬಂದಿದೆ. ಕಾಡು ಗಿಡ ಕೃಷಿ ಅರಣ್ಯದಲ್ಲಿ ಸ್ಥಾನ ಪಡೆಯುತ್ತಿದೆ. ಹುಣಸೂರಿನ ಪ್ರದೇಶದಲ್ಲಿ ಹೆಬ್ಬೇವು ಭೀಮ ಗಾತ್ರದಲ್ಲಿ ಬೆಳೆಯುವದು ಗಮನಕ್ಕೆ ಬಂದ ಬಳಿಕ ಖಾಸಗಿ ಭೂಮಿಗಳಿಗೆ ಹೆಬ್ಬೇವು ಹಬ್ಬಿದೆ. ಹಾಸನದ ಮಾರ್ಶೆಟ್ಟಿಹಳ್ಳಿ ಗೇಟ್ ಸನಿಹದ ಚಲುವೆ ಗೌಡರು ತೆಂಗಿನ ತೋಟದಲ್ಲಿ ಬೆಳೆಸಿದ ಸಾಲು ಸಸಿಗಳಿಗೆ ಈಗ ೧೦ ವರ್ಷ, ಹೆಬ್ಬೇವಿನ ಹೆಮ್ಮರ ಹಸುರಿನ ಹೊಸಕತೆ ಹೇಳುತ್ತಿದೆ.

ಕಾಡು ಉಳಿಸಬೇಕು, ಕಣಿವೆ ಬಚಾವು ಮಾಡಬೇಕು ಎಂದು ನಾವು ಭಾಷಣ, ಆಂದೋಲನ ಮಾಡುವದಕ್ಕಿಂತ ಜನ ಬೆಳೆಸಿದ ಸಸ್ಯ ನೋಡಿದರೆ ವೈವಿಧ್ಯ ಸಂರಕ್ಷಣೆಯ ಕಾಲುದಾರಿ ಕಾಣುತ್ತದೆ. ಕಾಡು ಸಸ್ಯಗಳಿಗೆ ಹೇಗೆ ಜಾಗತಿಕ ಬೇಡಿಕೆ ಹೆಚ್ಚುತ್ತಿದೆ ಎಂಬುದಕ್ಕೆ ಪಶ್ಚಿಮ ವರ್ಜಿನಿಯಾದ ಸಂಶೋಧನೆಯನ್ನು ಕೊಂಚ ಗಮನಿಸಬೇಕು. ಅಲ್ಲಿನ ವೀಲಿಂಗ್ ಜಸೂಟ್ ವಿಶ್ವವಿದ್ಯಾಲಯದ ಡಾ.ಬ್ರಯಾನ್ ರಾಡೆನ್‌ಬುಶ್ ಹೆದ್ದಾರಿಯ ಲಾರಿ ಚಾಲಕರ ಚಲನೆಯ ದಕ್ಷತೆ ಗಮನಿಸಿದರು. ಸುದೀರ್ಘ ಪ್ರಯಾಣದಲ್ಲಿ ಬಳಲಿಕೆ, ಮಾನಸಿಕ ಒತ್ತಡದಲ್ಲಿರುವವರು ಹೆಚ್ಚು ಅಪಘಾತ ಮಾಡುತ್ತಿರುವದು ಬೆಳಕಿಗೆ ಬಂದಿತು. ಇವರಿಗೆ ನಮ್ಮ ಕಾಡು ದಾಲ್ಚಿನ್ನಿಯ ಚಾಕಲೇಟು ತಿನ್ನಿಸಿದರು. ಚಾಲಕರಲ್ಲಿ ದಾಲ್ಚಿನ್ನಿಯ ಸುವಾಸನೆ ಹೊಸ ಚೈತನ್ಯ ನೀಡಿತು, ಕೆಲಸದ ದಕ್ಷತೆಯಲ್ಲಿ ಪ್ರಗತಿಯಾಯಿತು. ಆಲಸ್ಯ, ನಿದ್ದೆ ಓಡಿ ಹೋಯಿತು. ಲಾರಿಯ ವೇಗ ಹೆಚ್ಚಿ ಸರಕು ಸಾಗಣೆ ಸಲೀಸಾಯಿತು ! ಲಾರಿ ಚಾಲಕರಷ್ಟೇ ಅಲ್ಲ, ಕ್ರೀಡಾಪಟು, ಗುಮಾಸ್ತರಿಗೂ ಬಳಲಿಕೆ ತಗ್ಗಿಸುತ್ತದೆಂಬುದು ಸಾಬೀತಾಯಿತು. ಈಗ ಎಲ್ಲರಿಗೂ ಒತ್ತಡ ಜಾಸ್ತಿ, ಬಳಲಿಕೆ ಸಹಜ. ಬೆಳಿಗ್ಗೆ ಏಳುವಾಗಲೇ ದಾಲ್ಚಿನ್ನಿ ಚಾಕಲೇಟು ಅಗತ್ಯವಿರುವ ಕುಂಭಕರ್ಣ ಸಂತತಿ ಎಲ್ಲರ ಮನೆಮನೆಗಳಲ್ಲಿದೆ. ಬೇಡಿಕೆ ಏರಲು ಇನ್ನೇನು ಬೇಕು ? ಇಂತಹ ಸಂಶೋಧನೆಗಳನ್ನು ಎತ್ತಿ ಹೇಳಿ ಕಾಡುತ್ಪನ್ನಕ್ಕೆ ಬೇಡಿಕೆ ಹೆಚ್ಚಿಸುವ ಕೆಲಸ ನಡೆದಿದೆ. ಮಲೆನಾಡಿನ ನಾವು ಮರ ಕಡಿದು ನಾಶ ಮಾಡುವದಕ್ಕಿಂತ ಗಿಡ ಬೆಳೆಸಿ ಬಳಸುವ ಪರಿಜ್ಞಾನ ಹಂಚಬೇಕು.

ಕೃಷಿಗೂ ಕಾಡಿಗೂ ಸಂಬಂಧವಿರಬೇಕು ಎಂಬುದು ಸುಸ್ಥಿರ ಸಾವಯವದ ಸುಲಭ ಸೂತ್ರ. ಶ್ರೀಲಂಕಾದ ಅನಲಾಗ್ ಫಾರೆಸ್ಟ್‌ನ ಬೀಜಮಂತ್ರ ! ನಮ್ಮ ಪಕ್ಕದ ಅಡವಿ ಸಸ್ಯ ಕೃಷಿಯಲ್ಲಿ ಆಹಾರ, ಔಷಧಗಳ ಜತೆಗೆ ಜಾಗತಿಕ ಮಾರುಕಟ್ಟೆ ತಲುಪುವ ಅವಕಾಶಗಳಂತೂ ಕಾಡು-ಹಳ್ಳಿಗರಿಗೆ ಹೊಸ ಚೇತನ ನೀಡಬಹುದು. ಕಾಡು ಮರದ ಉತ್ಪನ್ನಗಳು ಅಪ್ಪಟ ಸಾವಯವ ಎಂಬುದನ್ನು ನೆನಪಿಸಬೇಕು. ಆಗ ಕಾಡು ಸಸ್ಯಗಳು ಕೃಷಿ ಏಳ್ಗೆಯ ಕವೆಗೋಲಾಗಬಹುದು. ಇದು ಮಲೆನಾಡಿನ ಭವಿಷ್ಯದ ಕೃಷಿ ನೀತಿಯಾಗಬಹುದು.

# ಕೃಷಿ ನೆಲದಲ್ಲಿ ನೆಗೆಟಿವ್ ನಾಣೆಗಳು!

ವೆಂಗುರ್ಲಾ ೪ ಹಾಗೂ ವೆಂಗುರ್ಲಾ ೫ ತಳಿಯ ಗೇರು ಗಿಡಗಳನ್ನು ಗುಡ್ಡದಲ್ಲಿ  ನಾಟಿ ಮಾಡುತ್ತಿದ್ದೆವು. "ಹೆಚ್ಚು ಮಳೆ ಸುರಿಯುವ ಇಲ್ಲಿ ಗೇರು ಬೆಳೆ ಕಷ್ಟ, ಫಲ ಜಾಸ್ತಿ ಬರೋದಿಲ್ಲ" ಎಂದು ಕೃಷಿಕರೊಬ್ಬರು ಹೇಳಿದರು. ಇನ್ನಷ್ಟು ವಿವರ ಪಡೆಯಲು ಅವರಲ್ಲಿ ಪ್ರಶ್ನಿಸಿದರೆ ಅವರಿಗೆ ಗೇರು ಕೃಷಿಯ ವಿಧಾನ, ತಳಿ ಬಗೆಗೆ  ಕನಿಷ್ಟ ಮಾಹಿತಿಯೂ ಇಲ್ಲವೆಂಬುದು ಅರ್ಥವಾಯಿತು. ಆದರೆ ತಮಗೆ ತಿಳಿದಿರುವ ಅಲ್ಪಜ್ಞಾನವನ್ನೇ ಅಧಿಕಾರವಾಣಿಯಿಂದ ಹೇಳುವ ಪರಿಪಾಟ ಬೆಳೆಸಿಕೊಂಡಿದ್ದರು. ಹೆಚ್ಚು ಕಡಿಮೆ ಕೃಷಿ ವಿಷಯದಲ್ಲಿ ಉಪದೇಶ ನೀಡುವವರು, ಮಾತಾಡುವವರಲ್ಲಿ ಹೆಚ್ಚಿನವರು ಈ  ವರ್ಗದವರು !

ನಮ್ಮ ಸೊಪ್ಪಿನ ಬೆಟ್ಟದಲ್ಲಿ ನೀರಿಂಗಿಸುವ ರಚನೆ ಮಾಡುವಾಗ "ಇದೆಲ್ಲ ಮಲೆನಾಡಿಗೆ ಪ್ರಯೋಜನವಿಲ್ಲ" ಎಂದು ಇನ್ನೊಬ್ಬರು ಹೇಳಿದ್ದರು. ಇಂಗಿಸಿದ ನೀರೆಲ್ಲ ಬೇಗ ಪಕ್ಕದ ಹಳ್ಳದಲ್ಲಿ  ಒರತೆಯಾಗಿ ಓಡುತ್ತದೆ, ಬೇಸಿಗೆಗಂತೂ ನೀರು ಉಳಿಯುವದಿಲ್ಲ ಎಂಬುದು ಮಾತಿನ ಸರಳಾರ್ಥ. ಗುಡ್ಡದ ಇಳಿಜಾರಿಗೆ ಅಡ್ಡವಾಗಿ ಟ್ರೆಂಚ್‌ಗಳನ್ನು ಮಾಡುವದರಿಂದ ನೈಸರ್ಗಿಕ ಹುಲ್ಲಿನ ಉತ್ಪಾದನೆ ಕುಂಠಿತವಾಗುತ್ತದೆ, ಜಾನುವಾರು ಮೇವಿಗೆ ಸಮಸ್ಯೆಯಾಗುತ್ತದೆ ಎಂಬುದು ಅವರ ಸಬೂಬು. 'ಗೇರು ನೆಟ್ಟರೆ ಪ್ರಯೋಜನವಿಲ್ಲ, ನೀರಿಂಗಿಸಿದರೆ ಪ್ರಯೋಜನವಿಲ್ಲ' ಎಂಬ ಮಾತು ಕೇಳಿ ೬ ವರ್ಷಗಳಾಗಿವೆ. ಸಾಮಾನ್ಯ ನಿರ್ವಹಣೆಯಲ್ಲಿ  ಗೇರು ಫಲ ಬಿಟ್ಟಿದೆ, ನೀರಿಂಗಿಸಿದ ಪರಿಣಾಮಕ್ಕೆ ನಮ್ಮ ಸೊಪ್ಪಿನ ಬೆಟ್ಟದಲ್ಲಿ  ಜಲಕ್ಷಾಮದ ಮೇ ತಿಂಗಳಿನಲ್ಲೂ ದಿನಕ್ಕೆ ೩೦ ಸಾವಿರ ಲೀಟರ್ ನೀರು ನೀಡುವ  ಕೆರೆ ನಿರ್ಮಾಣವಾಗಿದೆ. ಹುಲ್ಲಿನ ಉತ್ಪಾದನೆ, ಗುಣಮಟ್ಟ ಇಮ್ಮಡಿಸಿದೆ. ನೀರಿಂಗಿಸಿದ ಲಾಭ  ಢಾಳಾಗಿ ಕಾಣುತ್ತಿದೆ.

ಮಲೆನಾಡಿನ ಮಿಡಿಮಾವಿನ ೬೦ ಜಾತಿಗಳನ್ನು  ಪುಟ್ಟ ಜಾಗದಲ್ಲಿ ಬೆಳೆಸಿದ್ದೇನೆ.  'ಅಪ್ಪೆಮಿಡಿ' ಫಲ ನೀಡೋದಿಲ್ಲ ಎನ್ನುವ ಮಾತು ಕೇಳಿದ್ದೇನೆ. ಪಿಕೆಎಮ್ ನುಗ್ಗೆ ನಾಟಿಗೆ ಹೊಂಡ ತೆಗೆಸುವಾಗ 'ನಮ್ಮಲ್ಲಿ ನುಗ್ಗೆ ಆಗೋದಿಲ್ಲ' ಮಾತು ಆಲಿಸಿದ್ದೇನೆ. ಕಳೆದ ಮಳೆಗಾಲದಲ್ಲಿ ಬೆಂಡೆ, ಮೂಲಂಗಿ ಮುಂತಾದ ತರಕಾರಿ ಬೀಜ ನಾಟಿ ಮಾಡುವಾಗ ಕಾಡು ಮೊಲಗಳ ಕಾಟ ಜಾಸ್ತಿ ಎಂದಿದ್ದಾರೆ. ಥೈವಾನ್ ರೆಡ್ ಲೇಡಿ ತಳಿಯ ಪಪಾಯ ಸಸಿ ನೆಡುವ ನಿರ್ಧಾರ ಮಾಡಿದಾಗ ಮಂಗಗಳು ಗಿಡ ಉಳಿಸುವದಿಲ್ಲ ಎಂದು ಹೇಳಿದ ರೀತಿಯಂತೂ ಗಿಡ ನೆಡುವವನ್ನು ಹಿಂದಕ್ಕೆ ಸೆಳೆಯುವಷ್ಟು ಪ್ರಭಾವಿಯಾಗಿತ್ತು!. ನೀವು ಯಾವುದೇ ಸಸಿ ನಾಟಿ ಮಾಡಿ, ಅದು ಆಗೋದಿಲ್ಲ ಎಂದು ಉಚಿತ ಉಪದೇಶ ನೀಡುವವರು ಎಲ್ಲ ಊರುಗಳಲ್ಲಿ ಧಾರಾಳ ಸಿಗುತ್ತಾರೆ. ಹೀಗೆ ನಾಟಿ ಮಾಡಿ, ಹೀಗೆ ಕೃಷಿ ಮಾಡಿ, ಸಂರಕ್ಷಣೆಗೆ ಇಂತಹ ಉಪಾಯ ಮಾಡಬಹುದು, ಇಂತಹ ತಳಿ ನೆಟ್ಟರೆ ಪ್ರಯೋಜನವಾಗಬಹುದು' ಎಂದು  ಖಚಿತ ಮಾಹಿತಿ ಹೇಳುವವರು  ಸಾಕ್ಷರ ನಾಡಿನಲ್ಲಿ ಕಾಣುತ್ತಿಲ್ಲ, ಕೃಷಿ ವಿಜ್ಞಾನದ ಈ ಯುಗದಲ್ಲೂ  ಕಲಿತು ಮತಾಡುವವರಿಗಿಂತ ಮಾತಾಡುವದನ್ನು  ಕಲಿತ ಪೀಳಿಗೆ ಬೆಳೆಯುತ್ತಿದೆ.  ಕೃಷಿ ಹೆಜ್ಜೆ ಇಡುವವರನ್ನು ಹಿಮ್ಮೆಟ್ಟಿಸುವ ಮಾತುಗಳು  ತೋಟ, ಹೊಲಗಳಲ್ಲಿ ಮೊಳಗುತ್ತಿದೆ.

ಗೇರು ಸೋತಿದ್ದು, ಮಾವು ಫಲವಿಲ್ಲದ್ದು, ಪಪಾಯ ನಷ್ಟ, ತರಕಾರಿ ಸೋಲು, ವನ್ಯ ಜೀವಿಗಳ ಉಪಟಳ ಗಮನಿಸಿದವರು ಸಾರಾಸಗಟಾಗಿ ಮಾಹಿತಿ ಬಿತ್ತುತ್ತ ಹೊರಟಿದ್ದಾರೆ. ಹೊಸ ಕೃಷಿ ಉತ್ಸಾಹ ತೋರಿದವರು ಇಂತಹ ಮಾತುಗಳಿಂದ ಧೈರ್ಯ ಕಳಕೊಳ್ಳುತ್ತಾರೆ. ಹಳ್ಳಿಗಾಡಿನ ಇಂತಹ ಕೃಷಿ ಮಾತಿನಲ್ಲಿನ ನಿಜ ಪ್ರಾಮಾಣಿಕತೆ ಎಷ್ಟು? ಸುಮ್ಮನೆ ಮಾತಿಗಾಗಿ ಮಾತಾಡುವವರು ಎಷ್ಟು? ಚಿಕಿತ್ಸಕ ದೃಷ್ಟಿಯಿಂದ ಗಮನಿಸಿದರೆ ನೆಗೆಟಿವ್ ನಾಣೆಗಳ  ತಂಡ ಹುಲುಸಾಗಿದೆ!

ಕೃಷಿಯಲ್ಲಿ ನಕಾರಾತ್ಮಕ ಧೋರಣೆ ಈ ಪ್ರಮಾಣದಲ್ಲಿ ಬೆಳೆಯಲು ಕಾರಣವೇನು? 'ಜೀವನ ಅನುಭವ ಮುಖ್ಯ ಕಾರಣ' ಎಂದು ತಟ್ಟನೆ ಹೇಳಬಹುದು. ಗೆಲುವಿಗಿಂತ ಇಲ್ಲಿ ಸೋಲು ಕಂಡವರು ಜಾಸ್ತಿ. ಸಿನೆಮಾ ಕತೆಗಳಲ್ಲಿ  ಕಷ್ಟಪಟ್ಟು ದುಡಿದವ ತಟ್ಟನೆ ಸಿರಿವಂತನಾಗುವಂತೆ  ಕೃಷಿ ಬದುಕಿನ  ಪ್ರಮೇಯಗಳಲ್ಲಿ ಕಡಿಮೆ. ಒಂದು ಲಕ್ಷ ರೂಪಾಯಿ ವಿನಿಯೋಗಿಸಿ  ಒಂದು ವಾಹನ ಖರೀದಿಸಿ ಬಾಡಿಗೆ ಹೊಡೆಯಬಹುದು. ಇನ್ಸುರೆನ್ಸ್, ಇಂಧನ ವೆಚ್ಚ, ವಾಹನ ಸವಕಳಿ, ಬಾಡಿಗೆ ಆದಾಯ ಎಲ್ಲ ಗಮನಿಸಿದರೆ ಕೆಲವೇ ದಿನಗಳಲ್ಲಿ ವ್ಯವಹಾರದ ಲಾಭ-ನಷ್ಟ ಊಹಿಸಬಹುದು,

ಅಂದಾಜಿಸಬಹುದು. ಕೃಷಿಯಲ್ಲಿ ಗಿಡ ನೆಡುವಾಗ, ಹೂವರಳಿಸಿದಾಗ, ಫಲ ಬಿಟ್ಟಾಗ, ಸಂಸ್ಕರಣೆ ಮಾಡುವಾಗ, ಮಾರುಕಟ್ಟೆಗೆ ಹೋದಾಗ ಹೀಗೆ ಪ್ರತಿ ಹಂತದಲ್ಲಿ ಎಂತಹ ಆಸೆ ಹುಟ್ಟಿದರೂ ಎಲ್ಲ ನಿರೀಕ್ಷೆಗಳು ನಿಜವಾಗುವದಿಲ್ಲ. ನಿಗದಿತ ಉತ್ಪನ್ನ, ಗುರಿಯಲ್ಲಿ ಶೇಕಡಾ ೩೫-೪೦ರಷ್ಟು ಯಶಸ್ಸು ಸಿಕ್ಕರೆ ಅದೃಷ್ಟ. ಕಿರಾಣಿ, ಉದ್ಯಮ, ನೌಕರಿ ಮುಂತಾದ ವಲಯಗಳಲ್ಲಿ ತೊಡಗಿಸಿದ ಬಂಡವಾಳ ಪ್ರತಿಫಲಕ್ಕೂ, ಕೃಷಿ ರಂಗದಲ್ಲಿನ ಪರಿಸ್ಥಿತಿಗೂ ಸಾಕಷ್ಟು ವ್ಯತ್ಯಾಸವಿದೆ. ಹವಾಮಾನ, ಮಾರುಕಟ್ಟೆಗಳು ಕೃಷಿ ವಿಶ್ವಾಸದ ಮಧ್ಯೆ ಆತಂಕ ಹುಟ್ಟಿಸುತ್ತಿವೆ.

ಹತ್ತು ವರ್ಷದ ಹಿಂದೆ ಒಳ್ಳೆಯ ರೇಷ್ಮೆ ಕೃಷಿಕರು, ಹೈನುಗಾರಿಕೆ ಮಾಡಿದವರು, ಬಾಳೆ ಬೆಳೆದವರು, ವೆನಿಲ್ಲಾದಲ್ಲಿ ಗೆದ್ದವರು ಈಗ ಆ ಬೆಳೆಯಲ್ಲಿ ಅಂತಹ ಯಶಸ್ಸು ಪಡೆಯುವದು ಕಷ್ಟ. ಆ ಕೃಷಿ ಅನುಭವಗಳನ್ನು ಅಲ್ಲಿಯೇ ಮರೆತು ಕೃಷಿ ಬೆಳೆಯನ್ನೇ ಬದಲಿಸುತ್ತ ಬದುಕುವ ಅನಿವಾರ್ಯತೆ ಗಮನಿಸುತ್ತೇವೆ. ಅನಿಶ್ಚಿತ ಬದುಕು ಯಶಸ್ಸಿನ ವಿಚಾರದಲ್ಲಿ ನಂಬಿಕೆಗಿಂತ ಅಪನಂಬಿಕೆಗಳನ್ನು ಜಾಸ್ತಿ ಬೆಳೆಸಿದೆ. ೧೦-೧೫ ವರ್ಷಗಳ ಕಾಲ ವಿವಿಧ ಕೃಷಿ ಬೆಳೆಯ ಫಲಿತಾಂಶ ಗಮನಿಸಿದ ಬಳಿಕ ಮನಸ್ಸು ನೆಲದಲ್ಲಿ ವಿಶ್ವಾಸ ಕಳಕೊಳ್ಳುತ್ತದೆ. ಅಡಿಕೆ, ಭತ್ತ, ತೆಂಗು ಕೃಷಿಯೇ ಜೀವನವಾಗಿರುವ ಮಲೆನಾಡಿನಲ್ಲಿ ಹವಾಮಾನ ವೈಪರೀತ್ಯ, ಬೆಲೆ ಕುಸಿತ, ರೋಗ ಸಮಸ್ಯೆಗಳು ಹಲವು ಕೃಷಿಕರನ್ನು ದಶಕಗಳಿಂದ ಕೆಂಗೆಡೆಸಿದೆ. ಕೂಲಿ ಸಮಸ್ಯೆ ಕೃಷಿಯೇ ಅಸಾಧ್ಯ ಎನ್ನುವ ಹಂತಕ್ಕೆ ಒಯ್ದಿದೆ. ಯಾವುದೇ ಬೆಳೆ ಗಮನಿಸಿದರೂ ಒಂದಿಷ್ಟು ಸೋಲಿನ ಅನುಭವಗಳಿವೆ. ಹೀಗಾಗಿ ಕೃಷಿ ಸಾಧ್ಯತೆ ವಿಮರ್ಶೆಗಿಂತ ನಷ್ಟದ ಚಿತ್ರಗಳು ಮಾತ್ರ ಬಹುತೇಕ ಜನರಿಗೆ ಕಾಣುತ್ತವೆ.

ನಮ್ಮ ಬೆಳೆ ಏಕೆ ಸೋತಿದೆ? ಕೃಷಿವಿಜ್ಞಾನ ಹೇಗೆ ಬೆಳೆದಿದೆ? ಮಾರುಕಟ್ಟೆಯಲ್ಲಿ ಗೆಲ್ಲುವ ತಂತ್ರ ಹೇಗೆ? ಇಂತಹ ವಿಚಾರಗಳಲ್ಲಿ ಕೃಷಿಕ ಕಲಿಯುವದು ಬಹಳವಿದೆ. ಬೆಳೆಯುವದು ಮಾತ್ರ ನಮ್ಮ ಕೆಲಸ ಎಂಬ ಲಾಗಾಯ್ತಿನ ತಿಳುವಳಿಕೆ ಸಲ್ಲದು. ಯಾವ ಯಾವ ಹಂತದಲ್ಲಿ ಕಲಿಯುವದು ಏನೇನಿದೆ ಎಂಬ ನಿರಂತರ ಅಧ್ಯಯನಶೀಲತೆ ಬೇಕು. ಮಾತಿನ ವಿಮರ್ಶೆಗಿಂತ ಮಣ್ಣಿನ ಅನುಭವದಲ್ಲಿ ಅರಿಯುವ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಯಾವ ಬೆಳೆಯನ್ನು ಹೇಗೆ ಬೆಳೆಯಬಹುದು ಎಂದು ಅರಿಯುವ ಕುತೋಹಲ ಬೇಕು, ಮಾಹಿತಿ ವಿನಿಮಯದ ಹಸಿವು, ಹಂಬಲವಿದ್ದಾಗ ಮಾತ್ರ ಕೃಷಿ ಯಶಸ್ಸನ್ನು ಕೊಂಚ ಮೇಲಕ್ಕೆ ಒಯ್ಯಬಹುದು.

ನಮ್ಮ ಹಳ್ಳಿಗಳಲ್ಲಿ ಇಂದು ೨೫-೩೦ರ ಹರೆಯದ ತಲೆಮಾರು ಕೃಷಿಯಿಂ◌ಂದ ದೂರ ನಡೆದಿದೆ. ಯಾವ ಯಾವ ಊರುಗಳಲ್ಲಿ ಇಂತಹ ಹೊಸ ತಲೆಮಾರು ಉಳಿದಿದೆಯೋ ಅಲ್ಲಿ ಹೊಸ ಹೊಸ ಕೃಷಿ ಹೆಜ್ಜೆಗಳು ಮೂಡುತ್ತಿವೆ. ಆದರೆ ಅಲ್ಲಿನ ಸುತ್ತಲು ಕೃಷಿ ವಿಚಾರದಲ್ಲಿ ನಕಾರಾತ್ಮಕ ಧೋರಣೆ ಹೊಂದಿದ ಹಳೆಯ ತಲೆಮಾರು ಬೆಳೆದಿದೆ! ಹೊಸ ಕೃಷಿ ವಿಚಾರಗಳಲ್ಲಿ ತಣ್ಣನೆಯ ಸಂಘರ್ಷ ಪ್ರತಿ ಹಂತದಲ್ಲಿ ನಡೆಯುತ್ತಿದೆ. ಇಷ್ಟು ಕಾಲ ನಗರದಲ್ಲಿ ನೌಕರಿಯಲ್ಲಿರುವವರಿಗೆ ಯೋಗ, ಪ್ರಾಣಾಯಾಮದ ಪಾಠ ಹೇಳುತ್ತ ಸಕಾರಾತ್ಮಕ ಚಿಂತನೆ ಬೆಳೆಸುವ ಕೆಲಸ ನಡೆಯುತ್ತಿತ್ತು. ಈಗ ಕೃಷಿ ನಿರ್ವಹಣೆಯಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸುವ ಪಠ್ಯ, ತರಬೇತಿ ಕಾರ್ಯಗಳು ಬೇಕಾಗಿವೆ. ಭೂಮಿಗಷ್ಟೇ ಅಲ್ಲ ಮಿದುಳಿಗೂ ಗೊಬ್ಬರ ಹಾಕುವ ಕಾಲ ಸನ್ನಿಹಿತವಾಗಿದೆ.

# ಹುಲಿ ದೇವರ ಕಾಡು, ನೀರುಳಿಸಿದ ತಲೆಮಾರು

ಶಿರಸಿಯ ಖೂರ್ಸೆ ಊರಿಗೆ ಹೋಗಿ ಭಾಷಣ ಮಾಡಬೇಕಿತ್ತು. ನೀರು, ಕಾಡು ಅಂತ ಮಾತಾಡುವದು ಬೇಜಾರಾಗಿ ಹಳೆಯ ದಾಖಲೆ ತೆಗೆದು ಊರಿನ ಕತೆ ಹುಡುಕುತ್ತಿದ್ದೆ. ಕರಾವಳಿ – ಬಯಲು ಸೀಮೆ ನಡುವೆ ಸರಕು ಸಾಗಾಟಕ್ಕೆ ಪ್ರಮುಖ ಮಾರ್ಗ ಎಂದು ಇಂದಿಗೆ ೧೫೦ ವರ್ಷ ಹಿಂದೆ ಬ್ರಿಟೀಷರು ಗುರುತಿಸಿದ ದೇವಿಮನೆ ಘಟ್ಟದ ದಾರಿಯಲ್ಲಿ ಸಿಗುವ ಹಳ್ಳಿ ಇದು. ಪಶ್ಚಿಮ ಘಟ್ಟದ ನೆತ್ತಿಯಲ್ಲಿ ನಿಂತ ಊರಲ್ಲಿ ವರ್ಷಕ್ಕೆ ೩೫೦೦ ಮಿಲಿ ಮೀಟರ್ ಅಬ್ಬರದ ಮಳೆ, ಎಕರೆಯಲ್ಲಿ ೧. ೩೦ ಕೋಟಿ ಲೀಟರ್ ಸುರಿಯುತ್ತದೆ. ಆದರೆ ಕಾಡಲ್ಲಿ ಮಾತ್ರ ಕುಬ್ಜಗಿಡಗಳು, ಬಿರುಗಾಳಿ ಪ್ರಹಾರಕ್ಕೆ ಮೇಲೇಳುವ ಶಕ್ತಿ ಕಳಕೊಂಡಿದೆ. ಹೆಚ್ಚೆಂದರೆ ೪೦ ಅಡಿ ಎತ್ತರದ ಮರಗಳು, ಇನ್ನುಳಿದವು ಕುರುಚಲು ಸಸ್ಯಗಳೇ ಜಾಸ್ತಿ. ಕುಂಟುನೇರಲು, ಬಿಕ್ಕೆ, ಕಾರೆ, ಹಣಗೇರಿ, ಈಚಲು, ಮುರುಗಲು,ಅಂಡಿ, ನೇರಳೆ, ಅಣಲೆ ಹೀಗೆ ನಿತ್ಯಹರಿದ್ವರ್ಣ, ಎಲೆ ಉದುರಿಸುವ ಮರಜಾತಿಗಳ ಬೀಡು. ಮಳೆ ಶುರುವಾದರೆ ಎಲ್ಲೆಲ್ಲೂ ನೀರೇ ನೀರು! ಬೇಸಿಗೆ ಆರಂಭಕ್ಕೆ ಕೊರತೆ ಆರಂಭ, ಕುಡಿಯುವ ನೀರಿನ ಬಾವಿಗಳಲ್ಲಿ ನೀರಿದೆ, ಕೃಷಿಗೆ ಮಾತ್ರ ತೀವ್ರ ಕೊರತೆ. ಹೀಗಾಗಿ ಸುಮಾರು ೩೫೦ ಎಕರೆ ಸಾಗುವಳಿ ಕ್ಷೇತ್ರದ ಮಲೆನಾಡಿನ ಮಧ್ಯದ ಇಲ್ಲಿ ಸರಿಯಾಗಿ ಒಂದು ಎಕರೆ ಅಡಿಕೆ ತೋಟ ಕೂಡಾ ಇಲ್ಲ!

ಮಳೆ ಪ್ರಹಾರಕ್ಕೆ ಮಣ್ಣಿನ ಸತ್ವಗಳೆಲ್ಲ ಸೋಪು ಹಾಕಿ ತೊಳೆದಂತೆ ಕೊಚ್ಚಿಹೋಗಿವೆ, ಜಮೀನಿನ ಮಣ್ಣು ನಮ್ಮ ಅಂಗಳಕ್ಕೆ ರಂಗೋಲಿ ಹಾಕುವ ಬಿಳಿ ಬಿಳಿ ಶೇಡಿಯ ನೆಂಟನಂತಿದೆ! ಇಲ್ಲಿನ ಪ್ರಮುಖ ಗದ್ದೆ ಬಯಲಿಗೆ "ಬಿಳಿಗದ್ದೆ' ಎಂದೇ ಹೆಸರಿದೆ. ಎಕರೆಗೆ ೮ ಚೀಲ ಭತ್ತ ಬೆಳೆದರೆ ಬಂಪರ್ ಬೆಳೆ ಎನ್ನುವ ಸ್ಥಿತಿ. ಮಳೆ ಆಶ್ರಿತ ಭತ್ತದ ಬೇಸಾಯ ಬಿಟ್ಟರೆ ಬೇರಾವ ಕಸುಬೂ ಇಲ್ಲ. ಇಲ್ಲಿನ ಹತ್ತಾರು ಎಕರೆ ಭೂಮಿ ಒಡೆಯನಿಗೂ ಕೃಷಿ ಸಿರಿವಂತಿಕೆ ನೀಡಲಿಲ್ಲ. ಕರಾವಳಿ, ಅರೆಮಲೆನಾಡು, ಬಯಲುಸೀಮೆಗಳಲ್ಲಿ ನೀರಿಂಗಿಸಿ, ಕೆರೆ ನಿರ್ಮಿಸಿ ಎಂದು ಕರೆ ಕೊಡುವ ನಾವು ಇಲ್ಲೇನು ಮಾಡಬಹುದು? ಯೋಚಿಸಿದಷ್ಟೂ ಸುರಿಯುವ ಮಳೆಯ ಲೆಕ್ಕ ಸಿಗುತ್ತದೆಯೇ ಹೊರತೂ ಇಂಗಿಸುವ ದಾರಿ ಕಾಣುವದಿಲ್ಲ. ಮೇಲ್ಮಣ್ಣು ಮರಳು ಮಿಶ್ರಿತ, ಹತ್ತಡಿಯ ಆಳದಲ್ಲಿ ಘಟ್ಟಿ ಕೆಂಪುಕಲ್ಲಿನ ಹಾಸು. ಮಳೆ ಸುರಿಯುತ್ತದೆ, ಮೇಲ್ನೋಟಕ್ಕೆ ನೀರು ಇಂಗುತ್ತದೆ, ಬೇಸಿಗೆಗೆ ಕೈಗೆಟಕುವ ಹಂತದಲ್ಲಿ ಅಂತರ್ಜಲ ಉಳಿಯದೇ ಬಡ ಕೃಷಿಕರಿಗೆ ಸಮಸ್ಯೆ ಬೆಳೆಯುತ್ತದೆ. ಇಲ್ಲಿ ಗುಡ್ಡ, ಕಣಿವೆಯ ಜಾಗಗಳಲ್ಲಿ ಹೆಚ್ಚು ಹೆಚ್ಚು ಕೆರೆ ನಿರ್ಮಿಸಬೇಕು, ಆ ಕೆರೆಯ ತಳ ಭಾಗಕ್ಕೆ ಎರಡಡಿ ದಪ್ಪ ಹಾಸು ಬಯಲುಸೀಮೆಯ ಅಂಟು ಮಣ್ಣು ಹಾಕಬೇಕು. ಕೆರೆಯಲ್ಲಿ ನಿಧಾನಕ್ಕೆ ನೀರಿಂಗಿಸುವ ಸೂತ್ರವೇನೂ ಸಿದ್ಧವಿದೆ. ಆದರೆ ಇನ್ನೂ ಮಾದರಿ ನಿರ್ಮಾಣವಾಗಿಲ್ಲ.

ನೂರಾರು ವರ್ಷಗಳಿಂದಲೂ ಈ ಹಳ್ಳಿಯಲ್ಲಿ ಕೃಷಿ ನೆಲೆಯಿದೆ ಎಂದರೆ ಏನಾದರೊಂದು ಪರಂಪರೆಯ ಸಂರಕ್ಷಣೆ ಮಾರ್ಗ ಇರಬಹುದು ಎಂಬ ಊಹೆ. ಕ್ರಿ.ಶ ೧೮೮೧ರಲಿ ೨೪೧ ಜನಸಂಖ್ಯೆ, ಮುಂದೆ ೧೯೦೧ರಲ್ಲಿ ೨೫೧ಕ್ಕೆ ಏರಿ ೧೯೪೧ರಲ್ಲಿ ೧೫೩ಜನ ಈ ಗ್ರಾಮದಲ್ಲಿದ್ದರೆಂದು ಬ್ರಿಟೀಷ್ ಕಾಲದ ಸರ್ವೆ ಸೆಟ್ಲಮೆಂಟ್ ವರದಿಗಳು ಹೇಳುತ್ತವೆ. ಕಳೆದ ೨೦೦೧ರ ಜನಗಣತಿ ವರದಿ ಪ್ರಕಾರ ೧೦೮ ಮನೆಗಳಿಂದ ೪೮೮ ಜನರಿರುವ ದಾಖಲೆ. ಇನ್ನುಳಿದ ಪ್ರದೇಶಕ್ಕೆ ಹೋಲಿಸಿದರೆ ಕಳೆದ ಒಂದು ನೂರು ವರ್ಷಗಳಲ್ಲಿ ಜನಸಂಖ್ಯೆ ಅಂತಹ ಪ್ರಮಾಣದಲ್ಲಿ ಏರಲೂ ಇಲ್ಲ, ಇಳಿಯಲೂ ಇಲ್ಲ ಎನ್ನುವಂತಿದೆ. ಇದಕ್ಕೆ ಮುಖ್ಯಕಾರಣ ಇಲ್ಲಿನ ಮಣ್ಣುಗುಣ. ತೋಟಗಾರಿಕೆಗೆ ಅನುಕೂಲಕರ ಮಣ್ಣು, ನೀರು ಲಭ್ಯವಿದ್ದರೆ ಮಲೆನಾಡಿನ ಈ ಊರು ಹಿಗ್ಗಿ ಬೆಳೆದಿರುತ್ತಿತ್ತು. ಈಗಲೂ ಇಲ್ಲಿ ಭತ್ತದ ಬಡವರು ತುಂಬಿದ್ದಾರೆ.

ಖುರ್ಸೆ ಹಳ್ಳಿಯ ನೀರಿನ ಕತೆಯನ್ನು ಊರವರೇ ಹೇಳಬಲ್ಲರು. ಮಂಗನಕೆರೆ, ಕುಳಗೆರೆ, ಮಾಸ್ತಿಕೆರೆ, ಸಣ್ಣಕೆರೆ ಎಂಬ ಸಣ್ಣಪುಟ್ಟ ಸರ್ಕಾರಿ ಕೆರೆಗಳಿವೆ. ೩೫-೪೫ ಅಡಿ ಆಳದ ಬಾವಿಗಳು ಕುಡಿಯುವ ನೀರಿನ ಮೂಲಗಳು. ಬೇಸಿಗೆಯ ಕಟ್ಟಕಡೆಗೆ ಮಾಸ್ತಿಕೆರೆಯಲ್ಲಿ ಮಾತ್ರ ನೀರಿರುತ್ತದೆ ಎಂದು ಹಳ್ಳಿಗ ಮಹಾಬಲೇಶ್ವರ ನಾಯ್ಕ್ ಸುಳಿವು ನೀಡಿದರು. ಇಲ್ಲಿ ಕಲ್‌ಹೊಳೆ, ಚಳ್ಳೆಹೊಳೆ, ಗೋಳಿಹೊಳೆ, ಮೊಸಳೆಗುಂಡಿ ಹೊಳೆ ಎಂಬ ಪುಟ್ಟ ಹಳ್ಳಗಳಿವೆ. ಕಲ್‌ಹೊಳೆ ಬೇಸಿಗೆ ಆರಂಭದಲ್ಲಿ ಬತ್ತುತ್ತದೆ, ನಂತರ ಇನ್ನುಳಿದವು ಒಣಗುತ್ತ ಮೊಸಳೆಗುಂಡಿ ಹೊಳೆಯಲ್ಲಿ ಮಾತ್ರ ಬೇಸಿಗೆಯ ಕೊನೆಯವರೆಗೆ ಅಲ್ಲಲ್ಲಿ ನೀರಿರುತ್ತದೆ.

ಮೊಸಳೆಗುಂಡಿಯಲ್ಲಿ ನೀರಿರುವದು ನಮ್ಮ ಜಲಶೋಧಕ್ಕೆ  ಬೇರೆಯ ಆಯಾಮ ನೀಡುತ್ತದೆ. ಮಲೆನಾಡಿನಲ್ಲಿ  ಪ್ರತಿ ಊರಿನಲ್ಲಿ ಹುಲಿದೇವರ ಕಟ್ಟೆಗಳಿವೆ. ಇಂತಹ ಕಟ್ಟೆಗಳ ಸನಿಹದಲ್ಲಿ ವರ್ಷವಿಡೀ ನೀರಿರುತ್ತವೆಂಬುದನ್ನು  ಹಲವು ಆಧ್ಯಯನಗಳಲ್ಲಿ ನಾನು ಗಮನಿಸಿದ್ದೆ. ಹುಲಿದೇವರ ಕತೆ ಕೇಳಿದಾಗ ಊರಿನ ರಾಮಲಿಂಗೇಶ್ವರ ದೇವಾಲಯದ ಪಕ್ಕ ಹುಲಿದೇವರ ಕಾಡಿರುವ ಸಂಗತಿ ತಿಳಿಯಿತು. ವಿವರ ಕೆದಕಿದರೆ ಇಂದಿಗೆ ೪೦-೫೦ ವರ್ಷಗಳ  ಹಿಂದೆ ಇಲ್ಲಿನ ಸುಮಾರು ೩೦ ಎಕರೆ ವಿಸ್ತೀರ್ಣದ ಕಾಡು ಊರಿನ ರಕ್ಷಿತಾರಣ್ ! ಚಿಕ್ಕ ಟೊಂಗೆ ಕೂಡಾ ಕಡಿಯಲು ಜನ ಭಯ ಪಡುತ್ತಿದ್ದರು, ಈಗ ನಂಬಿಕೆಗಳು ಕಡಿಮೆಯಾಗಿವೆಯಾದರೂ ಕಾಡು ತೀರ ಹಾಳಾಗಿಲ್ಲ. ಇಲ್ಲಿಂದ ಕಿಲೋ ಮೀಟರ್ ದೂರದಲ್ಲಿ ಮೊಸಳೆಗುಡಿ ಹೊಳೆಯಿದೆ, ಅಲ್ಲಿ ನೀರಿರುತ್ತದೆ. ಈ ಕಾಡಿನ ಸನಿಹದಲ್ಲಿ ಮಾಸ್ತಿಕೆರೆಯಿದೆ, ಅಲ್ಲಿಯೂ ವರ್ಷವಿಡೀ ನೀರು ದೊರೆಯುತ್ತದೆ! ಕಾಡಿನ ಒಂದು ಪಾರ್ಶ್ವದಲ್ಲಿ ಗದ್ದೆ ಬಯಲಿದೆ, ಅಲ್ಲಿ ಶಿವರಾತ್ರಿಯವರೆಗೂ  ಮಣ್ಣಿನಲ್ಲಿ ತೇವಾಂಶವಿರುತ್ತಿತ್ತೆಂದು  ಕೃಷಿಕರು ನೆನಪಿಸಿಕೊಳ್ಳುತ್ತಾರೆ.

ನೀರು ಅಮೂಲ್ಯ ಸಂಪತ್ತು ಎನ್ನುತ್ತೇವೆ, ಹನಿ ನೀರು ಕಳಕೊಂಡು ಬಳಲಿದ ಸಾವಿರಾರು ಹಳ್ಳಿ ನೋಡುತ್ತೇವೆ. ಕಡೆಗೆ ಕೊಳವೆಬಾವಿಗಳಲ್ಲಿ, ಬೃಹತ್ ಯೋಜನೆಗಳಲ್ಲಿ ನೀರಿನ ಕನಸು ಕಾಣಲಾಗುತ್ತದೆ. ಮಲೆನಾಡಿನ  ಖೂರ್ಸೆಯ ಹಳೆಯ ತಲೆಮಾರು ಪುಟ್ಟ ಹುಲಿದೇವರ ಕಾಡಲ್ಲಿ  ನೀರಿನ ಮೂಲ ರಕ್ಷಿಸುವ ಸಿರಿವಂತ ಪರಂಪರೆ ಹೊಂದಿತ್ತು. ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ವಿವೇಕದ ಮಾರ್ಗ ಅನುಸರಿಸಿತ್ತು. ಈಗ ಅಬ್ಬರದ ಮಳೆಯ ಇಲ್ಲಿ ಕಾಡು ಸಂರಕ್ಷಿಸಿ ನೀರು ಗೆಲ್ಲುವ ವಿದ್ಯೆ ಮರೆತಿದೆ. ನೀರಿಲ್ಲದೇ ಕೃಷಿ ಬಡತನಕ್ಕೆ ಬಳಲಿದ ಖುರ್ಸೆಯಂತಹ ಊರುಗಳಿಗೆ ನೈಸರ್ಗಿಕ  ಕಾಡಿನಲ್ಲಿ ಮಾತ್ರ  ನೀರಿನ ಕನಸು ನನಸಾಗಬಹುದು.

ಖುಷಿಯ ಕ್ಷಣಗಳನ್ನು ಎಲ್ಲಿ ಹುಡುಕೋಣ? :ಲೇಖಕರು – ಶಿವಾನಂದ ಕಳವೆ: ಕಂಪ್ಯೂಟರ್ ಊಟ

ಬಹರೈನ್‌ನ ಮನಾಮಾ ನಗರದಲ್ಲಿ ಮಾತಿಗೆ ಸಿಕ್ಕ ಕನ್ನಡಿಗರು ನಮ್ಮ  ಹಳ್ಳಿ ಬದುಕಿನ ಹಳೆಯ ಪುಟ ನೆನಪಿಸಿಕೊಳ್ಳುತ್ತಿದ್ದರು. ಅಲ್ಲಿನ ಸೌದಿ ಬ್ಯಾಂಕ್ ಮೆನೇಜರ್ ಆರ್. ವಿ. ಹೆಗಡೆಗೆ ಕಾಲದ ಕತೆಗಳು  ಕಣ್ಣೆದುರು ಬಂದವು. ೧೯೭೦ರ ಕಾಲ,  ಅವರು  ಉತ್ತರ ಕನ್ನಡದ ಕುಮಟಾದಲ್ಲಿ ಕಾಲೇಜಿಗೆ ಹೋಗುತ್ತಿದ್ದರು, ಒಮ್ಮೆ  ರಸ್ತೆ ಪಕ್ಕದ ತರಕಾರಿ ಅಂಗಡಿಯಲ್ಲಿ  ಕೆಂಪನೆಯ  ಆಕರ್ಷಕ ಹಣ್ಣು  ಎದ್ದು ಕಾಣುತ್ತಿತ್ತು, ಅದು ಸೇಬು ಇರಬಹುದು ಆದರೆ ಗಾತ್ರ ನೋಡಿದರೆ  ಅನುಮಾನ,  ಆ  ಕಾಲಕ್ಕೆ  ಸ್ವತಃ ಸೇಬು ರುಚಿನೋಡದ  ಹೆಗಡೆಗೆ  ಅಂತುಪಾರು ಹತ್ತಲಿಲ್ಲ. 'ಅದು ಟೊಮೆಟೋ ಮಾರಾಯ! ಊಟಕ್ಕೆ ಸಾರು ಮಾಡೋದಕ್ಕೆ ಬಳಸ್ತಾರೆ!' ಜತೆಗಾರರ ವಿವರಣೆ. ಒಮ್ಮೆ ಸಾರಿನ ಹಣ್ಣಿನ ಊಟದ ರುಚಿ ನೋಡಬೇಕು...... ಆಗ ಹುಟ್ಟಿದ ದೊಡ್ಡ ಕನಸು. ಹಳ್ಳಿ ಮನೆಗಳಲ್ಲಂತೂ ಪೇಟೆ ತರಕಾರಿ ಅಪರಿಚಿತ, ಖರೀದಿಸಲು ತಾಕತ್ತಿರಲಿಲ್ಲ. ಒಮ್ಮೆ  ವಾರಿಗೆಯ ಗೆಳೆಯನೊಬ್ಬ ಟೊಮೆಟೋ ಹಣ್ಣಿನ ಸಾರು ಮಾಡುತ್ತಾನೆಂಬ ಸುದ್ದಿ ತಿಳಿಯಿತು,  ಬಾಯಲ್ಲಿ ನೀರೂರಿಸಿಕೊಂಡು  ಅವನ ರೂಮಿಗೆ ಓಡಿದ್ದೇ ಓಡಿದ್ದು!  ಆಗ ಟೊಮೆಟೋ  ಮಾರುಕಟ್ಟೆಗೆ ಬರುವದು  ಅಪುರೂಪ, ಅಂದು ಹೊಸ ತರಕಾರಿ  ಊಟ ಮಾಡಿದ್ದು  ಇಂದಿಗೂ ಮರೆಯಲಾಗದ  ಖುಷಿ ಘಳಿಗೆ ಅವರ ನೆನಪಿನಲ್ಲಿದೆ !

ಕುಮಟಾ ಮೇಲಿನಕೋಣಾರೆಯ ವೆಂಕಟ್ರಮಣ ಹೆಗಡೆ ನೀರಡಿಕೆ ಕೆತ್ತುತ್ತ ನಾಗಬಳ್ಳಿ ಎಲೆಯಲ್ಲಿ ಕವಳ ಹಾಕುವ ಸಂಭ್ರಮ ಸೋಜಿಗದ್ದು. ಎಲೆಯ ತೊಟ್ಟು ತೆಗೆದು, ಸುಣ್ಣ, ಹೊಗೆಸೊಪ್ಪು, ಅಡಿಕೆ ಸೇರಿಸಿಕೊಂಡು ಸಂಭ್ರಮದಲ್ಲಿ ಕವಳ ಸಿದ್ದಗೊಳಿಸುತ್ತಿದ್ದರು. ಆ ಕ್ಷಣಕ್ಕೆ ಅಪ್ಪಯ್ಯನ  ಮುಖದಲ್ಲಿ 'ಆಸ್ಕರ್ ಅವಾರ್ಡ' ಸಿಕ್ಕಂತಹ ಖುಷಿಯಿರುತ್ತಿತ್ತು ಎಂದು ಆರ್.ವಿ .ಹೆಗಡೆ ನೆನಪಿಸಿಕೊಳ್ಳುತ್ತಾರೆ. ನಾವು ಗಾಂಧಿಯನ್ನು  ಅರೆಬೆತ್ತಲೆಯ ಫಕೀರ ಎಂದು ವಿದೇಶಿಗರು ಗುರುತಿಸಿದ್ದು ಕೇಳಿದ್ದೇವೆ. ಇವರಂತೆ  ಜೀವನ ಪೂರ್ತಿ  ಚೋಟು ಪಂಚೆಯಲ್ಲೆ  ಬೆಳೆದವರು  ಈ ಕರಾವಳಿ ಹಿರಿಯರು! ಇಡೀ ಜೀವಮಾನದಲ್ಲಿ  ಅವರು ಬಳಸಿದ ಶರ್ಟ್ ಲೆಕ್ಕಹಾಕಿದರೆ ಹೆಚ್ಚೆಂದರೆ ೮-೧೦ ಬಳಸಿರಬಹುದು!. ಇಸ್ತ್ರಿ ಬಟ್ಟೆ, ಚಪ್ಪಲಿ, ವಾಚು, ಪೌಡರ್, ಕೂಲಿಂಗ್ ಗ್ಲಾಸ್, ಹವಾನಿಯಂತ್ರಿತ ಕಾರು, ಮೊಬೈಲ್, ಫ್ಯಾನ್   ಇಂತಹ ಯಾವ ವಸ್ತು, ವ್ಯವಸ್ಥೆಗಳ ಒಳಗೆ ಸಿಲುಕದೇ  ಕೃಷಿ ಕೆಲಸದಲ್ಲೇ ಮುಪ್ಪಾದವರು. ಅರ್ಧ ಎಕರೆ ಅಡಿಕೆ, ಅರ್ಧ ಎಕರೆ ಭತ್ತದ ಗದ್ದೆಯ ಸಂಪಾದನೆಯಲ್ಲಿ ೬ ಗಂಡು, ೩ ಹೆಣ್ಣು ಮಕ್ಕಳ ಸಂಸಾರ ನಿರ್ವಹಣೆ. ' ಹೆಣ್ಣು ಮಕ್ಕಳಿಗೆ ಮನೆಗೆಲಸ ಕಲಿಸ್ತೇನೆ, ಗಂಡು ಮಕ್ಕಳಿಗೆ   ಜನಿವಾರ ಹಾಕಿ ಎಸ್. ಎಸ್.ಎಲ್.ಸಿ ಓದಿಸ್ತೇನೆ...ಈ ಕುಟುಂಬದಲ್ಲಿ ಮತ್ತೇನೂ ಆಸೆ ಅವರು ಇಟ್ಕೋಬಾರದು ' ವಾಸ್ತವ ಎದುರಿಟ್ಟು ಬೆಳೆಸಿದರು. ಇಡೀ ಕರಾವಳಿ ತಿರುಗಾಡಿದರೆ ಮನೆ ಮನೆಗಳಲ್ಲಿ  ಇಂತಹ ಸರಳ ಹಿರಿಯರ ದರ್ಶನವಿದ್ದ ಕಾಲ ಅದು. ಜನರ ಕೈಯಲ್ಲಿ ಹಣವಿಲ್ಲ, ಹಣ ಬಳಸದೇ ಬದುಕುವ ಕಲೆ ಕಲಿತಿದ್ದರು.

ಬಡತನದ ನೆಲೆಯಲ್ಲಿ ಕನಸುಗಳಿಗೆ ಬರವಿತ್ತು. ಬೆಳೆಯುವ ಗಂಡು ಮಕ್ಕಳನ್ನು ಓದಿನ ಮಧ್ಯೆ ತೋಟಕ್ಕೆ ನೀರು ಹಾಕಲು ಒಯ್ದು ಅಲ್ಲಿ ಕೃಷಿ ತರಬೇತಿ!. ಕಷ್ಟದಲ್ಲಿ ಕಲಿತವರು ಒಬ್ಬರು ತಹಶೀಲ್ದಾರ್, ಮತ್ತೊಬ್ಬರು ಕಾಲೇಜು ಪ್ರಾಂಶುಪಾಲ, ಇನ್ನೊಬ್ಬರು ಕೃಷಿ ಅಧಿಕಾರಿ ಹೀಗೆ ಎಲ್ಲರೂ ವಿವಿಧ ರಂಗದಲ್ಲಿ ಎತ್ತರಕ್ಕೆ ಬೆಳೆದರು. ದೇಶ ವಿದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿ ನೌಕರಿಗೇರಿದರು! ೧೦-೨೦ಗುಂಟೆ ಜಮೀನಿನಲ್ಲಿ ಸಂಸಾರ ನಿಭಾಯಿಸಿದ ಹಿರಿಯರ ಕತೆಗಳು ನಿಜಕ್ಕೂ ಸಾಹಸದ್ದು, ನೂರಾರು ಜನಕ್ಕೆ ಬೆಳಕಿನ ದೀಪವಾಗುವ ತಾಕತ್ತು ಅವುಗಳಲ್ಲಿದೆ." ಈಗ ನಾನು ಬಹರೈನ್‌ನಲ್ಲಿ ಸೌದಿ ಬ್ಯಾಂಕ್ ಮೆನೇಜರ್! ಹಣವಿದೆ, ಸಕಲ ಸೌಕರ್ಯವಿದೆ, ವೈಭವವಿದೆ. ಆದರೆ ಏನ್ ಕೇಳ್ತೀರಿ! ಚೋಟು ಪಂಚೆಯ ಅಪ್ಪಯ್ಯ ಬರಿಮೈಯಲ್ಲಿ ಜಗುಲಿ ಕಟ್ಟೆಯಲ್ಲಿ ಕುಳಿತು ಎಲೆಸೆರಿ ತೆಗೆದು ಕವಳ ಹಾಕುತ್ತಿದ್ದ ಚಿತ್ರ ಕಣ್ಣೆದುರಿದೆ, ಆ ಖುಷಿಯ ಒಂದು ಕ್ಷಣ ನಮಗೆ ಸಿಕ್ಕಿಲ್ಲ, ಬದುಕಿನ ಒತ್ತಡಗಳ ಮಧ್ಯೆ ಓಡುವ ಯಂತ್ರವಾಗಿದ್ದೇವೆ ಅಷ್ಟೇ !' ಮನಾಮಾದ ರಮದಾ ಪ್ಯಾಲೇಸ್ ಮೂಲೆಯಲ್ಲಿ ಕುಳಿತು ಮಾತಾಡುತ್ತಿದ್ದ ಹೆಗಡೆ ಭಾವುಕರಾದರು, ಕಣ್ಣಲ್ಲಿ ನೀರು ಹನಿಯಿತು.

ನಮ್ಮೆದುರಿನ ವಿಚಿತ್ರ ನೋಡಿ, ನಮ್ಮೂರಿನ ಶಾಲೆ, ಪಂಚಾಯತ್ ಗ್ರಂಥಾಲಯಗಳಲ್ಲಿ ಕೆನಡಿ, ಲಿಂಕನ್, ಮಾರ್ಕ್ಸ್, ಲೆನಿನ್, ಅಂಬೇಡ್ಕರ್, ಗಾಂಧಿ ಇವರೆಲ್ಲರ ಜೀವನ ಚರಿತ್ರೆಯ ಹೊತ್ತಿಗೆಗಳಿವೆ. ಹಳ್ಳಿ ಮೂಲೆಗಳಲ್ಲಿ ೨೦ಗುಂಟೆಗಳಲ್ಲಿ ಸರಳ ಬದುಕಿನ ಸಂತರಾದ ಎಷ್ಟು ಕೃಷಿಕರ ಜೀವನ ಕತೆಗಳಿವೆ? ಕೃಷಿಯೇ ದೇಶದ ಬೆನ್ನೆಲುಬೆಂದು ಹೇಳುವ ನೆಲದಲ್ಲಿ ಕೃಷಿಕರ ಮಣ್ಣಿನ ಬದುಕಿನ ದಾಖಲೆಗಳಿಲ್ಲ, ಅಲ್ಲಿನ ಸತ್ವದ ಅರಿವಿಲ್ಲ! ಸಂಪತ್ತು ಎಷ್ಟೇ ಗಳಿಸಿದರೂ ಇವತ್ತಿಗೂ ಕೃಷಿ, ಗ್ರಾಮೀಣ ಬದುಕಿನಲ್ಲಿ ಖುಷಿ ಕ್ಷಣಗಳನ್ನು ಏಕೆ ಎಲ್ಲರನ್ನೂ ಕಾಡುತ್ತಿವೆ? ನಮ್ಮ ಸುತ್ತಲಿನ ಜೀವನ ಪಾಠಗಳನ್ನು ಮರೆಯುತ್ತಿದ್ದೇವೆ. ಹಳೆಯ ನೆನಪುಗಳು ಯಾವತ್ತೂ ಹಾಗೇ! ಹೊಸತು ಏನೇ ಬಂದರೂ ಅವನ್ನು ಜಾಡಿಸಿ ಒದ್ದು ಮುನ್ನುಗ್ಗಿ ಬರುತ್ತವೆ. ಇಂದು ನಮಗಿರುವ ಸಂಪತ್ತು ಖರೀದಿ ತಾಕತ್ತು ನೀಡಿದೆ. ಇದ್ದಕ್ಕಿದ್ದಂತೆ ಕಾರು ಬದಲಿಸುತ್ತೇವೆ, ಬಟ್ಟೆ ಬೀಸಾಡಿ ಹೊಸತು ಉಡುತ್ತೇವೆ, ಉದುರಿದ ಕೂದಲಿಗೆ ಕಸಿ ಮಾಡಿಸುತ್ತೇವೆ, ಬಣ್ಣಗೆಟ್ಟ ಮುಖಕ್ಕೆ ಹೊಸ ಹೊಳಪು ನೀಡುತ್ತೇವೆ. ಹುಳುಕು ಹಲ್ಲು, ಸೀಳು ತುಟಿ, ಗೂನು ಬೆನ್ನು, ಚೋಟು ಕೈ ಅಷ್ಟೇಕೆ ದೇಹದ ಅಂಗಾಂಗ ಬದಲಿಸಿಕೊಂಡು ಹೊಸ ಮನುಷ್ಯರಾಗುತ್ತೇವೆ. ನಮ್ಮ ಜತೆಗಿರುವ ಸಂಪತ್ತು ಇಂತಹ ಅಗಾಧ ಶಕ್ತಿ ನೀಡಿದೆ, ವಿಜ್ಞಾನ ಕನಸಿನಂತೆ ನಮ್ಮ ಬದುಕು ಕಟ್ಟಿ ನಿಲ್ಲಿಸಿದೆ. ಇಷ್ಟಾಗಿಯೂ ನಮ್ಮ ಕಾಲದ ಖುಷಿ ಮಾತ್ರ ಕೈಜಾರಿದೆ. ಒಂದು ಕಾಲಕ್ಕೆ ನೆಮ್ಮದಿಯೆಂಬುದು ಹಣದಲ್ಲಿದೆ, ಸಂಪತ್ತಿನ ಗಳಿಕೆಯಲ್ಲಿದೆ ಎಂದು ನಂಬಿದವರಿಗೆ ಹಲವು ಸಾರಿ ಭ್ರಮನಿರಸನವಾಗಿದೆ. ಸುಖದ ನಿಜ ನಮ್ಮ ಯೋಚನೆಯಲ್ಲಿದೆಯೇ ಹೊರತೂ ವಸ್ತು-ವಿಶೇಷಗಳಲಿಲ್ಲ ಎಂಬುದು ಅರ್ಥವಾಗಿದೆ.

೪೦-೫೦ ವರ್ಷದ ಹಿಂದೆ ನಾವು ಕೊಳ್ಳುಬಾಕರಾಗಿರಲಿಲ್ಲ. ಮೈಸೋಪು, ಚಪ್ಪಲಿ ಬಳಸದೇ ಕಾಲೇಜು ಮುಗಿಸಿದವರಿದ್ದಾರೆ. ಒಂದು ಜತೆ ಬಟ್ಟೆಯಲ್ಲಿ ಓದು ಮುಗಿಸಿದವರಿದ್ದಾರೆ. ಆಗ ಇನ್ನಷ್ಟು ಬೇಕೆಂದರೂ ಜನರ ಕೈಯಲ್ಲಿ ಹಣ ಇಲ್ಲ. ೧೦ ರೂಪಾಯಿ ಕಿಸೆಯಲ್ಲಿದ್ದರೆ ರೋಮಾಂಚನವಾಗುತ್ತಿತ್ತು. ಹದ್ದುಮೀರಿ ಹಣ ಖರ್ಚು ಮಾಡಿದರೆ ನಾಳೆ ಉಪವಾಸ ಬೀಳುವ ಭಯ!. ಈಗಿನಂತೆ ಕೈ ಎತ್ತಿ ಸಾಲ ನೀಡುವ ಸಹಕಾರಿ ಸಂಘ, ಬ್ಯಾಂಕುಗಳಿಲ್ಲ. ಸವಕಾರಿ ಸಾಲದ ಶೂಲ ಎಲ್ಲರನ್ನೂ ಬೆಚ್ಚಿ ಬೀಳಿಸಿತ್ತು. ಆಗಾಗ ಒಕ್ಕರಿಸುತ್ತಿದ್ದ ಬರಗಾಲ ಸದಾ ಎಚ್ಚರದ ಹೆಜ್ಜೆಗೆ ಪ್ರೇರಣೆಯಾಗಿತ್ತು. ಕನಸುಗಳು ಹದ್ದು ಮೀರಿ ಬೆಳೆಯದಂತೆ ಸ್ವಯಂ ನಿಯಂತ್ರಿತ ಕಡಿವಾಣವಿತ್ತು. ಒಂದಾಣೆ ಖರ್ಚು ಮಾಡುವದಾದರೆ ಹತ್ತು ಸಾರಿ ಯೋಚನೆ!. ಅರ್ಧ ಆಣೆ ತೆತ್ತು ಸೋದೆ ರಥೋತ್ಸವದಲ್ಲಿ ಮೈ ಸೋಪು ಖರೀದಿಸಿ ಮನೆಗೆ ತಂದಾಗ 'ನೀನು ಮನೆತನ ತೊಳಿತೀಯೇ!' ಎಂದು ಶಿರಸಿಯ ಬಿಸಲಕೊಪ್ಪ ತಿಮ್ಮಪ್ಪ ಹೆಗಡೆಯವರಿಗೆ ೬೦ ವರ್ಷದ ಹಿಂದೆ ಸಂಬಂಧಿಕರು ಗದರಿಸಿದ್ದರಂತೆ! ಅವತ್ತಿನ ಪರಿಸ್ಥಿತಿ ಅದು. 'ಒಂದು ಇಡೀ ಗ್ಲುಕೋಸ್ ಬಿಸ್ಕೀಟ್ ಪ್ಯಾಕ್ ನಾವೊಬ್ಬರೇ ತಿನ್ನಬೇಕು' ಎಂಬುದು ೨೫ ವರ್ಷದ ಹಿಂದಿನ ಹುಡುಗರ ಎವರೆಸ್ಟ್ ಕನಸು! ಈಗ ಇಂತಹ ಜುಜುಬಿ ಕನಸು ಯಾರಿಗೂ ಇಲ್ಲ. ಆದರೆ ಈಗ ಕಾಲೇಜಿಗೆ ಹೋದ ಮಗ ಮನೆ ಮಂದಿಗೆ ತಿಳಿಸದೇ ೩-೪ ಸಾವಿರ ಖರ್ಚುಮಾಡಿ ಹೊಸ ಮೊಬೈಲ್ ಖರೀದಿಸಬಲ್ಲ, ಬೈಕ್ ತರಬಲ್ಲ ! ' ನನ್ನ ಮಗನಿಗೆ ವಾರಕ್ಕೆ ಐನೂರು ರೂಪಾಯಿ ಖರ್ಚಿಗೆ ಬೇಕು...' ಎಂದು ಕಾಲೇಜು ಹುಡುಗನಿಗೆ ನಗುತ್ತ ಹಣ ಖರ್ಚು ಮಾಡುವ ಪಾಲಕರನ್ನು ನೋಡಬಹುದು. ಕಿಸೆಗೆ ಹಣ ಬಂದು ಖರೀದಿ ತಾಕತ್ತು ಬಂದಿದೆ. ಖುಷಿಯ ಕ್ಷಣಗಳು ಕೈಜಾರಿವೆ.

# ದನಕರು ಮೇವಿಗೆ ಕಾಡು ಕಂಗಾಲು!

ಪಶ್ಚಿಮ ಘಟ್ಟದ ಗುಡ್ಡಗಾಡು ಅಭಿವೃದ್ಧಿಗೆ ಸಂಬಂಧಿಸಿದಂತೆ ಖ್ಯಾತ ವಿಜ್ಞಾನಿ ಡಾ| ಮಾಧವ ಗಾಡ್ಗೀಳ್ ನೇತ್ರತ್ವದಲ್ಲಿ ಕ್ರಿ.ಶ ೧೯೮೭ರಲ್ಲಿ ನಡೆದ ಅಧ್ಯಯನ ಮಲೆನಾಡಿನ ಜಾನುವಾರು ಮೇವಿನ ಪರಿಸ್ಥಿತಿ ಬಗೆಗೆ ಬೆಳಕು ಚಲ್ಲುತ್ತದೆ. ಪ್ರತಿಶತ ೮೦ರಷ್ಟು ಅರಣ್ಯ ಭೂಮಿ ಇರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ೫ ಲಕ್ಷ ಜಾನುವಾರುಗಳಿವೆ, ಇಲ್ಲಿನ ಕೃಷಿಯಿಂದ ಉತ್ಪನ್ನವಾಗುವ ಮೇವು ಜಾನುವಾರುಗಳಿಗೆ ಕೇವಲ ಎರಡು ತಿಂಗಳು ಸಾಕು. ಆದರೆ ಕೃಷಿಕರು ಈ ಮೇವನ್ನು ಸ್ವಲ್ಪ ಸ್ವಲ್ಪ ಬಳಸಿ ಏಳು ತಿಂಗಳ ಕಾಲ ಜಾನುವಾರು ಸಾಕುತ್ತಾರೆ. ಮಳೆಗಾಲದಲ್ಲಿ ದನಕುಗಳನ್ನು ಕಾಡಿಗೆ ಬಿಡುತ್ತಾರೆ. ಇಲ್ಲಿನ ಒಂದು ಹೆಕ್ಟೇರ್ ಕಾಡಿನಲ್ಲಿ ಸರಾಸರಿ ೨-೬ಟನ್ ನೈಸರ್ಗಿಕ ಹುಲ್ಲು ಬೆಳೆಯುತ್ತದೆ. ಮಳೆ, ಮಣ್ಣುಗುಣ, ಮರದ ದಟ್ಟಣೆ ಅವಲಂಬಿಸಿ ಹುಲ್ಲಿನ ಉತ್ಪಾದನೆ ಸ್ಥಳದಿಂದ ಸ್ಥಳಕ್ಕೆ ಏರುಪೇರಾಗುತ್ತದೆ. ಏಳು ಲಕ್ಷ ಹೆಕ್ಟೇರ್ ಅರಣ್ಯ ವರ್ಷಕ್ಕೆ ೭.೭೪ ಲಕ್ಷ ಟನ್ ಮೇವು ಒದಗಿಸಬೇಕಾಗಿದೆ !. ೫ ಜನರ ಒಂದು ಕೃಷಿ ಕುಟುಂಬ ಎಮ್ಮೆ, ಎತ್ತು, ಕರುಗಳೆಲ್ಲ ಸೇರಿ ೪-೫ ದನಕರು ಸಾಕುತ್ತದೆಂದು ಅಂದಾಜಿಸಿದರೂ ವರ್ಷಕ್ಕೆ ಕನಿಷ್ಟ ೭ ಟನ್ ಮೇವು ಬೇಕು. ಸಾಕಿದ ದನಕರುವನ್ನು ಉಪವಾಸ ಕೆಡವಲು ಸಾಧ್ಯವಿಲ್ಲ, ಕಣ್ಣುಚ್ಚಿ ಪಕ್ಕದ ಕಾಡಿಗೆ ಅಟ್ಟಿದರೆ ಹುಲ್ಲು, ಸೊಪ್ಪು ತಿಂದು ಬದುಕುತ್ತವೆ. ಭತ್ತದ ಹುಲ್ಲು, ಜೋಳ, ದ್ವಿದಳ ಧಾನ್ಯದ ಗಿಡಗಳಿಂದ ಸ್ವಲ್ಪ ಪ್ರಮಾಣದ ಮೇವು ಕೃಷಿ ಭೂಮಿಯಲ್ಲಿ ದೊರೆಯುತ್ತದೆ. ಹಾಲು ಬೇಕು, ಭೂಮಿ ಉಳುಮೆಗೆ ಎತ್ತು, ಕೃಷಿಗೆ ದೊಡ್ಡಿ ಗೊಬ್ಬರ ಬೇಕು ಹೀಗಾಗಿ ದನಕರು ಅನಿವಾರ್ಯ. ಹಳ್ಳಿಪಕ್ಕದ ಕಾಡಲ್ಲಿ ಜಾನುವಾರು ಮೇಯಿಸುವ ಅವಕಾಶ ಸಾಕಣೆಯನ್ನು ಸುಲಭವಾಗಿಸಿದ್ದನ್ನು ಎಲ್ಲೆಡೆ ಗಮನಿಸಬಹುದು. ಹೀಗಾಗಿ ಇಂದಿಗೂ ಮಲೆನಾಡಿನ ಜಾನುವಾರು ಸಂಖ್ಯೆ ಇಲ್ಲಿನ ಜನಸಂಖ್ಯೆಗೆ ಸಮವಾಗಿದೆ.

ವಿರಳ ಜನಸಂಖ್ಯೆ,ಹೇರಳ ಕಾಡು ಇದ್ದ ಕಾಲಕ್ಕೆ ಕಾಡು ಮೇವು ಎಲ್ಲರ ಆಯ್ಕೆಯಾಗಿತ್ತು. ಈಗ ೨೦-೨೫ ವರ್ಷಗಳ ಹಿಂದೆ ನಮ್ಮ ಹಳ್ಳಿಗಳಲ್ಲಿ ಕೂಡುಕೊಟ್ಟಿಗೆಗಳಿದ್ದವು. ಸಾಕಿದ ಜಾನುವಾರುಗಳನ್ನು ಒಂದು ದೊಡ್ಡಿಯಲ್ಲಿ ಕೂಡಿ ಹಾಕುವ ವಿಧಾನ ಅದು. ಪ್ರತ್ಯೇಕವಾಗಿ ದನಕರುವನ್ನು ಹಗ್ಗದಲ್ಲಿ ಕಟ್ಟಿ ನಿಲ್ಲಿಸುವ ಬದಲು ಎಲ್ಲವನ್ನೂ ಒಂದೆಡೆ ಕೂಡಿ ಹಾಕಲಾಗುತ್ತಿತ್ತು. ಪ್ರತಿ ಮನೆಯಲ್ಲೂ ೨೫-೩೦ ದನಕರು ಇದ್ದುದರಿಂದ ಎಲ್ಲವನ್ನು ಕಟ್ಟಿ ಹಾಕುವದು ಸಾಧ್ಯವಿಲ್ಲದ ಸ್ಥಿತಿ !.ಬೆಳಿಗ್ಗೆ ಕಾಡಿಗೆ ಹೊಡೆದೊಯ್ದು ಮೇಯಿಸುವದು, ನದಿ ನೀರು ಕುಡಿಸುವ ಸರಳ ಕೆಲಸಗಳಿದ್ದವು. ಬೇಸಿಗೆಯಲ್ಲಿ ಹುಲ್ಲು ದೊರೆಯದಿದ್ದಾಗ ಹೊನ್ನೆ, ಕಣಗಿಲು, ದಡಸಲು ಸೊಪ್ಪು ಕಡಿದು ಹಾಕುತ್ತಿದ್ದರು. ಮರದ ಸೊಪ್ಪು ಕಡಿದಿದ್ದಕ್ಕಾಗಲಿ, ಕಾಡಲ್ಲಿ ಮೇಯಿಸಿದ್ದಕ್ಕಾಗಲಿ ಅರಣ್ಯ ಇಲಾಖೆ ಚಕಾರವೆತ್ತುತ್ತಿರಲಿಲ್ಲ. ರೈತರಿಗೂ ಕಾಡಿನ ಬಗೆಗೆ ಕಳಕಳಿಯಿರಲಿಲ್ಲ. ಬೇಸಿಗೆಯ ಏಪ್ರಿಲ್ ಉರಿಯಲ್ಲಿ ಕಾಡಿಗೆ ಬೆಂಕಿ ಹಾಕುವ ಪದ್ದತಿಗಳಿದ್ದವು. ಅರಣ್ಯಕ್ಕೆ ಬೆಂಕಿ ಹಾಕಿದರೆ ಮುಂದಿನ ಮಳೆಗಾಲಕ್ಕೆ ಹುಲ್ಲು ಚೆನ್ನಾಗಿ ಬೆಳೆಯುತ್ತದೆ ಎಂಬುದು ಲೆಕ್ಕಾಚಾರ. ಜಾನುವಾರು ಮೇವಿಗೆಂದು ಬಿಟ್ಟ ಗೋಮಾಳವಷ್ಟೇ ಅಲ್ಲ ಮೈನರ್ ಜಂಗಲ್, ಕಾಯ್ದಿಟ್ಟ ಅರಣ್ಯ ಪ್ರದೇಶಗಳಲ್ಲಿ ಮೇವು ಅರಸುವ ಕೆಲಸ ಸಾಗಿತ್ತು. ಪ್ರತಿ ಊರಲ್ಲಿ ನೂರಾರು ದನಕರುಗಳು ಬೆಳಿಗ್ಗೆ ಕಾಡಿನತ್ತ ಹೋಗುವದು, ಸಂಜೆ ಅವು ಮರಳುವ 'ಗೋಧೂಳಿ ದೃಶ್ಯ' ನೋಡಬಹುದಿತ್ತು. ದನಗಾಹಿಗಳು ಕಾಡಲ್ಲಿ ದನಮೇಯಿಸುತ್ತ ಕಟ್ಟಿಗೆ ಕಡಿಯುವದು, ಬಿದಿರಿನ ಏಣಿ ತಯಾರಿಸುವದು, ಗೊಬ್ಬರಕ್ಕೆಂದು ಸಗಣಿ ಸಂಗ್ರಹಿಸುವದು, ಸೊಪ್ಪು, ಹುಲ್ಲು ಕಡಿಯುವದು, ಕಾಡು ಬಳ್ಳಿಗಳಿಂದ ಬುಟ್ಟಿ ತಯಾರಿಸುವ ಪಾರ್ಟ ಟೈಂ ಕೆಲಸ ಮಾಡುತ್ತಿದ್ದರು. ಕೈಯಲ್ಲಿ ಸದಾ ಇರುತ್ತಿದ್ದ ಕತ್ತಿಯಿಂದ ಮರದ ತೊಗಟೆ ಕೆತ್ತುವದು, ಗಿಡ ಕಡಿಯುವದು ಹವ್ಯಾಸವಾಗಿತ್ತು. ಕಾಡು ಕಡಿಯುವದು, ಸುಡುವದು ಎಲ್ಲರಿಗೂ ಅಕ್ಕರೆಯ ಕೆಲಸಗಳಾಗಿದ್ದವು.

೧೯೯೨ರಲ್ಲಿ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ನಡೆಸಿದ ಸಮೀಕ್ಷೆ ಮಲೆನಾಡಿನ ಕೃಷಿಕರು ಜಾನುವಾರು ಮೇವಿನ ಶೇಕಡಾ ೮೯ರಷ್ಟನ್ನು ಅರಣ್ಯದಿಂದಲೇ ಪಡೆಯುತ್ತಾರೆ ಎನ್ನುತ್ತದೆ. ಹೈನುಗಾರಿಕೆ ಅರಣ್ಯ ಮೇವಿನ ಜತೆ ಹೇಗೆ ಅವಲಂಬಿತವಾಗಿದೆ ಎಂಬುದು ಈಗಲೂ ಢಾಳಾಗಿ ಕಾಣುತ್ತಿದೆ. ಕಾಡಲ್ಲಿ ನೆಡುತೋಪು ನಿರ್ಮಾಣದಿಂದ ಹುಲ್ಲಿನ ಕೊರತೆಯಾದ ಪರಿಣಾಮ ಇತ್ತೀಚಿನ ವರ್ಷಗಳಲ್ಲಿ ಜಾನುವಾರುವನ್ನು ದೊಡ್ಡಿಯಲ್ಲಿ ಕಟ್ಟಿ ಸಾಕುವ ಪದ್ಧತಿ ಬಹುತೇಕ ಕಡೆ ರೂಢಿಗೆ ಬಂದಿದೆ. ಆದರೂ ದಿನಬೆಳಿಗ್ಗೆ ನೂರಾರು ಸಂಖ್ಯೆಯಲ್ಲಿ ಕಾಡಿಗೆ ನುಗ್ಗುವ ದನಕರುಗಳನ್ನು ಈಗಲೂ ಮಲೆನಾಡಿನಲ್ಲಿ ಕಾಣಬಹುದು. ಅವು ಹುಲ್ಲು, ಗಿಡಗಂಟಿಗಳ ಸೊಪ್ಪು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತವೆ. ನಿರಂತರ ಮೇವಿನ ಪ್ರಹಾರಕ್ಕೆ ನೈಸರ್ಗಿಕ ಸಸ್ಯ ಅಭಿವೃದ್ಧಿ ಕ್ಷೀಣಿಸುತ್ತದೆ. ಅರಣ್ಯ ಇಲಾಖೆ ಬೆಳೆಸಿದ ನೆಡುತೋಪುಗಳು ನೆಲಕಚ್ಚುತ್ತವೆ. ಜಾನುವಾರು ತಿನ್ನದ ಅಕೇಸಿಯಾ, ನೀಲಗಿರಿ,

ಕ್ಯಾಸುರಿನಾ, ತೇಗದಂತಹ ಗಿಡಗಳು ಉಳಿಯುತ್ತವೆ. ಜಾನುವಾರುಗಳ ನಿರಂತರ ಓಡಾಟದಿಂದ ಕಾಲ್ಗೊರಸಿನ ಭಾರಕ್ಕೆ ಗುಡ್ಡದ ಮಣ್ಣು ಕಾಂಕ್ರೀಟ್ ಹಾಸಿನಂತೆ ಗಟ್ಟಿಯಾಗುತ್ತದೆ. ಮರ ಬೆಳೆಯುತ್ತಿದ್ದ ಮಣ್ಣಲ್ಲಿ ಹುಲ್ಲು ಬೆಳೆಯದಷ್ಟು ನೆಲ ಬಡವಾಗುವದನ್ನು ನೋಡಬಹುದು.

ಕಾಡಿನಲ್ಲಿ ಮೇವಿದೆ ಎಂಬ ಹುಂಬು ಧೈರ್ಯ ಎಲ್ಲರದು. ಮೇವಿಗೆ ಬಿಡುವ ಜಾನುವಾರುಗಳಿಗೆ ಒಂದು ರೂಪಾಯಿಯಂತೆ ಹುಲ್ಲುಬನ್ನಿ ಕೊಡಬೇಕು ಎಂದು ಇದೇ ಮಲೆನಾಡಿನಲ್ಲಿ ಬ್ರಿಟಿಶ್ ಸರಕಾರ ೧೯೩೦ರ ಸುಮಾರಿಗೆ ನಿಯಮ ಮಾಡಿತ್ತು. ಹಣ ನೀಡದ ಕೃಷಿಕರ ದನಕರುಗಳನ್ನು ಹರಾಜು ಹಾಕುವ ಪದ್ದತಿಯಿತ್ತು. ಸ್ವಾತಂತ್ರ್ಯ ಹೋರಾಟದ ಆ ಕಾಲಕ್ಕೆ ಹುಲ್ಲುಬನ್ನಿ ವಿರುದ್ಧ ಬೃಹತ್ ಚಳವಳಿಗಳು ನಡೆದಿದ್ದವು. ಕಾಡಿನ ಮೇವು ಅವಲಂಬಿಸಿದ ದನಕುಗಳ ಮೇಲೆ ಆಂಗ್ಲರ ದಬ್ಬಾಳಿಕೆ ಎದುರಿಸಲು ರೈತರು ಒಗ್ಗಟ್ಟಿನಿಂದ ಹೋರಾಡಿದರು. ಭೇಷ್ ! ಆಗ ಬ್ರಿಟಿಶರ ವಿರುದ್ದ ನಡೆಸಿದ ಹೋರಾಟ ಮೆಚ್ಚೋಣ, ನೆನೆಯೋಣ. ಆಗ ನೂರಾರು ದನಕರು ಊರಿನ ಸಾವಿರಾರು ಎಕರೆಯಲ್ಲಿ ಮೇಯುವ ಅವಕಾಶ"ತ್ತು, ಈಗ ೪೦-೫೦ ಎಕರೆಯಲ್ಲಿ ನೂರಾರು ನಿಂತಾಗ ಪರಿಣಾಮ ತೀರ ಕೆಟ್ಟದ್ದು. ಇಂದು ಯಾವ ಕಾಡೂ ಅಕ್ಷಯ ಪಾತ್ರೆಯಲ್ಲ, ಬಳಕೆ ಪ್ರಹಾರಕ್ಕೆ ತತ್ತರಿಸಿದ ಸ್ವರೂಪದಲ್ಲಿದೆ. ಹೀಗಿರುವಾಗ ಈಗಲೂ ನಮ್ಮ ದನಕರುಗಳನ್ನು ಕಣ್ಣುಚ್ಚಿ ವನವಾಸಕ್ಕೆ ಕಳಿಸಬಹುದೇ ? ನೈಸರ್ಗಿಕ ಸಂಪತ್ತನ್ನು ವಿವೇಚನೆಯಿಲ್ಲದೇ ಹಾಳು ಮಾಡುವದು ಸರಿಯೇ ? ಕಾಡು ಅಪಾಯದಲ್ಲಿರುವ ಹೊತ್ತು ಈ ಪ್ರಶ್ನೆ ಎದುರಾಗಿದೆ.

ಜಾನುವಾರು ಮೇಯಿಸುವದು ನಮ್ಮ ಹಕ್ಕು, ದನಕರು ಮೇಯಿಸಿದರೆ ಕಾಡು ಹಾಳಾಗುತ್ತದೆಯೇ ? ನಿತ್ಯ ಕಳ್ಳ ಸಾಗಣೆ ತಡೆಯುವದು ಬಿಟ್ಟು ಬಡ ಕೃಷಿಕರ ಮೇಲೆ ಕ್ರಮ ಕೈಗೊಳ್ಳುವದು ತಪ್ಪು ಎನ್ನಬಹುದು. ವಾದಕ್ಕೆ ಇಳಿಯುವ ಮುನ್ನ ಅರಣ್ಯ ಸಂರಕ್ಷಣೆ ಕರ್ತವ್ಯ ಮರೆಯಬಾರದು. ಕೃಷಿಗೆ ಗೊಬ್ಬರ ಬೇಕು, ಉರುವಲು ಬೇಕು, ನಾಟಾ ಬೇಕು, ಕಾಡಿನ ನೀರು ಬೇಕು ಎಲ್ಲಕ್ಕಿಂತ ಮುಖ್ಯವಾಗಿ ಮುಂಗಾರು ಮಳೆ ಸರಿಯಾಗಿ ಸುರಿಯಬೇಕು, ಬಿದ್ದ ಹನಿ ನೆಲದಲ್ಲಿ ಇಂಗಬೇಕು. ನಮ್ಮ ಜಾನುವಾರು ನಿಯಂತ್ರಣದ ಒಂದು ಹೆಜ್ಜೆ ನಮ್ಮ ಊರಿನ ಹಸುರು ದೃಶ್ಯಗಳನ್ನು ಎರಡೇ ಎರಡು ವರ್ಷಕ್ಕೆ ಬದಲಿಸುತ್ತದೆ. ಇದಕ್ಕೆ ಪ್ರಥಮ ಕೆಲಸ ಜಾನುವಾರು ನಿಯಂತ್ರಣ, ಕಾಡು ಮೇವು ನಂಬಿ ಹತ್ತಾರು ದನಕರು ಸಾಕುವ ಬದಲು ಸಾಕುವ ಒಂದೆರಡನ್ನು ಚೆನ್ನಾಗಿ ಸಾಕುವ ದೃಷ್ಟಿ ಬೇಕು. ನಮ್ಮ ದನಕರುಗಳಿಗಾಗಿ ನಮ್ಮ ಭೂಮಿಯಲ್ಲಿ ಹಸಿರು ಹುಲ್ಲು, ಮೇವು ಬೆಳೆಸುವ ಕೆಲಸಗಳು ಕೃಷಿ ಸುಸ್ಥಿರತೆ ನೆಲೆಯಲ್ಲಿ ಅನುಕೂಲ. ಮನೆಯಲ್ಲಿ ಮೇವು ಹಾಕಿ ಕಾಡಿಗೆ ಅಟ್ಟಿದರೆ ದನಕರುಗಳ ಸಗಣಿ, ಮೂತ್ರಗಳು ಊರ ರಸ್ತೆಗೆ ವ್ಯರ್ಥವಾಗಿ ಸುರಿಯುತ್ತವೆ. ಇಂತಹ ಅಮೂಲ್ಯ ಸಂಪತ್ತನ್ನು ದೊಡ್ಡಿಯಲ್ಲಿ ಸಂಗ್ರಹಿಸಿ ಉತ್ತಮ ಗೊಬ್ಬರ ಮಾಡಿದರೆ ಕೃಷಿ ಉನ್ನತಿ ಸಾಧ್ಯವಾಗುತ್ತದೆ. ಜಾನುವಾರು ರೋಗ ನಿಯಂತ್ರಣವೂ ಆಗುತ್ತದೆ. ಅರಣ್ಯದ ಆರೋಗ್ಯ ಸುಧಾರಿಸುತ್ತದೆ.

# ನಮ್ಮೂರಿನ ಹೊಟೆಲ್ ಮಾಣಿಗಳು ಹಾಗೂ ಬೆಂಗಳೂರು ಕನಸಿನ ಬೀಜ

ಕೆರೆ ನುಂಗಿ,ಹೊಲ ನುಂಗಿ, ಹಳ್ಳಿ ನುಂಗಿ, ನದಿ ನುಂಗಿ, ಕಾಡು ನುಂಗಿ ಬೆಳೆಯುತ್ತ ಬಂದ ಬೆಂಗಳೂರು ಹಳ್ಳಿ ಹುಡುಗರನ್ನು ಹೇಗೆಲ್ಲ ನುಂಗಿ ಕೂತಿದೆ !. ಈಗೀಗ ಅತಿವೃಷ್ಟಿ, ಅನಾವೃಷ್ಟಿಗಳ ಹೊಡೆತದಲ್ಲಿ ಹೊಲದಲ್ಲಿ ಬಿತ್ತಿದ ಬೀಜ ಮೊಳಕೆಯೊಡೆಯುತ್ತಿಲ್ಲ ಎಂದು ರೈತರು ಕೊರಗುವದು ಕೇಳಿರಬಹುದು. ವಿಚಿತ್ರವೆಂದರೆ ಈಗ ೩-೪ ದಶಕಗಳ ಹಿಂದೆ ಹಳ್ಳಿ ಹಳ್ಳಿಗಳಲ್ಲಿ ಶ್ರೀಸಾಮಾನ್ಯರ ಮಧ್ಯೆ ಬೆಂಗಳೂರಿನ ಕನಸಿನ ಬೀಜ ಬಿತ್ತಿದ್ದು ಅದು ಇವತ್ತಿಗೂ ಯಾವ ಸಮಸ್ಯೆಯಿಲ್ಲದೆ ಹಬ್ಬಿ ಬೆಳೆಯುತ್ತಿದೆ !.

ತೆಂಗಿನ ನುಸಿಪೀಡೆ ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ, ಟೊಮೆಟೋ ಬೆಳೆಯಲ್ಲಿ ಸುಖವಿಲ್ಲ, ಕೃಷಿ ನಮಗೆ ಕಾಸು ಕೊಡೋಲ್ಲವೆಂದು ನಮ್ಮೂರಿನ ಮಕ್ಕಳು ಬೆಂಗಳೂರಿಗೆ ಓಡಿದ್ದಾರೆ ಎಂದು ನಾಗತಿಹಳ್ಳಿ ಹಿರಿಯರು ಮಾತಾಡುತ್ತಿದ್ದರು. ನೆಲಮಂಗಲ-ಕುಣಿಗಲ್ ಮಾರ್ಗದಲ್ಲಿ ಬರೋಬ್ಬರಿ ೧೧೦ ಕಿಲೋ ಮೀಟರ್ ದೂರದ ಈ ಹಳ್ಳಿ ಹುಡುಗರು ಬೆಂಗಳೂರಿಗೆ ಸೆಳೆಯಲ್ಪಟ್ಟು ಬದುಕು ಹುಡುಕಿದ್ದರಲ್ಲಿ ವಿಶೇಷ ಕಾಣುತ್ತಿಲ್ಲ. ದೈತ್ಯ ನಗರದಲ್ಲಿ ಏನಾದರೊಂದು ನೌಕರಿ ಹುಡುಕಿ ಕೃಷಿಗಿಂತ ಹೆಚ್ಚು ನೆಮ್ಮದಿ ಕಾಣುವ ಹದಿಹರೆಯದ ಪಯಣಗಳಿವು. ಕೃಷಿಯೇತರವಾಗಿ ಬದುಕುವ ವಿದ್ಯೆಯನ್ನು ನಮ್ಮ ಊರ ಶಾಲೆಗಳಲ್ಲಿ ನಾವೇ ಸ್ವತಃ ನೀಡಿದ್ದೇವೆ, ಅಕ್ಷರ ಕಲಿಯುತ್ತಲೆ ಬೇಸಾಯದಲ್ಲಿ ಅನಕ್ಷರತೆ ಬೆಳೆದು ಬಳಿಕ ಮಣ್ಣು ಮರೆಯುವದು ಸಹಜ ಕ್ರಿಯೆ. ನಾಲ್ಕು ವರ್ಷದ ಹಿಂದೆ ಹಳ್ಳಿ ಮಕ್ಕಳನ್ನು ಹಳ್ಳಿಯಲ್ಲೇ ಉಳಿಸುವ "ಪುರ" ಯೋಜನೆ ಪ್ರಸ್ತಾಪವಾಗಿದ್ದು ನೆನಪಿರಬಹುದು. ಹಳ್ಳಿಯಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಿ ಸಣ್ಣಪುಟ್ಟ ಕೈಗಾರಿಕೆ ಮುಖೇನ ಉದ್ಯೋಗ ಸೃಷ್ಟಿಸುವದು ಸರಕಾರಿ ಯೋಜನೆಯ ಮುಖ್ಯ ಗುರಿ. ಆಯ್ದ ಗ್ರಾಮಗಳನ್ನು ಇದಕ್ಕಾಗಿ ಆಯ್ಕೆ ಮಾಡಲಾಗಿತ್ತು. ಈವರೆಗೂ ಯೋಜನೆಯ ಮಾತು ಕೇಳಿದ್ದೇವೆಯೇ ವಿನಾ ಪರಿಣಾಮ ಅರಿಯಲು ಸಾಧ್ಯವಾಗಿಲ್ಲ.

ನಗರ ವಲಸೆಗೆ ಉದ್ಯೋಗ ಹುಡುಕಾಟ ಮಾತ್ರ ಕಾರಣವೇ ? ಇದನ್ನು ಸರಳಕ್ಕೆ ನಂಬುವಂತಿಲ್ಲ. ಇಂದಿನ ಯುವಕರಿಗೆ ಒಂದು ಬದಲಾವಣೆ ಬೇಕಾಗಿದೆ, ಬಿಸಿಲಲ್ಲಿ ನೇಗಿಲು ಹಿಡಿದು ಬೆವರಿಳಿಸುವದು ಸಾಕಾಗಿದೆ. ಒಂದಿಲ್ಲೊಂದು ಅಭಿವೃದ್ಧಿಗೆ ಹಣ ಪ್ರಮುಖವಾಗಿರುವಾಗ ಹೆಚ್ಚು ಹೆಚ್ಚು ಗಳಿಕೆ ಸುಖದ ಸನಿಹಕ್ಕೆ ಒಯ್ಯುತ್ತದೆಂಬ ಅರಿವು ಬೆಳೆದಿದೆ. ೧೮-೩೫ರೊಳಗೆ ಬದುಕು ಅನುಭವಿಸುವ ಆಸೆ ಹೆಚ್ಚಿದೆ. ಮನೋರಂಜನೆ, ಓಡಾಟ, ಹೊಸ ವಾತಾವರಣ, ಕಟ್ಟುಪಾಡು ಮೀರುವ ಸ್ವಾತಂತ್ರ್ಯಗಳಲ್ಲಿ ಏನೋ ಖುಷಿಯಿ◌ುದೆ. ಊರು ಬಿಟ್ಟು ನಗರ ಸೇರುವ ಹದಿಹರೆಯಕ್ಕೆ "ಸೀರಿಯಸ್ ನೌಕರಿ" ಕಾರಣದ ಜತೆಗೆ ಇಂತಹ ಇತರೇ ಸಂಗತಿಗಳ ಪ್ರಭಾವವೂ ತೆರೆಮರೆಯಲ್ಲಿ ಸೇರಿದೆ. ಬೆವರಿಳಿಸಿ ಹಂಚಿ ಉಣ್ಣುವ ಬದಲು ತನ್ನ ಅನ್ನವನ್ನು ಕೃಷಿಯೇತರವಾಗಿ ದುಡಿಯುವ ಆಸೆ. ಹೀಗಾಗಿ ನಗರ ವಲಸೆ ಸಮಸ್ಯೆ ಬಿಡಿಸುವದು ಅಷ್ಟು ಸುಲಭವಲ್ಲ.

ಬೆಂಗಳೂರಿನಿಂದ ೫೦೦ ಕಿಲೋ ಮೀಟರ್ ದೂರದ ಮಲೆನಾಡಿನ ಹಳ್ಳಿಗಳಲ್ಲಿ ಕನಸು ಮೂಡಿಸಿದ ಕಾಲ ನೆನಪಿಸಿಕೊಳ್ಳಬೇಕು. ಇಲ್ಲಿ ೩೦-೩೫ ವರ್ಷದ ಹಿಂದೆ ಈ ಬೆಂಗಳೂರು ಎಂದರೆ ಥೇಟ್ ವಿದೇಶಕ್ಕೆ ಸರಿಸಮಾನ! ಯಾರಾದರೂ ಅಚಾನಕ್ ಬೆಂಗಳೂರಿಗೆ ಹೋಗಿ ಬಂದರೆ ಸುತ್ತಲಿನ ಹಳ್ಳಿಗರಿಗೆ ಅದನ್ನು ವರ್ಷಕಾಲ ವಿವರಿಸುತ್ತಿದ್ದರು. ಕೆಲವರಂತೂ ಬಸ್ ಟಿಕೇಟುಗಳನ್ನು ಜೋಪಾನವಾಗಿಟ್ಟು ಪ್ರಯಾಣ ದರಪಟ್ಟಿ ವಿವರಿಸಿದ್ದೂ ಇದೆ ! ಡಿಗ್ರಿ ಓದಿ ನೌಕರಿ ಸೇರಿದವರಿಗಿಂತ ಆ ಕಾಲಕ್ಕೆ ಸುಲಭಕ್ಕೆ ಸಿಕ್ಕ ಹೊಟೆಲ್ ಚಾಕರಿ ಸೇರಿದವರು ಜಾಸ್ತಿ. ಕಾಮತ್ ಹೊಟೆಲ್‌ಗಳು ಇವರ ಮೊದಲ ಮೆಟ್ಟಿಲು. ವರ್ಷಕ್ಕೊಮ್ಮೆ ಇವರು ಹಳ್ಳಿಗೆ ಮರಳುವಾಗ ಎಲೆಕ್ಟ್ರಾನಿಕ್ಸ್ ವಾಚು, ಟೇಪರೇಕಾರ್ಡರ್ ಹಿಡಿದು ಬರುತ್ತಿದ್ದರು . ಮತ್ತೆ ಕೆಲವರ ಬೇಡಿಕೆ ಮೇರೆಗೆ ಬರ್ಮಾ ಬಜಾರಿನಿಂದ ಕರೆಂಟ್ ಬ್ಯಾಟರಿ ತರುತ್ತಿದ್ದರು. ಹೊಸತರಲ್ಲಿ ಬೆಂಗಳೂರಿಂದ ಮನೆಗೆ ಬರುವವರು ಮನೆಯವರಿಗೆ ಬಟ್ಟೆ ತರುವದು ವಾಡಿಕೆ. ಹೊಟೆಲ್ ಸಪ್ಲೈರ್ ಆಗಿದ್ದವರೂ ಉಂಗುರ-ಚೈನು ಹಾಕಿ ಬರುತ್ತಿದ್ದರು. ಇವರ ವೇಷ ನೋಡಿ ಗಳಿಕೆ ಭರ್ಜರಿಯಾಗಿದೆಯೆಂದು ಹಳ್ಳಿಯವರ ಲೆಕ್ಕಾಚಾರ. ಹೊಟೆಲ್‌ನಲ್ಲಿ ತಿಂಡಿ ಸಪ್ಲೈ ಮಾಡುವಾಗ ಗಿರಾಕಿಗಳು ಕೊಡುವ ಟಿಪ್ಸ್ ಹಣವೇ ದಿನಕ್ಕೆ ೨೫-೩೦ ರೂಪಾಯಿ◌ು ಆಗುತ್ತದೆಂದೂ ಮನೆಮಂದಿ ಮಗನ ಗಳಿಕೆ ಕೊಂಡಾಡುತ್ತಿದ್ದರು. ಕ್ಯಾಷ್ ಕೌಂಟರಿನಲ್ಲಿ ಕುಳಿತಾಗ ಹೋಟೆಲ್ ಸಾಹುಕಾರನ ಕಣ್ತಪ್ಪಿಸಿ ದಿನಕ್ಕೆ ಒಂದಿಷ್ಟು ಹಣ ಜೇಬಿಗಿಳಿಸುವ ಸಂಗತಿಯನ್ನು ರಾಜಾರೋಷವಾಗಿ ಮಗನ ಈ ಸಾಧನೆಯನ್ನು ಹೆಮ್ಮೆಯಿಂದ ವಿವರಿಸಿದ ಹಲವು ವ್ಯಕ್ತಿಗಳನ್ನು ಕಂಡಿದ್ದೇನೆ !. ಒಟ್ಟಿನಲ್ಲಿ ಬೆಂಗಳೂರಿನ ಹೊಟೆಲ್ ಸೇರಿದರೆ ಸಖತ್ತಾಗಿ ಹಣಗಳಿಸಬಹುದೆಂಬುದು ಮಾತಿನ ಮರ್ಮ. ಮಸಾಲೆ

ದೋಸೆ, ಮೈಸೂರ್ ಬ್ಯಾಂಕ್, ಮೆಜೆಸ್ಟಿಕ್, ಅಲಂಕಾರ್ ಪ್ಲಾಜಾದಲ್ಲಿ ನಮ್ಮನ್ನು ಹೊತ್ತೊಯ್ಯುವ ಮೆಟ್ಟಿಲು, ವಿಧಾನ ಸೌಧಗಳ ವಿವರಣೆ ಕೇಳಿದರಂತೂ ಒಂದು ಸಾರಿ ಬೆಂಗಳೂರಿಗೆ ಹೋಗಬೇಕೆಂಬ ಕನಸು ಯಾರಲ್ಲಾದರೂ ಮೂಡುತ್ತಿತ್ತು. ಒಬ್ಬರ ಹಿಂದೆ ಒಬ್ಬರಂತೆ ಹಳ್ಳಿ ಮಕ್ಕಳ ಬೆಂಗಳೂರು ವಲಸೆ ಬೆಳೆಯಿತು. ಕಾಲೇಜು ಓದಿ ಏನ್ ಮಾಡ್ತೀರಿ ಎಂದರೆ ಬೆಂಗಳೂರಲ್ಲಿ ನೌಕರಿ ಮಾಡ್ತೀನಿ ಎಂಬ ಉತ್ತರ ಊರಿಗೆಲ್ಲ ಬಾಯಿಪಾಠವಾಯಿತು.

ಕೆರೆ ನುಂಗಿ,ಹೊಲ ನುಂಗಿ, ಹಳ್ಳಿ ನುಂಗಿ, ನದಿ ನುಂಗಿ, ಕಾಡು ನುಂಗಿ ಬೆಳೆಯುತ್ತ ಬಂದ ಬೆಂಗಳೂರು ಹಳ್ಳಿ ಹುಡುಗರನ್ನು ಹೇಗೆಲ್ಲ ನುಂಗಿ ಕೂತಿದೆ !. ಹಳ್ಳಿಯಲ್ಲಿ ಸಾಧ್ಯವಿಲ್ಲದ್ದೆಲ್ಲ ಅಲ್ಲಿ ಸಾಧ್ಯವಿದೆಯೆಂದು ಸ್ಥೈರ್ಯ ಮೂಡಿಸಿ ಯುವಕರನ್ನು ಸೆಳೆದ ಶಕ್ತಿಗೆ ಶರಣೆನ್ನಬೇಕು. ಬರೋಬ್ಬರಿ ಒಂದು ಕೋಟಿ ಜನಸಂಖ್ಯೆ ಮಡಿಲಲ್ಲಿ ಬಾಚಿಕೊಂಡು ಅಕ್ಕಪಕ್ಕದ ಹಳ್ಳಿ, ಪೇಟೆಗಳ ಜನಸಂಖ್ಯೆ ಬೆಳೆಸುತ್ತ ಹೊರಟ ವೈಖರಿ ಗಮನಿಸಬೇಕು. ಕಾಲೇಜು, ಕಾರ್ಖಾನೆ, ಐ.ಟಿ ಹೀಗೆ ವಿವಿಧ ಕ್ಷೇತ್ರಗಳ ಅವಕಾಶಗಳು ಇಲ್ಲಿ ತೆರೆದುಕೊಂಡಿದ್ದು ನಿಜ. ಇಲ್ಲಿ ಕಲಿತವರಿಗೆ ಕೆಲಸ ದೊರೆಯುವದರ ಜತೆಗೆ ಕೂಲಿ ಮಾಡಿ ಬದುಕುವವರಿಗೂ ಹಳ್ಳಿ ಬೇಸಾಯಕ್ಕಿಂತ ಭಿನ್ನ ಅವಕಾಶ ತೋರಿಸಿದೆ. ದುಡಿಯುವದಕ್ಕೆ ಒಂದು ಅವಕಾಶ ಸಿಕ್ಕರೆ ಬದುಕುವದಕ್ಕೆ ನೆರಳು ಸಿಗುತ್ತದೆಂಬ ವಿಶ್ವಾಸದಲ್ಲಿ ಕಣ್ಣುಚ್ಚಿ ನಗರ ಮೆರವಣಿಗೆ ನಡೆದಿದೆ.

ಅವತ್ತು ಹೊಟೆಲ್ ಸೇರಿ ಊರಿಗೆ ಬಂದಾಗೆಲ್ಲ ಹಳ್ಳಿಗರನ್ನು ಸುತ್ತ ಕೂಡ್ರಿಸಿಕೊಂಡು ಬೆಂಗಳೂರಿನ ಚೆಂದದ ಕತೆ ಹೇಳಿದವರೆಲ್ಲ ಈಗ ಏನೇನಾದರೆಂದು ಸುಮ್ಮನೆ ಗಮನಿಸುತ್ತಿದ್ದೇನೆ. ಅವರ ಕತೆಗಳಲ್ಲಿ ಗಳಿಕೆಯಿತ್ತು, ಧಿಡೀರನೆ ಒಮ್ಮೊಮ್ಮೆ ಕುಸಿತವಿತ್ತು. ನೆಲೆ ನಿಂತವರು, ನೆಲೆ ಕಳಕೊಂಡವರ ಪಟ್ಟಿ ಮಾಡಿದರೆ ಬದುಕು ಮಸಾಲೆ ದೋಸೆಯಂತೆ ಈಗ ರುಚಿ ಕಳಕೊಂಡಿದೆ. ಮಾತೆತ್ತಿದರೆ ಸಂಚಾರ ದಟ್ಟಣೆ, ಜೀವನ ದುಬಾರಿಯೆಂದು ಮಡಿಲಲ್ಲಿ ಕೂತವರು ಮಾತಾಡುತ್ತಾರೆ. ದಿನವಿಡೀ ಬದುಕು ಬ್ಯುಸಿಯಾಗಿದೆ. ಒತ್ತಡದಲ್ಲಿ ಓಡುವದು ದೇಹಕ್ಕೆ ರೂಢಿಯಾಗಿದೆ. ಕೈಯಲ್ಲಿ ಕಾಸಿಲ್ಲದೇ ಹೇಗೋ ನಗರ ಸೇರಿ ಗಳಿಸಿ ಬಂದವರು ಮಾದರಿಯಾದಂತೆ ನಗರ ಸೆಳೆತ ಬೆಳೆಯುತ್ತ ಊರು ಖಾಲಿ ಖಾಲಿಯೆನಿಸುತ್ತಿದೆ. ಹಿಂದೆ ನಮ್ಮಲ್ಲಿ ನಿಮ್ಮ ಹಳ್ಳಿಯವರು ಯಾರಾದರೂ ಬೆಂಗಳೂರಲ್ಲಿ ಇದ್ದಾರಾ ? ಎಂದು ಸ್ನೇಹಿತರು ಮಾತಾಡುವಾಗ ಕುತೂಹಲದಲ್ಲಿ ಕೇಳುತ್ತಿದ್ದರು. ಈಗ ಜಮೀನು ಬೇಸಾಯ ನೋಡೋಕೆ ಯಾರಾದರೂ ಯುವಕರು ಮನೆಯಲ್ಲಿ ಇದ್ದಾರಾ ? ಎಂದು ಮನೆಮನೆಯಲ್ಲಿ ಪ್ರಶ್ನಿಸುವಂತಾಗಿದೆ. ಉತ್ತರ ಕನ್ನಡದ ಕುಮಟಾ ಸನಿಹದ ಹಳ್ಳಿಯೊಂದರ ೪೦ ಮನೆಗಳ ಪೈಕಿ ೩೦ ವರ್ಷದ ಒಬ್ಬ ಯುವಕ ಮಾತ್ರ ಊರಲ್ಲಿ ಇದ್ದಾನೆ. ಇನ್ನುಳಿದವರೆಲ್ಲ ೫೦-೯೦ ವಯಸ್ಸಿನವರು ! ಊರಿನ ಮನೆಗಳ ಕರೆಂಟ್ ಬಿಲ್, ಫೋನ್ ಬಿಲ್, ಪಂಪ್ ಸೆಟ್ ದುರಸ್ತಿ ಸೇರಿದಂತೆ ಎಲ್ಲರ ಮನೆಯ ತುರ್ತು ಕೆಲಸಗಳೇ ಆತನನ್ನು ಬ್ಯುಸಿಯಾಗಿಸಿವೆ. ಯಾವೊಂದು ಮನೆಯಲ್ಲಿ ಯುವಕರಿಲ್ಲದ ಕಾರಣ ಸಂಕಷ್ಟ ಸಹಾಯವಾಣಿಯಂತೆ ಆತ ಬದುಕಿದ್ದಾನೆ !

ಈಗೀಗ ಅತಿವೃಷ್ಟಿ, ಅನಾವೃಷ್ಟಿಗಳ ಹೊಡೆತದಲ್ಲಿ ಹೊಲದಲ್ಲಿ ಬಿತ್ತಿದ ಬೀಜ ಮೊಳಕೆಯೊಡೆಯುತ್ತಿಲ್ಲ ಎಂದು ರೈತರು ಕೊರಗುವದು ಕೇಳಿರಬಹುದು. ವಿಚಿತ್ರವೆಂದರೆ ಈಗ ೩-೪ ದಶಕಗಳ ಹಿಂದೆ ಹಳ್ಳಿ ಹಳ್ಳಿಗಳಲ್ಲಿ ಶ್ರೀಸಾಮಾನ್ಯರ ಮಧ್ಯೆ ಬೆಂಗಳೂರಿನ ಕನಸಿನ ಬೀಜ ಬಿತ್ತಿದ್ದು ಅದು ಇವತ್ತಿಗೂ ಯಾವ ಸಮಸ್ಯೆಯಿಲ್ಲದೆ ಹಬ್ಬಿ ಬೆಳೆಯುತ್ತಿದೆ!. ಬೆಂಗಳೂರಿನ ಸನಿಹದ ನಾಗತಿಹಳ್ಳಿಯಷ್ಟೇ ಅಲ್ಲ ನಮ್ಮ ಎಲ್ಲ ಹಳ್ಳಿ ರಸ್ತೆಗಳೂ ಕಟ್ಟಕಡೆಗೆ ಬೆಂಗಳೂರು ಅಥವಾ ಬೆಂಗಳೂರಿನಂತಹ ಮತ್ತೊಂದು ಊರಿಗೆ ಸುರಕ್ಷಿತವಾಗಿ ತಲುಪಿಸುತ್ತಿವೆ. ಅವರನ್ನೆಲ್ಲ ವಾಪಸು ಕರೆಸಿಕೊಳ್ಳುವ ಶಕ್ತಿ ಹಳ್ಳಿಯ ಮಣ್ಣಿಗೆ ಕಷ್ಟಸಾಧ್ಯ. ಇಲ್ಲಿರುವವರನ್ನು ಓಡಿ ಹೋಗದ ಹಾಗೇ ತಡೆಯುವದು ಹೇಗೆ? "ಕೃಷಿ ರಕ್ಷಣಾ ಕಾಯ್ದೆ " ಬರಬಹುದೆ ! ಹಿರಿಯರು ತಮಾಷೆ ಮಾಡುತ್ತಾರೆ.